**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕರ್ನಾಟಕ ವಿಧಾನಪರಿಷತ್ತು**

ದಿನಾಂಕ:22ನೇ ಮಾರ್ಚ್ 2017
ಬುಧವಾರ

**ವಿಷಯಾನುಕ್ರಮಣಿಕೆ**

**1. ಪ್ರಶ್ನೋತ್ತರಗಳು**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

1367 – ಮೂಡಿಗೆರೆ ತಾಲ್ಲೂಕಿನ ಅಕ್ರಮ-ಸಕ್ರಮ ಸಮಿತಿಯ ಸಭೆಗಳ ಬಗ್ಗೆ
– ಶ್ರೀಮತಿ ಮೋಟಮ್ಮ
1225 – ಸರ್ಕಾರಿ ಜಾಗಗಳಲ್ಲಿ ಕಟ್ಟಿರುವ ಮನೆಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ
– ಶ್ರೀ ಭಾನುಪ್ರಕಾಶ್
125(1132+1102+1131+1151+1083) – ಅರಣ್ಯಗಳಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ
– ಡಾ: ಜಯಮಾಲ ರಾಮಚಂದ್ರ
– ಶ್ರೀ ಡಿ.ಎಸ್. ವೀರಯ್ಯ
– ಶ್ರೀ ಎಸ್.ವ್ಹಿ. ಸಂಕನೂರ
– ಶ್ರೀಮತಿ ತಾರಾಅನೂರಾಧ

**(ಈ ಪ್ರಶ್ನೆಯನ್ನು ಅರ್ಧಗಂಟೆ ಚರ್ಚೆಗೆ ಪರಿವರ್ತಿಸಲಾಯಿತು)**

1164 – ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿ ಬಗ್ಗೆ
– ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ)
1169 – ಗೋಮಾಳ ಜಮೀನಿನ ರಕ್ಷಣೆ
– ಶ್ರೀ ಆರ್. ಧರ್ಮಸೇನ
1086 – ಬಂಡೀಪುರ ಮತ್ತು ನಾಗರಹೊಳೆ ಅರಣ್ಯದ ಬಗ್ಗೆ
– ಶ್ರೀ ಕೆ.ಟಿ. ಶ್ರೀಕಂಠೇಗೌಡ
1190 – ಮಂಡ್ಯ ಜಿಲ್ಲೆಯ ಕೆರೆಗೋಡು ಹೋಬಳಿ ಚಿಕ್ಕಬಳ್ಳಿ ಪಿಕಪ್ ನಾಲಾ ಅಭಿವೃದ್ಧಿ
– ಶ್ರೀ ಎನ್. ಅಪ್ಪಾಜಿಗೌಡ
1229 – ಪೋಡಿ ಪ್ರಕ್ರಿಯೆ ಬಗ್ಗೆ
– ಶ್ರೀ ಎಂ.ನಾರಾಯಣಸ್ವಾಮಿ
1139 – ಬರಪರಿಹಾರ ಕಾಮಗಾರಿ ಬಗ್ಗೆ
– ಶ್ರೀ ರಮೇಶ್ ಬಾಬು
1133 – ರಾಜ್ಯದಲ್ಲಿ ಅಂತರ್‌ಜಲ ಮಟ್ಟ ಹೆಚ್ಚಿಸಲು ಜಲಮರುಪೂರಣ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1121 – ರಾಜ್ಯದಲ್ಲಿ ಅರಣ್ಯ ಇಲಾಖೆಯಿಂದ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಿಡ ನೆಟ್ಟಿರುವ ಬಗ್ಗೆ

– ಶ್ರೀ ಆರ್. ಪ್ರಸನ್ನ ಕುಮಾರ್

1146 – ಅರಣ್ಯ ಪ್ರದೇಶಗಳಲ್ಲಿ ಅಕೇಷಿಯಾ ಹಾಗೂ ನೀಲಗಿರಿ ಮರಗಳನ್ನು ನೆಡುವುದನ್ನು ನಿಷೇದಿಸುವ ಬಗ್ಗೆ

– ಶ್ರೀ ರಾಮಚಂದ್ರಗೌಡ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

ಅ) ದೇವರ ದಾಸಿಮಯ್ಯ ಜಯಂತಿಗಾಗಿ ಮೀಸಲಿಡುತ್ತಿರುವ ಹಣವನ್ನು ಬರಗಾಲ ಪ್ರಯುಕ್ತ ಗೋಶಾಲೆಗಳಿಗೆ ಉಪಯೋಗಿಸಿಕೊಳ್ಳುವ ಬಗ್ಗೆ

– ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ)

– ಡಾ: ಜಿ. ಪರಮೇಶ್ವರ್(ಸಭಾನಾಯಕರು)

ಆ) ಬಾಗಲಕೋಟೆ ಜಿಲ್ಲೆ ತೇರದಾಳ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ

– ಶ್ರೀ ಎಸ್.ಆರ್. ಪಾಟೀಲ್

– ಶ್ರೀ ಹಣಮಂತ ರುದ್ರಪ್ಪ ನಿರಾಣಿ

– ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

ಇ) ಪೊಲೀಸ್ ಸಿಬ್ಬಂದಿಗಳ ವಾರದ ರಜೆ ಬಗ್ಗೆ

– ಶ್ರೀ ಪ್ರದೀಪ್ ಶೆಟ್ಟರ್

– ಡಾ: ಜಿ. ಪರಮೇಶ್ವರ್(ಗೃಹ ಸಚಿವರು ಹಾಗೂ ಸಭಾನಾಯಕರು)

ಈ) ಗ್ರಾಮ ಪಂಚಾಯತಿ ನೌಕರರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ

– ಶ್ರೀ ಎಂ.ಕೆ. ಪ್ರಾಣೇಶ್

– ಡಾ: ಜಿ. ಪರಮೇಶ್ವರ್(ಸಭಾನಾಯಕರು)

**3. ಸಚಿವರ ಹೇಳಿಕೆ**

ಅ) ಸೇನೆಯಲ್ಲಿ ಕಾರ್ಯನಿರತವಾಗಿರುವ ಸಂದರ್ಭದಲ್ಲಿ ಹುತಾತ್ಮರಾದ ಅಥವಾ ಮೃತರಾದ ಸೈನಿಕ/ಅರೆಸೈನಿಕ ಹಾಗೂ ಪೊಲೀಸ್ ಸಿಬ್ಬಂದಿಗಳ ಕುಟುಂಬದವರಿಗೆ ಪರಿಹಾರ ಒದಗಿಸಲು ಏಕರೂಪದ ಮಾನದಂಡವನ್ನು ರೂಪಿಸುವ ಬಗ್ಗೆ ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಸೂಚನೆ

– ಡಾ: ಜಿ. ಪರಮೇಶ್ವರ್(ಸಭಾನಾಯಕರು ಹಾಗೂ ಗೃಹ ಸಚಿವರು)

ಆ) ಹೆಗ್ಗಡದೇವನ ಕೋಟೆ ಪಟ್ಟಣದ ಕಸಾಯಿಖಾನೆಯಿಂದ ಬರುವ ಮಾಂಸದ ತ್ಯಾಜ್ಯವನ್ನು ತಂದು ಪಟ್ಟಣದಲ್ಲಿ ಹರಿಯುವ ತಾರಕ ನದಿಗೆ ಸುರಿಯಲಾಗುತ್ತಿದ್ದು, ಮಿನಿ ವಿಧಾನಸೌಧ ಮತ್ತು ತಾಲ್ಲೂಕು ಆಸ್ಪತ್ರೆ ತ್ಯಾಜ್ಯವನ್ನೂ ಇಲ್ಲಿಯೇ ತಂದು ಸುರಿಯಲಾಗುತ್ತಿದ್ದು, ನದಿ ನೀರು ವಿಷಪೂರಿತವಾಗುತ್ತಿದ್ದು, ತ್ಯಾಜ್ಯದ ರಾಶಿಯನ್ನು ಮಿನಿ ವಿಧಾನಸೌಧ ಮುಂದೆಯೇ ಸುರಿಯುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ನಾಗರಜ್(ಸಂದೇಶ್ ನಾಗರಾಜ್)ರವರ ಸೂಚನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಡಾ: ಜಿ. ಪರಮೇಶ್ವರ್(ಸಭಾನಾಯಕರು)(ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಪರವಾಗಿ)

ಇ) ಕೆ.ಆರ್. ಪೇಟೆ ತಾಲ್ಲೂಕಿನ ಹೇಮಗಿರಿ ಬಳಿಯ ನಾಟನಹಳ್ಳಿ ಗ್ರಾಮದ ಚೆಲುವೇಗೌಡ ಎಂಬ ರೈತನು ಸಾಲ ಮನ್ನಾ ಘೋಷಣೆಯ ನಿರೀಕ್ಷೆಯಲ್ಲಿದ್ದು, ಸರ್ಕಾರವು ಸಾಲಮನ್ನಾ ಘೋಷಣೆ ಮಾಡದೇ ಇರುವುದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಕುಟುಂಬಕ್ಕೆ ಪರಿಹಾರ ಧನ ನೀಡುವ ಬಗ್ಗೆ ಮತ್ತು ರಾಜ್ಯದ ಇತರೆ ರೈತರು ಆತ್ಮಹತ್ಯೆ ಹಾದಿ ಹಿಡಿಯದಂತೆ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರ ಸೂಚನೆ

– ಡಾ: ಜಿ. ಪರಮೇಶ್ವರ್(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

ಈ) ಉದ್ಯೋಗ ಮತ್ತು ತರಬೇತಿ ಇಲಾಖೆಯವರ ಅನುಮತಿ ಮೇರೆಗೆ ರಾಜ್ಯದಲ್ಲಿ ಸುಮಾರು 6000 ವಿದ್ಯಾರ್ಥಿಗಳು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶಾವಕಾಶವನ್ನು ಪಡೆದಿದ್ದು, ಅವರಿಗೆ ಪರೀಕ್ಷೆ ಬರೆಯಲು ಅನುಮತಿ ನೀಡುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬುರವರ ಸೂಚನೆ

– ಡಾ: ಜಿ. ಪರಮೇಶ್ವರ್(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**4. ನಿಯಮ 330ರ ಮೇರೆಗೆ ಚರ್ಚೆ**

ಇತ್ತೀಚೆಗೆ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕುಗಳ ಸಂಗತಿಗಳ ಬಗ್ಗೆ ಅತಿ ಹೆಚ್ಚಾಗಿ ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ತಡೆಗಟ್ಟಲು ಮಾಧ್ಯಮಗಳ ಮೇಲೆ ನಿರ್ಬಂಧ ಹೇರುವ ಬಗ್ಗೆ

– ಶ್ರೀಮತಿ ತಾರಾ ಅನೂರಾಧ
– ಶ್ರೀ ರಾಮಚಂದ್ರಗೌಡ
– ಶ್ರೀ ವಿ.ಎಸ್. ಉಗ್ರಪ್ಪ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಡಾ: ಜಿ.ಪರಮೇಶ್ವರ್(ಸಭಾನಾಯಕರು)
– ಶ್ರೀ ರಮೇಶ್ ಬಾಬು

**5. ಪ್ರಕಟಣೆ**

**6. ವಿತ್ತೀಯ ಕಾರ್ಯಕಲಾಪ**

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ:

– ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಟಿ. ಶ್ರೀಕಂಠೇಗೌಡ
– ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀಮತಿ ಮೋಟಮ್ಮ
- ಶ್ರೀ ರಮೇಶ್ ಬಾಬು
- ಶ್ರೀ ಎಂ. ನಾರಾಯಣಸ್ವಾಮಿ
- ಶ್ರೀ ಭಾನುಪ್ರಕಾಶ್
- ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

\- - -

(343) 22.03.2017 11.00 LL-VK

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ 22ನೇ ಮಾರ್ಚ್, 2017**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು**

**(ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ವಿಧಾನ ಪರಿಷತ್ತಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆ ಪರಿಹಾರವಾಯಿತು ಎನ್ನುವ ರೀತಿಯಲ್ಲಿ ಚರ್ಚೆಯಾಯಿತು. ಆದರೆ, ಸುಮಾರು 15-20 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಹಗಲು ರಾತ್ರಿ ಧರಣಿ ಕುಳಿತಿದ್ದಾರೆ ಮತ್ತು ರಸ್ತೆಯಲ್ಲಿಯೇ ಮಲಗಿದ್ದಾರೆ. ಆ ಹೆಣ್ಣುಮಕ್ಕಳ ಸಮಸ್ಯೆ ಇನ್ನು ಪರಿಹಾರವಾಗಿರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಅವಧಿ ಮೊದಲು ತೆಗೆದುಕೊಳ್ಳಿ. ಈಗ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ ಹಾಗೂ ಕಾರ್ಯಕಲಾಪ ಪಟ್ಟಿಯ ರೀತಿ ಸದನ ನಡೆಸಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಮಂತ್ರಿಗಳು ಉತ್ತರ ನೀಡುತ್ತಾರೆ. ಮೊದಲು ಅವರು ಏನು ಹೇಳುತ್ತಾರೆ ಅದನ್ನು ಕೇಳೋಣ. ಸದನ ನಡೆಯಬೇಕೆಂಬ ಬಗ್ಗೆ ನಮಗೂ ಆಸಕ್ತಿಯಿದೆ.

**(ಗೊಂದಲ)**

**ಶ್ರೀ ಸೋಮಣ್ಣ ವಿ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಸುಮಾರು 15-20 ಸಾವಿರ ಜನ ಅಂಗನವಾಡಿ ಕಾರ್ಯಕರ್ತೆಯರು ರಸ್ತೆಯಲ್ಲಿ ಧರಣಿ ಕುಳಿತಿದ್ದಾರೆ. ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ನೀಡಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಮಗೆ ಸದನ ನಡೆಯಬೇಕೆಂದು ಆಸೆಯಿದೆ. ಅದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಮಗೆ ಸದನ ನಡೆಯಬಾರದೆಂದು ಇಲ್ಲ. ನಿನ್ನೆಯ ದಿವಸ ಮಾನ್ಯ ಸಭಾನಾಯಕರು ಉತ್ತರ ನೀಡುವಂತಹ ಸಂದರ್ಭದಲ್ಲಿ ಅವರು ಏನು ಹೇಳಿದ್ದಾರೆಂದರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆದಿದೆ. ಅದಕ್ಕೆ ಅಂಗನವಾಡಿ ಕಾರ್ಯಕರ್ತೆಯರು ಒಪ್ಪಿಗೆ ಕೊಟ್ಟಿದ್ದಾರೆ. ಹಾಗಾಗಿ, ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದರಿಂದ, ನಾವು ನಮ್ಮ ಧರಣಿಯನ್ನು ವಾಪಸ್ಸು ತೆಗೆದುಕೊಂಡಿದ್ದೆವು. ಆದರೆ, ಇಂದು ಪುನಃ ಆ ಹೆಣ್ಣುಮಕ್ಕಳು ಧರಣಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತಿದ್ದಾರೆ. ಅವರ ಜೊತೆಗೆ ಬೇರೆ ಬೇರೆ ಜಿಲ್ಲೆಗಳಿಂದ ಅತೀ ಹೆಚ್ಚು ಹೆಣ್ಣುಮಕ್ಕಳು ಕೂಡ ಬಂದಿದ್ದಾರೆ. ಹಗಲು-ರಾತ್ರಿ ಧರಣಿ ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾದರೆ, ಅವರ ಮಾತುಕತೆ ಏನಾಯಿತು? ಏಕೆಂದರೆ, ಇಡೀ ರಾಜ್ಯವನ್ನು ಕತ್ತಲಲ್ಲಿಟ್ಟುಕೊಂಡು ನಾವು ಇಲ್ಲಿ ಸದನ ನಡೆಸುವುದಕ್ಕೆ ಬರುವುದಿಲ್ಲ. ಸರ್ಕಾರಕ್ಕೂ ಮತ್ತು ಅಂಗನವಾಡಿ ಸಂಸ್ಥೆಯವರಿಗೂ ಏನು ಮಾತುಕತೆ ನಡೆಯಿತು? ಆ ಮಾತುಕತೆಯಲ್ಲಿ ಏನು ತೀರ್ಮಾನವಾಯಿತು? ಆ ತೀರ್ಮಾನದ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರು ನಡೆದುಕೊಳ್ಳುತ್ತಿಲ್ಲವೋ ಅಥವಾ ಸರ್ಕಾರ ನಡೆದುಕೊಳ್ಳುತ್ತಿಲ್ಲವೋ? ಇದು ಸ್ಪಷ್ಟವಾಗಬೇಕಲ್ಲವೇ? ನಾನು ಮತ್ತೆ ಮತ್ತೆ ಹೇಳುತ್ತೇನೆ, ನಮಗೆ ಸದನ ನಡೆಯಬೇಕೆಂದು ಆಸೆ. ಆದರೆ, ಇಲ್ಲಿ ಏನಾಗುತ್ತಿದೆಯೆಂದರೆ, ನಿನ್ನೆಯ ದಿವಸ ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆದಿದೆಯೆಂದು ತುಂಬಾ ಸ್ಪಷ್ಟವಾಗಿ ಹೇಳಿದರು. ಆ ಮಾತುಕತೆಯಲ್ಲಿ 19ನೇ ತಾರೀಖಿನಂದು ಸಭೆ ಕರೆಯಬೇಕೆಂದು ತೀರ್ಮಾನವಾಗಿದೆ. ಅದಕ್ಕೆ ಅಂಗನವಾಡಿ ಕಾರ್ಯಕರ್ತೆಯವರು ಕೂಡ ಒಪ್ಪಿದ್ದಾರೆ ಮತ್ತು ಧರಣಿಯನ್ನು ನಿಲ್ಲಿಸುತ್ತಾರೆ ಎನ್ನುವಂತಹ ಅಂಶವನ್ನು ಸಹ ಹೇಳಿದ್ದಾರೆ. ಸಭಾನಾಯಕರು ಈ ರೀತಿ ಹೇಳಿದ್ದರಿಂದ, ನಾವು ನಮ್ಮ ಧರಣಿಯನ್ನು ಹಿಂತೆಗೆದುಕೊಂಡಿದ್ದೆವು. ನಾನು ಅದಕ್ಕೋಸ್ಕರ ಹೇಳುತ್ತಿರುವುದೇನೆಂದರೆ, ಸರ್ಕಾರ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮಧ್ಯೆ ಏನು ಮಾತುಕತೆ ನಡೆಯಿತು? ಆ ಮಾತುಕತೆಯಲ್ಲಿ ಏನು ತೀರ್ಮಾನವಾಯಿತು? ತೀರ್ಮಾನವಾದರೂ ಕೂಡ ಅವರು ಏತಕ್ಕೆ ಧರಣಿಯನ್ನು ಮುಂದುವರೆಸುತ್ತಿದ್ದಾರೆ? ಆ ಮಾತನ್ನು ಸರ್ಕಾರ break ಮಾಡಿದೆಯೋ ಅಥವಾ ಅಂಗನವಾಡಿ ಕಾರ್ಯಕರ್ತೆಯವರು break ಮಾಡಿದ್ದಾರೆಯೋ? ಇದು ಇಡೀ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಆದುದರಿಂದ, ಮಾನ್ಯ ಸಭಾನಾಯಕರು ಇದಕ್ಕೆ ಸ್ಪಷ್ಟನೆಯನ್ನು ನೀಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

**ಡಾ|| ಜಿ. ಪರಮೇಶ್ವರ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳಿಕೆಯನ್ನು ಈ ಸದನದಲ್ಲಿ ನೀಡಿದ್ದೆನು. ಏನು, ಇಡೀ ರಾಜ್ಯಾದ್ಯಂತ ಅಂಗನವಾಡಿ ಕಾರ್ಯಕರ್ತೆಯರು ಇಲ್ಲಿಗೆ ಬಂದು ಅವರ ಬೇಡಿಕೆಯನ್ನು ಇಟ್ಟುಕೊಂಡು ಮುಷ್ಕರ ಮಾಡುತ್ತಿದ್ದಾರೆ, ಅದರ ಬಗ್ಗೆ ಸಂಬಂಧಪಟ್ಟ ಸಚಿವರಾದ ಶ್ರೀಮತಿ ಉಮಾಶ್ರೀಯವರು ಹೋಗಿ ಮಾತನಾಡಿದ್ದಾರೆ. ನಂತರ ಶಾಸಕರುಗಳು ಹೋಗಿ ಮಾತನಾಡಿದ್ದಾರೆ. ನಮ್ಮ ಮುಖಂಡರುಗಳು ಸಹ ಹೋಗಿ ಮಾತನಾಡಿದ್ದಾರೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡ ಅವರನ್ನು ಕರೆಸಿಕೊಂಡು ಮಾತನಾಡಿದ್ದಾರೆ. ಅಂತಿಮವಾಗಿ, 19ನೇ ತಾರೀಖು ಸಭೆ ಮಾಡಿ ತಮ್ಮ ಸಮಸ್ಯೆಗಳನ್ನು ನಾವು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದಾಗ, ಅದಕ್ಕೆ ಅವರು ಒಪ್ಪಿದರು. ಒಪ್ಪಿ, ಲಿಖಿತ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ಹೇಳಿಕೆಯನ್ನು ನೀಡಬೇಕೆಂದು ಹೇಳಿದರು. 19ನೇ ತಾರೀಖಿನಂದು ಸಭೆ ಕರೆಯುತ್ತೇವೆಂದು ಬಾಯಿ ಮಾತಿನಲ್ಲಿ ಹೇಳಬೇಡಿ, ಅದನ್ನು ಲಿಖಿತ ಮೂಲಕ ನೀಡಬೇಕೆಂದು ಕೇಳಿದರು. ಅದನ್ನು ಕೂಡ ನಾವು ಲಿಖಿತ ಮೂಲಕ ಅವರಿಗೆ ಕೊಟ್ಟ ಮೇಲೆ ಅದಕ್ಕೆ ಅವರು ಒಪ್ಪಿಕೊಂಡರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಲಿಖಿತ ಮೂಲಕ ಕೊಟ್ಟಿದ್ದಾರೆಯೇ?

**ಡಾ॥ ಜಿ. ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಹೌದು. ಲಿಖಿತ ಮೂಲಕ ಕೊಟ್ಟಿದ್ದೇವೆ. ಸಭೆ 19ನೇ ತಾರೀಖಿನಂದು ಕರೆದಿದ್ದೇವೆ. ಆ ನಂತರ ಪುನಃ ಅಂಗನವಾಡಿ ಕಾರ್ಯಕರ್ತೆಯರು ಯಾವ ಕಾರಣಕ್ಕಾಗಿ ತಮ್ಮ ಧರಣಿಯನ್ನು ಮುಂದುವರೆಸುತ್ತಿದ್ದಾರೆಯೋ ಅದು ಗೊತ್ತಿರುವುದಿಲ್ಲ. ಏಕೆಂದರೆ, 19ನೇ ತಾರೀಖಿನಂದು ಸಭೆಗೆ ಬರುತ್ತೇವೆಂದು ಒಪ್ಪಿಕೊಂಡು, ನಂತರ ಆ ಸಭೆಗೆ ನಾವು ಬರುವುದಕ್ಕಾಗುವುದಿಲ್ಲ, ನಾವು ಧರಣಿಯನ್ನು ಮುಂದುವರೆಸುತ್ತೇವೆಂದು ಹೇಳಿ ಧರಣಿ ಮುಂದುವರೆಸುತ್ತಿದ್ದಾರೆ. ಇದರಲ್ಲಿ ನಮ್ಮ ಪ್ರಶ್ನೆ ಏನಿದೆಯೆಂದರೆ, ಇದೊಂದು ಕೇಂದ್ರ ಸರ್ಕಾರದ ಕಾರ್ಯಕ್ರಮ, CSS (Centrally Sponsored Scheme) ಆಗಿದ್ದು, ಇದನ್ನು 1975 ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಪ್ರಾರಂಭ ಮಾಡಿದ್ದು, ಅವತ್ತಿನ ದಿವಸಕ್ಕೆ ಶೇಕಡ 90ರಷ್ಟು ಕೇಂದ್ರ ಸರ್ಕಾರ ಕೊಡಬೇಕು, ಉಳಿದ ಶೇಕಡ 10ರಷ್ಟು ರಾಜ್ಯ ಸರ್ಕಾರ ಕೊಡಬೇಕೆಂದು ತೀರ್ಮಾನ ಮಾಡಿಕೊಂಡು ಬಂದರು. ಅದು ಎಲ್ಲಿಯವರೆಗೆ ಎಂದು ಹೇಳಿದರೆ, 2016-17ರವರೆಗೆ ಅದೇ ಯೋಜನೆ ನಡೆದುಕೊಂಡು ಬರುತ್ತಿತ್ತು. ಈಗ ಅದನ್ನು ಬದಲಾವಣೆ ಮಾಡಿದ್ದಾರೆ. 60:40 ಮಾಡಿದ್ದಾರೆ. 2014-15, 2015-16 ಮತ್ತು 2016-17 ರಲ್ಲಿ ರಾಜ್ಯ ಸರ್ಕಾರದ contribution ನಲ್ಲಿ ಇದೇ ರೀತಿ ಅಂಗನವಾಡಿ ಕಾರ್ಯಕರ್ತೆಯರು ಬೇಡಿಕೆಯಿಟ್ಟಾಗ ಪ್ರತಿ ವರ್ಷ 500 ರೂಪಾಯಿಗಳನ್ನು ಜಾಸ್ತಿ ಮಾಡಿಕೊಂಡು ಬಂದಿದ್ದೇವೆ. 2017-18ಕ್ಕೆ ಈ ವರ್ಷ ಬಜೆಟ್‌ನಲ್ಲಿ 1000 ರೂಪಾಯಿ ಜಾಸ್ತಿ ಮಾಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಇವತ್ತಿನ ದಿವಸ 1000 ರೂಪಾಯಿ ಜಾಸ್ತಿ ಮಾಡಿದರೆ ಒಟ್ಟಾರೆಯಾಗಿ 7000 ರೂಪಾಯಿ ಆಗುತ್ತದೆ. ನಾವು 2017-18ಕ್ಕೆ ಎಲ್ಲಾ ಹಣವನ್ನು ಲೆಕ್ಕ ಹಾಕಿದರೆ 7000 ರೂಪಾಯಿಗಳಾಗುತ್ತದೆ. ಸಹಾಯಕರಿಗೆ 3500 ರೂಪಾಯಿಗಳಾಗುತ್ತದೆ. ಇದೆಲ್ಲವನ್ನು ನಾವು ಅವರಿಗೆ, ನೋಡಿ, ಇದು ಈ ರೀತಿ ಇದೆಯೆಂದು ಮನವರಿಕೆ ಮಾಡಿಕೊಟ್ಟಿದ್ದೇವೆ. 'ನಾನು ಮುಕ್ತ ಮನಸ್ಸಿನಲ್ಲಿದ್ದೇನೆಂದು' ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 19ನೇ ತಾರೀಖಿನಂದು ಈ ಬಗ್ಗೆ ಚರ್ಚೆ ಮಾಡೋಣವೆಂದು ಹೇಳಿದಾಗ, ಒಪ್ಪಿಕೊಂಡು ಹೋದವರು ಈಗ ಪುನಃ ಧರಣಿ ಕುಳಿತಿದ್ದಾರೆ. ಈಗ ನಾವು ಸಚಿವರಾದಂತಹ ಶ್ರೀಮತಿ ಉಮಾಶ್ರೀಯವರನ್ನು ಕಳುಹಿಸಿಕೊಡುತ್ತಿದ್ದೇವೆ. ಅವರು ಮತ್ತೆ ಹೋಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಜೊತೆ ಮಾತನಾಡಬೇಕು ಮತ್ತು ಅವರ ಮನವೊಲಿಸುವಂತಹ ಪ್ರಯತ್ನ ಮಾಡಬೇಕು. ಏಕೆಂದರೆ, ಅವರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಆ ಹೆಣ್ಣುಮಕ್ಕಳು ಬಂದು ಅಲ್ಲಿ ರಸ್ತೆಯಲ್ಲಿ ಮಲಗಿದ್ದಾರೆ. ಇವತ್ತಿಗೆ ಎರಡು ರಾತ್ರಿಯಾಯಿತು, ಅವರು ರಸ್ತೆಯಲ್ಲೇ ಮಲಗಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರು, ಶೌಚಾಲಯಗಳು ಇವೆಲ್ಲವನ್ನು ನಾವು ಒದಗಿಸಿಕೊಟ್ಟಿದ್ದೇವೆ. ಆದರೂ ಕೂಡ ರಾಜ್ಯಾಂದ್ಯಂತ ಅಷ್ಟೊಂದು ಜನ ಹೆಣ್ಣುಮಕ್ಕಳು ಬೀದಿಯಲ್ಲಿ ಬಂದು ಮಲಗುವುದು ಯಾರಿಗೂ ಅದು ಶೋಭೆ ತರುವುದಿಲ್ಲ.

(ಮುಂದು...)

(344)/22-3-2017/ಎಲ್ಎಂ/ವಿಕೆ/11-10

**ಡಾ:ಜಿ.ಪರಮೇಶ್ವರ್**(ಮುಂದು):- ಅವರು ಧರಣಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಮನವೊಲಿಸಲು ಎಲ್ಲ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾನು ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರ ಮೂಲಕ, ಮಾನ್ಯ ವಿರೋಧ ಪಕ್ಷದ ನಾಯಕರ ಮುಖಾಂತರ ಅವರಿಗೆ ಧರಣಿಯನ್ನು ವಾಪಸ್ ತೆಗೆದುಕೊಳ್ಳಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. 19ನೇ ತಾರೀಖು ಸರ್ಕಾರದ ಜೊತೆ ಕುಳಿತು ಏನು ಸಮಸ್ಯೆಗಳು ಇವೆ ಅವೆಲ್ಲವನ್ನು ಚರ್ಚೆ ಮಾಡಲು ಅವಕಾಶವಿದೆ. ಸಮಸ್ಯೆಗಳನ್ನು ಬಗೆಹರಿಸಲು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಯಾರಿದ್ದಾರೆ. ಇವತ್ತು ನಮ್ಮ ಶಾಸಕಾಂಗ ಸಭೆಯಲ್ಲಿ ಮಾನ್ಯಮುಖ್ಯಮಂತ್ರಿಗಳು ಮುಕ್ತ ಮನಸ್ಸಿನಿಂದ ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇಷ್ಟು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಹೇಳುವುದು ಸತ್ಯವಾದರೆ, ನಿನ್ನೆ ಅವರ ಜೊತೆಯಲ್ಲಿ ಮಾತುಕತೆ ಮಾಡಿ, ಅದನ್ನು ಬರವಣಿಗೆಯಲ್ಲಿ ಕೊಡಿ ಎಂದಾಗ ಬರವಣಿಗೆಯಲ್ಲಿಯು ಕೊಟ್ಟಾದ ಮೇಲೆ ಕೂಡಾ ಅವರು ಧರಣಿಯನ್ನು ಮುಂದುವರೆಸುತ್ತಿದ್ದಾರೆ ಎಂದರೆ, ಇದರಲ್ಲಿ ತಪ್ಪು ಯಾರದು ಎನ್ನುವ ಚರ್ಚೆಗೆ ನಾನು ಹೋಗುವುದಿಲ್ಲ. ಸಚಿವೆಯಾದ ಶ್ರೀಮತಿ ಉಮಾಶ್ರೀಯವರನ್ನು ಅಲ್ಲಿಗೆ ಕಳುಹಿಸುತ್ತೇವೆ ಎಂದು ಹೇಳಿದ್ದೀರಿ, ಆದಷ್ಟು ಬೇಗ ಕಳುಹಿಸಿ ಮಾತುಕತೆ ಮಾಡಿ ಆದಷ್ಟು ಬೇಗ ಧರಣಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿ. ಕೇಂದ್ರ ಸರ್ಕಾರದ ವಿಚಾರವನ್ನು ಮತ್ತೆ-ಮತ್ತೆ ಹೇಳುತ್ತಿದ್ದಾರೆ. 13ನೇ ಹಣಕಾಸಿನ ಆಯೋಗದ ವರದಿ ಎಲ್ಲರಿಗೂ ಗೊತ್ತಿದೆ. ಇಡೀ ದೇಶಕ್ಕೆ 32% ಕೊಡುತ್ತಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುದಾನವನ್ನು 42% ಮಾಡಿದ್ದಾರೆ. ಕೇಂದ್ರ ಸರ್ಕಾರ ಮಾಡಿದ ಮೇಲೆ ತಮಿಳುನಾಡು, ಆಂಧ್ರ, ಕೇರಳಾ ಎಲ್ಲಾ ರಾಜ್ಯಗಳಲ್ಲಿ ಅವರ ಸಂಬಳವನ್ನು 10,000 ರೂ.ಗಳಾಗಿ ಮಾಡಿದ್ದಾರೆ. ಇವರು ಮತ್ತೆ-ಮತ್ತೆ ಕೇಂದ್ರ ಸರ್ಕಾರದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ದಯಮಾಡಿ ಅದನ್ನು ಮಾಡಬೇಡಿ. ಅನುದಾನ ಜಾಸ್ತಿ ಮಾಡಿದ್ದಾರೆ ಅದು ಸರಿ. ನಿನ್ನೆ ಸರ್ಕಾರ ಅವರ ಜೊತೆಯಲ್ಲಿ ಮಾತನಾಡಿ 19ನೇ ತಾರೀಖು ಚರ್ಚೆ ಮಾಡೋಣ ಎಂದಾಗ ಅದಕ್ಕೆ ಒಪ್ಪಿಗೆಯನ್ನು ಕೊಟ್ಟು, ಸರ್ಕಾರ ಹೇಳಿರುವುದನ್ನು ಬರವಣಿಗೆಯಲ್ಲಿ ತೆಗೆದುಕೊಂಡು ಒಪ್ಪಿಗೆಯನ್ನು ಕೊಟ್ಟನಂತರವು ಕೂಡಾ ಅವರು ಧರಣಿಯನ್ನು ಮುಂದುವರೆಸುತ್ತಿದ್ದಾರೆ ಎಂದರೆ ಏನು ಹೇಳುವುದು? ನಾನು ಅದಕ್ಕೆ ಮಾನ್ಯ ಸಭಾನಾಯಕರು ಹೇಳುರುವುದು ಸತ್ಯವಾಗಿದ್ದರೆ ಎಂದು ಹೇಳಿದೆ. ಶ್ರೀಮತಿ ಉಮಾಶ್ರೀಯವರನ್ನು ಬೇಗ ಕಳುಹಿಸಿ, ಮಾತನಾಡಲಿ ಆದಷ್ಟು ಬೇಗ ಧರಣಿಯಿಂದ ಎಬ್ಬಿಸುವಂತಹ ಕೆಲಸ ಮಾಡಿ. ಇಲ್ಲದಿದ್ದರೆ ರಾಜ್ಯದಲ್ಲಿ ಇದು ಚೆನ್ನಾಗಿರುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

## 1. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 121**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-**

(ಸದಸ್ಯರು ಗೈರುಹಾಜರಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1367**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೆ, 6 ತಿಂಗಳ ಅವಧಿಯಲ್ಲಿ ಎಷ್ಟು ಅಕ್ರಮ-ಸಕ್ರಮ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಮತ್ತು ಎಷ್ಟು ಸಭೆಗಳನ್ನು ನಡೆಸಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರದಲ್ಲಿ ಸುಮಾರು 5 ಸಭೆಗಳನ್ನು ನಡೆಸಲಾಗಿದೆ ಎಂದು ಹೇಳಿದ್ದಾರೆ. ನನ್ನ ಮಾಹಿತಿ ಪ್ರಕಾರ ನಮ್ಮಲ್ಲಿ ಒಬ್ಬ ಪ್ರಚಂಡ ತಹಶೀಲ್ದಾರ್ ಬಂದಮೇಲೆ 26-11-2016, 18-1-2017 ಮತ್ತು 14-3-2017ರಂದು ಒಟ್ಟು ಮೂರು ಸಭೆಗಳನ್ನು ಮಾತ್ರ ಮಾಡಿದ್ದಾರೆ. 3ನೇ ಸಭೆಯೂ ನಡೆಯಲಿಲ್ಲ ಏಕೆಂದರೆ, ಎಲ್ಲಾ ಕಂದಾಯ  ಇನ್ಸ್‌ಪೆಕ್ಟರ್‌ಗಳು ಸಭೆಯನ್ನು boycott ಮಾಡಿದ್ದರು. 3ನೇ ಸಭೆ ನಡೆದಿರುವುದಿಲ್ಲ ಹೀಗಾಗಿ ಕೇವಲ 2 ಸಭೆಗಳಲ್ಲಿ  23 ಅರ್ಜಿಗಳ ವಿಲೇವಾರಿ ಮಾತ್ರ ಆಗಿದೆ. ಆದರೆ ಇದುವರೆಗೆ ಮಂಜೂರಾಗಿರುವವರಿಗೆ ಹಕ್ಕುಪತ್ರವನ್ನು ನೀಡಿರುವುದಿಲ್ಲ. ಈ ತಹಸೀಲ್ದಾರ ಬಂದಮೇಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಬಡಜನರ ಯಾವ ಕೆಲಸಗಳೂ ಆಗುತ್ತಿಲ್ಲ. ಆ ಬಗ್ಗೆ ಮಂತ್ರಿಗಳು ಹೇಳಬೇಕು. ಇನ್ನೊಂದು ಬಹಳ ಮುಖ್ಯವಾದ ಪ್ರಶ್ನೆ ಎಂದರೆ, ಮೂಡಿಗೆರೆ ತಾಲ್ಲೂಕು ಬಣಕಲ್ ಗ್ರಾಮದ ಸರ್ವೆ ನಂ: 203ರಲ್ಲಿ ಸಾಗುವಳಿ ಮಾಡಿಕೊಂಡಿದ್ದ ಒಬ್ಬ ದಲಿತ ಮಂಜಯ್ಯ ಎನ್ನುವವರ ಜಮೀನು ಮತ್ತು ಗುಡಿಸಲು ಮನೆಯನ್ನು ಧ್ವಂಸ ಮಾಡಿದ್ದಾರೆ. ಧ್ವಂಸ ಎಂದರೆ ಪೋಲೀಸ್‌ರನ್ನು ಇಟ್ಟುಕೊಂಡು ಈ ರೀತಿ ಕೆಲಸವನ್ನು ಮಾಡಿದ್ದಾರೆ. ಯಾರನ್ನು ರಕ್ಷಣೆ ಮಾಡಬೇಕು, ಯಾರಿಗೆ ಧೈರ್ಯಸ್ಥೈರ್ಯ ತುಂಬಬೇಕು ಅಂತಹವರ ಗುಡಿಸಲನ್ನು ಕಿತ್ತುಹಾಕುವುದಾದರೆ  ಒಬ್ಬ ತಹಸೀಲ್ದಾರರು ಒಬ್ಬ Magistrate ಆಗಿ ಈ ರೀತಿ ಮಾಡುವುದು ಎಷ್ಟು ಸರಿ? ಉತ್ತರದಲ್ಲಿ ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿ, ಹೆಸಗೋಡು ಗ್ರಾಮದ ಸರ್ವೇ ನಂ: 203ರಲ್ಲಿ 5ಎಕರೆ ಜಮೀನನ್ನು ಹಾಲಿ ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಟಿ.ಪಿ.ಮಂಜುನಾಥ್ ಬಿನ್ ಟಿ.ಎಸ್.ಪರಮೇಶ್ವರ್ ರವರಿಗೆ ಸೈನಿಕ ಕೋಟಾದಲ್ಲಿ ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದಾರೆ. ಕೊಡಿ ಅದಕ್ಕೆ ನಾವೇನು ಬೇಡ ಎನ್ನುವುದಿಲ್ಲ. ಸರ್ವೇ ನಂ 203ರಲ್ಲಿ ಇನ್ನು ಜಾಗವಿದೆ. ಈ ಬಡ ರೈತ ಎಲ್ಲಿ ಗುಡಿಸಲು ಹಾಕಿಕೊಂಡು, ಗಿಡಗಳನ್ನು ಹಾಕಿಕೊಂಡು ಕುಳಿತ್ತಿದ್ದ ಅದು ಕೇವಲ ಎರಡು ಎಕರೆ ಇದೆ. ಆ ಜಾಗವನ್ನು ಬಿಟ್ಟು ಉಳಿದ ಜಾಗವನ್ನು sketch ಹಾಕಿ ಕೊಡಬಹುದಾಗಿತ್ತು. ಏಕೆ ಈ ದಲಿತನಿಗೆ ಈ ರೀತಿಯ ದೌರ್ಜನ್ಯ, ಅನ್ಯಾಯ ಮಾಡಿದ್ದಾರೆ ಎನ್ನುವುದು ಬಹಳ ಮುಖ್ಯ. ಪ್ರಾಣೇಶ್‌ರವರಿಗೂ ಈ ವಿಷಯ ಗೊತ್ತು, ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊಡ್ಡ ಹೋರಾಟವೇ ಆಗಿದೆ. ಯಾವ ದಲಿತರಿಗೆ ನ್ಯಾಯ ಕೊಡಬೇಕು, ಯಾವ ದಲಿತನಿಗೆ ರಕ್ಷಣೆ ಕೊಡಬೇಕು ಅಂತಹ ದಲಿತನಿಗೆ ಪೊಲೀಸ್ ರಕ್ಷಣೆ ತೆಗೆದುಕೊಂಡು ಈ ರೀತಿಯ ಅನ್ಯಾಯವನ್ನು ಏಕೆ ಮಾಡಿದರು? ಇಂತಹವರ ಮೇಲೆ ಏಕೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವುದು ನನ್ನ ಒತ್ತಾಯ.

**ಸಭಾಪತಿಯವರು:-** ಅವರ ಮೇಲೆ ಕ್ರಮ ತೆಗೆದುಕೊಂಡಿರುವುದು ಸರಿಯಲ್ಲ, ಅವರಿಗೆ ರಕ್ಷಣೆ ಕೊಡಬೇಕಾಗಿತ್ತು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ಮೊದಲನೆಯ ಪ್ರಶ್ನೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾನು ಕಂದಾಯ ಸಚಿವನಾದ ಮೇಲೆ ವಾರಕ್ಕೆ ಒಂದು ಸಭೆಯನ್ನು ಕರೆಯಬೇಕು, ಇಬ್ಬರೇ ಸದಸ್ಯರು ಇದ್ದರೂ ಸಭೆಯನ್ನು ನಡೆಸಬೇಕು, ಎರಡನೇ ಸಭೆ ಆದ ತಕ್ಷಣ ಸಂಬಂಧಪಟ್ಟವರಿಗೆ ಸಾಗುವಳಿ ಚೀಟಿಯನ್ನು ಕೊಡಬೇಕೆಂದು ಒಂದು ಸುತ್ತೋಲೆಯನ್ನು ಕೊಟ್ಟಿದ್ದೇನೆ. ಈ ಆದೇಶವನ್ನು ಯಾರು ಪರಿಪಾಲನೆ ಮಾಡುವುದಿಲ್ಲ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅಲ್ಲಿ ನೆಂಟರು, ಭಾವ ಯಾರು ಇಲ್ಲ.

**ಶ್ರೀಮತಿ ಮೋಟಮ್ಮ:-** ನಿಮ್ಮವರೇ ಆಗಿರುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಅಷ್ಟೊಂದು ಮುಂದಕ್ಕೆ ಹೋಗಬೇಡಿ. ಅಲ್ಲಿ ನಮ್ಮವರು ಯಾರು ಇಲ್ಲ. ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ನೋಡುತ್ತೇನೆ. ಅವರು ನಮ್ಮ ಆದೇಶದಂತೆ ಕೆಲಸ ಮಾಡದೇ ಇರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಅವರು ಎತ್ತಿರುವ ವಿಚಾರ ಸರ್ಕಾರದ ಆದೇಶಕ್ಕೆ ವಿರೋಧವಾಗಿರುವುದು ಅದರ ಬಗ್ಗೆ ವಿಚಾರಿಸುತ್ತೇನೆ. ಮಿಲಿಟರಿಯವರಿಗೆ ಸಾಗುವಳಿ ಚೀಟಿಯನ್ನು ಕೊಡಲಾಗಿದೆ. ಆದರೂ ಅವರಿಗೆ ಮೋಸ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರು ಅಲ್ಲಿಯೇ ಗುಡಿಸಲು ಕಟ್ಟಿಕೊಂಡಿದ್ದಾರೆಯೇ ಅಥವಾ ಬೇರೆ ಕಟ್ಟಿಕೊಂಡಿದ್ದಾರೆಯೇ ಎನ್ನುವುದು ಗೊತ್ತಿಲ್ಲ. ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ನೋಡುತ್ತೇನೆ. 94(ಸಿ)ನಲ್ಲಿ ಈಗಾಗಲೇ ಅಧಿಕೃತವಾಗಿ 2012ರಿಂದ ಮಂಜೂರಾಗಿ ಅಲ್ಲಿ ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅಂತಹವರಿಗೆ. ಅರ್ಜಿ ಹಾಕಲು ಫೆಬ್ರವರಿ 21ರವರೆಗೆ ಅವಕಾಶವಿತ್ತು. ಅವರು ಅರ್ಜಿ ಹಾಕಿಕೊಂಡಿದ್ದಾರೆಯೇ ಇಲ್ಲವೇ ನೋಡಬೇಕು. ಅವರು ಅರ್ಜಿ ಕೊಟ್ಟಿದ್ದರೆ ಯಾವುದೆ ಕಾರಣಕ್ಕೆ ಅವರನ್ನು eviction ಮಾಡಲು ಸಾಧ್ಯವಿಲ್ಲ. ಅವರು ಎಸ್‌ಸಿ ಇರಲಿ ಯಾರೇ ಇರಲಿ, ಅವರು ಅರ್ಜಿ ಕೊಟ್ಟಿದ್ದರೆ ಅವರನ್ನು eviction ಮಾಡಬಾರದು ಎಂದು ಹೇಳಿದ್ದೇವೆ. ಒಂದು ವೇಳೆ ಅವರು ಅರ್ಜಿ ಕೊಟ್ಟಾಗಲು ಈ ರೀತಿ ಕಾನೂನು ಉಲ್ಲಂಘನೆಯಾಗಿದ್ದರೆ ಅವರಿಗೆ ಯಾವ ರೀತಿ ರಕ್ಷಣೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕು ಎನ್ನುವುದನ್ನು ಜಿಲ್ಲಾಧಿಕಾರಿಗಳಿಗೆ ಹೇಳಿ ರಕ್ಷಣೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಅಕ್ರಮ-ಸಕ್ರಮ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಸದಸ್ಯರನ್ನಾಗಿ ಮಾಡುವ ಬಗ್ಗೆ ಹೇಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಅಕ್ರಮ-ಸಕ್ರಮ ಸಮಿತಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಸದಸ್ಯರನ್ನಾಗಿ ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ಇದುವರೆಗೆ ಅದು ಆಗಿರುವುದಿಲ್ಲ. ಯಾವಾಗ ಮಾಡುತ್ತೀರಿ ಎಂದು ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಆಯಾ ತಾಲ್ಲೂಕಿನಲ್ಲಿ ಯಾರು ವಾಸವಾಗಿರುತ್ತಾರೆ ಅಂತಹವರಿಗೆ ಅವಕಾಶ ಮಾಡಿಕೊಡುತ್ತೇವೆ. ಆದರೆ ಯಾರು ವಾಸವಾಗಿದ್ದಾರೆ ಎನ್ನುವ ಮಾಹಿತಿ ನನಗೆ ಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ಇದರ ಬಗ್ಗೆ ಒಂದು ಸುತ್ತೋಲೆಯನ್ನು ಕಳುಹಿಸಿದರೆ ನಾವು ತಕ್ಷಣ ಮಾಹಿತಿಯನ್ನು ಕೊಡುತ್ತೇವೆ.

**ಸಭಾಪತಿಯವರು:-** ಇದರ ಬಗ್ಗೆ ಹೆಚ್ಚಿನ ಚರ್ಚೆಯ ಅವಶ್ಯಕತೆ ಇಲ್ಲ. ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ನಮ್ಮ ಕಛೇರಿಯಿಂದ ಪತ್ರ ಬರೆದು ನೀವು ಎಲ್ಲಿ ವಾಸ ಮಾಡುತ್ತೀರಿ ಅದರ ವಿಳಾಸವನ್ನು ಕೊಡಬೇಕು ಎಂದು ತಿಳಿಸಿದ್ದೇವೆ. ಆ ವಿಳಾಸವನ್ನು ಸಂಬಂಧಪಟ್ಟ ತಹಸೀಲ್ದಾರ್‌ರವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಅವರು ಅದನ್ನು ನೋಡಿಕೊಳ್ಳುತ್ತಾರೆ.

(ಮುಂದು)

(345) 22-3-2017 11-20 ಬಿಎಸ್‌ಡಿ:ಬಿಎನ್‌ಎಸ್

**ಶ್ರೀ ಕಾಗೋಡು ತಿಮ್ಮಪ್ಪ:-** ನನ್ನ ಗಮನಕ್ಕೆ ಬಂದಿಲ್ಲ.

**ಸಭಾಪತಿಯವರು:-** ಗಮನಕ್ಕೆ ಬಂದಮೇಲೆ ಮಾಡುತ್ತೇನೆ ಎಂದರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಎಲ್ಲೆಲ್ಲಿ ವಾಸ ಮಾಡುತ್ತಿದ್ದೇವೆ ಎಂದು ತಹಶೀಲ್ದಾರರಿಗೆ ಕೊಡದಿದ್ದರೆ ಆ ಕ್ಷೇತ್ರದಲ್ಲಿ ಏನೂ ಚಟುವಟಿಕೆ ಮಾಡುವುದಕ್ಕೆ ಬರುವುದಿಲ್ಲ. ಆಯಾ ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲರೂ ಕೊಟ್ಟಿರುತ್ತಾರೆ. ನಾವು ಕೊಟ್ಟಿಲ್ಲದಿದ್ದರೆ ನಮ್ಮ ಕ್ಷೇತ್ರದಲ್ಲಿ ಏನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡೋಣ? ದಯವಿಟ್ಟು ತಕ್ಷಣ ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿಗಳಿಗೆ ಹೇಳಿ ಸಹಸದಸ್ಯ ಎಂದು general ಆಗಿ ಘೋಷಣೆ ಮಾಡಲಿ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಪುಟ್ಟಸ್ವಾಮಿಯವರು ಗೈರು ಹಾಜರಾಗಿದ್ದಾರೆ. ನಂತರ ಶ್ರೀ ಭಾನುಪ್ರಕಾಶ್ ರವರು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ: 1225**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, 94-ಸಿ ಪ್ರಕಾರ 2012ಕ್ಕೆ ಮೊದಲು ಸರ್ಕಾರಿ ಜಮೀನುಗಳಲ್ಲಿ ಮನೆ ಕಟ್ಟಿರುವ 5,37,245 ಅರ್ಜಿಗಳು ಬಂದಿದ್ದು, ಇದರಲ್ಲಿ 2,37,710 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಅದೇ ರೀತಿ 94-ಸಿಸಿ ಪ್ರಕಾರ 1,64,609 ಅರ್ಜಿಗಳು ಬಂದಿದ್ದು, 45,640 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಇದಕ್ಕೆ ದಿನಾಂಕ 20/02/2017ಕ್ಕೆ ಆದೇಶ ಮಾಡಿದ್ದು, ದಿನಾಂಕ 20/02/2018ರವರೆಗೆ ಸಮಯ ಇದೆ ಎಂದು ಹೇಳಿದ್ದಾರೆ. ಅದೇ ರೀತಿ 94-ಸಿಸಿ ಗೆ ಎರಡು ವರ್ಷ ಅವಕಾಶ ಇದೆ ಎಂದು ತಿಳಿಸಿದ್ದಾರೆ. ಆದರೆ ಬಹಳ ಕಾಲಾವಕಾಶ ಕೊಟ್ಟಿರುವುದರಿಂದ ನಿಧಾನವಾಗುತ್ತಿದೆಯೇ? ಏಕೆಂದರೆ ಬಹಳಷ್ಟು ಅರ್ಜಿಗಳು ಉಳಿದಿದೆ.

ಇನ್ನು ಎರಡನೆಯದಾಗಿ 20 x 30 ಮತ್ತು 50 x 80 ಅಡಿಗಳೆಂದು ನಿಶ್ಚಯ ಮಾಡಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವವನು ಸರ್ಕಾರಿ ಭೂಮಿಯಲ್ಲಿ ಅಳತೆ ಮಾಡಿ ಮನೆ ಕಟ್ಟಿಕೊಂಡಿರುವುದಿಲ್ಲ. ಅವನಿಗೆ ಬೇಕಾದ ರೀತಿ ಕಟ್ಟಿಕೊಂಡಿರುತ್ತಾರೆ. ಆದರೆ 50 x 80 ಎಂದು ಅಳತೆ ಮಾಡಿಕೊಟ್ಟಾಗ ಉಳಿದ ಭೂಮಿಯನ್ನು ಅವನಿಗೆ ಮಂಜೂರು ಮಾಡುತ್ತಾರೆಯೇ? ಹಾಗೆ ನಗರ ಪ್ರದೇಶಗಳಲ್ಲಿ 20 x 30 ಎಂದು ಕಟ್ಟಿಕೊಂಡಿದ್ದು, ಅಳತೆ ಮಾಡಿ ಆತ ಕಟ್ಟಿಕೊಂಡಿರುವುದಿಲ್ಲ ಮತ್ತು ಈ ಕಾನೂನು ತರುತ್ತಾರೆ ಎಂದು ಆತನಿಗೆ ಗೊತ್ತಿರುವುದಿಲ್ಲ. ಆತ ಸ್ವಲ್ಪ ದೊಡ್ಡದಾಗಿ ಕಟ್ಟಿಕೊಂಡಿದ್ದಾಗ ಮಾನವೀಯತೆ ಮೇಲೆ consider ಮಾಡಿ, ಆತನಿಗೆ ಮಾಡಿಕೊಡುತ್ತಾರೆಯೇ? ಉಳಿದ ಭೂಮಿಯನ್ನು ಅವನಿಗೆ ಮಾಡಿಕೊಡುತ್ತಾರೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಇದಲ್ಲದೇ ಸರ್ಕಾರಿ ಮತ್ತು ಅರಣ್ಯ ಭೂಮಿಗಳು joint survey ಆಗಿ ಯಾವುದೇ ರೀತಿಯ ಹೊಂದಾಣಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವುದಿಲ್ಲ. ಸರ್ಕಾರದಲ್ಲಿ ಅರಣ್ಯ ಮತ್ತು ಸರ್ಕಾರಿ ಜಮೀನುಗಳು ಇರುತ್ತದೆ. ಅರಣ್ಯ ಭೂಮಿ ಕೂಡ ಸರ್ಕಾರದ ಜಮೀನಾಗಿದೆ. Supreme Court direction ಮತ್ತು ಇನ್ನೊಂದನ್ನು ಹೇಳದೆ ಮನೆ ಕಟ್ಟಿರುವ ಬಡವರಿಗೆ ಅರಣ್ಯ ಭೂಮಿ ಇದ್ದರೂ ಮಂಜೂರು ಮಾಡಿಕೊಡುತ್ತಾರೆಯೇ? 50 x 80 ರ ನಂತರವೂ ಆತ ಭೂಮಿಯನ್ನು ಇಟ್ಟುಕೊಂಡಿದ್ದರೆ, ಉಳಿದ ಭೂಮಿಯನ್ನು ಏನು ಮಾಡುತ್ತಾರೆ? ಅವನಿಗೆ ಮಂಜೂರು ಮಾಡುತ್ತಾರೆಯೇ? ಆತನಿಗೆ ಉಚಿತವಾಗಿ ಕೊಡುತ್ತಾರೆಯೇ ಅಥವಾ ಸಣ್ಣ ದರವನ್ನು ನಿಶ್ಚಯ ಮಾಡಿ ಕೊಡುತ್ತಾರೆಯೇ? ಒಟ್ಟಿನಲ್ಲಿ ಅವನಿಗೆ ಮಂಜೂರು ಮಾಡಿಕೊಡುತ್ತಾರೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮೊದಲು 94-ಸಿ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ 40 x 60 ವಿಸ್ತೀರ್ಣ ಕೊಡುವುದಕ್ಕೆ ಇದ್ದು, ಇದನ್ನು 50 x 80 ರವರೆಗೆ ಮಾಡಿದ್ದೇವೆ. ಅಷ್ಟು ಜಾಗ ಕೊಟ್ಟ ಮೇಲೆ ಉಳಿದ ಜಾಗ ಮಂಜೂರು ಮಾಡಲು ಅವಕಾಶ ಇಲ್ಲ. ಅದರ ಬಗ್ಗೆ ಏನು ಮಾಡಬೇಕೆಂದು ನಾವು ಇನ್ನೂ mind apply ಮಾಡಿಲ್ಲ, ಅದು ತೆರೆದಿಟ್ಟ ಸಮಸ್ಯೆಯಾಗಿದೆ. ಅದೇರೀತಿ ಒಂದು ಸರ್ವೆ ನಂಬರ್‌ನಲ್ಲಿ ಅರಣ್ಯ ಮತ್ತು ಕಂದಾಯ ಭೂಮಿ ಇರುವ ಸಂದರ್ಭದಲ್ಲಿ ಸರ್ಕಾರದಿಂದ ಆದೇಶ ಕಳುಹಿಸಿದ್ದು, ಅದರಂತೆ ಒಂದು ಸರ್ವೆ ನಂಬರ್‌ನಲ್ಲಿ ಎರಡೂ ಜಮೀನುಗಳು ಇದ್ದಾಗ ತಹಶೀಲ್ದಾರ್‌ರವರು ಪಕ್ಕಾ ಪೋಡಿ ಮಾಡಿ, ಅರಣ್ಯ ಭಾಗವನ್ನು ಒಂದು ಕಡೆ ಬಿಟ್ಟು ಉಳಿದ ಭಾಗವನ್ನು ಮನೆ ಕಟ್ಟಿಕೊಂಡಿರುವವರಿಗೆ ಅಥವಾ 50, 53 ರಲ್ಲಿ ಮಂಜೂರಾತಿಗೆ ಅರ್ಜಿ ಕೊಟ್ಟಿರುವವರಿಗೆ ಮಂಜೂರು ಮಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಆಡಳಿತದಲ್ಲಿ ಕೆಲವು ಯಡವಟ್ಟು ವ್ಯವಹಾರಗಳು ನಡೆದು ಎಲ್ಲವನ್ನು ಅರಣ್ಯ ಇಲಾಖೆಯ opinion ಗೆ ಕಳುಹಿಸುತ್ತಿದ್ದರು. ಕಂದಾಯ ಇಲಾಖೆಯ ದಾಖಲೆಯೇ ಒಬ್ಬ ತಹಶೀಲ್ದಾರ್ ಆಗಿರುವಾಗ, ಆತ ಅವನ ಕೆಲಸ ಮಾಡುವುದನ್ನು ಬಿಟ್ಟು ಅರಣ್ಯ ಇಲಾಖೆಯವರು ಅಭಿಪ್ರಾಯಕ್ಕೆ ಕಡತ ಕಳುಹಿಸಿ ವರ್ಷಗಟ್ಟಲೆ ವಾಪಸ್ಸು ಬರುತ್ತಿರಲಿಲ್ಲ. ಅದನ್ನು ತೆಗೆದುಹಾಕಿ, ತಹಶೀಲ್ದಾರರಿಗೆ ಜವಾಬ್ದಾರಿ ನಿಗದಿಪಡಿಸಿ, ಆತನೇ ಮಾಡಬೇಕೆಂದು ತಿಳಿಸಿದ್ದೇನೆ. ಒಂದು ವೇಳೆ 94-ಸಿ ಮತ್ತು 94-ಸಿಸಿ ನಲ್ಲಿ Village Accountant, Revenue Inspector ಗಳು ಜಂಟಿಯಾಗಿ ಪ್ರತಿ ಗ್ರಾಮಕ್ಕೆ ಹೋಗಿ ನಕಾಶೆ ಇಟ್ಟುಕೊಂಡು ಯಾವ್ಯಾವ ಸರ್ವೆ ನಂಬರ್‌ಗಳಲ್ಲಿ ಯಾರ್‍ಯಾರು ಮನೆ ಕಟ್ಟಿಕೊಂಡಿದ್ದಾರೆ ಎಂದು ಪರಿಶೀಲನೆ ಮಾಡಬೇಕು, ಒಂದು ವೇಳೆ ಆತ ಅರ್ಜಿ ಕೊಡದೇ ಇದ್ದರೂ ಅಲ್ಲಿಯೇ ಅರ್ಜಿ ತೆಗೆದುಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಿದ್ದೇನೆ. ಏಕೆಂದರೆ ಯಾರೂ ಬಿಟ್ಟು ಹೋಗಬಾರದು. ಒಬ್ಬ ಮನುಷ್ಯ ಹುಟ್ಟಿ, ಅಲ್ಲಿಯೇ ಸಾಯುವವನಿಗೆ ಹುಟ್ಟಿ ಬೆಳೆದ

ಜಾಗದಲ್ಲಿ ಒಂದು ಹಕ್ಕು ಇಲ್ಲದೇ ಹೋದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವ ಬರುತ್ತದೆಯೇ? ಅದಕ್ಕಾಗಿ ಯಾರು ಬಿಟ್ಟುಹೋಗದಂತೆ ಅಲ್ಲಿಯೇ ಅರ್ಜಿ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೇನೆ. ಹಣ ಕಟ್ಟುವುದರಲ್ಲಿಯೂ ಅರ್ಧ ಭಾಗವನ್ನು ಕಡಿಮೆ ಮಾಡಿದ್ದೇನೆ. ಒಂದು ವೇಳೆ ಆತ ಮನೆ ಕಟ್ಟಿರುವ ಜಾಗ ಅರಣ್ಯಕ್ಕೆ ಸೇರಿದ್ದ ಪಕ್ಷದಲ್ಲಿ ಅರಣ್ಯ ಹಕ್ಕು ಸಮಿತಿಗೆ ಅರ್ಜಿ ಕೊಡಲು ಶಿಫಾರಸ್ಸು ಮಾಡುವಂತೆ ಹೇಳಿದ್ದೇನೆ. ಅಲ್ಲಿಯೂ ಕೂಡ ಆತ ತೆಗೆದುಕೊಳ್ಳಬಹುದು. ಅರಣ್ಯ ಹಕ್ಕು ಸಮಿತಿಯವರು ಅರ್ಜಿ ತೆಗೆದುಕೊಂಡು process ಮಾಡಿ Assistant Commissioner ರವರಿಗೆ ಕಳುಹಿಸಿದಾಗ, ಅವರ ಮೂಲಕ ಮಂಜೂರು ಮಾಡಿಸಿಕೊಡುವ ಕೆಲಸವನ್ನು ಮಾಡುತ್ತೇನೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸಚಿವರ ಬಗ್ಗೆ ನನಗೆ ಬಹಳ ಗೌರವ ಇದೆ. ಈಗ 50 x 80 ಆದ ಮೇಲೆ ಉಳಿದ ಜಾಗದ ಬಗ್ಗೆ ಯೋಚನೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಅರ್ಜಿ ಕೊಟ್ಟಿರುವ ಸಂದರ್ಭದಲ್ಲಿ ಸಾಮಾನ್ಯವಾಗಿ ಅಳತೆ ಮಾಡಿದಾಗ ರಾಜ್ಯದಲ್ಲಿ ಎಷ್ಟು ಜಾಗ ಬಂದಿದೆ ಎಂದು ಗೊತ್ತಾಗುತ್ತದೆ. ಉದಾಹರಣೆಗೆ 100 ಅರ್ಜಿಗೆ 100 x 100 ಬಂದಿದ್ದರೆ ಎಷ್ಟು ಎಕರೆ ಬೇಕಾಗುತ್ತದೆ ಎಂದು ಗೊತ್ತಾಗುತ್ತದೆ. ಅದು ಖಾಲಿ ಉಳಿದಾಗ ದಯಮಾಡಿ ಇದಕ್ಕೊಂದು ತಿದ್ದುಪಡಿ ತಂದು ಆ ಜಾಗವನ್ನು ಆ ಬಡವರಿಗೆ ಮಂಜೂರು ಮಾಡಿಕೊಡಬೇಕೆಂದು ಮಾಡದಿದ್ದರೆ ಆ ಖಾಲಿ ಜಾಗದಲ್ಲಿ ನಾಳೆ ಇನ್ನೊಬ್ಬ ಯಾರೂ ಕಟ್ಟುವುದಕ್ಕೆ ಆಗುವುದಿಲ್ಲ ಮತ್ತು ಆ ಬಡವ ಒತ್ತುವರಿ ಮಾಡಿಕೊಳ್ಳುತ್ತಾನೆ ಎಂಬ ಆರೋಪದಿಂದ ಮುಕ್ತನಾದಂತೆಯೂ ಆಗುತ್ತದೆ. ಆದ್ದರಿಂದ ಈ ಸಮಸ್ಯೆಯ ಬುಡಕ್ಕೆ ಕೈಹಾಕುವ ಶಕ್ತಿಯು ಮಾನ್ಯ ಸಚಿವರಿಗೆ ಇದ್ದು, ಅವರ ಅವಧಿಯಲ್ಲಿ ಒಂದು ತಿದ್ದುಪಡಿ ತಂದು ಉಳಿದ ಜಾಗವನ್ನು ಅವರಿಗೆ ಮಂಜೂರು ಮಾಡಿಕೊಡಲು ಕ್ರಮ ವಹಿಸಬೇಕೆಂಬ ವಿನಂತಿ ನನ್ನದಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, 94-ಸಿ ಮತ್ತು 94-ಸಿಸಿ ಯಲ್ಲಿ ಮಂಜೂರು ಮಾಡಲು ಅವಕಾಶ ಇಲ್ಲ. ಮಾನ್ಯ ಸದಸ್ಯರು ನೀಡಿದ ಸಲಹೆ ಪ್ರಕಾರ ಪುನಃ 94-ಎ ಮತ್ತು 94-ಬಿ ನಲ್ಲಿ ಮಂಜೂರು ಮಾಡುವುದಕ್ಕೆ ಪರಿಶೀಲನೆ ಮಾಡಬಹುದು. ಆ ಸಲಹೆಯನ್ನು ಸರ್ಕಾರವು ಗಂಭೀರವಾಗಿ ಪರಿಶೀಲನೆ ಮಾಡುತ್ತದೆ.

**ಪ್ರಶ್ನೆ ಸಂಖ್ಯೆ: 125 (1132+1102+1131+1151+1083)**

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ 9 ಜನ ಮಾನ್ಯ ಸದಸ್ಯರು ಒಂದೇ ವಿಷಯದ ಮೇಲೆ ಪ್ರಶ್ನೆ ಕೇಳಿದ್ದು, ಅವರ ಹೆಸರುಗಳನ್ನು ಹೇಳುತ್ತೇನೆ. ಶ್ರೀಮತಿ ಜಯಮಾಲಾರವರು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂದೇಶ ನಾಗರಾಜ್‌ರವರು, ಶ್ರೀ ವೀರಯ್ಯನವರು, ಶ್ರೀ ಸಂಕನೂರು, ಶ್ರೀಮತಿ ತಾರಾರವರು, ಶ್ರೀ ಶ್ರೀನಿವಾಸ ಮಾನೆರವರು, ಶ್ರೀ ಅಪ್ಪಾಜಿಗೌಡರು, ಶ್ರೀ ಪ್ರಸನ್ನಕುಮಾರ್ ಹಾಗೂ ಶ್ರೀ ಭಾನುಪ್ರಕಾಶ್ ರವರುಗಳು ಕೇಳಿದ್ದು, ಪ್ರಶ್ನೋತ್ತರ ಅವಧಿಯಲ್ಲಿ 9 ಜನ ಉಪ ಪ್ರಶ್ನೆ ಕೇಳುವುದಕ್ಕೆ ಹೊರಟರೆ ಪ್ರಶ್ನೋತ್ತರದ ಪೂರ್ಣ ಅವಧಿ ಈ ಪ್ರಶ್ನೆಗೆ ಹೋಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಒಪ್ಪುವುದಾದರೆ ನನ್ನ ಸಲಹೆ ಏನೆಂದರೆ, ಸದಸ್ಯರು ಪ್ರಶ್ನೆ ಕೇಳಿದ ನಂತರ ಮಾನ್ಯ ಸಚಿವರು ಉತ್ತರವನ್ನು ಮಂಡಿಸಲಿ. ತದನಂತರ ಈ 9 ಜನರಲ್ಲಿ ಯಾರಾದರೂ ಇಬ್ಬರು ಸಹಿ ಮಾಡಿಕೊಟ್ಟರೆ ಅರ್ಧ ಗಂಟೆ ಚರ್ಚೆಗೆ ಈ ವಿಷಯದ ಬಗ್ಗೆ ನಾಳೆ ಅಥವಾ ನಾಳಿದ್ದು ಅವಕಾಶ ಮಾಡಿಕೊಡುತ್ತೇನೆ. ಪ್ರಶ್ನೋತ್ತರ ಅವಧಿಯಲ್ಲಿ ಅದನ್ನು lapse ಮಾಡುವುದು ಬೇಡ. ಶ್ರೀಮತಿ ಜಯಮಾಲಾರವರು ಪ್ರಶ್ನೆಯನ್ನು ಕೇಳಲಿ. ಮಾನ್ಯ ಸಚಿವರು ಉತ್ತರವನ್ನು ಮಂಡಿಸಲಿ. ನಂತರ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಡಾ: ಜಯಮಾಲಾ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು.

**ಶ್ರೀ ನಾಗರಾಜ್ .ಎಸ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಎಲ್ಲರೂ ಪ್ರಶ್ನೆಗಳನ್ನು ಕೇಳಿದ್ದೇವೆ.

**ಸಭಾಪತಿಯವರು:-** ಮೊದಲನೆಯ ಹೆಸರು ಅವರದ್ದು ಇದೆ. ನಾನು ಯಾವುದನ್ನೂ ನೋಡುವುದಿಲ್ಲ.

**ಡಾ: ಜಯಮಾಲಾ ರಾಮಚಂದ್ರ:-** ಈ ಪ್ರಶ್ನೆಯನ್ನು ನಾನೇ ಮೊದಲು ಕೇಳಿದ್ದೇನೆ, ಅದನ್ನೂ ಬೇಡ ಎಂದರೆ ಹೇಗೆ?

**ಸಭಾಪತಿಯವರು:-** ತಾವು ಪ್ರಶ್ನೆ ಕೇಳಿ.

**ಶ್ರೀ ನಾಗರಾಜ್ .ಎಸ್ (ಸಂದೇಶ್ ನಾಗರಾಜ್):-** ಶ್ರೀಮತಿ ತಾರಾರವರು ಪ್ರತಿ ದಿವಸ ಕೇಳಿದ್ದಾರೆ. ಅವರಿಗೂ ಅವಕಾಶ ಕೊಡುತ್ತೀರಾ?

**ಸಭಾಪತಿಯವರು:-** ಮಾನ್ಯ ಸಂದೇಶ್ ನಾಗರಾಜ್‌ರವರೇ, ದಯವಿಟ್ಟು ಕೇಳಿ, ಸಾಯಂಕಾಲದ ಸಮಯದಲ್ಲಿ ಪ್ರಶ್ನೆಗಳನ್ನು ballot ಮಾಡುತ್ತಾರೆ. ಅದನ್ನು ತಾವುಗಳು ನೋಡಬೇಕು. ನಮ್ಮ ಕಛೇರಿಯಲ್ಲಿ ಪಕ್ಕಾ ಸಿಸ್ಟಂ ಇದೆ. Ballot ಮಾಡುವಾಗ ಯಾರ ಹೆಸರು ಮೊದಲು ಬರುತ್ತದೆಯೋ, ಅವರ ಹೆಸರನ್ನು ಮೊದಲು ಹಾಕುತ್ತೇವೆ. ಯಾರ ಹೆಸರು ಸೆಕೆಂಡ್ ಬರುತ್ತದೆಯೋ ಅವರ ಹೆಸರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಕೆಂಡ್ ಹಾಕುತ್ತಾರೆ. ಅದರಲ್ಲಿ ಯಾವುದೂ ವ್ಯತ್ಯಾಸ ಆಗುವುದಕ್ಕೆ ಸಾಧ್ಯವಿಲ್ಲ. ಬಹಳ ಪಕ್ಕಾ ಆಗಿರುವುದರಿಂದ ವ್ಯತ್ಯಾಸವಾಗುವುದಿಲ್ಲ. ನಾನು ಸಹ ಅದೇ order ನಲ್ಲಿ ಯಾರ್ಯಾರ ಹೆಸರು ಬಂದಿದೆ ಎಂದು ಓದಿದೆ, ಈಗ ಅವರು ಪ್ರಶ್ನೆಯನ್ನು ಮಾತ್ರ ಕೇಳುತ್ತಾರೆ, ಉಪ ಪ್ರಶ್ನೆ ಕೇಳಲು ಅವರಿಗೂ ಅವಕಾಶ ಕೊಡುವುದಿಲ್ಲ ಮತ್ತು ನಿಮಗೂ ಅವಕಾಶ ಕೊಡುವುದಿಲ್ಲ. ನಾನು ಹೇಳಿದಂತೆ ತಾವೆಲ್ಲರೂ ಸ್ಪಂದಿಸಿದರೆ......

**ಶ್ರೀ ನಾಗರಾಜ್ .ಎಸ್ (ಸಂದೇಶ್ ನಾಗರಾಜ್):-** 9 ಜನ 9 ತರಹ ಈ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಒಬ್ಬರು ಕೇಳಿ ಅಂದರೆ......

**ಸಭಾಪತಿಯವರು:-** ಅದಕ್ಕಾಗಿ ಅರ್ಧ ಗಂಟೆಯ ಚರ್ಚೆಯಲ್ಲಿ 9 ಜನರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, luck ಇಲ್ಲದಿರುವ ಕೆಲವರ ಪ್ರಶ್ನೆಗಳು ಬರುವುದೇ ಇಲ್ಲ.

**ಸಭಾಪತಿಯವರು:-** ಅದಕ್ಕೆ ನಾನೇನು ಮಾಡಲಿ? ನೀವು ಒಂದು ಕೆಲಸ ಮಾಡಿ, ಇವತ್ತು ಸಾಯಂಕಾಲ ನೀವೇ ಲಾಟರಿ ಎತ್ತಿ.

**SRI V.S.UGRAPPA**:- Luck ಇಲ್ಲದೇ ಇರುವವರದ್ದು ಬರುವುದಿಲ್ಲ. ನಾನು ಬಹಳ ಪ್ರಶ್ನೆಗಳನ್ನು ಕಳುಹಿಸಿದ್ದು ಒಂದೂ ಸಹ starred ಪ್ರಶ್ನೆಯಾಗಿಲ್ಲ.

**ಸಭಾಪತಿಯವರು:-** ನಾನೇನು ಮಾಡಲಿ?

**ಶ್ರೀ ವಿ.ಎಸ್. ಉಗ್ರಪ್ಪ:-** ಬೇರೆಯವರದ್ದು ದಿವಸ ಒಂದೊಂದು ಪ್ರಶ್ನೆ ಬರುತ್ತದೆ.

**MR. CHAIRMAN**:-I can't help it. ಶ್ರೀಮತಿ ಜಯಮಾಲಾರವರಿಗೆ ಅದೃಷ್ಟ ಇದೆ, ನಾನೇನು ಮಾಡಲಿ?

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(346) 22-03-2017 SK-BNS 11.30**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಕೆಲವರಿಗೆ ಅದೃಷ್ಟ ಇರುತ್ತದೆ ಅವರ ಪ್ರಶ್ನೆ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರುತ್ತದೆ. ಈ ವಿಷಯದ ಬಗ್ಗೆ ಚರ್ಚೆ ಬೇಡ.

**Sri MANE SRINIVAS**:- Separate balloting ಶುರು ಮಾಡಿ.

**Mr. CHAIRMAN**:- O.K.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ ಉತ್ತರವನ್ನು ಒದಗಿಸುತ್ತಿದ್ದೇನೆ.

**ಸಭಾಪತಿಯವರು:-** ಈ ಪ್ರಶ್ನೆಯನ್ನು ಕೇಳಿರುವಂತಹ 9 ಜನ ಸದಸ್ಯರುಗಳ ಪೈಕಿ ಇಬ್ಬರು ಸದಸ್ಯರುಗಳು ಸಹಿ ಮಾಡಿ ನನಗೊಂದು ಅರ್ಜಿಯನ್ನು ಕೊಟ್ಟರೆ ನಾನು ನಾಳೆ ಅಥವಾ ನಾಳಿದ್ದು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇಲ್ಲ ಎಂದರೆ ಇದನ್ನು ಈಗ ತೆಗೆದುಕೊಂಡರೆ ಪ್ರಶ್ನೋತ್ತರ ವೇಳೆ ಮುಗಿಯುವುದೇ ಇಲ್ಲ.

**ಡಾ: ಜಯಮಾಲ ರಾಮಚಂದ್ರ :-** ಮಾನ್ಯ ಸಭಾಪತಿಯವರೆ, ನಾವು ಕೇಳಿರುವಂತಹ ಕೆಲವು ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಬೇಕಾಗಿದೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೆ, ನಾವು ಅರ್ಧ ಗಂಟೆ ಚರ್ಚೆಗೆ ಇಬ್ಬರು ಸದಸ್ಯರು ಸಹಿ ಮಾಡಿ ತಮಗೆ ಪತ್ರವನ್ನು ಕೊಡುತ್ತೇವೆ.

**ಸಭಾಪತಿಯವರು:-**ಡಾ:ಜಯಮಾಲರವರೆ, ದಯಮಾಡಿ ಕುಳಿತುಕೊಳ್ಳಿ. ನೀವು ನನಗೆ ಅವಕಾಶ ಕೊಡಲಿಲ್ಲವೆಂದು ಹೇಳಬಾರದು. ನಿಮ್ಮ ಪಕ್ಷದ ಪರವಾಗಿ ಯಾರ್‍ಯಾರು ಮಾತನಾಡಬೇಡಬೇಕೆಂದು ಪಟ್ಟಿಯನ್ನು ಕೊಡುತ್ತಾರೆ. ನಾನು ಅದನ್ನು ಆರ್ಡರ್‌ನಲ್ಲಿ ಕರೆಯುತ್ತೇನೆ. ನೀವು ನನ್ನ ಮೇಲೆ ಅಪಾಧನೆ ಮಾಡಬೇಡಿ. ನಿಮ್ಮ ಪಕ್ಷದವರಲ್ಲಿ ನನ್ನ ಹೆಸರನ್ನು ಮೊದಲು ಹಾಕಿ ಎಂದು ಕೇಳಿ. ಅವರು ಹಾಕಿದರೆ ನಿಮಗೆ ಮೊದಲು ಮಾತನಾಡಲು ಅವಕಾಶ ಸಿಗುತ್ತದೆ. ಇದು ಎಲ್ಲರಿಗೂ ಗೊತ್ತಿರಲಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಈಗ 9 ಜನ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಸಮಗ್ರವಾಗಿ ಉತ್ತರವನ್ನು ಒದಗಿಸಿದೆ. ಇದರಲ್ಲಿ ಅಂಕಿ ಅಂಶಗಳೇ ಹೆಚ್ಚಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವಾಗ ಬೆಂಕಿ ಅವಘಡವಾಯಿತು, ಎಷ್ಟು ನಷ್ಟವಾಯಿತು ಎನ್ನುವ ಅಂಕಿ ಅಂಶಗಳಿದೆ. ಬಹುಶಃ ಇದರ ಮೇಲೆ ಈ ಉತ್ತರ ಮಾನ್ಯ ಸದಸ್ಯರುಗಳಿಗೆ ಸಮಾಧಾನ ತರುತ್ತದೆಂದು ಭಾವಿಸುತ್ತೇನೆ. ಮೂಲತಃ ಅವರು ಕೇಳಿರುವಂತಹ ಪ್ರಶ್ನೆಗೆ ಎಲ್ಲಾ ಅಂಕಿ ಅಂಶಗಳಿದೆ. ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳಬೇಕೆಂದರೆ ನನ್ನದೇನು ವಿರೋಧ ಇಲ್ಲ. ಆದರೆ ಕೇಳಿರತಕ್ಕಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರವಂತೂ ಕೊಟ್ಟಿದೆ. ಆದರೆ ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳುವುದಕ್ಕೆ ನನ್ನ ವಿರೋಧವಂತೂ ಇಲ್ಲ.

**ಸಭಾಪತಿಯವರು:-** ಅರ್ಧ ಗಂಟೆ ಚರ್ಚೆಗೆ ಪತ್ರವನ್ನು ಕಳುಹಿಸಿಕೊಡಿ.

**ಚುಕ್ಕೆ ಗುರುತಿನ ಪ್ರಶ್ನೆ 1164**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ಎಂದು ನಾನು ಕೇಳಿದ್ದೆನು. ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಅನ್ನಿಸುತ್ತಿರುವುದೇನೆಂದರೆ 2013-14 ನೇ ಸಾಲಿನಲ್ಲಿ 947 ಕಾಮಗಾರಿಗಳು, 2014-15 ನೇ ಸಾಲಿನಲ್ಲಿ 1227 ಕಾಮಗಾರಿಗಳು ತೆಗೆದುಕೊಳ್ಳಲಾಗಿದೆ. 2015-16 ನೇ ಸಾಲಿನಲ್ಲಿ ಅದರ ಅರ್ಧದಷ್ಟು ಕುಂಠಿತವಾಗಿದೆ. ಅಂದರೆ 743 ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಕಾಮಗಾರಿಗಳನ್ನು ಅವುಗಳ ಬೇಡಿಕೆಗಳಿಗೆ ಅನುಗುಣವಾಗಿ ತೆಗೆದುಕೊಳ್ಳಬೇಕಿದೆ. ಹೇಮಾವತಿ ನದಿಯಲ್ಲಿ ನೀರು ಇಲ್ಲದೇ ಇರುವಂತಹ ಸಂದರ್ಭದಲ್ಲಿ, ತುಮಕೂರು, ಕುಣಿಗಲ್, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಗುಬ್ಬಿ, ಮಧುಗಿರಿ ಈ ಎಲ್ಲಾ ಕ್ಷೇತ್ರಗಳಲ್ಲಿ ಹೇಮಾವತಿ ನೀರು ಹರಿಯುವಂತಹ ಸಂದರ್ಭದಲ್ಲಿ ವಿಶೇಷವಾಗಿ ಇನ್ನು ಕೂಡ ಕಾಮಗಾರಿಗಳಾಗಬೇಕಾಗಿದೆ. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲಿ ಕುಳಿತಿರುವುದರಿಂದ ಹೇಳಬೇಕಾಗಿದೆ; ನಾವು ಈ ಹಿಂದೆ KDP meeting ನಲ್ಲಿ, ಮತ್ತು ಇನ್ನಿತರೆ ಕಾಮಗಾರಿಗಳು ಆಗುವುದರ ಬಗ್ಗೆ ಹೇಳಿರುವ ಹಾಗೆ main channel ಮಾಡಿ ಬಿಟ್ಟಿದ್ದಾರೆ. ಅದರಲ್ಲಿ ಉಳಿದಿರುವ sub channels ರೈತರ ಜಮೀನಿಗೆ ಹರಿಯುವಂತಹ ನೀರಿನ channels, ರಸ್ತೆಗಳು, ಶಿಂಶಾ ನದಿಗೆ ಅಡ್ಡಲಾಗಿ ಬರುವಂತಹ ಮೋರಿಗಳು ಈ ರೀತಿಯ ಕಾಮಗಾರಿಗಳು pending ಆಗಿರುವಂತಹ ಸಂದರ್ಭದಲ್ಲಿ ನಮ್ಮ ರೈತರು ಅನೇಕ ಬೇಡಿಕೆಯನ್ನು ಇಟ್ಟಿದ್ದರೂ ಕೂಡ, ಜನರಿಂದ ಬಂದಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ನಮ್ಮ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಅನುದಾನ ಲಭ್ಯತೆ ಇಲ್ಲದ ಕಾರಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನೀವು ನೀಡಿರುವ ಉತ್ತರದ ಪ್ರಕಾರ ಹೋದ ವರ್ಷ 1227 ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಈ ವರ್ಷ ಕೇವಲ 743 ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ, ಅನುದಾನದ ಲಭ್ಯತೆಯಿಲ್ಲದ ಕಾರಣ ಇದ್ಯಾವುದೇ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಹೇಳಿದ್ದೀರಿ. ಇದಕ್ಕೆ ಉತ್ತರವನ್ನು ಕೊಟ್ಟರೆ ಮುಂದಿನ supplementary ಅನ್ನು ಕೇಳುತ್ತೇನೆ.

**ಶ್ರೀ. ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ನೋಡಿದರೆ, ಅವರು statistical information ಕೇಳಿದ್ದಾರೆ. ಅದರ ಪ್ರಕಾರ ಉತ್ತರವನ್ನು ಕೊಟ್ಟಿದ್ದೇನೆ. ಇವತ್ತಿನ ದಿವಸ ಹೊಸ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಒಂದನ್ನು ಹೇಳಬೇಕಾಗುತ್ತದೆ. ನೀರಾವರಿ ಇಲಾಖೆಯಲ್ಲಿ constituency wise ಪ್ರಶ್ನೆ ಬರುವುದಿಲ್ಲ. ಅದು project wise ಇರುತ್ತದೆ. First of all ಅದು constituency-wise ಬರುವುದಿಲ್ಲ. ಇಲ್ಲಿ 2013–14, 2014–15 2015–16 ನೇ ಸಾಲಿನಲ್ಲಿ ಎಷ್ಟು ಕಾಮಗಾರಿಗಳು ಎಂದು ಕೇಳಿದ್ದಾರೆ. ತುಮಕೂರಿನ ಎಂಟು ಮತ ಕ್ಷೇತ್ರಗಳು ಏನು ಬರುತ್ತವೆ, ಅಲ್ಲಿ ಐದು ಕ್ಷೇತ್ರಗಳು ಹೇಮಾವತಿ ನದಿಯಡಿಯಲ್ಲಿ ಬರುತ್ತವೆ. ಚಿಕ್ಕನಾಯಕನಹಳ್ಳಿ, ಕೊರಟಗೆರೆ ಮತ್ತು ಮಧುಗಿರಿ ಈ ಮೂರು ಕ್ಷೇತ್ರಗಳು ಕೂಡ Krishna basin ನಲ್ಲಿ ಬರುತ್ತವೆ. ಹೀಗಾಗಿ common ಆಗಿ ಬರುವುದಿಲ್ಲ. ಆದರೂ ಕೂಡ ನಾವು ಕುಡಿಯುವ ನೀರನ್ನು ಅಲ್ಲಿ ಒದಗಿಸುತ್ತಿದ್ದೇವೆ. ಇನ್ನು Krishna basin ನಲ್ಲಿ Upper Bhadra ದಲ್ಲಿ ಇವತ್ತಿನ ದಿವಸ ತುಮಕೂರು branch canal ನಲ್ಲಿ ನಾವು ಈಗಾಗಲೇ survey ಮಾಡಿ ಇವತ್ತಿನ ದಿವಸ ಈ ಅಜ್ಜಂಪುರ tunnel ಕಟ್ಟಿ ಆದಮೇಲೆ ಏನು 30 ಕಿಲೋ ಮೀಟರ್‌ರವರೆಗೆ ತೆಗೆದುಕೊಳ್ಳುತ್ತಿದ್ದೇವೆ, ಅದು ಬಹಳ ಶೀಘ್ರವಾಗಿ ಮಾಡುವುದಕ್ಕೆ ಒಂದು priority ಕೊಟ್ಟಿದ್ದೇವೆ. ನಾವು ಆ ಕೆಲಸವನ್ನು ಇವತ್ತು ತೆಗೆದುಕೊಳ್ಳುತ್ತಿದ್ದೇವೆ. ಅದಲ್ಲದೇ Hemavathi Left Bank Canal (HLBC) ಕೂಡ modernise ಆಗಿದ್ದು, of course, ತುಮಕೂರು ಜಿಲ್ಲೆಯಲ್ಲಿ ಕಾಮಗಾರಿಗಳು ಬಂದರೆ, ಅದು ಕೂಡ ತುಮಕೂರು ಜಿಲ್ಲೆಗೆ ಅನುಕೂಲವಾಗುತ್ತದೆ. ತುಮಕೂರು ಜಿಲ್ಲೆಗೆ ಏನು allocation ಇತ್ತು, ಸುಮಾರು 24 ರಿಂದ 25 TMC ನೀರು ಇತ್ತು. ಯಾವಾಗಲೂ ಕೂಡ 14 TMC ಗಿಂತ ಜಾಸ್ತಿ ನೀರು ಹರಿದಿರಲಿಲ್ಲ. ಈಗ HLBC modernise ಆಗಿರುವುದರಿಂದ 0-72 kilometres ಅದು ಏನು ಆಗುತ್ತದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 8-9 TMC or 10 TMC ಜಾಸ್ತಿ ನೀರು ಇವತ್ತಿನ ದಿವಸ ತುಮಕೂರಿಗೆ ಲಭ್ಯವಾಗುತ್ತದೆ. ನಾವು ಇವತ್ತು ಅಷ್ಟೊಂದು ಕೆಲಸವನ್ನು ಮಾಡಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ತಾವು ಏನು ಪ್ರಶ್ನೆ ಕೇಳಿದ್ದೀರಾ ಅದರ ಬಗ್ಗೆ ನನಗೆ ಒಂದು ಪತ್ರ ಕೊಡಿ, ನಾನು ಅದಕ್ಕೆ ನಿರ್ದೇಶನವನ್ನು ಕೊಡುತ್ತೇನೆ. ಆ ಕೆಲಸಗಳನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

**ಶ್ರೀ ಎಂ. ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ಕಳೆದ ನಾಲ್ಕು ವರ್ಷಗಳಿಂದ ಇತ್ತೀಚಿನ ದಿನಗಳಲ್ಲಿ ಬರಗಾಲ ಬಂದಂತಹ ವ್ಯವಸ್ಥೆಯಲ್ಲಿ ಹೇಮಾವತಿ ನೀರು ಹರಿಯುವಂತಹ ಸಂದರ್ಭದಲ್ಲಿ ಅನೇಕ ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಹಾಗೂ ಬರ ತಲೆದೋರಿರುವ ವಿಚಾರದಲ್ಲಿ ನಾನು ಉದಾಹರಣೆಯನ್ನು ಹೇಳುತ್ತೇನೆ. ತಾವೇ ಆದೇಶ ಮಾಡಿದ್ದೀರಿ ಹಾಗೂ ಮತ್ತು ಮುಖ್ಯಮಂತ್ರಿಗಳು ಆದೇಶ ಮಾಡಿದ್ದಾರೆ. ನೀಲಗುಂದ, ಅಜ್ಜೇನಹಳ್ಳಿ ಹಾಗೂ ಇನ್ನಿತರ ಒಂಬತ್ತು ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ, ಯಲದಬಾಗಿ ಹಾಗೂ ಸುತ್ತಮುತ್ತಲ ಸಂಪಿಗೆ ಗ್ರಾಮದಲ್ಲಿ ನೀರು ಬರದೇ ರೈತರಿಗೆ ತೊಂದರೆಯಾಗಿರುವ ಬಗ್ಗೆ, ಅಮ್ಮಸಂದ್ರ ಹಾಗೂ ಇನ್ನಿತರ ಹಳ್ಳಿಗಳ ಬಗ್ಗೆ ಮತ್ತು ದಬ್ಬೇಘಟ್ಟ ಹೋಬಳಿಯ ಕೆಲವು ಹಳ್ಳಿಗಳ ಬಗ್ಗೆ ಕಳೆದ 3-4 ವರ್ಷಗಳಿಂದಲೂ ಕೂಡ ನಾವು ಸಕಾಲದಲ್ಲಿ ಏನು ಬೇಡಿಕೆಯನ್ನು ಇಟ್ಟಿದ್ದರೂ ಕೂಡ ಇದನ್ನು ಯಾಕೆ consider ಮಾಡುತ್ತಿಲ್ಲ? ಈ ಕಾಮಗಾರಿಗಳಲ್ಲಿ ಇರುವಂತಹ ತೊಂದರೆಗಳೇನು? ಅವುಗಳ ಕಾಮಗಾರಿಗಳನ್ನು ತೆಗೆದುಕೊಂಡು, ಬೇಗನೆ ಮುಗಿಸಿ ಕೊಡಬೇಕೆಂದು ನಾನು ರೈತರ ಪರವಾಗಿ ವಿನಂತಿಸುತ್ತೇನೆ.

**ಶ್ರೀ. ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳುತ್ತಿದ್ದೇನೆ, ಅವರು ಕೇಳಿದಂತಹ ಪ್ರಶ್ನೆ ಇದಲ್ಲ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಇದನ್ನೆಲ್ಲಾ ಪತ್ರದಲ್ಲಿ ಕೊಡಲಿ. ಆ ಪತ್ರವನ್ನು ಕೊಟ್ಟ ಮೇಲೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆ ಪತ್ರದ ಆದ್ಯತೆಯ ಮೇರೆಗೆ ಅದನ್ನೆಲ್ಲಾ ಪರಿಶೀಲನೆ ಮಾಡಿ ಮತ್ತು ಸರ್ವೇ ಮಾಡಿ ಏನು ವಸ್ತು ಸ್ಥಿತಿಯಿದೆ ಎಂಬುದನ್ನು ನೋಡಿಕೊಂಡು ನಿರ್ಧಾರವನ್ನು ಕೈಗೊಳ್ಳುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ 1169**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್. ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಗೋಮಾಳ ಜಮೀನಿನ ವಿಸ್ತೀರ್ಣವೆಷ್ಟು ಎಂದು ನಾನು ಕೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರು ಜಿಲ್ಲೆಯಲ್ಲಿ 42526.26 ಎಕರೆ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 25742.32 ಎಕರೆ ಇದೆ ಎಂದು ಹೇಳಿದ್ದಾರೆ. ಒತ್ತುವರಿ ಪ್ರದೇಶದಲ್ಲಿ ಎಷ್ಟು ಎಂದು ಕೇಳಿದರೆ ಮೈಸೂರು ಜಿಲ್ಲೆಯಲ್ಲಿ ಸುಮಾರು 1609 ಎಕರೆ ಎಂದು ಹೇಳಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 408 ಎಕರೆ ಪ್ರದೇಶ ಒತ್ತುವರಿಯಾಗಿರುತ್ತದೆಂದು ಹೇಳಿದ್ದಾರೆ. ಈ ಉತ್ತರ ನನಗೆ ಸಮಾಧಾನವಿಲ್ಲ. ಏಕೆ ಎಂದು ಹೇಳುವುದಾದರೆ ಇಷ್ಟು ಕಡಿಮೆ ಸಂಖ್ಯೆಯಲ್ಲಿ ಒತ್ತುವರಿಯಾಗಿರುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗಿರುವುದಿಲ್ಲ. ಇದಕ್ಕಿಂತ ಯಾರೊಬ್ಬರು ಮಾಡಿರುವುದೇನಾದರೂ ಕೊಟ್ಟಿರಬಹುದು ಎಂದು ಅನಿಸುತ್ತದೆ. ಇದರ ರಕ್ಷಣೆಗೆ ಕ್ರಮಗಳನ್ನು ಕೂಡ ಕಳೆದ ತಿಂಗಳಿನಲ್ಲಿ ಕೆಲವು ತಿದ್ದುಪಡಿ ಮಾಡಿದ್ದೇವೆಂದು ಹೇಳುತ್ತಾರೆ. ಅದು ಖಂಡಿತವಾಗಿಯೂ ಸ್ವಾಗತಾರ್ಹ ಮಾನ್ಯ ಸಭಾಪತಿಯವರೇ. ಮುಖ್ಯವಾಗಿ ನಾನು ಹೇಳಬೇಕಾಗಿರುವಂತಹದು ನಮ್ಮ ತಂದೆಯವರಾದಂತಹ ಶ್ರೀ ಎನ್. ರಾಚಯ್ಯನವರು 1960 ನೇ ಇಸ್ವಿಯಲ್ಲಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ದಲಿತರಿಗೆ ಸಾಕಷ್ಟು ಜಮೀನುಗಳನ್ನು ಕೊಟ್ಟಿದ್ದಾರೆ. ಆ ಜಮೀನುಗಳನ್ನು ಇವತ್ತಿನವರೆಗೂ ಕೂಡ ಅದನ್ನು ಸೊಸೈಟಿಗಳ ಮುಖಾಂತರ ಕೊಟ್ಟಿರುವಂತಹದ್ದು. ನಾನು ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಗೆ ಸೊಸೈಟಿಯ ಅಧ್ಯಕ್ಷರನ್ನು ಕರೆದುಕೊಂಡು ಹೋಗಿ, ಅವರಿಗೆ individual ಆಗಿ ಖಾತೆಗಳನ್ನು ಕೊಡಿ ಮತ್ತು ಸಾಗುವಳಿಗಳನ್ನು ಕೊಡಿ ಎಂದು ನಾನು ಅರ್ಜಿಯನ್ನು ಕೂಡ ಕೊಟ್ಟಿದ್ದೇನೆ. ಆದರೂ ಕೂಡ ಇವತ್ತಿನವರೆಗೆ ಅದರ ಬಗ್ಗೆ ಯಾವುದೇ ರೀತಿಯ ಸೂಕ್ತವಾದಂತಹ ಕ್ರಮಗಳನ್ನು ತೆಗೆದುಕೊಂಡಿಲ್ಲ. ಉದಾಹರಣೆಗೆ ಅರಕಲವಾಡಿ, ಮೂಡಹಳ್ಳಿ ಕಾಲೋನಿ, ಹೆಣಗುಂಬ, ಲಿಂಗನಾಪುರ ಅಂತಾ ಹೇಳಿ ಮತ್ತು ಇಡೀ ರಾಜ್ಯದಲ್ಲಿ ಕೊಟ್ಟಿದ್ದಾರೆ. ನಾನು ಜಿಲ್ಲೆಗೆ ಕೇಳಿದರೂ, ಇದು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಇದು ರಾಜ್ಯದ ಪ್ರಶ್ನೆ ಕೂಡ ಇದೆ. ಈ ಸಾಗುವಳಿ ಪತ್ರವನ್ನು ಕೊಡದೇ ಇರುವುದರಿಂದ ಅಲ್ಲಿ ಏನಾಗಿದೆ ಎಂದರೆ ರೆಕ್ಕೆ ಇಲ್ಲ ಪುಕ್ಕ ಇಲ್ಲ ಗರುಡ ಚಾರಿ, ದುಡ್ಡು ಇಲ್ಲ ಕಾಸು ಇಲ್ಲ ಸಂಪತ್ತು ಅಯ್ಯಂಗಾರ್ ಎನ್ನುವಂತಹ ಗಾದೆ ಇದೆ. ಇದು ಆ ರೀತಿಯಾಗಿದೆ. ಅವರ ಜಮೀನಿಗೆ ಪ್ರತ್ಯೇಕವಾದ ರಸ್ತೆಗಳಿಲ್ಲ. ಬ್ಯಾಂಕ್‌ಗಳಲ್ಲಿ ಮತ್ತು ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(347) 22-03-2017 11-40 ಹೆಚ್‌ವಿ:ಜಿಆರ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಧರ್ಮಸೇನ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ವಿದ್ಯುಚ್ಛಕ್ತಿ ಇಲ್ಲ, ಕೊಳವೆ ಬಾವಿಗಳನ್ನು ದಲಿತರಿಂದ ಕಸಿದಿಟ್ಟುಕೊಂಡಿದ್ದಾರೆ. ಇದರಿಂದ ಅವರು ಏನು ಪಡೆದುಕೊಳ್ಳುವುದಕ್ಕೂ ಸಾಧ್ಯವಾಗುತ್ತಿಲ್ಲ. ಅವರಿಗೆ ಸ್ವಂತ ಜಮೀನು ಇದ್ದರು ಸಹ ತಮಿಳುನಾಡು, ಮೈಸೂರು ಮತ್ತು ಬೆಂಗಳೂರಿಗೆ ಬಂದು ಕೂಲಿ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ, ಸುತ್ತಮುತ್ತ ಇರುವಂತಹ ಕಾಡಿನ ಪ್ರದೇಶದಲ್ಲಿ. . . . .

**ಸಭಾಪತಿಯವರು:-** ಮಾನ್ಯ ಧರ್ಮಸೇನರವರೇ, ನಿರ್ದಿಷ್ಟವಾಗಿ ಉಪ ಪ್ರಶ್ನೆಯನ್ನು ಕೇಳಿ. What is your question?

**ಶ್ರೀ ಕಾಗೋಡು ತಿಮ್ಮಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಅವರ ತಂದೆಯವರ ಕಾಲದಲ್ಲಿ ಭೂಮಿಯನ್ನು ಮಂಜೂರು ಮಾಡಿದ್ದಾರೆ, ಸೊಸೈಟಿ ಇದೆ ಎನ್ನುವುದೆಲ್ಲ ಈಗ ಪ್ರಸ್ತಾಪ ಮಾಡುವ ವಿಷಯವಲ್ಲ. ಅವರು ನೇರವಾಗಿ ಪ್ರಶ್ನೆ ಕೇಳಿದರೆ ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ. ನಿಜವಾಗಿಯೂ ಅವರಿಗೆ ಆ ಪ್ರದೇಶದಲ್ಲಿರುವ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ಇಚ್ಛಾಶಕ್ತಿ ಇದ್ದರೆ, ಈ ದಿನವೇ ಬಂದು ನನ್ನ ಜೊತೆಗೆ ಮಾತನಾಡಿದರೆ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ.

**ಶ್ರೀ ಆರ್.ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, ಆ ಭೂಮಿಯನ್ನು ಸಾಗುವಳಿಗೆ ಕೊಟ್ಟರೆ ಅನುಕೂಲವಾಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಸನ್ಮಾನ್ಯ ಸಭಾಪತಿಯವರೇ, ಇವತ್ತಿನವರೆವಿಗೂ ಅವರು ಈ ವಿಚಾರವಾಗಿ ನನ್ನ ಬಳಿ ಬಂದು ಚರ್ಚೆ ಮಾಡಿಲ್ಲ ಅಥವಾ ಆ ಸಮಸ್ಯೆಯನ್ನು ನನ್ನ ಗಮನಕ್ಕೆ ತಂದಿಲ್ಲ. ಇಂತಹ ಸೊಸೈಟಿಗಳ ವ್ಯವಹಾರ ಅನೇಕ ಕಡೆಗಳಲ್ಲಿ ಇವೆ. ಹಿಂದೆ ಈ ಸೊಸೈಟಿಗಳನ್ನು ಸ್ಥಾಪನೆ ಮಾಡಿಬಿಟ್ಟಿದ್ದಾರೆ. ಆದರೆ, ಅವು ಅನೇಕ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಯಾವುದೇ ವ್ಯವಹಾರಗಳನ್ನು ಸಹ ನಡೆಸುತ್ತಿಲ್ಲ. ಇದರ ಬಗ್ಗೆ ಬೇರೆ ತೀರ್ಮಾನ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡಿತವಾಗಿ ಇದಕ್ಕೆ ಯಾವ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತದೆ. ಆದರೆ, ವಿಷಯ ಗೊತ್ತಿಲ್ಲದೆ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಧರ್ಮಸೇನರವರೇ, ಮಾನ್ಯ ಸಚಿವರೊಂದಿಗೆ ಕುಳಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಿ.

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1086</u>**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಸಂರಕ್ಷಣೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ; ಎಷ್ಟು ಹುದ್ದೆಗಳು ಇನ್ನು ಖಾಲಿ ಇವೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಬಂಡೀಪುರ ಅರಣ್ಯದಲ್ಲಿ ಮಂಜೂರಾಗಿರುವ ಒಟ್ಟು 246 ಹುದ್ದೆಗಳ ಪೈಕಿ ಕೇವಲ 164 ಹುದ್ದೆಗಳಲ್ಲಿ ಮಾತ್ರ ಕಾರ್ಯನಿರ್ವಹಿಸಲಾಗುತ್ತಿದೆ. ಉಳಿದಂತೆ 82 ಹುದ್ದೆಗಳು ಖಾಲಿ ಇವೆ. ಅದೇ ರೀತಿಯಲ್ಲಿ ನಾಗರಹೊಳೆ ಅರಣ್ಯದಲ್ಲಿ ಮಂಜೂರಾಗಿರುವ 230 ಹುದ್ದೆಗಳ ಪೈಕಿ 143 ಹುದ್ದೆಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ, ಉಳಿದಂತೆ 87 ಹುದ್ದೆಗಳು ಖಾಲಿ ಇವೆ. ಒಟ್ಟಾರೆ ಈ ವಲಯದ ಅರಣ್ಯ ಪ್ರದೇಶದಲ್ಲಿ ಸುಮಾರು 169 ಸಿಬ್ಬಂದಿಗಳ ಕೊರತೆಯಿದೆ. ಮತ್ತೊಂದು ಪ್ರಶ್ನೆಗೆ ನೀಡಿರುವ ಮಾಹಿತಿಯನ್ನು ನಾನು ನೋಡುತ್ತಿದ್ದೆ. ಅದರಲ್ಲಿ ಇಡೀ ರಾಜ್ಯದಲ್ಲಿ ವಿಶೇಷವಾಗಿ ಅರಣ್ಯ ವೀಕ್ಷಕರು ಮತ್ತು ಅರಣ್ಯ ರಕ್ಷಕರ ಸುಮಾರು 670 ಹುದ್ದೆಗಳು ಖಾಲಿಯಿವೆ.

ಸನ್ಮಾನ್ಯ ಸಭಾಪತಿಯವರೇ, ಪದೇ ಪದೇ ಅರಣ್ಯಕ್ಕೆ ಬೆಂಕಿ ಹಚ್ಚುವಂತಹ ಕೆಲಸ ನಡೆಯುತ್ತಿದೆ. ನನ್ನ ಬಳಿ ಇರುವ ಮಾಹಿತಿಯ ಪ್ರಕಾರ ಹೊರಗಿನವರು ಉದ್ದೇಶಪೂರ್ವಕವಾಗಿ ಅರಣ್ಯಕ್ಕೆ ಬೆಂಕಿ ಹಚ್ಚಿರುವ ಸುಮಾರು 15 ಪ್ರಕರಣಗಳು ದಾಖಲಾಗಿವೆ. ಈ 15 ಪ್ರಕರಣಗಳಲ್ಲಿ ಒಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತ್ರ ಒಬ್ಬರನ್ನು ಅರೆಸ್ಟ್ ಮಾಡಲಾಗಿದೆ. ಉಳಿದಂತೆ 14 ಪ್ರಕರಣಗಳಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಅರಣ್ಯ, ಆರೋಗ್ಯ, ಶಿಕ್ಷಣ ಮತ್ತು ರಕ್ಷಣಾ ಇಲಾಖೆಗಳಲ್ಲಿ ಹುದ್ದೆಗಳನ್ನು ಖಾಲಿ ಬಿಡುವುದು ಯಾರಿಗೂ ಶೋಭೆ ತರುವುದಿಲ್ಲ. ಹೊರಗಿನವರು ಉದ್ದೇಶಪೂರ್ವಕವಾಗಿ ಅರಣ್ಯಕ್ಕೆ ಬೆಂಕಿ ಹಾಕುವುದರಿಂದ ಮತ್ತು ಕಾಡ್ಗಿಚ್ಚಿನಿಂದ ಭರಿಸಲಾಗದ ನಷ್ಟವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಅನುಭವಿಸುತ್ತಿದ್ದೇವೆ. ಇದನ್ನು ತಡೆಯುವ ನಿಟ್ಟಿನಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಿಕೊಳ್ಳಲಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ. ಹೊರಗಿನವರು ಉದ್ದೇಶಪೂರ್ವಕವಾಗಿ ಅರಣ್ಯಕ್ಕೆ ಬೆಂಕಿ ಹಚ್ಚಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳುತ್ತದೆ ಎನ್ನುವುದು ನನ್ನ ಪ್ರಮುಖ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕಾವೇರಿ ವನ್ಯಜೀವಿ ವಿಭಾಗದ ನಿಷೇಧಿತ ಪ್ರದೇಶದಲ್ಲಿ ಒಬ್ಬ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕಳ್ಳ ಬೇಟೆಗಾರನು ಬಂದಾಗ ಅವನನ್ನು ತಡೆಯುವುದಕ್ಕೆ ಮುಂದಾಗಿ ಕ್ರಮ ತೆಗೆದುಕೊಂಡರೆ, ಅಲ್ಲಿನ ಜನ ಪ್ರತಿನಿಧಿಗಳೇ ಆ ಕಳ್ಳ ಬೇಟೆಗಾರನ ಪರವಾಗಿ ನಿಲ್ಲುತ್ತಿದ್ದಾರೆ. ಮನ ನೊಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸ್ವಯಂ ನಿವೃತ್ತಿ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ನಿಲ್ಲುವನ್ನು ಸ್ಪಷ್ಟಪಡಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಈ ವಿಚಾರದಲ್ಲಿ ಅನಗತ್ಯವಾಗಿ ರಾಜಕಾರಣ ಮಾಡುವುದು ಅಥವಾ ರಾಜಕೀಯ ಹಸ್ತಕ್ಷೇಪವಾದರೆ, ಅರಣ್ಯ ರಕ್ಷಣೆ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಒಬ್ಬ ನಿಷ್ಠಾವಂತ ಮತ್ತು ಪ್ರಾಮಾಣಿಕ ಅಧಿಕಾರಿ ಸ್ವಯಂ ನಿವೃತ್ತಿ ತೆಗೆದುಕೊಳ್ಳುವ ನಿರ್ಧಾರವನ್ನು ಮಾಡಿದ್ದಾರೆ. ಇದು ಈ ಸರ್ಕಾರಕ್ಕೆ ಶೋಭೆ ತರುತ್ತದೆಯೇ?

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಕಳಕಳಿಯನ್ನು ನಾನು ಸಹ ಒಪ್ಪಿಕೊಳ್ಳುತ್ತಿದ್ದೇನೆ. 2007-08ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಸುಮಾರು 2147 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2013-14ರಿಂದ 2016-17ರವರೆಗೆ ಸುಮಾರು 2668 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇಷ್ಟಾದರೂ ಸಹ ವಲಯ ಅರಣ್ಯಾಧಿಕಾರಿಗಳು, ಉಪ ವಲಯ ಅರಣ್ಯಾಧಿಕಾರಿಗಳು, ಅರಣ್ಯ ರಕ್ಷಕ ಮತ್ತು ಅರಣ್ಯ ವೀಕ್ಷಕ ಹೀಗೆ ಒಟ್ಟು ಸುಮಾರು 2154 ಹುದ್ದೆಗಳು ಖಾಲಿಯಿವೆ. ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕೆಲಸವನ್ನು ಪ್ರತಿ ವರ್ಷ ಮಾಡಲಾಗುತ್ತಿದೆ. ಒಂದೇ ವರ್ಷದಲ್ಲಿ ಅಷ್ಟೂ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಆ ಕಾರಣದಿಂದಾಗಿ ಹಂತಹಂತವಾಗಿ ಪ್ರತಿ ವರ್ಷ ಖಾಲಿ ಹುದ್ದೆಗಳನ್ನು ತುಂಬುವ ಕೆಲಸವನ್ನು ಮಾಡುತ್ತಿದ್ದೇವೆ. ಹಿಂದೆ 4-5 ವರ್ಷಗಳಲ್ಲಿ ಭರ್ತಿ ಮಾಡಿಕೊಂಡಿರುವ ಹುದ್ದೆಗಳ ಸಂಖ್ಯೆಕ್ಕಿಂತ ಈ ವರ್ಷ ಭರ್ತಿ ಮಾಡಿಕೊಂಡಿರುವ ಹುದ್ದೆಗಳ ಪ್ರಮಾಣ ಹೆಚ್ಚಾಗಿದೆ. ಈ ಸಾಲಿನಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೂ 600 ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ. ಆದ್ದರಿಂದ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವ ಕೆಲಸವನ್ನು ಸರ್ಕಾರ ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆ. ಹುದ್ದೆಗಳ ಕೊರತೆಯಿಂದಾಗಿ ಕಾಡಿಗೆ ಬೆಂಕಿ ಬೀಳುವುದನ್ನು ನಿಯಂತ್ರಣ ಮಾಡುವುದು ಕಷ್ಟವಾಗಿದೆ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಸ್ವಯಂ ನಿವೃತ್ತಿಯ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

**ಶ್ರೀ ಟಿ.ಬಿ.ಜಯಚಂದ್ರಃ-** ಸನ್ಮಾನ್ಯ ಸಭಾಪತಿಯವರೇ, ಯಾವ ವ್ಯಕ್ತಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎನ್ನುವುದನ್ನು ಅವರು ನಿರ್ದಿಷ್ಟವಾಗಿ ಹೇಳಿದರೆ ಅಥವಾ ಲಿಖಿತ ಮೂಲಕ ಬರೆದು ಕಳುಹಿಸಿಕೊಟ್ಟರೆ ಖಂಡಿತವಾಗಿಯೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರುಃ-** ಸದನದಲ್ಲಿ ಅವರ ಹೆಸರನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಕುಶಾಲನಗರದಲ್ಲಿರುವ ಕಾವೇರಿ ವನ್ಯಜೀವಿ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಬೇಟೆಗೆ ಬಂದಂತಹ ಕಳ್ಳರನ್ನು ತಡೆಯುವ ಪ್ರಯತ್ನದಲ್ಲಿದ್ದಾಗ, ಜನಪ್ರತಿನಿಧಿಗಳು ಇದರಲ್ಲಿ ಭಾಗಿಯಾಗಿ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿರುವುದರಿಂದ ಬೇಸರಗೊಂಡ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸ್ವಯಂ ನಿವೃತ್ತಿ ತೆಗೆದುಕೊಳ್ಳುವುದಕ್ಕೆ ಮುಂದಾಗಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ನಿಲುವೇನು ಎನ್ನುವುದರ ಬಗ್ಗೆ ತಿಳಿಸಬೇಕಾಗಿದೆ.

**ಶ್ರೀ ಟಿ.ಬಿ.ಜಯಚಂದ್ರಃ-** ಸನ್ಮಾನ್ಯ ಸಭಾಪತಿಯವರೇ, ಯಾರೇ ಅಧಿಕಾರಿಯಾಗಿರಬಹುದು ಪ್ರಾಮಾಣಿಕವಾಗಿ ಅರಣ್ಯವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿರುವಾಗ ಆತನಿಗೆ ಯಾರೇ ವಿರೋಧ ಮಾಡಿದರೂ, ಸರ್ಕಾರದ ವತಿಯಿಂದ ಆ ಅಧಿಕಾರಿಗೆ ಸದಾ ರಕ್ಷಣೆ ದೊರೆಯುತ್ತದೆ. ಮಾನ್ಯ ಸದಸ್ಯರು, ಯಾವ ಜನಪ್ರತಿನಿಧಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕಾಗಿದೆ. ಆಗ ಮಾತ್ರ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿರುವ ಪ್ರಶ್ನೆಯಲ್ಲಿ ಈ ವಿಚಾರ ಇಲ್ಲ. ಆದರೂ ಸಹ ಅವರು ಕೇಳುತ್ತಿದ್ದಾರೆಂದು ನಾನು ಉತ್ತರ ಹೇಳುತ್ತಿದ್ದೇನೆ. ಅಧಿಕಾರಿಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ್ದು ಆ ಕೆಲಸವನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿರುವ ವಿಷಯದ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನೋಡುತ್ತೇನೆ. ಯಾವ ಜನಪ್ರತಿನಿಧಿ ವಿರೋಧ ವ್ಯಕ್ತಪಡಿಸಿದರೂ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ರಕ್ಷಣೆ ಇದೆ ಮತ್ತು ಕಾಡಿನ ರಕ್ಷಣೆ ದೃಷ್ಟಿಯಿಂದಲೂ ಅವರಿಗೆ ರಕ್ಷಣೆ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1190**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿಯ ಅಂದಾಜಿನಲ್ಲಿ ಗೂಳೂರು ಬೆಟ್ಟದ ಬಳಿ 150 ಮೀಟರ್ ಉದ್ದದ ಮೇಲ್ಗಾಲುವೆಯನ್ನು ನಿರ್ಮಿಸುವ ಸಂಬಂಧ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗಿದೆಯೇ, ಸಮೀಕ್ಷಾ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ ನವೆಂಬರ್ ತಿಂಗಳಿನಲ್ಲಿ ಬೆಳಗಾವಿಯಲ್ಲಿ ನಡೆದಂತಹ ಅಧಿವೇಶನದಲ್ಲಿಯೂ ಸಹ ಇದೇ ಪ್ರಶ್ನೆ ಕೇಳಿದ್ದೆ. ಇದಕ್ಕೂ ಮುಂಚಿತವಾಗಿ 2003ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಮಾನ್ಯ ಹೊನ್ನಪ್ಪನವರು ಸಹ ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಆಗ ಜಲಸಂಪನ್ಮೂಲ ಸಚಿವರಾಗಿದ್ದ ಶ್ರೀ ಹೆಚ್.ಕೆ.ಪಾಟೀಲ್‌ರವರು ಉತ್ತರವನ್ನು ಕೊಟ್ಟಿದ್ದಾರೆ. ಸದಸ್ಯರು ಕೇಳುವ ಪ್ರಶ್ನೆಗಳಿಗೆ ಅಧಿಕಾರಿಗಳು ಯಾಂತ್ರಿಕವಾಗಿ ಉತ್ತರವನ್ನು ಕೊಡುವುದು ಪರಿಪಾಠವಾಗಿ ಹೋಗಿದೆ. ಮಾನ್ಯ ಹೊನ್ನಪ್ಪನವರು 2003ರಲ್ಲಿ ಕೇಳಿರುವ ಪ್ರಶ್ನೆಗೆ, ನಾನು ದಿನಾಂಕ:30.11.2016ರಲ್ಲಿ ಕೇಳಿರುವ ಪ್ರಶ್ನೆಗೆ ಮತ್ತು ಈ ದಿನ ನಾನು ಕೇಳುತ್ತಿರುವ ಪ್ರಶ್ನೆಗೆ ಒಂದೇ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಈ ಪ್ರಶ್ನೆಗೆ 2003ರಲ್ಲಿ ಅಂದಿನ ಜಲಸಂಪನ್ಮೂಲ ಸಚಿವರಾಗಿದ್ದ ಮಾನ್ಯ ಹೆಚ್.ಕೆ.ಪಾಟೀಲ್‌ರವರು, 'ಇಲ್ಲಿಯವರೆಗೆ 30 ಲಕ್ಷ ರೂಪಾಯಿಗಳಷ್ಟು ಕೆಲಸವನ್ನು ಮಾಡಿದ್ದೇವೆ. ಇನ್ನೂ ಒಂದು ಕೋಟಿ ರೂಪಾಯಿಗಳಷ್ಟು ಹಣ ಬೇಕಾಗಿದೆ. 2002ರ ಫೆಬ್ರವರಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ ಜೂನ್ 2003ರೊಳಗೆ ಈ ಕಾಮಗಾರಿಯನ್ನು ಮುಗಿಸಬೇಕೆನ್ನುವ ಸೂಚನೆಯನ್ನು ಕೊಟ್ಟಿದ್ದೇವೆ. ಅಷ್ಟರೊಳಗೆ ಮುಗಿಸುವಂತಹ ಪ್ರಯತ್ನ ಮಾಡುತ್ತೇವೆ' ಎಂದು ಹೇಳಿದ್ದಾರೆ. ನಾನು 2017ರ ನವೆಂಬರ್ ತಿಂಗಳಿನಲ್ಲಿ ಕೇಳಿರುವ ಪ್ರಶ್ನೆಗೆ,' ಪ್ರಸ್ತಾವ ಇದೆ' ಎನ್ನುವ ಉತ್ತರವನ್ನು ಕೊಟ್ಟಿದ್ದರು. ಈಗ ಕೊಟ್ಟಿರುವ

ಉತ್ತರದಲ್ಲಿಯೂ 'ಅನುಮೋದನೆ ಪಡೆದ ನಂತರ ಅನುಷ್ಠಾನ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು' ಎನ್ನುವ ಉತ್ತರವನ್ನು ನೀಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿರ್ದಿಷ್ಟವಾಗಿ ಪ್ರಶ್ನೆ ಕೇಳಿ What do you want from the Government? ತಾವು ಸರಿಯಾಗಿ ಕೇಳುತ್ತಿದ್ದೀರಿ. You kindly come to the point. What is it you want to charge the Government?

**ಶ್ರೀ ಎನ್.ಅಪ್ಪಾಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಕೆರಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿಯನ್ನು ಯಾವಾಗ ಮಾಡಲಾಗುತ್ತದೆ; ಸಮೀಕ್ಷೆ ಕಾರ್ಯ ಆಗಿದೆಯೇ; ದುಸ್ಥಿತಿಯಲ್ಲಿರುವ ತೂಬುಗಳನ್ನು ದುರಸ್ತಿಗೊಳಿಸಿ ಖಾಯಂ ತೂಬುಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರು ಮಾಡಲಾಗಿದೆಯೇ; ಹಾಗಿದ್ದಲ್ಲಿ ಖಾಯಂ ತೂಬುಗಳನ್ನು ಯಾವಾಗ ಅಳವಡಿಸಲಾಗುವುದು ಎನ್ನುವ ಪ್ರಶ್ನೆಗಳನ್ನು ಕೇಳಿದ್ದೇನೆ. ಮಾನ್ಯ ಸಚಿವರು 2016ರಲ್ಲಿ ಕೊಟ್ಟಿರುವ ಉತ್ತರವನ್ನೇ ಈಗಲೂ ಕೊಡುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಪತಿಯವರೇ....

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, please understand my point. ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿಗೌಡರವರು ಚೆನ್ನಾಗಿ ಅಧ್ಯಯನ ಮಾಡಿಕೊಂಡು ಹಳೆಯ ಮಾಹಿತಿಗಳನ್ನು ಸಂಗ್ರಹಿಸಿ ತಂದಿದ್ದಾರೆ. ಆದರೆ, ಕಥೆ ಹೇಳಿ ನಿಲ್ಲಿಸುತ್ತಿದ್ದಾರೆ. ಸರ್ಕಾರದ ಮೇಲೆ ಚಾರ್ಜ್ ಮಾಡುತ್ತಿಲ್ಲ. 'ನಾವು ಕೇಳುವ ಪ್ರಶ್ನೆಗೆ ತಾವು ಪಾರಂಪರಿಕವಾಗಿ, ಯಾಂತ್ರಿಕವಾಗಿ ಉತ್ತರವನ್ನು ಕೊಡುತ್ತಿದ್ದೀರಿ' ಎಂದು ಕೇಳುವುದನ್ನು ಬಿಟ್ಟು ಪುನಃ ಕಥೆ ಹೇಳುವುದಕ್ಕೆ ಹೋದರೆ, ಅವರು ಅದೇ ಉತ್ತರವನ್ನು ನೀಡುತ್ತಾರೆ. ಸರ್ಕಾರವನ್ನು ಎಚ್ಚರಿಸುವಂತಹ ಕೆಲಸ ಪ್ರಶ್ನೋತ್ತರ ಅವಧಿಯಲ್ಲಿ ಆಗಬೇಕಾಗಿದೆ. ಮಾನ್ಯ ಸದಸ್ಯರೇ, Please ask the question and corner the Government. ಮಂತ್ರಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಪ್ರಶ್ನೆಗಳನ್ನು ಕೇಳಿ. ತಾವು ಅಧ್ಯಯನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ ಬಂದಿದ್ದೀರಿ. ಬಹಳ ಚೆನ್ನಾಗಿ ವಿಷಯವನ್ನು ಮಂಡಿಸಿದ್ದೀರಿ. ಆದರೆ, ಉಪ ಪ್ರಶ್ನೆಗಳ ಮೂಲಕ ಸರ್ಕಾರ ಆ ಕಾಮಗಾರಿಗಳನ್ನು ಮಾಡುತ್ತದೆಯೋ ಇಲ್ಲವೋ ಎಂದು ಕೇಳಿ.

**ಶ್ರೀ ಎನ್.ಅಪ್ಪಾಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, ದುಸ್ಥಿತಿಯಲ್ಲಿರುವ ತೂಬುಗಳನ್ನು ಯಾವಾಗ ದುರಸ್ತಿಗೊಳಿಸಲಾಗುತ್ತದೆ ಎನ್ನುವುದರ ಬಗ್ಗೆ ಪ್ರತಿ ಬಾರಿಯೂ ಯಾಂತ್ರಿಕವಾಗಿ ಉತ್ತರವನ್ನು ನೀಡಲಾಗುತ್ತಿದೆ. ಈಗ ನಿರ್ದಿಷ್ಟವಾದ ಉತ್ತರವನ್ನು ಹೇಳಬೇಕಾಗಿದೆ. ಕಳೆದ ನವೆಂಬರ್ ತಿಂಗಳಿನಲ್ಲಿ ಮಾನ್ಯ ಜಲ ಸಂಪನ್ಮೂಲ ಸಚಿವರು, 'ಆದಷ್ಟು ಬೇಗ ಇದನ್ನು ಪ್ರಾರಂಭ ಮಾಡುತ್ತೇವೆ. ಪರಿಶೀಲನೆಯಲ್ಲಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದರು. ಅದೇ ಉತ್ತರವನ್ನು 2003ರಲ್ಲಿ ಆಗಿನ ಜಲಸಂಪನ್ಮೂಲ ಸಚಿವರು ಹೇಳಿದ್ದರು.

(ಮುಂದು)

(348) 22.03.2017 ಟಿ.ಸಿ.ಹೆಚ್/ಜಿ.ಆರ್, 11.50 **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಆಯಿತು. ಸಚಿವರು ಈಗ ಉತ್ತರ ಹೇಳುತ್ತಾರೆ. ನೇರವಾಗಿ ಉತ್ತರ ಬೇಕು. ಏಕೆಂದರೆ, ಮಾನ್ಯ ಸದಸ್ಯರು ಹಳೆಯದನ್ನೆಲ್ಲವನ್ನು ಹೇಳಿಬಿಟ್ಟರು.

**ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಕೆರಗೋಡು ಹೋಬಳಿ, ಚಿಕ್ಕಬಳ್ಳಿ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿ ಇದು ಹಳೆಯ ಒಂದು canal network ಆಗಿರುತ್ತದೆ. ಇದು ಎರಡು-ಮೂರು ವರ್ಷಗಳ ಹಿಂದೆ modernisation ಆಗಿದೆ. ಅದು modernisation ಆಗುವಾಗ ಅದಕ್ಕೇ ಆದಂತಹ ಆ ನೆಟ್‌ವರ್ಕ್ ಮೊದಲಿನಿಂದಲೂ ಸಹ ಇದೆ. ತಾವು ಹೇಳುತ್ತಿರುವುದು ಏನೆಂದರೆ, ಅಲ್ಲಿ ಒಂದು ಕಡೆ "ವಿ" ಜಂಕ್ಷನ್ ಬರುತ್ತದೆ. ಅಲ್ಲಿ ಇವತ್ತಿನ ದಿವಸ aqueduct ಆಗಬೇಕು ಎನ್ನುವುದು ಇವರ ಬೇಡಿಕೆ ಇದೆ. ಈಗಾಗಲೇ ಆ canal modernisation ಆಗಿದೆ. ಇವತ್ತಿನ ದಿವಸ ಆ canal network ಒಂದು ಕಡೆ ಇದೆ. ಈಗಾಗಲೇ aqueduct ಮಾಡುವುದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ನಾವು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಈಗ aqueduct ಮಾಡುವುದಕ್ಕೆ ಹೋದರೆ modernisation ಮಾಡಿದ್ದೆಲ್ಲವೂ ಕೂಡ infructuous expenditure ಆಗುತ್ತದೆ. ಇದನ್ನು ಹೊಸದಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹ ಸಂದರ್ಭದಲ್ಲಿ ನಾವು ನೀವು ಹೇಳಿದ ಸಲಹೆಯನ್ನು ಒಪ್ಪಬಹುದು. ನಾವು aqueduct ಅನ್ನು ಕ್ರಿಯೇಟ್ ಮಾಡಬಹುದು. ಈಗಾಗಲೇ ಅಲ್ಲಿ ಇದೆ. Modernisation ಮಾಡಿರುವುದು 2-3 ವರ್ಷವಾಗಿದೆ. ಈಗಾಗಲೇ ಅಲೈನ್‌ಮೆಂಟ್ ಹಳೆಯ ಚಾನಲ್ ಏನಿದೆ ಅದು modernisation ಆಗಿ ಹೋಗಿದೆ. ಹೀಗಾಗಿ, I will tell you the point. ಒಂದು ನಿಮಿಷ. ಇದರ ಬಗ್ಗೆ ನಾನು ನಿಮಗೆ ಸಹಾಯ ಮಾಡುತ್ತೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನಿದೆ ಎಂದರೆ, ಇವತ್ತಿನ ದಿವಸ ಕೆಲವೊಂದು ತೂಬುಗಳನ್ನು ದುರಸ್ಥಿ ಮಾಡಿ, ಗೇಟನ್ನು ಅಳವಡಿಸಬೇಕೆಂದು ಹೇಳಿದ್ದಾರೆ. ಆ ಗೇಟನ್ನು ಅಳವಡಿಸುವಂತಹ ಕೆಲಸವನ್ನು ನಾವು ಶೀಘ್ರದಲ್ಲೇ ಮಾಡುತ್ತೇವೆ. ಆ ಬಗ್ಗೆ ತಕ್ಷಣ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಈ aqueduct ಪ್ರಶ್ನೆ ಏನಿದೆ....

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶ್ರಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದೇ ಸಮಸ್ಯೆ ಇರುವುದು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ "ವಿ" ಶೇಪ್ ಅನ್ನು ನಾವು ಅಧಿಕಾರಕ್ಕೆ ಬಂದಾಗ ಮಾಡಿರುವುದಲ್ಲ. ಇದನ್ನು ತಲ-ತಲಾಂತರದಿಂದ ಮಾಡಿರುವುದು. ಅದು "ವಿ" ಶೇಪ್‌ನಲ್ಲಿ ಬರುತ್ತದೆ. ಅದು 350 ಮೀಟರ್ ಆಗುತ್ತದೆ. ಅಲ್ಲಿ ಆ "ವಿ" ಶೇಪ್ ಅನ್ನು avoid ಮಾಡಿ, aqueduct ಮಾಡಿ straight ಆಗಿ ತೆಗೆದುಕೊಂಡು ಹೋಗಬೇಕಾಗಿರುತ್ತದೆ. ಆದರೂ ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆದರೆ, ಇದು infructuous expenditure ಆಗುತ್ತದೆ. ಈಗಾಗಲೇ channel ಇದೆ. ಆ channel modernisation ಅನ್ನು 2-3 ವರ್ಷಗಳ ಹಿಂದೆ ಮಾಡಿದ್ದೇವೆ. ಆದರೂ ಸಹ ಇದಕ್ಕೆ ಯಾವ ರೀತಿ ಪರಿಹಾರವನ್ನು ನಾವು ಕಂಡುಕೊಳ್ಳಬೇಕು ಎಂಬ ಬಗ್ಗೆ ಇದ್ದ ವಸ್ತುಸ್ಥಿತಿಯನ್ನು ತಮಗೆ ಹೇಳಿದ್ದೇನೆ. ಇದಕ್ಕೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಸಮಸ್ಯೆ ಬಗ್ಗೆ ತಾವು ಹೇಳಿದ್ದೀರಿ. ನನಗೆ ಗೊತ್ತಿದೆ. ಆ ಸಮಸ್ಯೆ ಬಗ್ಗೆ ಏನು ಹೇಳುತ್ತೀರೋ ಹೇಳಿ. ಅದರಿಂದ ಏನು ತೊಂದರೆಯಾಗುತ್ತದೆಂದು ಹೇಳಿದರೆ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲಾಗುವುದು.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡ್ರೇ, ತಾವು ಮಾತನಾಡುವುದು ಬೇಡ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಸದನದಲ್ಲಿ ತುಂಬಾ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸಚಿವರೆ, ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಮಧ್ಯೆ ಬಾಯಿ ಹಾಕುವುದಕ್ಕೆ ಕಾರಣ, ಗೌರವಾನ್ವಿತ ಸದಸ್ಯರು ಎಲ್ಲಾ ಹೋಮ್‌ವರ್ಕ್ ಮಾಡಿ, ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಹಳೆಯದನ್ನೆಲ್ಲಾ ತೆಗೆದುಕೊಂಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದು ಮಾತನಾಡುತ್ತಿದ್ದಾರೆ. ಪ್ರತಿ ಬಾರಿ ಈ ಸದನದಲ್ಲಿ ಉತ್ತರವನ್ನು ನಾವು ಪರಿಶೀಲಿಸುತ್ತೇವೆ. ಅದನ್ನು ಸದ್ಯದಲ್ಲೇ ಮಾಡುತ್ತೇವೆ. ಅದನ್ನು ಕೂಡಲೇ ನಾವು ಪ್ರಾರಂಭ ಮಾಡುತ್ತೇವೆಂದು ಹೇಳಿ ಉತ್ತರವನ್ನು ಕೊಟ್ಟು ಜಾರಿಕೊಳ್ಳುವ ಪ್ರವೃತ್ತಿ ಅಧಿಕಾರಿಗಳದ್ದು ಇದೆ. ಇವತ್ತಿನ ದಿವಸ ಈ ಸದನದಲ್ಲಿ ತಾವು ಈ ಸಮಸ್ಯೆ ಏನು ಎಂದು ಬಾಯಿಬಿಟ್ಟು ಹೇಳಿದ್ದೀರಿ. ಅದನ್ನು ಎರಡು ವರ್ಷದ ಹಿಂದೆಯೇ ಹೇಳಿದ್ದಿದ್ದರೆ ಇಷ್ಟು ಹೊತ್ತಿಗೆ ಆ ಸಮಸ್ಯೆಗೆ ಪರಿಹಾರ ಸಿಗುತ್ತಿತ್ತು. ಅಧಿಕಾರಿಗಳದ್ದು ತಪ್ಪು ಇರುತ್ತದೆ. ನಿಮಗೆ ಅವರು ಸರಿಯಾಗಿ brief ಮಾಡಬೇಕಾಗಿತ್ತು. ನೀವು ಅಥವಾ ನಿಮ್ಮ ಸ್ಥಾನದಲ್ಲೇ ಇದ್ದಂತಹ ಹಿಂದಿನ ಸಚಿವರು ಸದನದಲ್ಲೇ ಒಂದು ಹಾರಿಕೆ ಮತ್ತು ಜಾರಿಕೆ ಉತ್ತರ ಕೊಡುವಂತಹ ಪ್ರವೃತ್ತಿ ಇದೆಯಲ್ಲ, ಅದು ನಿಮ್ಮ ತಪ್ಪು ಅಲ್ಲ. ನಿಮ್ಮ ಅಧಿಕಾರಿಗಳ ತಪ್ಪು. ಅಧಿಕಾರಿಗಳಿಗೆ ನೀವು ಎಚ್ಚರಿಕೆಯನ್ನು ಕೊಡದೇ ಹೋದರೆ, ಈ ರೀತಿಯ ತೊಂದರೆಗಳು ಆಗುತ್ತಿರುತ್ತವೆ. ಮಾನ್ಯ ಸದಸ್ಯರಾದ ಅಪ್ಪಾಜಿಗೌಡ್ರು ಹೇಳುತ್ತಿದ್ದರೆ ನನಗೇ ಆಶ್ಚರ್ಯವಾಯಿತು. ಅವರು ಇಷ್ಟೊಂದು ಹಳೆಯದನ್ನೆಲ್ಲಾ ಇಟ್ಟುಕೊಂಡು ಇಷ್ಟೊಂದು ರಿಸರ್ಚ್ ಮಾಡಿರುತ್ತಾರೆ. ಶ್ರೀ ಹೆಚ್.ಕೆ.ಪಾಟೀಲ್‌ರವರು ಏನನ್ನು ಹೇಳಿದ್ದರೋ ಅದನ್ನೆಲ್ಲವನ್ನೂ ತೆಗೆದುಕೊಂಡು ಬಂದು ಎಲ್ಲವನ್ನೂ ಸದನದಲ್ಲಿ ಹೇಳುತ್ತಿದ್ದರೆ, ನನಗೆ ಅನ್ನಿಸುತ್ತಿತ್ತು. ಈ ಸದನಕ್ಕೆ ಏನೂ ಗೌರವ ಇಲ್ಲವೇ? ಈ ಸದನದಲ್ಲಿ ಮಾನ್ಯ ಸಚಿವರು ಮಾತು ಕೊಟ್ಟರೆ, ಅದನ್ನು ಕಾರ್ಯರೂಪಕ್ಕೆ ತರುವುದಿಲ್ಲವೇ? ಪಾಪ ಮಾನ್ಯ ಸಚಿವರ ತಪ್ಪು ಅಲ್ಲ. ಅದು ಅಧಿಕಾರಿಗಳ ತಪ್ಪು ಆಗಿರುತ್ತದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಹೇಳುತ್ತಿರುವುದು ಸಹ ಅಲ್ಲ, ಮಾನ್ಯ ಸಭಾಪತಿಯವರೆ, ಗೌರವದಿಂದ ಈ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಇದು ಒಂದು ಹಳೆಯ channel network ಇದೆ. ನಾನು ಆ ಪ್ರತಿಯನ್ನು ತಮಗೆ ಕೊಡುತ್ತೇನೆ.

**ಸಭಾಪತಿಯವರು:-** ಇದನ್ನು ಆವೊತ್ತೇ ಹೇಳಬೇಕಾಗಿತ್ತು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಆ ಸ್ಕೀಮ್ಯಾಟಿಕ್ ಪ್ರತಿಯನ್ನು ತಮಗೆ ಕೊಡುತ್ತೇನೆ. ಇದು 2003ರಿಂದ ಆಗಿನ ಹಳೆಯ ನೆಟ್‌ವರ್ಕ್ ಇದೆ. ಆ ಕೆನಾಲ್‌ನ channel alignment ಇರುತ್ತದೆಯಲ್ಲಾ, ಅದನ್ನು ಮೂರು ವರ್ಷದ ಹಿಂದೆಯೇ modernisation ಕೂಡ ಮಾಡಲಾಗಿದೆ. ಈ ಹಿಂದೆಯೇ 2003ರಲ್ಲಿ modernisation ಆಗುವುದಕ್ಕೆ ಮುಂಚಿತವಾಗಿ ಇವತ್ತಿನ ದಿವಸ ಅಲ್ಲಿ ಏನಾದರೂ ಈ ಕೆನಾಲ್‌ನ modernisation ಮಾಡುವುದು ಬೇಡ. "ವಿ" ಶೇಪ್ ಅನ್ನು ತಾವು ಏನು ಹೇಳುತ್ತಿದ್ದೀರಿ ಅಲ್ಲಿ aqueduct ಮಾಡಬೇಕೆಂದು ನಿರ್ಣಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡಿದ್ದರೆ, ಬಹುಶಃ ಈ ಸಮಸ್ಯೆ ಬರುತ್ತಿರಲಿಲ್ಲ. ಇದಾದರೂ ಸಹ ಇವತ್ತಿನ ದಿವಸ ನೀರಿನ ಸಮಸ್ಯೆ ಆಗುತ್ತಿದ್ದರೆ, ನಾವು ಎಷ್ಟೋ ಸಲ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. Infructuous expenditure ಆದರೇನು, ಮತ್ತೊಂದು ಆದರೆ ಏನು, ಜನಕ್ಕೆ ಇವತ್ತಿನ ದಿವಸ ತೊಂದರೆ ಆಗುತ್ತಿದ್ದರೆ ಅದರ ಬಗ್ಗೆ ಸಕಾರಾತ್ಮಕವಾಗಿ ನಾವು ಅದನ್ನು ಪರಿಗಣಿಸುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1229**
**(ಉತ್ತರ ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಭೂಮಾಪಕರ ಕೊರತೆಯಿಂದಾಗಿ, ಪೋಡಿ ಮಾಡತಕ್ಕಂಥ ಪ್ರಕ್ರಿಯೆ ಬಹಳಷ್ಟು ವಿಳಂಬವಾಗುತ್ತಿದೆ ಎಂದು ಈ ಸದನದಲ್ಲೇ ನಾವು ಸುಮಾರು ಸಲ ಪ್ರಶ್ನೆಗಳನ್ನು ಎತ್ತಿದ್ದೇವೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸುಮಾರು 1098 ಭೂಮಾಪಕರ ಹುದ್ದೆಗಳು ಖಾಲಿ ಇವೆ. ಅದನ್ನು ಭರ್ತಿ ಮಾಡುವುದಕ್ಕೆ ದಿನಾಂಕ:05-11-2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಸ್ವಾಮಿ, ರೈತರು ಯಾವ ರೀತಿ ಕಷ್ಟ ಪಡುತ್ತಿದ್ದಾರೆಂದರೆ, ನಮ್ಮ ಜಮೀನುಗಳನ್ನು ಪೋಡಿ ಮಾಡಿ ಕೊಡಿ ಎಂದು ಅರ್ಜಿ ಕೊಟ್ಟರೆ, ಒಂದು ವರ್ಷ, ಎರಡು ವರ್ಷ ಆದರೂ ಕೂಡ, ಯಾರೂ ಕೂಡ ಸರ್ವೇಯರು ನಮ್ಮ ಕೈಗೆ ಸಿಗುತ್ತಿಲ್ಲ. ಒಂದುವೇಳೆ, ಸರ್ವೇಯರ್‌ಗಳನ್ನು ನಾವು ಕಾಡಿ ಬೇಡಿ ಕರೆದುಕೊಂಡು ಬಂದರೆ, ಆ ಸರ್ವೇಯರ್ ಏನು ಮಾಡುತ್ತಾರೆಂದರೆ, ಒಂದುವೇಳೆ, ನನ್ನ ಜಮೀನು ಕಡೆಯಿಂದ ಅಳತೆ ಮಾಡಪ್ಪಾ ಎಂದು ಹೇಳಿದರೆ, ಅವರು ಅಳತೆ ಮಾಡಿ ಪಕ್ಕದ ಜಮೀನಿಗೆ ಹೋಯಿತು ಎಂದರೆ, ಒಂದು ಬೌಂಡ್ರಿಯನ್ನು ತೋರಿಸುತ್ತಾರೆ. ನನ್ನ ಪಕ್ಕದ ರೈತ ಏನಾದರೂ ಅರ್ಜಿ ಕೊಟ್ಟರೆ, ಅವರ ಜಮೀನು ಕಡೆಯಿಂದ ಅಳೆದುಕೊಂಡು ಬಂದು ನನ್ನ ಜಮೀನನಲ್ಲಿ ಬೌಂಡ್ರಿಯನ್ನು ತೋರಿಸುತ್ತಾರೆ. ಈ ರೀತಿ ನಿಜವಾಗಲೂ ಸಹ ವಿಚಿತ್ರವಾದಂತಹ ಸರ್ವೇ ಕಾರ್ಯ ಆಗುತ್ತಿದೆ. ನಾವು ಅವರನ್ನು ಕೇಳಿದ್ದೇವೆಂದರೆ, ತಾಲ್ಲೂಕು ಸರ್ವೇಯರ್ ಅನ್ನು ಕೇಳಿ, ಅವರ ಮೇಲಿರುವ ಜಿಲ್ಲಾ ಸರ್ವೇಯರ್ ರವರನ್ನು ಕೇಳಿ, ಇಲ್ಲವೇ Superintendent ರವರ ಹತ್ತಿರ ಹೋಗಿ ಎನ್ನುವ ಉತ್ತರವನ್ನು ಕೊಡುತ್ತಾರೆ. ಆದ್ದರಿಂದ ತಾವು ದಯಮಾಡಿ ಆದಷ್ಟು ಬೇಗನೆ ರೈತರಿಗೆ ಪೋಡಿ ಮಾಡಿಸಿಕೊಟ್ಟು, ಮಾನ್ಯ ಕಂದಾಯ ಸಚಿವರು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಬಹಳಷ್ಟು ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ಆದರೆ, ಈ ಸರ್ವೇಯರ್‌ಗಳ ಬಗ್ಗೆ, ಅಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೋಕಲ್‌ನಲ್ಲಿ ಆಗತಕ್ಕಂತಹ ವಿಷಯ ಮಾನ್ಯ ಸಚಿವರ ಗಮನಕ್ಕೆ ಬರುತ್ತಿಲ್ಲ. ಆ ಲೋಕಲ್‌ನಲ್ಲಿ ನಾವು ಪಡುತ್ತಿರುವ ಕಷ್ಟವೆಷ್ಟು ಎಂದರೆ, ಇನ್ನು ಯಾವತ್ತು ಪೋಡಿ ಆಗುತ್ತದೆಯೋ ಗೊತ್ತಾಗುತ್ತಿಲ್ಲ. ಸುಮಾರು 1960ನೇ ಸಾಲಿನಿಂದ ಏನು ಜಮೀನುಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ ಅಂತದ್ದನ್ನೂ ಸಹ ಇವತ್ತಿನ ದಿವಸ ಪೋಡಿ ಮಾಡಿಕೊಡುವುದಕ್ಕೆ ಆಗುತ್ತಿಲ್ಲ. ನಾವು ಒಂದುವೇಳೆ ಕೇಳಿದೆವೆಂದರೆ, ಅದನ್ನು ಇವತ್ತು, ನಾಳೆ ಮತ್ತು ನಾಡಿದ್ದು ಎನ್ನುವಂತಹ ಉತ್ತರವೇ ನಮಗೆ ಬರುತ್ತಿದೆ. ಆದ್ದರಿಂದ ಏನಾದರೂ.

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಹೇಳಿ. What is it you want from the Minister?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಶಿಥಿಲಗೊಂಡಿದೆ ಎನ್ನುವಂತಹ ಉತ್ತರವನ್ನು ನಾವು ಕೇಳಿ, ಕೇಳಿ ಸಾಕಾಗಿದೆ.

Mr.CHAIRMAN:- What is it you want from the Minister? ಮಾನ್ಯ ಸಚಿವರಿಂದ ಏನನ್ನು ಕೇಳುತ್ತೀರಿ?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಆದ್ದರಿಂದ ದಯಮಾಡಿ, ಮಾನ್ಯ ಕಂದಾಯ ಸಚಿವರು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಅವರು ಹೇಳಿದ್ದು ಏನೆಂದು ಅರ್ಥವಾಯಿತಲ್ಲ. ಬೇರೆಯದು ಅಲ್ಲ. ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಅವರನ್ನು ಸ್ವಲ್ಪ ತರಾಟೆಗೆ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ನಾವು ಕೃಷಿಯಿಂದಲೇ ಬಂದವರು. ನಾವು ನೇಗಿಲನ್ನು ಹಿಡಿದುಕೊಂಡು, ಕೋಣವನ್ನು ಹೊಡೆದುಕೊಂಡು ಭೂಮಿಯನ್ನು ಹಿಡಿದುಕೊಂಡೇ ಬಂದಿರುವುದರಿಂದ ನನಗೆ ಎಲ್ಲವೂ ಗೊತ್ತಿದೆ. ಅದು ಗೊತ್ತಿರುವ ಕಾರಣಕ್ಕಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರಲ್ಲ ಇದರಲ್ಲಿ ತೊಂದರೆ ಇರುವುದು ನಿಜ. ಒಂದು ಏನಾಗಿದೆ ಎಂದರೆ, ಕಾಲ ಕಾಲಕ್ಕೆ ನಿಯಮಿತವಾಗಿ ಸರ್ವೆಯರ್‌ನ ನೇಮಕ ಮಾಡಿಕೊಂಡು ಬರುವ ಪದ್ಧತಿ ಹೋಗಿಬಿಟ್ಟಿದೆ. ಅದಕ್ಕೆ ಯಾರು ಕಾರಣರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಹಾಗಾಗಿ, ಸರ್ವೆಯರ್‌ರವರ ಕೊರತೆಯಾಗಿರುವ ಕಾರಣಕ್ಕಾಗಿ, ಆ ಪೋಡಿಯನ್ನು ಲೈಸೆನ್ಸ್ ಸರ್ವೆಯರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಒಬ್ಬ ಪಕ್ಕ ಪೋಡಿಗೆ ಅರ್ಜಿ ಕೊಟ್ಟರೆ, ತಹಶೀಲ್ದಾರ್ ಇವರು, ಉಪ ವಿಭಾಗಾಧಿಕಾರಿಗೆ ಕಳುಹಿಸಬೇಕು. ಉಪ ವಿಭಾಗಾಧಿಕಾರಿಯಿಂದ ಜಿಲ್ಲಾಧಿಕಾರಿಗೆ ಹೋಗಿ ಅನುಮತಿಯನ್ನು ಪಡೆಯಬೇಕಾಗುತ್ತದೆ. ಆ ಜಿಲ್ಲಾಧಿಕಾರಿ ಏನು ಮಾಡುತ್ತಾರೆಂದರೆ, ಅವರು ಅಲ್ಲಿ ಅದಕ್ಕೆ ಒಂದು ಕೊಕ್ಕೆ ಹಾಕುತ್ತಾರೆ. ಮತ್ತೆ ಇದು ವಾಪಸ್ಸು ಬರುತ್ತದೆ. ಒಂದು ಅರ್ಜಿಗೆ ಫೈನಲ್ ಡಿಸಿಷನ್ ಮಾಡಬೇಕಾದರೆ, ಹೆಚ್ಚು ಕಡಿಮೆ ಒಂದು ವರ್ಷ, ಎರಡು ವರ್ಷ ಆಗುತ್ತಿತ್ತು. ನಾನೇ ಸ್ವತಃ ಇದನ್ನು ನೋಡಿದ ಮೇಲೆ ಅಂದು ಶ್ರೀ ಕರುಣಾಕರ ರೆಡ್ಡಿಯವರು ಕಂದಾಯ ಸಚಿವರಾಗಿದ್ದರು. ನಾನು ಅವರಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದೆನು. ಏನೆಂದರೆ ಈ ರೀತಿ ಮಾಡಿರುವುದು ತಪ್ಪು. ಅದನ್ನು ಮಾಡುವ ಅಧಿಕಾರ ತಹಶೀಲ್ದಾರ್‌ರಿಗೆ ಕೊಡಿ ಎಂದು ಹೇಳಿದ್ದೆನು. ಶ್ರೀ ಕಾಗೋಡು ತಿಮ್ಮಪ್ಪರವರು ಅರ್ಜಿ ಕೊಟ್ಟ ಮೇಲೆ ಅವರು ಒಂದು ಸುತ್ತೋಲೆಯನ್ನು ಹೊರಡಿಸಿದರೂ ಸಹ, ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಬೇಕೆಂದು ಮತ್ತೆ ಅದನ್ನೇ ಮಾಡಿದರು. ಈಗ ಅದನ್ನು ತೆಗೆದು ಹಾಕಿದ್ದೇವೆ. ಪೋಡಿ ಮಾಡಲು ತಹಶೀಲ್ದಾರರೇ ಸಂಪೂರ್ಣ ಅಧಿಕಾರ ಹೊಂದಿರುವಂತಹವರು. ಅವರು ಎಲ್ಲಿಗೂ ಹೋಗಬೇಕಾಗಿರುವುದಿಲ್ಲ ಏಕೆಂದರೆ, ಉಪ ವಿಭಾಗಾಧಿಕಾರಿ ಆಗಬಹುದು ಅಥವಾ ಜಿಲ್ಲಾಧಿಕಾರಿ ಆಗಬಹುದು ಅವರೆಲ್ಲ Appellate Authority ಆಗಿರುತ್ತಾರೆ. ಈಗ ತಹಶೀಲ್ದಾರರು ಪೋಡಿ ಕಾರ್ಯಕ್ಕೆ ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ. ಅದನ್ನು ಬೇಗನೆ ಮಾಡುವುದಕ್ಕೆ ನಾನು ಬೆನ್ನತ್ತಿದ್ದೇನೆ. ಎಲ್ಲಾ ಕಡೆಯಲ್ಲೂ ಪರಿಶೀಲನೆ ಮಾಡುತ್ತಿದ್ದೇನೆ. ಈಗ ಅನೇಕ ಕಡೆ ಏನಾಗಿದೆಯೆಂದರೆ, ಸರ್ವೆಯರ್‌ಗಳ ಕೊರತೆಯಿಂದಾಗಿ ಪೋಡಿ ಕಾರ್ಯ ಶೀಘ್ರವಾಗಿ ಆಗುತ್ತಿಲ್ಲ. ಇಲ್ಲಿ ಏನಾಗಿದೆ ಎಂದರೆ, ಈ ಹಳೇ ಚಾಳಿ ಇದೆಯಲ್ಲ 'ಆಕಳು ಹಾಕಿದ ಕೂಡಲೇ ಒದೆಯುವುದು' ಇದ್ದು ಇರುತ್ತದೆ. ಆ ಚಾಳಿ ಇರುವುದರಿಂದ ಅದನ್ನು ಸ್ವಲ್ಪ ಬಿಡಿಸಬೇಕಾದರೆ, ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಅದನ್ನು ಬಿಡಿಸಲು ಹೋದರೆ, ಇವನು ನಮ್ಮ ನೆಂಟ, ಇವನು ನಮ್ಮ ಭಾವ, ನಮ್ಮ ಜಾತಿಯವನು, ನಮ್ಮ ಊರಿನವನು ಬಂದು ಬಿಡುತ್ತಾನೆ. ಹಾಗಾಗಿ, ಈ ಬಗ್ಗೆ ಅವರ ಕಳಕಳಿ ನನಗೆ ಅರ್ಥವಾಗುತ್ತದೆ. ನಾನು ಸಾಧ್ಯವಾದಷ್ಟು ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ಮಾಡುತ್ತೇನೆ. ಅದನ್ನು ಬೇಗನೆ ಇತ್ಯರ್ಥಪಡಿಸಲು ಪ್ರಯತ್ನ ಮಾಡಿ, ಜೊತೆ ಜೊತೆಗೆ ಯಾರು ಸರ್ವೆಯರ್‌ಗಳು ನಿವೃತ್ತಿಯಾಗಿದ್ದಾರೋ ಅವರನ್ನು ಸಹ ಕಾಂಟ್ರ್ಯಾಕ್ಟ್ ಮೇಲೆ ತೆಗೆದುಕೊಳ್ಳಲು ನಮ್ಮ ಸಚಿವ ಸಂಪುಟದ ಮುಂದೆ ಪ್ರಸ್ತಾವನೆಯನ್ನು ಸಹ ತರುತ್ತಿದ್ದೇನೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(349) 22.3.2017 12.00 ಪಿಕೆ:ಎಂಡಿ

**ಶ್ರೀ ಎಂ.ನಾರಾಯಣಸ್ವಾಮಿ:-** ಪೋಡಿ ಮಾಡಿಕೊಡುವುದಕ್ಕೆ ಒತ್ತಾಯ ಮಾಡಿದರೆ ಅಂಥವರಿಗೆ ಒಂದು ನೋಟಿಸ್ ಕೊಟ್ಟು, ನಮ್ಮಲ್ಲಿ ಕಡತಗಳು ಇಲ್ಲ ಎಂದು 136ನೇ ಪ್ರಕರಣ ದಾಖಲು ಮಾಡುತ್ತಾರೆ. ಆಗ ನಾವು ಕೋರ್ಟಿಗೆ ಅಲೆಯುತ್ತಿರಬೇಕಾಗುತ್ತದೆ. ಇದನ್ನು ಗಂಭೀರವಾಗಿ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಂತಹ ತಪ್ಪುಗಳು ಆಗಬಾರದು ಎನ್ನುವ ಕಾಳಜಿ ನಿಮ್ಮಲ್ಲಿ ಇದೆ. ಯಾರು ಇಂತಹ ಅಧಿಕಾರಿಗಳಿದ್ದಾರೋ ಅವರಿಗೆ ಚುರುಕು ಮುಟ್ಟಿಸುವ ವ್ಯವಸ್ಥೆ ಆಗಬೇಕು. ಸುಮ್ಮನೆ ಪ್ರಕರಣ ದಾಖಲು ಮಾಡಿ ಕೋರ್ಟಿಗೆ ಅಲೆಯುವ ಹಾಗೆ ಮಾಡುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸದಸ್ಯರು ಹೇಳಿದ್ದು ನನಗೆ ಸರಿಯಾಗಿ ಕೇಳಿಸಲಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು, ಕೆಲಸ ಮಾಡಿಕೊಡುವುದಕ್ಕೆ ಅರ್ಜಿ ಹಾಕಿದರೆ ಅದಕ್ಕೆ ಯಾವುದೋ ಒಂದು ಕೊಕ್ಕೆ ಹಾಕುವ ಕೆಲಸ ಮಾಡುತ್ತಿದ್ದಾರೆ, ಹಾಗೆ ಮಾಡದೇ ಶೀಘ್ರ ಕೆಲಸವಾಗುವ ವ್ಯವಸ್ಥೆ ಮಾಡಿಸಿ ಎಂದು ಹೇಳಿದರು.

**ಶ್ರೀ ಎಂ.ನಾರಾಯಣಸ್ವಾಮಿ:-** ಪೋಡಿ ಮಾಡಿಕೊಡಿ ಎಂದು ಅರ್ಜಿ ಕೊಟ್ಟು ಕೆಲಸ ಮಾಡಿಕೊಡಿ ಎಂದು ಒತ್ತಾಯ ಮಾಡಿದರೆ ಒಂದು ನೋಟಿಸ್ ಕೊಟ್ಟು, 136ನೇ ಪ್ರಕರಣ ದಾಖಲು ಮಾಡಿ ಕೋರ್ಟಿಗೆ ಅಲೆಯುವ ಹಾಗೆ ಮಾಡುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** 136ರ ಪ್ರಕರಣ ಏನು ಎನ್ನುವುದು ನನಗೆ ಗೊತ್ತಿಲ್ಲ. ಅದು ಏನು ಎನ್ನುವುದರ ಬಗ್ಗೆ ವಿವರ ಕೊಟ್ಟರೆ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಯಾರದೋ ಆಸ್ತಿಯನ್ನು ಇನ್ಯಾರದೋ ಹೆಸರಿಗೆ ಕೊಟ್ಟ ಉದಾಹರಣೆಗಳಿವೆ. . . . (ಗೊಂದಲ)

**ಶ್ರೀ ಕಾಗೋಡು ತಿಮ್ಮಪ್ಪ:-** ನಾನು ಹೇಳುವವರೆಗೆ ಕೇಳಿ. ಇದರಲ್ಲೇ ನಾನು ಮುಳುಗಿ ಬಂದಿದ್ದೇನೆ. ಪಕ್ಕ ಪೋಡಿ ಮಾಡಬೇಕಾದರೆ ಆತನ ಹೆಸರಿಗೆ RTC ಯಲ್ಲಿ entry ಆಗಿರಬೇಕು. RTC ಒಳಗೆ ಎಷ್ಟು ಎಕರೆ ವಿಸ್ತೀರ್ಣ ದಾಖಲಾಗಿರುತ್ತದೆಯೋ ಅದರ ಪ್ರಕಾರವೇ ಅಳತೆ ಮಾಡಬೇಕಾಗುತ್ತದೆ. ಅಳತೆ ಮಾಡುವ ಸಮಯದಲ್ಲಿ ಆತ ಸ್ವಾಧೀನ ಹೊಂದಿದ್ದಾರೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆಯುತ್ತಾರೆ. ಸ್ವಾಧೀನ ಇಲ್ಲ ಎಂದರೆ, ಈತನ ಸ್ವಾಧೀನದಲ್ಲಿ ಇಲ್ಲ ಎಂದು ಸರ್ವೆಯರ್‌ಗಳು ಬರೆಯುತ್ತಾರೆ. ಸುಮ್ಮಸುಮ್ಮನೆ ಯಾರನ್ನೂ ಕೋರ್ಟಿಗೆ ಕಳುಹಿಸುವುದಕ್ಕೆ ಆಗುವುದಿಲ್ಲ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಯಾರದೋ ಆಸ್ತಿಯನ್ನು ಬೇರೆ ಯಾರದೋ ಹೆಸರಿನಲ್ಲಿ ಬರೆದು ಕೊಟ್ಟಿರುವ ಉದಾಹರಣೆ ಇದೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಕಳುಹಿಸಿ ಕೊಡಿ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಅಳತೆ ಮಾಡುವಾಗ 28 ಎಕರೆ ಇದ್ದ ...

**ಸಭಾಪತಿಯವರು:–** ಅದನ್ನು ಈಗ ಇಲ್ಲಿ ಹೇಳುವುದು ಬೇಡ ದಯವಿಟ್ಟು ಕುಳಿತುಕೊಳ್ಳಿ.

**<u>ಪ್ರಶ್ನೆ ಸಂಖ್ಯೆ : 131(1139)</u>**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ರಮೇಶ್‌ಬಾಬು:–**ನಾವು ಪ್ರಶ್ನೆ ಕೇಳಬೇಕಾದರೆ, ಅದಕ್ಕೆ ಸರ್ಕಾರದಿಂದ ಸಮರ್ಪಕ ಉತ್ತರ ಬರುತ್ತದೆ ಎನ್ನುವ ನಂಬಿಕೆಯಿಂದ ಕೇಳುತ್ತೇವೆ. ಮಾನ್ಯ ಕಂದಾಯ ಸಚಿವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ನನ್ನ ಮೊದಲನೆ ಪ್ರಶ್ನೆಯಲ್ಲಿ, ಸರ್ಕಾರ ಬರ ಪರಹಾರ ನಿರ್ವಹಣೆಗೆ ಒಟ್ಟು ಎಷ್ಟು ಹಣ ಬಿಡುಗಡೆ ಮಾಡಿರುತ್ತದೆ ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುತ್ತದೆ ಎಂದು ಕೇಳಿದ್ದೇನೆ. ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಹೋಗಿಲ್ಲ. 2ನೇ ಪ್ರಶ್ನೆಯಲ್ಲಿ, ರಾಜ್ಯ ಸರ್ಕಾರವು ಜಿಲ್ಲಾವಾರು ಎಷ್ಟು ಗೋಶಾಲೆಗಳನ್ನು ತೆರೆದಿರುತ್ತದೆ; ಸದರಿ ಗೋಶಾಲೆಗಳಲ್ಲಿ ನೀರು ಪೂರೈಕೆಗೆ, ರೈತರ ತಂಗುದಾಣಕ್ಕೆ ಹಾಗೂ ಪರಿಸರ ನೈರ್ಮಲ್ಯ ನಿರ್ವಹಣೆಗೆ ಏನು ಕ್ರಮ ಕೈಗೊಂಡಿರುತ್ತದೆ ಎಂದು ಕೇಳಿದ್ದೇನೆ. ನನ್ನ ಈ ಪ್ರಶ್ನೆಗೂ ಉತ್ತರ ಕೊಡುವ ಕೆಲಸವನ್ನು ಮಾನ್ಯ ಕಂದಾಯ ಸಚಿವರು ಮಾಡಿಲ್ಲ. ನೀವು ಎಲ್ಲಿ ಗೋಶಾಲೆಗಳನ್ನು ತೆರೆದಿದ್ದಿರೋ ಅಲ್ಲಿ ಬಂದಂಥ ರೈತರು ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ? ಸಗಣಿ ಇತ್ಯಾದಿ ತ್ಯಾಜ್ಯಗಳ ನಿರ್ವಹಣೆಗೆ ಏನು ವ್ಯವಸ್ಥೆ ಮಾಡಿದ್ದೀರಿ ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಏಕೆ ಉತ್ತರ ಕೊಟ್ಟಿಲ್ಲ ಎಂದರೆ ಅವರು ಆ ವ್ಯವಸ್ಥೆಗಳನ್ನು ಮಾಡಿಲ್ಲ. ಮೇವು ಎಷ್ಟು ದಾಸ್ತಾನು ಇದೆ ಎನ್ನುವ ವಿವರ ಕೂಡ ಕೊಟ್ಟಿಲ್ಲ. ನಿನ್ನೆ ಇದೇ ಸದನದ ಸದಸ್ಯರು ಕೇಳಿದ ಒಂದು ಪ್ರಶ್ನೆಗೆ ಕೊಟ್ಟಿರುವ ಲಿಖಿತ ಉತ್ತರದಲ್ಲಿ ಮಾನ್ಯ ಪಶುಸಂಗೋಪನಾ ಸಚಿವರು, ಒಟ್ಟು 71 ಗೋಶಾಲೆಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಮಾನ್ಯ ಕಂದಾಯ ಸಚಿವರು, ಇಡೀ ರಾಜ್ಯದಲ್ಲಿ ಒಟ್ಟು 78 ಗೋಶಾಲೆಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದಾರೆ. ನಾವು, ಪಶುಸಂಗೋಪನಾ ಸಚಿವರು ಹೇಳುವುದನ್ನು ನಂಬಬೇಕೇ ಅಥವಾ ಮಾನ್ಯ ಕಂದಾಯ ಸಚಿವರ ಉತ್ತರ ಕೊಟ್ಟಿರುವುದನ್ನು ನಂಬಬೇಕೇ ಅರ್ಥವಾಗುತ್ತಿಲ್ಲ.

ಹಣ ಖರ್ಚು ಮಾಡಿರುವುದಕ್ಕೆ ಸಂಬಂಧಪಟ್ಟಂತೆ, ನನಗೆ ಕೊಟ್ಟಿರುವ ಮಾಹಿತಿ ಪ್ರಕಾರ, 2016-17ನೇ ಸಾಲಿನಲ್ಲಿ ರೂ. 14.00 ಕೋಟಿ ಬಿಡುಗಡೆ ಆಗಿದ್ದು ಅದರಲ್ಲಿ ರೂ.1245 ಲಕ್ಷ ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಆದರೆ ನಿನ್ನೆ ಇದೇ ಸರ್ಕಾರ ನಮ್ಮ ಇನ್ನೊಬ್ಬ ಸದಸ್ಯರು ಕೇಳಿದ ಪ್ರಶ್ನೆಗೆ ಕೊಟ್ಟ ಮಾಹಿತಿಯಲ್ಲಿ, ರೂ. 12.67 ಕೋಟಿ ಹಣ ಖರ್ಚಾಗಿದೆ ಎನ್ನುವ ಮಾಹಿತಿ ಕೊಡುತ್ತಾರೆ.

ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಬರ ಪರಿಹಾರ ನಿರ್ವಹಣೆಯ ವೆಚ್ಚದಲ್ಲಿ 2016-17ನೇ ಸಾಲಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಕೇಳಿರುವ ಪ್ರಶ್ನೆಗೆ, ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್/ಎನ್‌ಡಿ.ಆರ್‌ಎಫ್ ಮಾರ್ಗಸೂಚಿಯಲ್ಲಿ ಕುಡಿಯುವ ನೀರಿನ ತುರ್ತು ದುರಸ್ತಿ ಕಾರ್ಯಗಳನ್ನು ಮಾತ್ರ ಮಾಡಲು ಅವಕಾಶವಿದ್ದು ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶ ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ, ಬಯಲುಸೀಮೆ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ರಾಜ್ಯ ಸರ್ಕಾರ ಒಂದೂ ಸಹ ಕುಡಿಯುವ ನೀರಿಗೋಸ್ಕರ ಕೊಳವೆಬಾವಿಯನ್ನು ತೆಗೆದಿಲ್ಲ ಎನ್ನುವ ಮಾತನ್ನು ಪರೋಕ್ಷವಾಗಿ ಹೇಳುತ್ತಿದ್ದಾರೆ. ದುರಸ್ತಿ ಮಾಡುವುದಕ್ಕೆ ಅವಕಾಶ ಇದೆ, ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶ ಇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಯಾವ ಬರ ಪರಿಹಾರ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಉತ್ತರದಲ್ಲಿ ಹೇಳುತ್ತೀರಿ ಆದರೆ, ಈ ಜಿಲ್ಲೆಯಲ್ಲಿ ಒಂದೂ ಸಹ ಕೊಳವೆಬಾವಿಗಳನ್ನು ಕೊರೆಸಿಲ್ಲ. ಈ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲವೇ?

**ಸಭಾಪತಿಯವರು:-** ನೀವು ಮಾನ್ಯ ಸಚಿವರಿಂದ ಏನು ಬಯಸುತ್ತಿದ್ದೀರೋ ಆ ಕುರಿತು ಪ್ರಶ್ನೆಯನ್ನು ಕೇಳಿ.

**ಶ್ರೀ ರಮೇಶ್‌ಬಾಬು:-** ನನ್ನ 4ನೇ ಪ್ರಶ್ನೆಯಲ್ಲಿ, ಬರ ಪರಿಸ್ಥಿತಿಯನ್ನು ಎದುರಿಸಲು ಜಿಲ್ಲಾ ಸಮಿತಿಗಳನ್ನು ರಚಿಸಲಾಗಿದೆಯೇ? ರಚಿಸಲಾಗಿದ್ದಲ್ಲಿ ಸದರಿ ಸಮಿತಿಗಳು ಎಷ್ಟು ಸಭೆಗಳನ್ನು ನಡೆಸಿರುತ್ತವೆ ಎಂದು ಕೇಳಿದ್ದೇನೆ. ಅದಕ್ಕೆ, 18 ಸಭೆಗಳನ್ನು ನಡೆದಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಈಗ ಸದನದಲ್ಲಿದ್ದಾರೆ. ಶಿರಾ ಕೆಡಿಪಿ ಸಭೆ ಒಂದನ್ನು ಹೊರತುಪಡಿಸಿ ಇಡೀ ಜಿಲ್ಲೆಯಲ್ಲಿ ನಡೆದ ಯಾವುದೇ ಸಭೆಗಳ ಮಾಹಿತಿ ನಮಗೆ ಕೊಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮಾಡಿದರೆ ಅವರು ದೂರವಾಣಿಯನ್ನು ಎತ್ತುವುದಿಲ್ಲ. ಬರ ಪರಿಹಾರದ ಮಾಹಿತಿ ಕೊಡುತ್ತಿಲ್ಲ. 3 ವರ್ಷದಿಂದ ನಿರಂತರ ಬರಗಾಲ ಇದೆ. ರಾಜ್ಯ ಸರ್ಕಾರ ಅಧಿಕಾರಿಗಳನ್ನು ನಿಯಂತ್ರಣದಲ್ಲಿ ಇಡಬೇಕು. ಈ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಸಮರ್ಪಕವಾಗಿ ತೆರೆಯಬೇಕು. 10 ಜಿಲ್ಲೆಗಳಲ್ಲಿ ಮಾತ್ರ ಬರ ಇದೆಯೇ? 30 ಜಿಲ್ಲೆಗಳ ಪೈಕಿ 10 ಜಿಲ್ಲೆಗಳಲ್ಲಿ ಮಾತ್ರ ಗೋಶಾಲೆ ತೆರೆದಿದ್ದೇವೆ ಎಂದು ಹೇಳಿದ್ದೀರಿ. ಉಳಿದ ಜಿಲ್ಲೆಗಳಲ್ಲಿ ಬರ ಇಲ್ಲವೇ, ಬರ ಕಾಮಗಾರಿ ಮಾಡುವ ಅವಶ್ಯಕತೆ ಇಲ್ಲವೇ? ದಯವಾಡಿ ಸಚಿವರು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಸರ್ಕಾರದಲ್ಲಿ ಲಭ್ಯ ಇರುವ ಮಾಹಿತಿ ಆಧಾರದ ಮೇಲೆ ನಾವು ಉತ್ತರ ಕೊಡುತ್ತೇವೆ. ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಪಶುವೈದ್ಯಕೀಯ ಸಚಿವರು ಒಂದು ತರಹ ಉತ್ತರ ಕೊಟ್ಟಿದ್ದಾರೆ ಎಂದು ತಿಳಿಸಿದರು. ಅವರು ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ತರಿಸಿಕೊಂಡು, ಪರಿಶೀಲನೆ ಮಾಡಿ ಇನ್ನೊಂದು ಸಲ ಸಮರ್ಪಕವಾಗಿ ಉತ್ತರ ಕೊಡುತ್ತೇವೆ. ಮತ್ತೆ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬರ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆ ಆಗದ ಹಾಗೆ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುತ್ತೇವೆ. ಎಲ್ಲಿ ತೊಂದರೆ ಇದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಪರಿಹರಿಸುವ ಕೆಲಸ ಮಾಡುತ್ತೇವೆ. ಅನಿವಾರ್ಯತೆ ಇರುವ ಎಲ್ಲಾ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸುವ ವ್ಯವಸ್ಥೆ ಮಾಡುತ್ತೇವೆ. ಬರ ಪರಿಸ್ಥಿತಿಯ ಸಂದರ್ಭದಲ್ಲಿ ಯಾವುದೇ ಜಾನುವಾರುಗಳಿಗೆ ತೊಂದರೆ ಆಗಬಾರದೆಂದು ಗೋಶಾಲೆಗಳನ್ನು ತೆರೆದಿದ್ದೇವೆ. ಅಗತ್ಯ ಬಿದ್ದರೆ ಹೋಬಳಿವಾರು ಗೋಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹುಲ್ಲು ಅನೇಕ ಕಡೆ ಸಿಗುತ್ತಿಲ್ಲ. ಮೊನ್ನೆ ನಾವು, ಪಂಜಾಬ್, ಹರಿಯಾಣ ಭಾಗದಿಂದ ಹುಲ್ಲು ಸಿಕ್ಕಿದರೆ ಅದನ್ನು ರೈಲಿನ ಮೂಲಕ ತರಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಹಾಗಾಗಿ ಏನೇನು ಅಗತ್ಯವಿದೆಯೋ ಅಂಥದ್ದನ್ನು ಪೂರೈಸುವುದಕ್ಕೆ ಜವಾಬ್ದಾರಿಯಿಂದ ಕೆಲಸ ಮಾಡುತ್ತೇವೆ. ಎಲ್ಲಿ ಕೊರತೆ ಇದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದರೆ ನಾವು ಖಂಡಿತವಾಗಿ ಅದಕ್ಕೆ ಸ್ಪಂದಿಸುತ್ತೇವೆ.

**ಶ್ರೀ ರಮೇಶ್‌ಬಾಬು:-** ಬಯಲುಸೀಮೆ ಭಾಗಗಳಲ್ಲಿ ಕೊಳವೆಬಾವಿಗಳನ್ನು ತೆಗೆದಿಲ್ಲ. ಎಲ್ಲಾ ಕಡೆಯಲ್ಲೂ ನೀರಿಗೆ ಹಾಹಾಕಾರ ಇದೆ. ಬೆಂಗಳೂರಿನಿಂದ ಕೋಲಾರಕ್ಕೆ, ಚಿಕ್ಕಬಳ್ಳಾಪುರಕ್ಕೆ ಮತ್ತು ತುಮಕೂರಿಗೆ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಬರ ಪರಿಹಾರ ಕಾರ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡಲೇ ಬೋರ್‌ವೆಲ್‌ಗಳನ್ನು ಹಾಕಬೇಕು. ವಿಶೇಷವಾಗಿ ತುಮಕೂರು ಜಿಲ್ಲೆಗಳಲ್ಲಿ ಆಗುವ ಸಭೆಗಳಲ್ಲಿ ನಮ್ಮನ್ನು ಕರೆದರೆ ರಿವ್ಯೂ ಮಾಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಸಚಿವರು ಹಾಗೂ ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸದಸ್ಯರಾದ ರಮೇಶ್‌ಬಾಬುರವರನ್ನು ಟಿವಿಯಲ್ಲಿ, panel discussions ನಲ್ಲಿ ನೋಡಿದ್ದೇನೆ. Technicalities ಮೇಲೆ ಪ್ರಶ್ನೆಗಳನ್ನು ಕೇಳಿದರೆ questions purpose serve ಆಗುವುದಿಲ್ಲ. Head of Accounts ಏನೇನೋ ಇಟ್ಟಿರುತ್ತಾರೆ. ಅದು ನಮಗೆ ಗೊತ್ತಾಗುವುದಿಲ್ಲ. ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದಾಗ ಅದಕ್ಕೆ ಅಧಿಕಾರಿಗಳು ಉತ್ತರವನ್ನು ಬರೆದು ಕಳುಹಿಸುತ್ತಾರೆ. ನಾವು ಇಲ್ಲಿ reply ಮಾಡುತ್ತೇವೆ. Task Force Committees ಮಾಡಿದ್ದೇವೆ. ಸ್ಥಳೀಯ ಶಾಸಕರುಗಳು ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿ ಎಲ್ಲೆಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಸಬೇಕೆಂದು ಹೇಳುತ್ತಿದ್ದಾರೆ. ಅದರ ಪ್ರಕಾರ ಕೆಲಸವಾಗುತ್ತಿದೆ. ಹಿರಿಯ ಸಚಿವರಾದ ಕಾಗೋಡು ತಿಮ್ಮಪ್ಪರವರು ಹೇಳಿದಂತೆ ಎಲ್ಲೆಲ್ಲಿ necessity ಇದೆ pointed ಆಗಿ ಹೇಳಿ, ಇಂತಹ ಕಡೆ acute scarcity ಇದೆ, ನೀರು ಸರಬರಾಜು ಮಾಡಿ ಇಷ್ಟು ದಿವಸಗಳಾಗಿವೆ, ಟ್ಯಾಂಕರ್‌ಗಳ ಮುಖಾಂತರವೂ ನೀರನ್ನು ಸರಬರಾಜು ಮಾಡುತ್ತಿಲ್ಲ. ಹಾಗಾಗಿ ನೀರನ್ನು ಸರಬರಾಜು ಮಾಡಿ ಎಂದರೆ We can do it. ಗೋಶಾಲೆಗಳ ಬಗ್ಗೆ ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಅವರು ಇಲಾಖೆಯಲ್ಲಿರುವ ಮಾಹಿತಿಯನ್ನು ಕೊಟ್ಟಿರುತ್ತಾರೆ. Technical difference ಇದೆ. ಇದರಲ್ಲಿ 7 ಸಂಖ್ಯೆಗಳ ವ್ಯತ್ಯಾಸ ಇದೆ. ಗೋಶಾಲೆಗಳನ್ನು ಕ್ಯಾಂಟೀನ್‌ಗಳನ್ನು ತೆರೆದಂತೆ ಕಡ್ಡಾಯವಾಗಿ ತೆರೆಯುವುದಕ್ಕೆ ಬರುವುದಿಲ್ಲ. ಕೆಲವು ಕಡೆ cross breed cows ಇಟ್ಟುಕೊಂಡಿರುವವರು ಯಾರೂ ಸಹ ಗೋಶಾಲೆಗೆ ತಮ್ಮ ಹಸುಗಳನ್ನು ಕಳುಹಿಸುವುದಿಲ್ಲ. ನಾಟಿ ಹಸುಗಳನ್ನು ಮಾತ್ರ ಗೋಶಾಲೆಗಳಿಗೆ ಕಳುಹಿಸುತ್ತಾರೆ. ಬೇಡಿಕೆ ಇದ್ದು ಅಲ್ಲಿ ಸರ್ಕಾರ ಗೋಶಾಲೆಗಳನ್ನು ಸ್ಥಾಪನೆ ಮಾಡದೇ ಹೋದರೆ, it is a failure on the part of the Government. That is how we will have to work.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(350)22.03.2017 MM-MD-12.10

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಆರ್.ರಮೇಶ್‌ಕುಮಾರ್ (ಮುಂದು):-**

ಬರಗಾಲ ಬಂದರೆ ಯಾರಿಗೂ ಖುಷಿಯಾಗುವುದಿಲ್ಲ. ಇಡೀ ರಾಜ್ಯದಲ್ಲಿ 80 ಭಾಗದ ಪ್ರದೇಶಗಳು ಬರಗಾಲದ ಛಾಯೆಗೆ ಈಡಾಗಿವೆ. ಇದನ್ನು ನಾವು ಮಾನವೀಯತೆಯ ಆಧಾರದ ಮೇಲೆ ಒಬ್ಬರಿಗೊಬ್ಬರು ಪರಸ್ಪರ ಸಲಹೆ ಸಹಕಾರಗಳನ್ನು ಕೊಟ್ಟು ಜವಾಬ್ದಾರಿ ತಪ್ಪಿದಾಗ ಕಿವಿ ಹಿಂಡಿ ಜನರಿಗೆ ನೆಮ್ಮದಿ ಸಿಗುವ ಹಾಗೆ ಮಾಡಬೇಕು.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾವತಿಯವರೆ, ಮಾನ್ಯ ಸಚಿವರಾದ ಶ್ರೀ ರಮೇಶ್ ಕುಮಾರ್ ರವರು ಇಲ್ಲಿರುವ ನೂತನ ಸದಸ್ಯರಿಗೆ icon ಆಗಿದ್ದಾರೆ. ನಮಗೊಂದು ಸ್ಪಷ್ಟನೆ ಬೇಕಾಗಿದೆ. ತಾವು ಇದು ತಾಂತ್ರಿಕ ಕಾರಣ ಎಂದು ತಳ್ಳಿಹಾಕಲು ಬರುವುದಿಲ್ಲ. ಈ ಸದನಕ್ಕೆ ತನ್ನದೇ ಆದ ಪಾವಿತ್ರ್ಯತೆ ಇದೆ. ಅಧಿಕಾರಿಗಳ ಮೇಲೆ ತಮಗೆ ಹಿಡಿತವಿಲ್ಲದಿದ್ದರೆ ಅವರು ತಾಂತ್ರಿಕವಾಗಿ ತಪ್ಪು ಮಾಡಿದರೆ, ಯಾವುದೋ ಅಂಕಿ-ಅಂಶಗಳನ್ನು ಕೊಟ್ಟು ಹೋದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ತಾವು ಎಲ್ಲಿಯವರೆಗೆ ಅಧಿಕಾರಿಗಳ ಮೇಲೆ ಛಾಟಿ ಬೀಸುವುದಕ್ಕಾಗುವುದಿಲ್ಲವೋ ಅಲ್ಲಿಯವರೆಗೆ ಆಡಳಿತ ಯಂತ್ರದ ಮೇಲೆ ಬಿಗಿ ಬರುವುದಿಲ್ಲ. ತಮ್ಮಂತಹ ಹಿರಿಯ ಸಚಿವರೇ ಅವರನ್ನು ಹಿಡಿತದಲ್ಲಿಟ್ಟುಕೊಳ್ಳದೇ ಹೋದರೆ ಮಾನ್ಯ ಕಾಗೋಡು ತಿಮ್ಮಪ್ಪರವರು ಇರಬಹುದು ಅಥವಾ ತಾವಾಗಿರಬಹುದು ಈ ಸದನದಲ್ಲಿ ಹಿರಿಯ ಸಚಿವರಾಗಿದ್ದು ತಮ್ಮ ಬಗ್ಗೆ ನಮಗೆ ಅಪಾರ ಗೌರವವಿದೆ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿರವರು ಕೇಳಿದ ಪ್ರಶ್ನೆಯಂತೆ ತಾವು ತಹಸೀಲ್ದಾರರುಗಳಿಗೆ ಪೋಡಿ ಮಾಡುವ ಅಧಿಕಾರವನ್ನು delegate ಮಾಡಿದಾಗ್ಯೂ ಅವರು ಅದನ್ನು ಮಾಡುವುದಿಲ್ಲ ಎಂದಾಗ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದ ಯೋಜನೆಗಳು ಹೇಗೆ implement ಆಗುತ್ತದೆ? ಇದು ನಮ್ಮ commitment ಅಷ್ಟೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, Technicalities ಅಡಿಯಲ್ಲಿ ಸದಸ್ಯರು ಕೇಳಿದ್ದಾರೆಂದು ನಾವು protection ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. Now you have brought it to our notice. ಮುಂದೆ ಏನು ಮಾಡಬೇಕೆಂದು ಸುಮಾರು 45 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿರುವ ಕಂದಾಯ ಸಚಿವರು ಅದನ್ನು ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳಿಗೆ ಛಾಟಿ ಬೀಸುವುದೆಂದರೆ ಅವರಿಗೆ ಬಾರುಗೋಲನ್ನು ತೆಗೆದುಕೊಂಡು ಬಾರಿಸುವುದಕ್ಕಾಗುವುದಿಲ್ಲ. ವ್ಯವಸ್ಥೆ ಬಹಳ ಹಾಳಾಗಿದೆ. ಇದಕ್ಕೆ ನಾವು, ನೀವು, ಹಿಂದಿನ ಸರ್ಕಾರ ಇವತ್ತಿನ ಸರ್ಕಾರ ಕಾರಣವಲ್ಲ. ಪರೋಕ್ಷವಾಗಿ ಮಾನ್ಯ ಸಚಿವರು ಅವರ ನೋವನ್ನು ಹೇಳಿದ್ದಾರೆ. ಒಬ್ಬರನ್ನು ಮುಟ್ಟಿದ ತಕ್ಷಣ ಅವರು ತಮ್ಮ ಜಾತಿ, ಉಪಜಾತಿ, ಸಂಬಂಧ ಅಥವಾ ತಮ್ಮ ಪಕ್ಷದವರು ಎಂದು ಬರುತ್ತಾರೆ. ಯಾವ ಭ್ರಷ್ಟರನ್ನೂ ನಾವು ಮುಟ್ಟುವುದಕ್ಕಾಗುತ್ತಿಲ್ಲ. ಎಲ್ಲಾ ಸನ್ನಿವೇಶಗಳಲ್ಲೂ ಮತ್ತು ಎಲ್ಲ ವ್ಯವಸ್ಥೆಗಳಲ್ಲಿಯೂ ಇದನ್ನು ಅನುಭವಿಸಿದ್ದೇವೆ. ಆದರೆ ನಾವು ಅಸಹಾಯಕರಲ್ಲ. We are doing our best. ತಮ್ಮಂತಹವರ ಕಡೆಯಿಂದ, ಉತ್ಸಾಹವಿರುವ ಜನರ ಕಡೆಯಿಂದ ಸಲಹೆಗಳು ಬಂದಾಗ ಅತ್ಯಂತ ಗೌರವ ಭಾವನೆಯಿಂದ ಅದನ್ನು ಸ್ವೀಕರಿಸಿ ನಾವು ನಿದ್ರಿಸದಂತೆ we will have collective responsibility to improve the administration. Governance is different and Administration is different. ನಾವು Governance ಮಾಡಬೇಕೆ ಹೊರತು Administration ಮಾಡಬಾರದು. Administration ಮಾಡುವುದಕ್ಕೆ ಅಧಿಕಾರಿಗಳಿದ್ದಾರೆ. ಆದರೆ ನಾವು Governance ಮಾಡುವುದನ್ನು ಬಿಟ್ಟು Administration ಮಾಡುವುದಕ್ಕೆ ಹೋಗುತ್ತೇವೆ. ಆಗಲೇ ಸಮಸ್ಯೆಗಳು ಪ್ರಾರಂಭವಾಗುತ್ತವೆ. Demarcation line ಏನಿದೆ, it is gradually vanishing. ಎಲ್ಲೋ ಒಂದು ಕಡೆಗೆ we must try to reintroduce that line. ನಾನು ಪಾಲಿಸಿ ಮಾಡಿ ತಹಸೀಲ್ದಾರರುಗಳಿಗೆ ಪೋಡಿ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದೇನೆ. That is the policy of the Government. ಅದು enforce ಆಗಲಿಲ್ಲ ಎಂದರೆ if there are lapses, the Minister is strong enough to take the decision. ಅದನ್ನು ನಮ್ಮ ಗಮನಕ್ಕೆ ತರಬೇಕಾಗುತ್ತದೆ. surveyors ತಪ್ಪು ಮಾಡುವುದು, Constables ತಪ್ಪು ಮಾಡುವುದು ಇದೆಲ್ಲಾ ಇದ್ದೇ ಇರುತ್ತದೆ. I am not trying to find the fault. ತಾವೆಲ್ಲಾ ಮಾತನಾಡಿದಾಗ ನಮಗೆ ಖುಷಿಯಾಗುತ್ತದೆ. ನಾವೇನು ಇಲ್ಲಿ ಶಾಶ್ವತವಾಗಿರುವುದಿಲ್ಲ. We are all from very humble background. ಮಾನ್ಯ ಕಾಗೋಡು ತಿಮ್ಮಪ್ಪರವರಂತೂ ತಮ್ಮ 9ನೇ ವಯಸ್ಸಿಗೇ ಝಂಡಾ ಹಿಡಿದುಕೊಂಡು ರಾಜಕಾರಣಕ್ಕೆ ಬಂದರು. ನಾವು ಬಿಟ್ಟುಹೋಗುವ ಕಾಲಕ್ಕೆ ಒಳ್ಳೆಯ ಜನರು ಇಲ್ಲಿಗೆ ಬಂದರೆ we will be happy. It is not the question of

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

party. Lower House and Upper House ನಲ್ಲಿ ಒಳ್ಳೆಯ ಜನರು ಬರಬೇಕೆಂಬುದೇ ನಮ್ಮ ಆಸೆಯಾಗಿದೆ. ಬೇರೆ ಏನೂ ಇಲ್ಲ. I am not trying to find the fault.

**ಚುಕ್ಕೆ ಪ್ರಶ್ನೆ ಸಂಖ್ಯೆ: 1133**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇಷ್ಟೊತ್ತಿನವರೆಗೆ ಚರ್ಚೆಯಾಗಿದೆ. ಇಂತಹ ಬರಗಾಲ ಪರಿಸ್ಥಿತಿಯಲ್ಲಿ 176 ತಾಲ್ಲೂಕುಗಳ ಪೈಕಿ 143 ತಾಲ್ಲೂಕುಗಳಲ್ಲಿ ಅಂತರ್ಜಲ ಕುಸಿದಿದೆ ಎಂದು ಹೇಳಿದ್ದಾರೆ. ಅಂಕಿ ಸಂಖ್ಯೆಗಳನ್ನು ಹೇಳಿದ್ದಾರೆ. ಇವತ್ತಿನ ದಿವಸ ನನ್ನ ತಿಳುವಳಿಕೆಯ ಪ್ರಕಾರ ಇಂತಹ ಬರಗಾಲ ಯಾವಾಗಲೂ ಬಂದಿರಲಿಲ್ಲ. ಪರಿಸ್ಥಿತಿ ಇಷ್ಟು ಗಂಭೀರವಾಗಿದೆ. ಅಂಕಿಸಂಖ್ಯೆಗಳನ್ನು ತಮಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಹೇಳುವುದೇನೆಂದರೆ, ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ನಿರ್ಬಂಧ ಮಾಡಿದ್ದೀರಿ. ಕೆಲವು ಕಡೆಗಳಲ್ಲಿ ನಿರ್ಬಂಧ ಮಾಡಿಲ್ಲ ಎಂದು ಹೇಳಿದ್ದೀರಿ. Check dam ಗಳ ಬಗ್ಗೆ ಹೇಳಿದ್ದೀರಿ. ನಾನು practical ಆಗಿ ಹೇಳುವುದೇನೆಂದರೆ, ಉತ್ತರ ಕೊಡುವುದು ದೊಡ್ಡದಲ್ಲ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ತಾವಾಗಲೀ, ನಾವಾಗಲೀ ಅಥವಾ ಅಧಿಕಾರಿಗಳಾಗಲೀ practical ಆಗಿ ವಿಚಾರ ಮಾಡುವುದಿಲ್ಲ. ಕೇವಲ ನಾವು ಪ್ರಶ್ನೆಗಳನ್ನು ಕೇಳುತ್ತೇವೆ, ಅದಕ್ಕೆ ತಾವು ಉತ್ತರ ಕೊಡುತ್ತೀರಿ ಅಲ್ಲಿಗೆ ಮುಗಿಯಿತು. ನಿನ್ನೆಯ ಪ್ರಜಾವಾಣಿ ಪತ್ರಿಕೆಯನ್ನು ಓದಿದರೆ ಅದರಲ್ಲಿ ನಾಲ್ಕೈದು ಕಡೆ "ಮಳೆನೀರು ಬಳಕೆ ಇಲ್ಲ – ಧಾವಂತ" "ಮಳೆ ನೀರು ಇಂಗಿಸುವ ಮೆಟ್ರೋ ಮಾರ್ಗ" ನಂತರ "ಮೈಸೂರು ಅರಮನೆಯಲ್ಲಿ ಜಲ ಸ್ವಾವಲಂಬನೆ" "ಜಲ ಸಂಗ್ರಹಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನಿರ್ಮಿಸಿದ ರಚನೆಗಳಿಂದ ಅರಣ್ಯ ಇಲಾಖೆ ಕಲಿತ ಪಾಠವೇನು"? ದಶಕಗಳ ಅವಲೋಕನ ಅವಶ್ಯಕತೆ ಇದೆ ಎಂದು ಓದುತ್ತೇವೆ. ಈ ಪತ್ರಿಕೆಯನ್ನು ಓದಿದಾಗ ಇಂತಹ ಒಂದು ದೊಡ್ಡ ಪತ್ರಿಕೆಯಲ್ಲಿ ನಾಲ್ಕಾರು ಕಡೆ ಬಂದಿದೆ. ನಾನು ತಮಗೆ ಹೇಳುವುದೇನೆಂದರೆ, ಪ್ರಶ್ನೆ ಕೇಳುತ್ತೇನೆ ಉತ್ತರ ಕೊಡುತ್ತೀರಿ. ಆದರೆ ದಯಮಾಡಿ ಇವತ್ತಿನ ಅಧಿಕಾರಿಗಳು ಕೇವಲ ಬೆಳಿಗ್ಗೆ 10-30ಗೆ ಬಂದು ಸಾಯಂಕಾಲ 5-30ಕ್ಕೆ ಹೋಗುವುದನ್ನು ಕಾನೂನು ಪ್ರಕಾರ ಕೇಳುವುದಿಲ್ಲ. ಇಂತಹವುಗಳಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಮೇಲಾಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ನಿಯಂತ್ರಿಸಬೇಕು. ತಾವು ಕೊಟ್ಟಿರುವ ಉತ್ತರದಲ್ಲಿ ಲಕ್ಷವನ್ನೋ ಕೋಟಿಯನ್ನೋ ಕೊಟ್ಟಿಲ್ಲ. ಏನೆಂದರೆ, 2012-13ನೇ ಸಾಲಿನ ಅಂತರ್ಜಲ ಕೃತಕ ಮರು ಪೂರೈಕೆ ರಚನೆ ನಿರ್ಮಾಣ ಕುರಿತು ವಿವರ ಎಂದು ಪುಟ ಸಂಖ್ಯೆ-2ರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೋರಿಸಿದ್ದೀರಿ. ಒಂದು ತಾಲ್ಲೂಕಿಗೆ ಐದು ಲಕ್ಷ, ಮತ್ತೊಂದಕ್ಕೆ ಹತ್ತು ಲಕ್ಷ, ಏಳು ಲಕ್ಷ ಹೀಗೆ ಕೊಟ್ಟಿದ್ದೀರಿ. Check dam ಗಳನ್ನು ಮಾಡುತ್ತೀರಿ. ಮಾನ್ಯ ಸಭಾಪತಿಯವರೆ, Check dam ಗಳನ್ನು ಕಟ್ಟಿದ್ದಾರೆ, ಅಟ್‌ಲೀಸ್ಟ್ ನಿಮ್ಮ ಅಧಿಕಾರಿಗಳು; ನಾನೇ ನಮ್ಮ ಹೊಲದಲ್ಲಿ ಹತ್ತು ಸಲ ಹೇಳಿದರೂ Check dam ಗಳಲ್ಲಿ ನೀರಿರಲಿ ಕಡೇಪಕ್ಷ ಅದನ್ನು ದುರಸ್ತಿ ಮಾಡಿ ಹಾಳಾಗಿರುವುದನ್ನು ತೆಗೆದುಹಾಕಿ ಮಾಡಬಹುದು ಆದರೆ ಹಾಗೆ ಮಾಡದೆ; ಕೊಳವೆ ಬಾವಿಗಳನ್ನು ಕೊರೆಯಬಾರದು ಎಂದು ಹೇಳಿದ್ದೀರಿ. ಕೊಳವೆ ಬಾವಿಗಳನ್ನು ಕೊರೆಯದಿದ್ದರೆ ನೀರೇ ಇರುವುದಿಲ್ಲ. ನೀರು ಎಲ್ಲರಿಗೂ ಬೇಕಾಗಿದೆ. ನಮ್ಮ ಕಡೆ ಏಳು ಕೊಳವೆಬಾವಿಗಳನ್ನು ಕೊರೆದರೂ ಒಂದು ಕಡೆಯು ನೀರು ಬಂದಿಲ್ಲ. ಇದನ್ನು ಒಪ್ಪುತ್ತೇನೆ. ಆದರೆ ನೀರೇ ಇಲ್ಲದಿದ್ದರೆ ಮುಂದಿನ ಗತಿ ಏನು? ವಿಚಾರ ಮಾಡಬೇಕಾಗಿದೆ. ತಾವೆಲ್ಲಾ ಪ್ರಾಮಾಣಿಕ ಸಚಿವರಿದ್ದೀರಿ, ದಯವಿಟ್ಟು ಪ್ರಶ್ನೆಗಳಿಗೆ ಉತ್ತರ, ಉತ್ತರಗಳಿಗೆ ಪ್ರಶ್ನೆ ಇದೆಲ್ಲಾ ಬೇಡ. ಇಷ್ಟು ಸಮಯದವರೆಗೆ ಚರ್ಚೆಯಾಯಿತು. ಮೂರ್ನಾಲ್ಕು ಪ್ರಶ್ನೆಗಳು ಇದರ ಬಗ್ಗೆಯೇ ಇವೆ. ಇಂತಹ ಪರಿಸ್ಥಿತಿಯಲ್ಲಿ ಏನಾದರೂ ಮಾಡಬೇಕಲ್ಲವೇ? ನೀರಿಲ್ಲದಿದ್ದರೆ ನೀರನ್ನು ತರಿಸಿಕೊಡುತ್ತೇವೆಂದು ಹೇಳಿ, ಇರುವ ನೀರನ್ನು ಸರಿಯಾಗಿ ಬಳಸಿಕೊಳ್ಳುವುದಿಲ್ಲ. ನೀರು ಬೇಕಾದ ಕಡೆಗೆಲ್ಲಾ ಹರಿದು ಹೋಗುತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ, ನಾನು ಪ್ರಶ್ನೆಗಳನ್ನು ಕೇಳಿದ್ದೇನೆ ತಾವು ಉತ್ತರಗಳನ್ನು ಹೇಳಿದ್ದೀರಿ. ಆದರೆ ಅದಕ್ಕೊಂದು ದಾರಿ ಬೇಕಲ್ಲವೇ? ಸರ್ಕಾರದ ಮುಂದೆ ಏನಿದೆ ಎಂದರೆ 176 ತಾಲ್ಲೂಕುಗಳಲ್ಲಿ ನೀರಿಲ್ಲ. ಸರ್ಕಾರದ ಯೋಜನೆ ಏನು? ನೀರಿಗಾಗಿ ಏನನ್ನು ಮಾಡುತ್ತೀರಿ? ನೀರನ್ನು ಟ್ಯಾಂಕರ್‌ಗಳ ಮೂಲಕ ಒದಗಿಸುತ್ತೇವೆ ಎಂದು ಪತ್ರಿಕೆಯಲ್ಲಿ ಬಂದಿದೆ. ನೀರೇ ಇಲ್ಲದಿರುವಾಗ ಟ್ಯಾಂಕರ್‌ಗಳಲ್ಲಿ ಹೇಗೆ ಕಳುಹಿಸುತ್ತೀರಿ? ಇವತ್ತು ಸರ್ಕಾರದ ಸ್ಪಷ್ಟವಾದ ಮಾಹಿತಿಯನ್ನು ನನಗೆ ಕೊಡಿ. ಇವತ್ತಿನ ಪರಿಸ್ಥಿತಿಯಲ್ಲಿ ಏನು ಮಾಡುತ್ತೀರಿ? ದನಗಳಿಗೆ, ಮನುಷ್ಯರಿಗೆ ಆಯಿತು; ನೀರನ್ನು ಮಿತವಾಗಿ ಬಳಸಬೇಕು. ನಿನ್ನೆ ಇಲ್ಲಿ ಯಾರೋ ಒಬ್ಬರು, ಪಾತ್ರೆ, ಬಟ್ಟೆ ತೊಳೆಯುವಾಗ ನಲ್ಲಿಯನ್ನು ಪೂರ್ತಿಯಾಗಿ ತಿರುಗಿಸಿ ನೀರನ್ನು ಪೋಲು ಮಾಡುತ್ತಿದ್ದರು. ಅದಕ್ಕೆ ಈ ಸರ್ಕಾರ ಏನು ಮಾಡುತ್ತದೆ? ನಾನು ಹೇಳುವುದೇನೆಂದರೆ, ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಜವಾಬ್ದಾರಿ ಬಹಳಷ್ಟಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರ ಎಂದರೆ ಎಲ್ಲರದ್ದು, ಇಡೀ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಎಲ್ಲರದ್ದು ಇದೇ ಪರಿಸ್ಥಿತಿ. ನನ್ನ ಪ್ರಶ್ನೆಗಳಿಗೆ ತಮ್ಮ ಉತ್ತರಗಳಿಂದ ನನಗೆ ಸಮಾಧಾನ ಇಲ್ಲವೆಂದು ಅಲ್ಲ, ಉತ್ತರವನ್ನು ಕೊಟ್ಟಿದ್ದೀರಿ ಅದು ರೀತಿ ನೀತಿ. ಆದರೆ ಸರ್ಕಾರದ ಸ್ಪಷ್ಟವಾದಂತಹ ಯೋಜನೆ ಏನು? ಈಗ ಮಾರ್ಚ್ ತಿಂಗಳು. ಏಪ್ರಿಲ್, ಮೇ ತಿಂಗಳಲ್ಲಿ ಅಲ್ಲಲ್ಲಿ ಮಳೆಯಾದರೂ ಮಳೆ ನೀರು ಎಲ್ಲಿಯೂ ನಿಲ್ಲುವುದಿಲ್ಲ. ಅದಕ್ಕೆ ಏನು ಮಾಡುತ್ತೀರಿ? ಮಾಧ್ಯಮದವರು ಅನೇಕ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆಯುತ್ತಾರೆ. ಅದನ್ನು ದಯವಿಟ್ಟು ತಮ್ಮ ಅಧಿಕಾರಿಗಳಿಗೆ ಓದಲು ತಿಳಿಸಿ. ಓದಿದ ನಂತರ ಏನನ್ನು ಮಾಡುತ್ತೀರಿ ಅದನ್ನು ಮಾಡಿ. 24X7 ಅಧಿಕಾರಿಗಳು ಇರಬೇಕು ನಾವು ಇರಬೇಕು, ನೀವು ಇರಬೇಕು. ಅದಕ್ಕೆ ಏನಾದರೂ ಹೊಸ ಯೋಜನೆಯನ್ನು ಮಾಡಿ ಇದನ್ನು ಸರಿಪಡಿಸುವಂತಹ ಕಾರ್ಯಕ್ರಮಗಳನ್ನು ಮಾಡಿ. ದಯವಿಟ್ಟು ನಮ್ಮ ಪ್ರಶ್ನೆಗಳಿಗೆ ತಾವು ಉತ್ತರ ಕೊಟ್ಟರೆ ಅದರಿಂದ ನಮಗೂ ನಿಮಗೂ ಅಸಮಾಧಾನ ಆಗಬಾರದು. ತಾವು ತಪ್ಪು ಉತ್ತರವನ್ನು ಕೊಟ್ಟಿರಿ ಅಥವಾ ಸರಿ ಉತ್ತರವನ್ನು ಕೊಟ್ಟಿರಿ ಎಂದು ಈ ಪ್ರಶ್ನೋತ್ತರದಲ್ಲಿ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರೆ, ಇವತ್ತಿನ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಶೇ.80 ರಷ್ಟು ಬರಗಾಲ ಇದೆ. ಶೇ.90 ಎಂದೇ ಹೇಳಬಹುದು. ನಮ್ಮ ಕಡೆಗಳಲ್ಲಿ ಹೇಳಬೇಕಾದರೆ ನೂರಕ್ಕೆ ನೂರರಷ್ಟು ಬರಗಾಲ ಇದೆ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ದಯವಿಟ್ಟು ತಾವು ಒಂದು ಯೋಜನೆಯನ್ನು ತರುವ ಮೂಲಕ ಈ ಸದನದ ಮುಖಾಂತರ ಜನರಿಗೆ ಒಂದು ಸಂದೇಶವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವುದು ಸತ್ಯವಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇವೆ. ಆದರೆ ಪರಿಸ್ಥಿತಿ ಬಗ್ಗೆ ಅವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದರಲ್ಲಿ ಅಂಕಿ ಅಂಶಗಳನ್ನು ನೋಡಬೇಕಾಗುತ್ತದೆ. ಬಹುಶಃ over exploited taluks, semi critical and critical taluks, mixed category and safe taluks ಇವೆಲ್ಲವನ್ನೂ ಲೆಕ್ಕ ಹಾಕಿ ನೋಡಿದರೆ ಈ ಬಾರಿ 43 ತಾಲ್ಲೂಕುಗಳು over exploited ಇದೆ. ಅಲ್ಲಿ ಕೊಳವೆಬಾವಿಗಳನ್ನು ಕೊರೆಯುವುದಕ್ಕೆ ಸಾಧ್ಯವೇ ಇಲ್ಲ. ಕೊಳವೆಬಾವಿಯನ್ನು ಕೊರೆಯುವುದಕ್ಕೆ ಆಗುವುದೂ ಇಲ್ಲ, ನೀರೂ ಬರುವುದಿಲ್ಲ ಅಂತಹ ಪರಿಸ್ಥಿತಿ ಅಲ್ಲಿದೆ. ಆದರೂ ಕೂಡ ಕುಡಿಯುವ ನೀರಿನ ಪ್ರಶ್ನೆ ಬಂದಾಗ ಕೊಳವೆ ಬಾವಿಗಳನ್ನು ಕೊರೆಯಲೇ ಬೇಕಾಗುತ್ತದೆ. ಅದಕ್ಕೆ ಸ್ವಲ್ಪ relaxation ಮಾಡಿ ನೀರು ಕೊಡುವಂತಹ ಕೆಲಸ ಮಾಡುತ್ತಿದ್ದೇವೆ. ಇದನ್ನು 160 ತಾಲ್ಲೂಕುಗಳಲ್ಲಿ ಬರಗಾಲ ಇರುವ ಸಂದರ್ಭದಲ್ಲಿ, ಮಡಿಕೇರಿಯಂತಹ ಕಾವೇರಿ ಹುಟ್ಟುವಂತಹ ಜಾಗದಲ್ಲಿಯೇ ಇವತ್ತು ನೀರಿಲ್ಲ. ಮೊನ್ನೆ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿಯು ಕೂಡ ಮೋಟಾರ್ ಅನ್ನು ಹಾಕಿ ನೀರನ್ನು ಕೊಡುವಂತಹ ಕೆಲಸ ಮಾಡಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಎಲ್ಲಿ ನದಿಗಳು, ಜಲಾಶಯಗಳಿದ್ದವು ಅಲ್ಲಿಯೂ ಕೂಡ ನೀರಿನ ಕೊರತೆ ಕಾಣುತ್ತಿದೆ.

(ಮುಂವ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

351/22-3-2017/12.20/ಡಿಎಸ್-ಎಕೆ

(ಸಭಾಪತಿಯವರ ಉಪಸ್ಥಿತಿ)

ಶ್ರೀ ಟಿ.ಬಿ.ಜಯಚಂದ್ರ(ಮುಂದು):-

ಆದರೆ ಇನ್ನು ಮುಂದೆಯೂ ಇದು ಇದ್ದಿದ್ದೆ. ಏಕೆಂದರೆ, exploitation ಎಷ್ಟಾಗಿದೆ ಎಂದರೆ ಅದು 200-300 ಪರ್ಸೆಂಟ್ ಆಗಿದೆ. ಒಂದು ಸಾವಿರ ಹೆಕ್ಟೇರ್ ಭೂಮಿಯಲ್ಲಿ ಜಲ ಮರುಪೂರಣ ಮಾಡಿದ್ದರೆ ನಾವು exploit ಮಾಡುತ್ತಿರತಕ್ಕಂಥದ್ದು ಮೂರು ಪಟ್ಟು ನಾಲ್ಕು ಪಟ್ಟು ಆಗಿದೆ. ಇವತ್ತು ಕೋಲಾರದಲ್ಲಿ 1800 ಅಡಿ ಹೋಗಿರುವಂಥದ್ದು. ಹಾಗಾಗಿ ಕಳೆದ ಎರಡು ವರ್ಷಗಳಲ್ಲಿ ಬ್ಯಾರೇಜ್‌ಗಳನ್ನು, ಬಾಂದಾರಗಳನ್ನು ಹಾಕತಕ್ಕಂಥದ್ದು ಎಲ್ಲಾ ಇಲಾಖೆಗಳಲ್ಲೂ ಇದೆ. ಗ್ರಾಮೀಣಾಭಿವೃದ್ಧಿ ಇಲಾಖೆ, ಕೃಷಿ ಇಲಾಖೆಯಲ್ಲೂ ನಡೆಯುತ್ತಿದೆ. ಅದೇ ರೀತಿ ನಾವು ವಿಶೇಷವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಜಲ ಮರುಪೂರಣ ಯೋಜನೆಗಳ ಅನುಷ್ಠಾನಕ್ಕೆ ಎಷ್ಟು ವೆಚ್ಚ ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಜಲ ಮರುಪೂರಣ ಮಾಡುವುದಕ್ಕೋಸ್ಕರವೇ ನಿಗದಿಯಾಗಿರುವಂತಹ ಕೆಲವು ಯೋಜನೆಗಳಲ್ಲಿ ತೆಗೆದುಕೊಂಡಿರುವಂತಹ ಅಮೌಂಟ್‌ನ್ನು ನಾವು ಕೊಟ್ಟಿದ್ದೇವೆ ಅಷ್ಟೆ. ಅದಲ್ಲದೆ, ನಾವು series of check dams ಎಂದು ಗದಗ್, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಕೋಲಾರ, ಚಿತ್ರದುರ್ಗ, ರಾಮನಗರ ಜಿಲ್ಲೆಗಳಲ್ಲೂ ತೆಗೆದುಕೊಂಡಿದ್ದೇವೆ. ಇದರ ಅಂಕಿಅಂಶಗಳು ಬೇಕಾಗುತ್ತದೆಯಲ್ಲವೆ? 237 ಚೆಕ್ ಡ್ಯಾಂಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ 146 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಅದೇ ರೀತಿಯಾಗಿ ಈ ಸಂಪ್ರದಾಯವನ್ನೇ ಮುಂದುವರೆಸಿಕೊಂಡು ಈಗ ಇತರೆ ಜಿಲ್ಲೆಗಳಲ್ಲೂ ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತಿದ್ದೇವೆ. ಇವತ್ತು ತುಮಕೂರು ಜಿಲ್ಲೆ ಮತ್ತು ಶಿರಾ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಮಳೆ ಬೀಳುತ್ತದೆ. ಇದು ನನಗೆ ಅನುಭವವಾಗಿರುವಂಥದ್ದು. ಅಲ್ಲಿ 1000-1200 ಅಡಿ ಆಳಕ್ಕೆ ಹೋದಾಗ ನೀರು ಸಿಗುತ್ತಿತ್ತು. ನಾವು ಅಲ್ಲಿ series of barrages ನ್ನು ಕಟ್ಟಿದ ಮೇಲೆ ಈಗ 150-200 ಅಡಿಗೆ ನೀರು ಸಿಗುತ್ತಿದೆ. ಜಲ ಮರುಪೂರಣ ಮಾಡುವಂಥದ್ದು, ಜೊತೆಗೆ over exploitation ನಿಯಂತ್ರಣ ಮಾಡಬೇಕು. ಅದಕ್ಕೆ ನಮ್ಮ ಹತ್ತಿರ ನಿಯಮಗಳಿವೆ, ಕಾನೂನುಗಳಿವೆ. ಆದರೆ ಕಾನೂನು ಜಾರಿ ಮಾಡುವುದಕ್ಕೆ ಕಷ್ಟ ಆಗಿದೆ. ಇವತ್ತು ಏನಾಗಿದೆ ಎಂದರೆ, ನಿರಂತರವಾಗಿ crop ಮೇಲೆ ನಮ್ಮ dependability ಏನಿದೆ ಅದು ಬೋರ್‌ವೆಲ್ ನೀರಿನ ಮೇಲೆ ಇದೆಯೇ ವಿನಃ ಅದನ್ನು ಬಿಟ್ಟರೆ ಬೆಳೆ ಇಲ್ಲದ ಹಾಗೆ ಆಗುತ್ತದೆ. ಈ ಪರಿಸ್ಥಿತಿ ಆಗಿದೆ. ಅಂತರ್ಜಲ ಕಡಿಮೆಯಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ತುಂಬಾ ಆಗಿದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯ ನೀರು ಸಿಗುವುದಕ್ಕೆ ಸಾಧ್ಯವಿಲ್ಲ. ನಾನು ನಾಲ್ಕೈದು ದಿನಗಳ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೇನೆ. ಇವತ್ತು 'World Water Day' ಆಗಿರುವುದರಿಂದ ಈ ಪ್ರಶ್ನೆ ಬಹಳ ಮುಖ್ಯವಾಗುತ್ತದೆ. ಬಂದಿರುವಂತಹ writings ಗಳೆಲ್ಲಾ ನಾನು ನೋಡಿದ್ದೇನೆ. ಇದಕ್ಕೆ ನಾವೆಲ್ಲರೂ ಕೂಡ ಗಮನಹರಿಸಲೇಬೇಕಾಗುತ್ತದೆ. ಯಾವುದೇ ರೀತಿಯಲ್ಲೂ ಕೂಡ ನಾವು exploitation ನಿಯಂತ್ರಣ ಮಾಡಬೇಕು. ಶುದ್ಧ ನೀರನ್ನು ಕುಡಿಯುವಂತಹ ಕೆಲಸ ಮಾಡಬೇಕು. ಶುದ್ಧ ನೀರು ಎಂದರೆ ಬಹುತೇಕ ಹಳ್ಳಿಗಳಲ್ಲಿ, ತುಮಕೂರು ಜಿಲ್ಲೆ, ವಿಜಯಪುರ ಜಿಲ್ಲೆಯನ್ನು ತೆಗೆದುಕೊಂಡರೆ ನಮಗೆ fluoride content, arsenic ಇರುವಂಥದ್ದೇ ಜಾಸ್ತಿ ಇದೆ. ಅದರಿಂದ ಹೊರ ಬರಬೇಕಾದರೆ ಈಗ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರಂತರವಾಗಿ ಪ್ರತಿ ಹಳ್ಳಿಗಳಲ್ಲೂ ಹಾಕುತ್ತಿದ್ದೇವೆ. ಇವೆಲ್ಲವೂ ಕೂಡ deplete ಆಗಿರುವುದರಿಂದ ಅಂದರೆ surface water ಕಡಿಮೆ ಆಗಿರುವುದರಿಂದ ಈ ಸಮಸ್ಯೆ ಆಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಗಮನ ಇದೆ. ಈ ಸಲ ಬಜೆಟ್‌ನಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಶೇಷವಾದ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ಬಾಂದಾರಗಳನ್ನು, ಚೆಕ್ ಡ್ಯಾಂ ಗಳನ್ನು ನಿರ್ಮಾಣ ಮಾಡುವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಎಸ್.ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾನು ಮಾತನಾಡುವುದಿಲ್ಲ. ಮಾನ್ಯ ಸಚಿವರು ಮಾಡಿದ್ದಾರೆ. ಆದರೆ ಇವತ್ತು ಪ್ರಾಕ್ಟಿಕಲ್ ಆಗಿ ಅದನ್ನು ಸರಿಯಾಗಿ ಮಾಡಿಲ್ಲ. ಹಣವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಅದು ಸದುಪಯೋಗವಾಗಬೇಕು, ಸರಿಯಾದ ರೀತಿಯಲ್ಲಿ ಅಧಿಕಾರಿಗಳಾಗಲಿ, ಯಾರಾದರೂ ಆಗಲಿ ಬಹಳಷ್ಟು ಕಾಳಜಿ ವಹಿಸಿ ಮಾಡಬೇಕೆನ್ನುವುದು ನನ್ನ ಸಲಹೆ, ಮತ್ತೆ ಏನು ಇಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಅದನ್ನು ನಾನು ಒಪ್ಪುತ್ತೇನೆ. ಅಷ್ಟೇ ಪ್ರಮಾಣದಲ್ಲಿ ಜನರಲ್ಲೂ ಕೂಡ ಜಾಗೃತಿ ಮೂಡಬೇಕಾಗುತ್ತದೆ. ಸರ್ಕಾರದ ಕಾರ್ಯಕ್ರಮಗಳು ಕೂಡ ಪ್ರಾಮಾಣಿಕವಾಗಿ ಅನುಷ್ಠಾನವಾಗಬೇಕು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ:1121

## ಉತ್ತರ ಲಗತ್ತಿಸಲಾಗಿದೆ

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೆ, ರಾಜ್ಯ ಹೆದ್ದಾರಿಯ ರಸ್ತೆ ಬದಿಗಳಲ್ಲಿ ಮರಗಳನ್ನು ನೆಟ್ಟಿರುವ ಬಗ್ಗೆ ಮತ್ತು ಮರಗಳು ಇರುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಈಗಾಗಲೇ ಗಿಡ ಮರಗಳನ್ನು ನೆಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇವತ್ತು ಇಡೀ ರಾಜ್ಯದಲ್ಲಿರುವಂತಹ ರಾಜ್ಯ ಹೆದ್ದಾರಿ ಇರಬಹುದು ಮತ್ತು ರಾಷ್ಟ್ರೀಯ ಹೆದ್ದಾರಿಗಳಿರಬಹುದು, ಎಲ್ಲಾ ರಸ್ತೆಗಳು ಅಗಲೀಕರಣ ಆಗಿ, ಆಧುನೀಕರಣ ಆಗುವಂತಹ ಸಂದರ್ಭದಲ್ಲಿ ರಸ್ತೆ ಬದಿಯಲ್ಲಿ ಒಂದೇ ಒಂದು ಮರ ಇಲ್ಲ. ಅರಣ್ಯ ಇಲಾಖೆಯವರು ಎಲ್ಲಾದರೂ ಮರಗಳನ್ನು ನೆಟ್ಟಿದ್ದಾರೆ ಎಂದು ಇದ್ದರೆ ಅದು ಲೆಕ್ಕದಲ್ಲಿ ಮಾತ್ರ. ನಾನು ಈ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವುದಕ್ಕಿಂತ ಮುಂಚೆ ಕೇಳಿದ್ದೆ. ಆದರೆ ಇವತ್ತು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಅಂಶವನ್ನು ಸೇರಿಸಿದ್ದಾರೆ. ಅದು ಬಹಳ ಸ್ವಾಗತಾರ್ಹ. ಇವತ್ತು ರಸ್ತೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸುವಂತಹ ಸಂದರ್ಭದಲ್ಲಿ ಶೇಕಡ ಒಂದರಷ್ಟು ಗಿಡ ಮರಗಳನ್ನು ನೆಡುವುದಕೋಸ್ಕರವೇ ಮೀಸಲಾಗಿಟ್ಟಿರುತ್ತೇವೆಂದು ಹೇಳಿದ್ದಾರೆ. ಇವತ್ತು ಯಾವ ರಸ್ತೆಗಳಲ್ಲೂ ಮರ ಇಲ್ಲದಿರುವುದರಿಂದ ರಣಬಿಸಿಲು ಜಾಸ್ತಿಯಾಗಿದೆ. ಈ ಸಂದರ್ಭದಲ್ಲಿ ವಾಹನಗಳು, ಜನ ನಿಲ್ಲುವುದಕ್ಕೆ, ಪ್ರಾಣಿ ಪಕ್ಷಿಗಳಿಗೂ ನೆರಳು ಇಲ್ಲದಿರುವಂತಹ ಪರಿಸ್ಥಿತಿ ಆಗಿದೆ. ಇವತ್ತು ಬಜೆಟ್‌ನಲ್ಲಿ ಏನು ತೆಗೆದುಕೊಂಡು ಬಂದಿದ್ದಾರೆ ಅದನ್ನು ಕಡ್ಡಾಯವಾಗಿ ಮಾಡುವಂತಹ ಕೆಲಸವನ್ನು ಮಾಡಬೇಕು. ಎರಡನೆ ಪ್ರಶ್ನೆ, ಶ್ರೀಗಂಧದ ಮರಗಳನ್ನು ಎಷ್ಟು ನೆಡಲಾಗಿದೆ ಎಂದು ಕೇಳಿದ್ದೆ. ಈಗಾಗಲೇ ನನಗೆ ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ. ಸುಮಾರು 1374 ಹೆಕ್ಟೇರ್ ಪ್ರದೇಶದಲ್ಲಿ ಶ್ರೀಗಂಧದ ಸಸಿಗಳನ್ನು ನೆಡಲಾಗಿದೆ ಎಂದು ಹೇಳಿದ್ದಾರೆ. ಇವತ್ತು ನೀಲಗಿರಿ ಮತ್ತು ಅಕೇಶಿಯಾ ಸಸಿಗಳನ್ನು ನೆಡಬಾರದು ಎಂದು ನಿರ್ಬಂಧ ಮಾಡಿದ್ದಾರೆ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಎಂದು ಮರಗಳನ್ನು ನೆಡುವುದಕ್ಕೆ ಒಂದು ಸಂಸ್ಥೆ ಇದೆ. ಅಕೇಶಿಯಾ ಮತ್ತು ನೀಲಗಿರಿ ಸಸಿಗಳನ್ನು ನೆಡುವುದೇ ಅವರ ಮುಖ್ಯ ಉದ್ದೇಶ ಆಗಿತ್ತು. ಇವತ್ತು ಅವುಗಳನ್ನು ನೆಡದೇ ಇರುವುದರಿಂದ ಆ ಸಂಸ್ಥೆಯ ಮೂಲಕವೂ ಶ್ರೀಗಂಧದ ಸಸಿಗಳನ್ನು ನೆಡಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದು ನನ್ನ ಪ್ರಶ್ನೆ. ನಮ್ಮ ಮಲೆನಾಡಿನಲ್ಲಿ 4 ಎಕರೆ, 5 ಎಕರೆ, 10 ಎಕರೆ ಇರುವ ಕಡೆ ನೀಲಗಿರಿ ಮರ ಮತ್ತು ಅಕೇಶಿಯಾ ಮರಗಳನ್ನು ಬೆಳೆದು ಮಾರಾಟ ಮಾಡಿ ರೈತರು ಅದರ ಲಾಭವನ್ನು ಪಡೆಯುತ್ತಿದ್ದರು. ಈಗ ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಯದಿರುವುದರಿಂದ ಶ್ರೀಗಂಧದ ಮರಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಸಿಗಳನ್ನು ಮಾಡಿ ಸರ್ಕಾರ ರೈತರಿಗೆ ಕೊಡುವ ಕೆಲಸ ಮಾಡುತ್ತಿದೆಯೇ ಎಂದು ಪ್ರಶ್ನೆ ಕೇಳುತ್ತಿದ್ದೇನೆ. ಇವತ್ತು F.O.C. ಮಾಡಿದಂತಹ ಅಂದರೆ Forest Offence Case ನಲ್ಲಿ 2012 ರಿಂದ 2017 ರವರೆಗೆ ಎಷ್ಟು ವಾಹನಗಳನ್ನು ಸೀಜ್ ಮಾಡಿದ್ದೀರಿ ಎಂದು ಕೇಳಿದರೆ, ಇಡೀ ರಾಜ್ಯದಲ್ಲಿ ಸುಮಾರು 1800 ವಾಹನಗಳನ್ನು ಸೀಜ್ ಮಾಡಿದ್ದಾರೆ. ಆದರೆ, 2012 ರಿಂದ ಅಲ್ಲ, ಅದರ ಹಿಂದಿನಿಂದಲೂ ಸೀಜ್ ಮಾಡಿದಂತಹ ವಾಹನಗಳು ಅಲ್ಲೇ ತುಕ್ಕು ಹಿಡಿದು ಅವು ಪೂರ್ತಿ ಹಾಳಾಗಿ ಹೋಗುತ್ತಿವೆ. ಆದ್ದರಿಂದ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಈ ವಾಹನಗಳನ್ನು ಏನು ಸೀಜ್ ಮಾಡುತ್ತಾರೆ ಅದನ್ನು ಮೂರು ತಿಂಗಳಲ್ಲೇ ಹರಾಜು ಮಾಡಿ ಮಾರಾಟ ಮಾಡಬೇಕು. ಮಾರಾಟ ಮಾಡಿದ ಹಣವನ್ನು deposit ಮಾಡಿ ಆ ಕೇಸ್ ತೀರ್ಮಾನವಾದ ಮೇಲೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತಹ ಕೆಲಸ ಮಾಡದಿದ್ದರೆ ರಾಷ್ಟ್ರೀಯ ಸಂಪತ್ತನ್ನು ನಾವು ಹಾಳು ಮಾಡಿದ ರೀತಿ ಆಗುತ್ತದೆ. ಆದ್ದರಿಂದ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಹರಾಜನ್ನು ತಕ್ಷಣ ಮೂರು ತಿಂಗಳಲ್ಲೇ ಮಾಡಬೇಕು. ಅದರಿಂದ ಹಣ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿ ಒಂದು ಪರ್ಸೆಂಟ್ ಹಣ ಏನು ಇಟ್ಟಿದ್ದಾರೆ ಆ ಹಣವನ್ನು ಉಪಯೋಗಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಸನ್ನ ಕುಮಾರ್‌ರವರು ಬಹಳ ಸುದೀರ್ಘವಾಗಿ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ನಿಜ, ಇವತ್ತು ರಸ್ತೆಗಳ ಬದಿಗಳಲ್ಲಿ ಮರಗಳನ್ನು ನೆಡಿಸುವಂತಹ ಕಾರ್ಯಕ್ರಮ ಇದೆ. ರಸ್ತೆಗಳನ್ನು ಅಗಲ ಮಾಡುವಂತಹ ಸಂದರ್ಭದಲ್ಲಿ ಮರಗಳು ಹೋಗುತ್ತವೆ. State Highway developmentಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ವರ್ಷ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಒಂದೂವರೆ ಸಾವಿರ ಕಿಲೋ ಮೀಟರ್‌ಗೂ ಹೆಚ್ಚು ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಅದನ್ನು ಅಗಲ ಮಾಡುವ ಕೆಲಸ ಮಾಡಿದಾಗ ಮರಗಳಿಗೆ ಹಾನಿ ಆಗಿದೆ. ಆದರೆ ಈ ವರ್ಷ 3805 ಕಿಲೋಮೀಟರ್‌ನಷ್ಟು ಪ್ಲಾಂಟಿಂಗ್‌ನ್ನು ಮಾಡಿದ್ದೇವೆ. ಅದರ ಜೊತೆಗೆ ಮರಗಳು ಎಷ್ಟು ಎಂದರೆ 7.6 ಲಕ್ಷ ಉದ್ದದ ಮರಗಳನ್ನು, ಅದರಲ್ಲೂ ವಿಶೇಷವಾಗಿ ನೇರಳೆ, ಹಲಸು, ಬೇವು, ಗೋಣಿ, ತಪಸಿ, ಹುಣಸೆ, ಈ ರೀತಿಯಾದ ಮರಗಳನ್ನು ಹಾಕುವ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಪ್ರಸನ್ನ ಕುಮಾರ್‌ರವರು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳು ಈ ಸಲದ ಬಜೆಟ್‌ನಲ್ಲೂ ಘೋಷಣೆ ಮಾಡಿದ್ದಾರೆ. ಅದಕ್ಕೆ ಹಣವನ್ನು ನಿಗದಿ ಮಾಡಿ ಮರಗಳನ್ನು ನೆಡುವುದಕೋಸ್ಕರವೇ ಮಾಡಿದ್ದಾರೆ. ಅದು ಬಜೆಟ್‌ನಲ್ಲಿ ಬಂದಿರುವುದರಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತತ್ವಶಃ ಅನುಷ್ಠಾನವಾಗುತ್ತದೆ. ಆ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ. ಶ್ರೀಗಂಧದ ಸಸಿಗಳನ್ನು ಬೆಳೆಸಬೇಕು ಎನ್ನುವುದರ ಬಗ್ಗೆ ಅಂಕಿಅಂಶವನ್ನು ಈಗಾಗಲೇ ಅವರೇ ಓದಿ ಹೇಳಿದ್ದಾರೆ. ಶ್ರೀಗಂಧದ ಮರಗಳನ್ನು ನಾವು ಸರ್ಕಾರದ ವಲಯದಲ್ಲೂ ಬೆಳೆಸುತ್ತಿದ್ದೇವೆ. ಈಗಾಗಲೇ ಸರ್ಕಾರಿ ವಲಯದಲ್ಲಿ 1.5 ಲಕ್ಷ ಸಸಿಗಳನ್ನು 737 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವಂತಹ ಕೆಲಸ ಆಗಿದೆ.

(ಮುಂದು)

(352) 22.03.2017/ 12.30/ ಕೆಹೆಚ್/ಎಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಬಿ.ಜಯಚಂದ್ರ (ಮುಂದು):-** ಮೂರು ಲಕ್ಷ ಸಸಿಗಳನ್ನು ಖಾಸಗಿ ವಲಯದಲ್ಲಿ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಒಂದೇ ವರ್ಷದಲ್ಲಿ 700 ಹೆಕ್ಟೇರ್‌ಗಳಲ್ಲಿ planting ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಅದಕ್ಕೆ ಹಣದ ಮೂಲವೂ ಕೂಡ ಇದೆ. ಇದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗ ಆರು ಲಕ್ಷ ಸಸಿಗಳನ್ನು ನಾವು ಡಿಸ್ಟ್ರಿಬ್ಯೂಷನ್‌ಗೆ ಎಂದು ಇಟ್ಟುಕೊಂಡಿದ್ದೇವೆ. ಅದಕ್ಕೆ 20.00 ಕೋಟಿ ರೂಪಾಯಿಗಳ ಹಣವನ್ನು ವೆಚ್ಚ ಮಾಡುತ್ತಿದ್ದೇವೆ. ಈಗಾಗಲೇ ಮರಮುಟ್ಟುಗಳನ್ನು ವಶಪಡಿಸಿಕೊಂಡಿರುವಂಥದ್ದರ ಬಗ್ಗೆ . . .

**ಸಭಾಪತಿಯವರು:-** ವಶಪಡಿಸಿಕೊಂಡಿರುವ ವಾಹನಗಳನ್ನು ಹರಾಜು ಹಾಕುವ ಬಗ್ಗೆ ಹೇಳಿ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರ, ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಇಲ್ಲಿಯವರೆಗೆ 1864 ವಾಹನಗಳನ್ನು . . . .

**ಸಭಾಪತಿಯವರು:-** ಬೇಗ ಬೇಗ dispose ಮಾಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೊಟ್ಟಿರುವಂತಹ ಪ್ರಶ್ನೆ ಸರಿಯಾಗಿದೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿವಾದ ಕೋರ್ಟ್‌ಗೆ ಹೋಗಿದ್ದಾಗ ಕೋರ್ಟ್‌ನಲ್ಲಿ ತಡೆಯಾಜ್ಞೆಯಿದ್ದಂತಹ ಸಂದರ್ಭದಲ್ಲಿ ಮಾತ್ರ ತಡವಾಗುತ್ತದೆ. ಬೇರೆ ಸಂದರ್ಭದಲ್ಲಿ ತಡವಾಗುವುದಿಲ್ಲ. ಅವರು ಸಲಹೆ ಕೊಟ್ಟಿರುವಂಥದ್ದು ಸೂಕ್ತವಾಗಿದೆ. ವಶಪಡಿಸಿಕೊಂಡಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಾಹನಗಳಲ್ಲಿ ಯಾವುದು ಹಾಳಾಗಾದೆ ಇದೆಯೋ, ಅಂತಹವುಗಳನ್ನು ತಕ್ಷಣ ಹರಾಜು ಹಾಕಿ ಆ ಹಣವನ್ನು deposit ಮಾಡುವುದಕ್ಕೆ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 1146**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದ ಪ್ರಶ್ನೆ. ಇವತ್ತಿನ ದಿವಸ ನೀರಿನ ಸಮಸ್ಯೆಯೇನಿದೆ ಅದಕ್ಕೆ ಕಾರಣ ಸಹ ಇದೆ. ಅಕೇಶಿಯಾ ಮತ್ತು ನೀಲಗಿರಿ ಈ ಎರಡು ಮರಗಳನ್ನು ಹಾಕುವ ಮುಖಾಂತರ ಮಾನ್ಯ ಸಚಿವರು ಒಂದು Gazette Notification ಕೊಟ್ಟಿದ್ದೀರಿ. ಅದರಲ್ಲಿ ಒಬ್ಬರು ಪ್ರಸ್ತಾಪ ಮಾಡುತ್ತಾರೆ. "The Study indicated that 20 years of continuous cultivation of Eucalyptus in private and public lands deepened the freshly dug bore wells up to 260 meters, as compared to mean depth of bore wells (177 meters)…" ಇದನ್ನು ಹಾಕಿದ ಮೇಲೆ 100 ಬೇರೆ ಬೆಳೆಗಳನ್ನು ತೆಗೆದುಕೊಂಡರೆ, ಅದು 250 ರಷ್ಟು ನೀರನ್ನು ತೆಗೆದುಕೊಳ್ಳುತ್ತಿದೆ. ಇಲ್ಲಿ ಅನೇಕ ಬಾರಿ ನಾನು ಪ್ರಸ್ತಾಪ ಮಾಡಿದ್ದೇನೆ. ನಾವು ಯಾವುದೋ ಟಿಂಬರ್ ಲಾಬಿಗೆ ಸಿಕ್ಕಿಹಾಕಿಕೊಂಡು ಅಕೇಶಿಯಾ ಬೆಳೆಯುವುದಕ್ಕೆ ಪ್ರಾರಂಭ ಮಾಡೋಣ. ಅಕೇಶಿಯಾ ಯಾವಾಗ ಬೆಳೆಯುತ್ತೀರಾ? ಇದರಿಂದ ಕಾಡಿನಲ್ಲಿರುವಂತಹ ಪ್ರಾಣಿಗಳಿಗೆ ಮೇವು ಸಿಗುವುದಿಲ್ಲ. ಹೀಗಾಗಿ ಕಾಡಿನಲ್ಲಿರುವಂತಹ ಆನೆಗಳು, ಕೋಣಗಳು ನಗರ ಪ್ರದೇಶಗಳಿಗೆ ನುಗ್ಗುತ್ತಿವೆ. ಹೀಗಾಗಿ ಅಕೇಶಿಯಾ ಮತ್ತು ನೀಲಿಗಿರಿ ಮರಗಳನ್ನು ಬ್ಯಾನ್ ಮಾಡಿದ್ದೀರೆಂದು ತಮ್ಮ ಉತ್ತರದಲ್ಲಿ ನೋಡಿದ್ದೇನೆ. ಆದರೆ ಕೆಲವೇ ಜಿಲ್ಲೆಗಳಲ್ಲಿ ಬ್ಯಾನ್ ಮಾಡಿದ್ದೀರಿ. ಉದಾಹರಣೆಗೆ, ಇವತ್ತು ಕೊಡಗಿನಲ್ಲಿರುವ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ. ಇಡೀ ತಮಿಳುನಾಡು ಮತ್ತು ಕರ್ನಾಟಕಕ್ಕೆ ನೀರು ಕೊಡುವಂತಹ ಕೊಡಗಿನಲ್ಲಿರುವ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ. ಕಾರಣ ಅಕೇಶಿಯಾ, eucalyptus ಮರಗಳು. ಇದನ್ನು ನೀವು ಬ್ಯಾನ್ ಮಾಡದೇ ಹೋದರೆ, ಆಡು ಮುಟ್ಟದ ಸೊಪ್ಪಿಲ್ಲ ಎಂಬ ಒಂದು ಗಾದೆಯಿದೆ. ಆ ಸೊಪ್ಪನ್ನು ಆಡು ಕೂಡ ತಿನ್ನುವುದಿಲ್ಲ. ಮೇಕೆಯು ಸಹ ತಿನ್ನದೆ ಇರುವಂತಹ ಗಿಡ, ಮರಗಳನ್ನು ಬೆಳೆಸಿ, ನಾವು ಕಾಡುಗಳನ್ನು ಬೆಳೆಸುತ್ತಿದ್ದೇವೆಂದು ಹೇಳಿದರೆ ಅದರಲ್ಲಿ ಸೊಬಗು ಕಾಣಿಸುತ್ತಿಲ್ಲ. ನನ್ನ ಪ್ರಾರ್ಥನೆಯೇನೆಂದರೆ, ಮಲೆನಾಡು ಅರಣ್ಯ ಪ್ರದೇಶದಲ್ಲಿ ಅಕೇಶಿಯಾ ಮರಗಳನ್ನು ನೆಡಲು ಮುಂದಾಗಿದ್ದೀರೆಂಬ ಸುದ್ದಿ ನಮಗೆ ಬಂದಿದೆ. ಇದು ನಿಜವೇ? ಮಲೆನಾಡಿನಲ್ಲಿ ಕೂಡ ಇದು ಆಗಬೇಕೆಂಬುದು ಇದೆ. ಇದು ನಿಜವೇ? ನೀಲಗಿರಿಗಿಂತ ಅಕೇಶಿಯಾ ಮರ ಜಾಸ್ತಿ ಪ್ರಮಾಣದಲ್ಲಿ ಭೂಮಿಯನ್ನು ಬರಡು ಮಾಡುತ್ತದೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧ್ಯಯನದಿಂದ ವಿಜ್ಞಾನಿಗಳು ತಿಳಿಸಿರುವ ಜಂಟಿ ಪ್ರದೇಶಗಳಲ್ಲಿ ಇದನ್ನು ಬೆಳೆಯುವುದಕ್ಕೆ ಏಕೆ ಅವಕಾಶವನ್ನು ಕೊಡುತ್ತೀರಿ? ಈ ಎರಡು ಮರಗಳನ್ನು ನಿಲ್ಲಿಸುವುದು ಮುಖ್ಯವಾಗಿದೆ. ನಮಗೆ ನೀರು ಸಿಗದೇ ಇರುವಾಗ ಬಾವಿಯನ್ನು ತೆಗೆಯಬೇಡಿ ಎಂದು ಹೇಳುತ್ತೀರಿ. ಬಾವಿ ತೆಗೆಯಬೇಡಿ ಎಂದರೆ ನೀರು ಎಲ್ಲಿಂದ ತರುವುದು. ನೀರನ್ನು ವ್ಯಾನ್‌ಗಳಿಂದ ಸರಬರಾಜು ಮಾಡುತ್ತೇವೆಂದು ಹೇಳುತ್ತೀರಿ. ವ್ಯಾನ್‌ಗಳಲ್ಲಿ ಎಲ್ಲಿದೆ ನೀರು. ವ್ಯಾನ್‌ಗಳಲ್ಲಿ ಯಾರು ನೀರು ಕೊಡುತ್ತಿದ್ದಾರೆ. I am experiencing it. ನೀರನ್ನು ಹೊಡೆಯಿರಿ ಎಂದು ಹೇಳಿದರೆ, "ನೀರು ಇಲ್ಲ ಹೊಡೆಯುವುದಕ್ಕೆ ಆಗುವುದಿಲ್ಲ" ಎಂದು ಹೇಳುತ್ತಾರೆ. 400 ರೂಪಾಯಿಗೆ 4000 ರೂಪಾಯಿಗಳನ್ನು ಕೊಡುತ್ತೇನೆ ಹೊಡೆಯಪ್ಪಾ, ಗಿಡಗಳು ಒಣಗಿ ಹೋಗುತ್ತವೆಂದು ಹೇಳಿದರೆ ಹೊಡೆಯಲ್ಲವೆಂದು ಹೇಳುತ್ತಾರೆ.. ಈ ಪರಿಸ್ಥಿತಿಗೆ ನಾವು, ನೀವು ಮತ್ತು ಸರ್ಕಾರವು ಕಾರಣವಲ್ಲ. ಮಳೆ ಬಂದಿಲ್ಲವೆಂದು ಒಪ್ಪಿಕೊಳ್ಳೋಣ. ಒಂದು ಸಂದರ್ಭದಲ್ಲಿ ಮಳೆ ನೀರು ಬಂದಿರುವುದನ್ನು, ಯಾವ ಬೋರ್‌ವೆಲ್‌ಗಳು ಕೆಟ್ಟು ಹೋಗಿದೆ ಮತ್ತು ಯಾವ ಬೋರ್‌ವೆಲ್‌ಗಳಲ್ಲಿ ನೀರಿಲ್ಲ, ಆ ಬೋರ್‌ವೆಲ್‌ಗಳಲ್ಲಿಯೇ charge ಮಾಡಬಹುದು. ಮಳೆ ಬಂದಂತಹ ಸಂದರ್ಭದಲ್ಲಿ ಪಕ್ಕದಲ್ಲಿ ನೀರನ್ನು ಸಣ್ಣ ಸಣ್ಣ ಮೋಟರ್‌ಗಳನ್ನು ಹಾಕಿಕೊಂಡು ಬೋರ್‌ವೆಲ್‌ಗೆ ಪಂಪ್ ಮಾಡಿದರೆ ನೀರನ್ನು ತುಂಬಿಸಬಹುದು ಎಂಬ ಅಂಶವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಬ್ಯಾನ್ ಮಾಡಿ ಎಂದು ಕೇಳುತ್ತಿದ್ದಾರೆ.

**ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರ, ಸಣ್ಣ ನೀರಾವರಿ ಸಚಿವರು) (ಅರಣ್ಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈಗಾಗಲೇ ಸರ್ಕಾರಿ ಆದೇಶಗಳು ಯಾವಾಗ ಆಗಿದೆ ಎಂಬ ಬಗ್ಗೆ ನಾನು ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ. ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಆಗಿರುವಂತಹ ಅನುಭವದ ಹಿನ್ನೆಲೆಯಲ್ಲಿ ಈಗಾಗಲೇ ಸವಿಸ್ತಾರವಾಗಿ ಚರ್ಚೆಯಾಗಿ, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಸಂಪೂರ್ಣವಾಗಿ ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಇವತ್ತು ಬ್ಯಾನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. Karnataka Forest Development Corporation ಅರಣ್ಯ ಪ್ರದೇಶಗಳನ್ನು ಬೆಳೆಸುವುದಕ್ಕೋಸ್ಕರ ಇತ್ತು. ಈ ವಿಚಾರವು ಪ್ರಸ್ತಾಪವಾದಂತಹ ಸಂದರ್ಭದಲ್ಲಿ ಇದನ್ನು ನಿಲ್ಲಿಸಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. ಇನ್ನು ಯಾವತ್ತು ಕೂಡ ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಬೆಳೆಸಬಾರದು. ಹಿಂದೆ ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಾಬಿಯೋ, ಏನೋ ಈ ರೀತಿಯೆಲ್ಲ ಆಗಿಹೋಗಿದೆ. ಇನ್ನು ಮುಂದೆ ಅದನ್ನು ಬೆಳೆಸತಕ್ಕಂಥದ್ದು ಇಲ್ಲ. ಈಗ ನಮಗೆ ಅದರ ಅರಿವಾಗಿದೆ. ಕೋಲಾರದಲ್ಲಿ 1800 ಅಡಿ ಕೊರೆದರೂ ಕೂಡ ನೀರು ಸಿಗದೇ ಇರುವಂತಹ ಪರಿಸ್ಥಿತಿಯಿದೆ. ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇದೇ ರೀತಿ ಪರಿಸ್ಥಿತಿಯಾಗಿರುವ ಹಿನ್ನೆಲೆಯಲ್ಲಿ ಇದು ನಮಗೆ ತಕ್ಕ ಪಾಠವಾಗಿದೆ. ಈ ವರ್ಷದ ಅನುಭವದ ಪಾಠ ಕೂಡ ಆಗಿದೆ. ಇನ್ನು ಮುಂದೆ ಹೆಚ್ಚು ನೀರನ್ನು ಸೆಳೆಯುವಂತಹ ಗಿಡಗಳು ಎಲ್ಲಿವೆ, ಅಲ್ಲಿ ಈ ರೀತಿ ಆಗಬೇಕು. ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಸಂಪೂರ್ಣವಾಗಿ ಬ್ಯಾನ್ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1099**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಪ್ರಾಣೇಶ್‌ರವರದ್ದು. ಈ ಪ್ರಶ್ನೆ ವರ್ಗಾವಣೆಯಾಗಿದೆ. ಯಾವ ಇಲಾಖೆಗೆ ವರ್ಗಾವಣೆಯಾಗಿದೆ ಎಂಬುದನ್ನು ನೋಡಿ, ಇನ್ನು ಸದನವು ನಾಳೆ, ನಾಡಿದ್ದು ಮತ್ತು ಸೋಮವಾರ, ಮಂಗಳವಾರ ದಿನಗಳು ನಡೆಯುತ್ತದೆ. ಇನ್ನು 4 ದಿನಗಳಲ್ಲಿ ಈ ಪ್ರಶ್ನೆ ಬರುವ ಹಾಗೆ ವ್ಯವಸ್ಥೆ ಮಾಡಿಸುತ್ತೇನೆ.

**ತಡೆ ಹಿಡಿಯಲಾದ ಪ್ರಶ್ನೆಗಳು**

**ಚುಕ್ಕೆ ಪ್ರಶ್ನೆ ಸಂಖ್ಯೆ: 812**

**ಸಭಾಪತಿಯವರು:-** ಸದರಿ ಪ್ರಶ್ನೆಯನ್ನು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಪರವಾಗಿ ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಕೇಳುತ್ತಾರೆಂದು ತಿಳಿಸಿರುತ್ತಾರೆ. ಆದರೆ ಇದಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರವನ್ನು ನೀಡಬೇಕಾಗಿದ್ದು, ಅವರು ಅಂಗನವಾಡಿ ಕಾರ್ಯಕರ್ತರ ಪುರಸ್ಕಾರ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗಿದ್ದಾರೆ. ಸದರಿ ಪ್ರಶ್ನೆಯನ್ನು ಮತ್ತೊಂದು ಸಾರಿ ತಡೆ ಹಿಡಿದು ನಾಳೆ ಅಥವಾ ನಾಡಿದ್ದು ಈ ಪ್ರಶ್ನೆಯನ್ನು relist ಮಾಡಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ ಜಿ.ಪರಮೇಶ್ವರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ: 22ನೇ ಮಾರ್ಚ್ 2017 ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 156 ಪ್ರಶ್ನೆಗಳ ಪೈಕಿ 102 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ:-

(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ದೇವರ ದಾಸಿಮಯ್ಯ ಜಯಂತಿಗಾಗಿ ಮೀಸಲಿರಿಸಿರುವ ಹಣವನ್ನು ಬರಗಾಲ ಪ್ರಯುಕ್ತ ಗೋಶಾಲೆಗಳಿಗೆ ಉಪಯೋಗಿಸಿಕೊಳ್ಳುವ ಬಗ್ಗೆ.**

***

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು. ಆದ್ಯ ವಚನಕಾರ, ನೇಕಾರ ಸಂತ ಶ್ರೀ ದೇವರ ದಾಸಿಮಯ್ಯನವರ ಸರ್ಕಾರಿ ಜಯಂತಿಯನ್ನು ಕಳೆದ 2 ವರ್ಷದಿಂದ ಸರ್ಕಾರ ವಿಜೃಂಭಣೆಯಿಂದ ಆಚರಿಸುತ್ತಿದೆ. ಅದೇ ರೀತಿ ದಿನಾಂಕ: 01-04-2017 ರಂದು ರಾಜ್ಯಾದ್ಯಂತ ನಡೆಸಲು ಸರ್ಕಾರ ತೀರ್ಮಾನ ಮಾಡಿ, ಈ ಬಾಬ್ತು 62.5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಸರಿಯಷ್ಟೆ.

ಈ ವರ್ಷ ರಾಜ್ಯದ ಎಲ್ಲೆಡೆ ಭೀಕರ ಬರಗಾಲ ಬಂದಿದ್ದು, ಎಲ್ಲಾ ತಾಲ್ಲೂಕುಗಳಲ್ಲಿ ಕೂಡ ಗೋವುಗಳು ಮೇವಿನ ಕೊರತೆಯಿಂದ ಕಂಗಾಲಾಗಿರುವುದು ಹಾಗೂ ಸರ್ಕಾರ ಗೋಶಾಲೆ ತೆರೆದಿರುವುದು ಕಂಡು ಬಂದಿದೆ. ಆದ್ದರಿಂದ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ ಈ ಬಾರಿ ನಡೆಯಬೇಕಾಗಿರುವ ಶ್ರೀ ದೇವರ ದಾಸಿಮಯ್ಯ ಜಯಂತಿಯನ್ನು ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲೆಗಳಲ್ಲಿ ಸಾಂಕೇತಿಕವಾಗಿ ಆಚರಿಸಿ ಇದಕ್ಕೆ ನಿಗದಿಪಡಿಸಿರುವ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಆಚರಿಸಲು ಇಟ್ಟಿರುವ 62.5 ಲಕ್ಷ ರೂಪಾಯಿಗಳನ್ನು ಆಯಾಯ ಕ್ಷೇತ್ರದ ಗೋಶಾಲೆಗಳಿಗೆ ಮೇವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರೀದಿಸಲು ನೀಡಿ ಜಯಂತಿಯನ್ನು ನೇಕಾರ ಸಮುದಾಯಗಳಿಂದ ಸ್ವಂತ ಖರ್ಚಿನಲ್ಲಿ ಸಾಂಕೇತಿಕವಾಗಿ ಆಚರಿಸಲು ತೀರ್ಮಾನಿಸಿದ್ದೇವೆ.

ಆದ್ದರಿಂದ ಸರ್ಕಾರ ನಮ್ಮ ಸಮುದಾಯದ ತೀರ್ಮಾನಕ್ಕೆ ಒಪ್ಪಿ ನಮ್ಮ ಮನವಿಯನ್ನು ಸ್ವೀಕರಿಸಿ ನೀಡಿರುವ 62.5 ಲಕ್ಷ ರೂಪಾಯಿಗಳನ್ನು ಗೋಶಾಲೆಗೆ ತೆಗೆದುಕೊಳ್ಳಬೇಕೆಂದು ಮತ್ತು ರಾಜ್ಯದ ನೇಕಾರರ ಪರವಾಗಿ ಸದರಿ ವಿಷಯವನ್ನು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

(ಮುಂದು)

353/22-03/2017/12-40/bkp-rn

**ಆ) ವಿಷಯ:- ಬಾಗಲಕೋಟೆ ಜಿಲ್ಲೆ ತೇರದಾಳ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.**

- -

**ಶ್ರೀ ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತೇರದಾಳ ನಗರವನ್ನು ಹೊಸ ತಾಲ್ಲೂಕುಗಳ ಪಟ್ಟಿಗೆ ಸೇರಿಸುವಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ದೃಷ್ಟಿಯಿಂದ ಶೂನ್ಯವೇಳೆಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಾಗಲಕೋಟೆ ಜಿಲ್ಲೆ, ರಬಕವಿ ಬನಹಟ್ಟಿಯನ್ನು ಹೊಸದಾಗಿ ಘೋಷಣೆಯಾದ 49 ತಾಲ್ಲೂಕುಗಳ ಪಟ್ಟಿಗೆ ಸೇರಿಸಿರುವಂತೆ ತೇರದಾಳ ನಗರವನ್ನು ಹೊಸ ತಾಲ್ಲೂಕುಗಳ ಪಟ್ಟಿಗೆ ಸೇರಿಸಬೇಕೆಂದು ತೇರದಾಳ ತಾಲ್ಲೂಕು ಹೋರಾಟ ಸಮಿತಿಯವರ ಹಾಗೂ ತೇರದಾಳ ನಗರದ ಜನರ ಬಹುದಿನಗಳ ಬೇಡಿಕೆಯಾಗಿದ್ದು, ಇದು ಅಂದಾಜು 50 ವರ್ಷಗಳಿಂದ ಈ ಬೇಡಿಕೆ ಇದೆ. ಬಹುತೇಕ ವರದಿಗಳಲ್ಲಿ ತೇರದಾಳವನ್ನು ಹೊಸ ತಾಲ್ಲೂಕು ಮಾಡಬೇಕೆಂದು ಶಿಫಾರಸ್ಸು ಇದೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಳ್ಳುತ್ತೇನೆ. 50 ವರ್ಷಗಳಿಂದ ತೇರದಾಳ ನಗರವನ್ನು ಹೊಸ ತಾಲ್ಲೂಕು ಮಾಡಬೇಕೆನ್ನುವ ಈ ಒಂದು ಹೋರಾಟ ಏನಿದೆ, ಅದಕ್ಕೆ ಅನುಗುಣವಾಗಿ ತೇರದಾಳ ನಗರವನ್ನು 50ನೇ ಹೊಸ ತಾಲ್ಲೂಕಾಗಿ ಪರಿಗಣಿಸಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಾಗಲಕೋಟೆ ಜಿಲ್ಲೆ, ಸಾವಳಗಿ ಮತ್ತು ತೇರದಾಳ ಗ್ರಾಮಗಳನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡುವ ಸಂಬಂಧ 1948 ರಿಂದಲೂ ಹಲವಾರು ಸಂಘ-ಸಂಸ್ಥೆಗಳು ಹೋರಾಟಗಳನ್ನು ಮಾಡುತ್ತಿದ್ದು, ಹುಂಡೇಕರ್ ಮತ್ತು ಗದ್ದಿಗೌಡರ ಸಮಿತಿಗಳ ವರದಿಯಲ್ಲಿ ಸದರಿ ಗ್ರಾಮಗಳನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಲು ಶಿಫಾರಸ್ಸು ಮಾಡಲಾಗಿದ್ದರೂ 2017-18ನೇ ಆಯವ್ಯಯದಲ್ಲಿ ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಣೆ ಮಾಡಿದ ಪಟ್ಟಿಯಲ್ಲಿ ಈ ಎರಡೂ ಗ್ರಾಮಗಳ ಹೆಸರನ್ನು ಸೇರ್ಪಡೆಗೊಳಿಸಿರುವುದಿಲ್ಲ.

ಆದರೆ, ಜಮಖಂಡಿಯ ಪಟವರ್ಧನ ರಾಜನು ಸಾವಳಗಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಜಮಖಂಡಿ ಸಂಸ್ಥಾನದ ವಿಲೀನ ಸಂದರ್ಭದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು ಹಾಗೂ ಭಾಷಾವಾರು ಪ್ರಾಂತ್ಯ ಮಾಡುವಲ್ಲಿ ಪಟವರ್ಧನ ರಾಜರು ದೇಶದಲ್ಲಿ ಪ್ರಥಮರು. ಮತ್ತು ಬಿ.ಡಿ. ಜತ್ತಿಯವರಂತಹ ಪ್ರಥಮ ಪ್ರಜೆಯನ್ನು ರಾಷ್ಟ್ರಕ್ಕೆ ಕೊಟ್ಟಂತಹ ಗ್ರಾಮ ಸಾವಳಗಿ ಗ್ರಾಮವಾಗಿದ್ದು, ಇದು ಜಿಲ್ಲಾ ಕೇಂದ್ರ ಸ್ಥಾನದಿಂದ ಅತೀ ದೂರವಿದ್ದು, ಸುಮಾರು 24ಕ್ಕೂ ಅಧಿಕ ಗ್ರಾಮಗಳ ಜನರು ಕೃಷ್ಣಾ ನದಿ ದಾಟಿ ತಾಲ್ಲೂಕು ಕೇಂದ್ರವಾದ ಜಮಖಂಡಿಗೆ ಬರಬೇಕಾಗಿರುವ ಪರಿಸ್ಥಿತಿ ಉಂಟಾಗಿರುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ ಮತ್ತು ತೇರದಾಳ ಗ್ರಾಮವು ಸಂಸ್ಥಾನಿಕರ ಕಾಲದಲ್ಲಿ ಜಿಲ್ಲಾ ಕೇಂದ್ರವಾಗಿದ್ದು, ಈಗ ತಾಲ್ಲೂಕು ಕೇಂದ್ರವಾಗುವ ಎಲ್ಲಾ ಅರ್ಹತೆಗಳನ್ನು ಪಡೆದುಕೊಂಡಿದೆ.

ಈ ಎರಡು ಗ್ರಾಮಗಳ ಹೆಸರನ್ನು ಸರ್ಕಾರವು ಹೊಸದಾಗಿ ಘೋಷಣೆ ಮಾಡಿದ ತಾಲ್ಲೂಕು ಕೇಂದ್ರಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ. ಇದರಿಂದ ಈ ಭಾಗದ ಜನರಿಗೆ ತೀವ್ರ ಅನ್ಯಾಯ ಮಾಡಿದಂತಾಗಿದೆ. ಈ ಭಾಗದಲ್ಲಿನ ಅನೇಕ ಸಂಘ-ಸಂಸ್ಥೆಗಳು ಹೋರಾಟ ಮಾಡುತ್ತಿದ್ದರೂ ಸರ್ಕಾರವೂ ಈ ಬಗ್ಗೆ ಕಿಂಚಿತ್ತೂ ಗಮನ ನೀಡದೇ ಇರುವುದರಿಂದ ಈ ಭಾಗದಲ್ಲಿನ ಜನರ ಆಕ್ರೋಶಕ್ಕೆ ಕಾರಣವಾಗಿದ್ದು, ಮುಂದಿನ ದಿನಗಳಲ್ಲಿ ಹೋರಾಟವು ತೀವ್ರತೆ ಪಡೆದುಕೊಳ್ಳುವ ಸಾಧ್ಯತೆ ಇರುತ್ತದೆ.

ಆದ್ದರಿಂದ, ಬಾಗಲಕೋಟೆ ಜಿಲ್ಲೆ, ಸಾವಳಗಿ ಮತ್ತು ತೇರದಾಳ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರ ಕೆಲಸಕಾರ್ಯದ ಅನುಕೂಲ ಹಿತದೃಷ್ಟಿಯಿಂದ ಈ ಎರಡೂ ಗ್ರಾಮಗಳನ್ನು ಪ್ರಸ್ತುತ ಹೊಸದಾಗಿ ಘೋಷಣೆ ಮಾಡಿರುವ ತಾಲ್ಲೂಕು ಕೇಂದ್ರಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ತಾಲ್ಲೂಕು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರಗಳೆಂದು ಘೋಷಣೆ ಮಾಡಿ ಈ ಭಾಗದ ಜನರ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸಿ ಅನುಕೂಲ ಮಾಡಿಕೊಡಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಈ ವಿಚಾರವಾಗಿ ಒಂದು ವಾಕ್ಯವನ್ನು ಸೇರಿಸಲಿಕ್ಕೆ ಬಯಸುತ್ತೇನೆ. ಈ ರಾಷ್ಟ್ರದ ಹಂಗಾಮಿ ರಾಷ್ಟ್ರಪತಿಗಳಾಗಿದ್ದಂತಹ ಬಿ.ಡಿ. ಜತ್ತಿಯವರಿಗೆ ಜನ್ಮ ಕೊಟ್ಟಂತಹ ಸಾವಳಗಿ ಸಹ ಎಲ್ಲಾ ರೀತಿ ಅರ್ಹತೆ ಹೊಂದಿದಂತಹ ಸ್ಥಳ. ಅದನ್ನೂ ಕೂಡ ತಾಲ್ಲೂಕು ಕೇಂದ್ರ ಸ್ಥಾನವನ್ನಾಗಿ ರೂಪಿಸಲಿಕ್ಕೆ ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ಈ ಹೊಸ ತಾಲ್ಲೂಕುಗಳ ಬಗ್ಗೆ ಘೋಷಣೆ ಮಾಡಿದ್ದಾರೆ. ಮಾನ್ಯ ಸದಸ್ಯರ ಕೋರಿಕೆಯಂತೆ ಇನ್ನೂ ಕೆಲವು ತಾಲ್ಲೂಕು ಕೇಂದ್ರಗಳನ್ನು ಮಾಡುವ ಬಗ್ಗೆ ಮನವಿಗಳು ಬಂದಿವೆ. ಅದೇ ರೀತಿಯಲ್ಲಿ ಬೇರೆ ಕಡೆಯಿಂದಲೂ ಒತ್ತಾಯಗಳು ಬರುತ್ತಿವೆ. ಇದನ್ನು ಯಾವ ರೀತಿ ಮಾಡಬೇಕೆನ್ನುವುದನ್ನು ಸರ್ಕಾರದ ಹಂತದಲ್ಲಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

**ಇ) ವಿಷಯ:- ಪೊಲೀಸ್ ಸಿಬ್ಬಂದಿಗಳ ವಾರದ ರಜೆ ಕುರಿತು.**

**- - -**

**ಶ್ರೀ ಪ್ರದೀಪ ಶೆಟ್ಟರ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ವಾರದ ರಜೆಯನ್ನು ನೀಡದಿರುವುದು, ರಜೆ ನೀಡದಿರುವ ಸಂದರ್ಭಗಳಲ್ಲಿ ರಜಾ ಭತ್ಯೆಯನ್ನು ನೀಡದಿರುವುದು ಹಾಗೂ ವಿಶೇಷ ಬಂದೋಬಸ್ತು ಸಂದರ್ಭಗಳಲ್ಲಿ, ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡಿದ ಸಂದರ್ಭಗಳಲ್ಲೂ ರಜಾ ಭತ್ಯೆಯನ್ನು ನೀಡಲಾಗುತ್ತಿಲ್ಲ ಎಂದು ವರದಿಯಾಗಿದೆ. ಇದರಿಂದಾಗಿ ಪೊಲೀಸ್ ಸಿಬ್ಬಂದಿಗಳ ಕಾರ್ಯಕ್ಷಮತೆ ಕಡಿಮೆಯಾಗುತ್ತಿರುವುದು ಹಾಗೂ ಸಿಬ್ಬಂದಿಗಳ ಶೋಷಣೆಯಾಗುತ್ತಿರುವುದು ಅತ್ಯಂತ ಶೋಚನೀಯವಾಗಿದ್ದು, ರಾಜ್ಯದ ಪೊಲೀಸ್ ಸಿಬ್ಬಂದಿಗಳಿಗೆ ಸರಿಯಾಗಿ ವಾರದ ರಜೆ ನೀಡುವಂತೆ ಹಾಗೂ ವಾರದ ರಜೆ ನೀಡದಿರುವ ವಿಶೇಷ ಸಂದರ್ಭಗಳಲ್ಲಿ ರಜಾ ಭತ್ಯೆಯನ್ನು ನೀಡುವಂತೆ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು ಹಾಗೂ ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ವಿವರವಾದ ಉತ್ತರವನ್ನು ಅಂಕಿ-ಅಂಶಗಳ ಜೊತೆಯಲ್ಲಿ ನಾನು ಒದಗಿಸಿಕೊಡುತ್ತೇನೆ.

**ಈ) ವಿಷಯ:- ಗ್ರಾಮ ಪಂಚಾಯಿತಿಯ ನೌಕರರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ.**

****

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಬಡವರಿಗೆ ಮನೆ, ಶೌಚಾಲಯ ನಿರ್ಮಾಣ, ಕುಡಿಯುವ ನೀರು ಸೇರಿದಂತೆ ವಿವಿಧ ಹತ್ತಾರು ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಹಾಗೂ ಗ್ರಾಮೀಣಾಭಿವೃದ್ಧಿಗಾಗಿ ದುಡಿಯುತ್ತಿರುವ ಪಂಚಾಯತ್ ಪಿ.ಡಿ.ಓ., ಕಾರ್ಯದರ್ಶಿ, ಲೆಕ್ಕ ಸಹಾಯಕರು ಹಾಗೂ ಗ್ರಾಮ ಪಂಚಾಯತ್ ನೌಕರರು ಗ್ರಾಮ ಪಂಚಾಯತ್ ಹಂತದಲ್ಲಿನ ಅವೈಜ್ಞಾನಿಕ ಕೆಲಸದ ಒತ್ತಡದಿಂದ, ವಸತಿ ಯೋಜನೆಯ ತಂತ್ರಾಂಶಗಳು, ಮೇಲಾಧಿಕಾರಿಗಳ ಒತ್ತಡ, ಅನಗತ್ಯ ಶಿಸ್ತು ಕ್ರಮವನ್ನು ಖಂಡಿಸಿ, ವಸತಿ ಯೋಜನೆಯ ಸುಗಮ ಅನುಷ್ಠಾನ, ಪಿ.ಡಿ.ಓ. ಹುದ್ದೆಯನ್ನು ಗ್ರೂಪ್ ಬಿ.ಹುದ್ದೆಗೆ ಉನ್ನತೀಕರಿಸುವುದು, ತಾಲ್ಲೂಕು ಪಂಚಾಯಿತಿಯಲ್ಲಿ ಸಹಾಯಕ ನಿರ್ದೇಶಕರ ಹೆಚ್ಚುವರಿ ಹುದ್ದೆಗಳು, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ನಡುವ ಹೋಬಳಿಗೊಂದು ಗ್ರಾಮೀಣಾಭಿವೃದ್ಧಿ ಅಧಿಕಾರಿ ಹುದ್ದೆ ಸೃಜನೆ ಮತ್ತು ನೇಮಕಾತಿ, ಕಾರ್ಯದರ್ಶಿ, ಲೆಕ್ಕ ಸಹಾಯಕರು ಹಾಗೂ ನೌಕರರ ಮುಂಬಡ್ತಿಯಲ್ಲಿ ವಿಳಂಬ, ಪರೀಕ್ಷಾರ್ಥ ಅವಧಿ ಘೋಷಣೆಯಲ್ಲಿ ವಿಳಂಬ, ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಇ.ಎಸ್.ಐ., ಪಿ.ಎಫ್., ಮತ್ತು ಇತರೆ ಜೀವನ ಭದ್ರತೆ ಸೌಲಭ್ಯ ಹಾಗೂ ಗ್ರಾಮ ಪಂಚಾಯತ್‌ನ ಬಾಪೂಜಿ ಸೇವಾ ಕೇಂದ್ರಗಳಿಗೆ ಹೆಚ್ಚುವರಿ ಸಿಬ್ಬಂದಿ ಮತ್ತು ಕಂಪ್ಯೂಟರ್ ಪೀಠೋಪಕರಣಗಳನ್ನು ಒದಗಿಸುವುದು ಸೇರಿದಂತೆ, ಅನೇಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಗ್ರಾಮ ಪಂಚಾಯಿತಿಗಳ ಎಲ್ಲಾ ಹಂತದ ನೌಕರರು ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕುಳಿತಿದ್ದು ಈ ವಿಚಾರವಾಗಿ ಶೂನ್ಯವೇಳೆಯಲ್ಲಿ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರಗಳನ್ನು ಒದಗಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಶೂನ್ಯವೇಳೆಗೆ ಸಂಬಂಧಪಟ್ಟಂತೆ ಕೆಲವು ಉತ್ತರಗಳನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸುತ್ತಾರೆ.

**3. ಸಚಿವರ ಹೇಳಿಕೆಗಳು**

**ಅ) ವಿಷಯ:- ಸೇನೆಯಲ್ಲಿ ಕಾರ್ಯನಿರತರಾಗಿರುವ ಸಂದರ್ಭದಲ್ಲಿ ಹುತಾತ್ಮರಾದ ಅಥವಾ ಮೃತರಾದ ಸೈನಿಕ / ಅರೆಸೈನಿಕ ಹಾಗೂ ಪೋಲೀಸ್ ಸಿಬ್ಬಂದಿಗಳ ಕುಟುಂಬದವರಿಗೆ ಪರಿಹಾರ ಒದಗಿಸಲು ಏಕ ರೂಪದ ಮಾನದಂಡವನ್ನು ರೂಪಿಸುವ ಬಗ್ಗೆ.**

****

**ಡಾ|| ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ಮಾನ್ಯ ಮುಖ್ಯ ಸಚೇತಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ದಿನಾಂಕ: 20-03-2017 ರಂದು, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂತಹ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:** ಉತ್ತರವನ್ನು ಮಂಡಿಸಲಾಗಿದೆ.

**ಆ) ವಿಷಯ:- ಹೆಗ್ಗಡದೇವನ ಕೋಟೆ ಪಟ್ಟಣದ ಕಸಾಯಿಖಾನೆಯಿಂದ ಬರುವ ಮಾಂಸದ ತ್ಯಾಜ್ಯವನ್ನು ತಂದು ಪಟ್ಟಣದಲ್ಲಿ ಹರಿಯುವ ತಾರಕ ನದಿಗೆ ಸುರಿಯಲಾಗುತ್ತಿದ್ದು, ಮಿನಿ ವಿಧಾನಸೌಧ ಮತ್ತು ತಾಲ್ಲೂಕು ಆಸ್ಪತ್ರೆ ತ್ಯಾಜ್ಯವನ್ನೂ ಇಲ್ಲಿಯೇ ತಂದು ಸುರಿಯಲಾಗುತ್ತಿದ್ದು, ನದಿ ನೀರು ವಿಷಪೂರಿತವಾಗುತ್ತಿದ್ದು, ತ್ಯಾಜ್ಯದ ರಾಶಿಯನ್ನು ಮಿನಿ ವಿಧಾನಸೌಧದ ಮುಂದೆಯೇ ಸುರಿಯುತ್ತಿರುವ ಬಗ್ಗೆ.**

****

**ಡಾ|| ಜಿ.ಪರಮೇಶ್ವರ್(ಸಭಾನಾಯಕರು)(ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) ರವರು ದಿನಾಂಕ: 16-03-2017 ರಂದು, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂತಹ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:** ಉತ್ತರವನ್ನು ಮಂಡಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ:- ಕೆ.ಆರ್.ಪೇಟೆ ತಾಲ್ಲೂಕಿನ ಹೇಮಗಿರಿ ಬಳಿಯ ನಾಟನಹಳ್ಳಿ ಗ್ರಾಮದ ಚೆಲುವೇಗೌಡ ಎಂಬ ರೈತನು ಸಾಲ ಮನ್ನಾ ಘೋಷಣೆಯ ನಿರೀಕ್ಷೆಯಲ್ಲಿದ್ದು, ಸರ್ಕಾರವು ಸಾಲಮನ್ನಾ ಘೋಷಣೆ ಮಾಡದೇ ಇರುವುದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಕುಟುಂಬಕ್ಕೆ ಪರಿಹಾರ ಧನ ನೀಡುವ ಬಗ್ಗೆ ಮತ್ತು ರಾಜ್ಯದ ಇತರೆ ರೈತರು ಆತ್ಮಹತ್ಯೆ ಹಾದಿ ಹಿಡಿಯದಂತೆ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ.**

****

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿರವರು ದಿನಾಂಕ: 17.03.2017 ರಂದು, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂತಹ ಸೂಚನೆಗೆ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು**: ಉತ್ತರವನ್ನು ಮಂಡಿಸಲಾಗಿದೆ.

**ಈ) ವಿಷಯ:- ಉದ್ಯೋಗ ಮತ್ತು ತರಬೇತಿ ಇಲಾಖೆಯವರ ಅನುಮತಿ ಮೇರೆಗೆ ರಾಜ್ಯದಲ್ಲಿ ಸುಮಾರು 6000 ವಿದ್ಯಾರ್ಥಿಗಳು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶಾವಕಾಶವನ್ನು ಪಡೆದಿದ್ದು, ಅವರಿಗೆ ಪರೀಕ್ಷೆ ಬರೆಯಲು ಅನುಮತಿ ನೀಡುವ ಬಗ್ಗೆ.**

****

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬುರವರು ದಿನಾಂಕ: 21.03.2017 ರಂದು, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂತಹ ಸೂಚನೆಗೆ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು**: ಉತ್ತರವನ್ನು ಮಂಡಿಸಲಾಗಿದೆ.

ಮುಂದಿನ ವಿಷಯಕ್ಕೆ ಹೋಗುವ ಮೊದಲು ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ಕೆಲವು ಸದಸ್ಯರು ಸದನಕ್ಕೆ ಬರುವುದು ಸ್ವಲ್ಪ ತಡವಾಗುತ್ತಿದೆ. ಅವರ ಹೆಸರನ್ನು ಕೂಗಿದಾಗ ಅವರು ಸದನದಲ್ಲಿ ಹಾಜರಿರುವುದಿಲ್ಲ. ನಂತರ ಸ್ವಲ್ಪ ತಡವಾಗಿ ಬಂದು, ನನಗೆ ಮತ್ತೆ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡಿ ಎಂದು ಹೇಳಿ ನನಗೆ ಪತ್ರಗಳು ಬರುತ್ತಿವೆ. ಆದರೆ, ಸ್ವಲ್ಪ ದಿವಸಗಳ ಹಿಂದೆ, ಒಂದೆರಡು-ಮೂರು ಸದನಗಳ ಹಿಂದೆ ಇದೇ ರೀತಿ ಚರ್ಚೆಯಾದಾಗ ಸದನದಲ್ಲಿ ಒಂದು ನಿರ್ಣಯವಾಗಿತ್ತು. ಅಂದು ಅವರಿಗೊಬ್ಬರಿಗೆ ಮಾತ್ರ ಅವರಿಗೆ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡಬೇಕು. ಮತ್ತೆ ಬೇರೆ ಯಾರಿಗೂ ಕೊಡುವುದು ಬೇಡವೆಂದು ಸಭೆಯಲ್ಲಿಯೇ ನಿರ್ಣಯವಾಗಿತ್ತು. ಆ ಹಿನ್ನೆಲೆಯಲ್ಲಿ ಒಂದು ನಿಮಿಷ ಅಲ್ಲ, ಅರ್ಧ ನಿಮಿಷ ತಡವಾಗಿ ಬಂದರೂ that particular

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

person loses the right to ask that question. ಆದ್ದರಿಂದ, ನನ್ನನ್ನು ಯಾರೂ ಸಹ ತಪ್ಪಿತಸ್ಥ ಎಂದು ಭಾವಿಸಬಾರದು. ನಾವೇ ಮಾಡಿಕೊಂಡಿರುವಂತಹ ನಿರ್ಣಯಗಳನ್ನು ನಾವು ಪಾಲನೆ ಮಾಡುತ್ತೇವೆ. ಎಲ್ಲರೂ ಸಹ ಇದಕ್ಕೆ ಬೆಂಬಲ ಕೊಡಬೇಕು, ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಗಮನ ಸೆಳೆಯುವ ಸೂಚನೆ ಸಂಬಂಧ ಸದಸ್ಯರಾದ ಶ್ರೀ ರಿಜ್ವಾನ್ ಹರ್ಷದ್ ರವರು ಕೇಳಬೇಕು.

**(ಮಾನ್ಯ ಸದಸ್ಯರು ಸದನದಲ್ಲಿ ಆ ಸಮಯದಲ್ಲಿ ಹಾಜರಿರಲಿಲ್ಲ)**

ಈ ರೀತಿ ಆದರೆ, ನಾನು ಏನು ಮಾಡಬೇಕು ಹೇಳಿ. ಅವರದ್ದು ಲ್ಯಾಪ್ಸ್ ಆಯಿತು. ಇನ್ನೊಂದು ಶ್ರೀಯುತ ಕೋಟ ಶ್ರೀನಿವಾಸ ಪೂಜಾರಿಯವರ ಗಮನಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಬೇರೆ ಸಚಿವರು ಉತ್ತರ ಕೊಡಬೇಕಾಗುತ್ತದೆ. ಮೀನುಗಾರಿಕೆ ಸಚಿವರು ಉತ್ತರ ಕೊಡಲಿಕ್ಕೆ ಆಗುವುದಿಲ್ಲ.

**ಶ್ರೀ ಪ್ರಮೋದ್ ಮಧ್ವರಾಜ್(ಮೀನಿಗಾರಿಕೆ, ಯುವಜನ ಹಾಗೂ ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರ ತಯಾರಿದೆ.

**ಸಭಾಪತಿಯವರು:-** ಹಾಗಾದರೆ, ನಡೆಸೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಏನೆಂದರೆ, ಮೀನುಗಾರರು ಇತರೆ ಕೂಲಿ ಕಾರ್ಮಿಕರಂತೆ ಅಸಂಘಟಿತ ಕಾರ್ಮಿಕರ ವ್ಯಾಪ್ತಿಯೊಳಗಡೆ ತರಲಿಕ್ಕೆ ಬೇಕಾದಂತಹ ಅಂಶವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅದು ಕಾರ್ಮಿಕ ಇಲಾಖೆಗೆ ಬರುತ್ತದೆ.

**ಸಭಾಪತಿಯವರು:-** ಸಚಿವರು ಏನು ಉತ್ತರ ಕೊಡುತ್ತಾರೆ ನೋಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತೀರೋ ಅಥವಾ ನನಗೆ ಸಮಸ್ಯೆ ಬರುವಂತೆ ಉತ್ತರ ಕೊಡುತ್ತೀರೋ. .

**ಸಭಾಪತಿಯವರು:-** ಸಮಸ್ಯೆಗೆ ಅವರ ಉತ್ತರ. (ಗೊಂದಲ)

**ಮುಂದು. . .**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(354) 22.03.17 SPR-RN 12.50

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಮೋದ್ ಮಧ್ವರಾಜ್(ಯುವ ಸಬಲೀಕರಣ, ಕ್ರೀಡಾ ಮತ್ತು ಮೀನುಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೆ, ತಮ್ಮ ಪ್ರಶ್ನೆ ಏನಿದೆಯೆಂದರೆ, ಮೀನುಗಾರರ ದೋಣಿ ಅವಗಡಗಳು...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಮುದ್ರಕ್ಕೆ ಹೋಗಿರುವಂತಹ ಮೀನುಗಾರರಿಗೆ ಬೇರೆ ಬೇರೆ ಸಮಸ್ಯೆಗಳು ಬಂದಾಗ ಕೊಡುವಂತಹ ಸೌಲಭ್ಯಗಳ ಬಗ್ಗೆ ಮೀನುಗಾರಿಕೆ ಸಚಿವರು ಉತ್ತರವನ್ನು ಕೊಡುತ್ತಾರೆ. ನಾನು ಕೇಳುತ್ತಿರುವುದು ಮೀನುಗಾರರಿಗೆ . . .

**ಸಭಾಪತಿಯವರು:-** ಮೊದಲು ಅವರು ಉತ್ತರವನ್ನು ಕೊಡಲಿ. ಆಮೇಲೆ ನೋಡೋಣ. ಅವರು ಏನು ಉತ್ತರವನ್ನು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಅಸಂಘಟಿತ ಕಾರ್ಮಿಕರ ವ್ಯಾಪ್ತಿಯಲ್ಲಿ ಕೊಡುವಂತಹ ಉತ್ತರವನ್ನು ಕೊಡಿ ಎಂದು ನಾನು ಕೇಳಿದ್ದೇನೆ. ಆ ವಿಚಾರ ಕಾರ್ಮಿಕ ಸಚಿವರ ವ್ಯಾಪ್ತಿಗೆ ಬರುತ್ತದೆ.

**ಸಭಾಪತಿಯವರು:-** ಅವರು ಉತ್ತರವನ್ನು ಕೊಡುತ್ತಾರೆ. ಅದನ್ನು ಆಮೇಲೆ ನೋಡೋಣ. ಮೊದಲು ನೀವು ಸರ್ಕಾರದ ಗಮನವನ್ನು ಸೆಳೆಯಿರಿ. ನಿಮಗೆ ಅವರು ಕೊಟ್ಟಿರುವ ಉತ್ತರದಿಂದ ಸಮಾಧಾನವಾಗದಿದ್ದರೆ, ಮತ್ತೊಂದು ಬಾರಿ ಉತ್ತರವನ್ನು ಪಡೆಯೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಸಮಾಧಾನದ ವಿಚಾರವಲ್ಲ. ಇಲ್ಲಿರುವ ವಿಷಯವೇ ಬೇರೆಯಾಗಿದೆ. ಕಾರ್ಮಿಕ ಇಲಾಖೆಯಿಂದ ಮೀನುಗಾರರಿಗೆ ಸೌಲಭ್ಯಗಳನ್ನು ಕೊಡಿಸಿ ಎನ್ನುವುದು ನನ್ನ ಇರಾದೆಯಾಗಿದೆ. ಇದಕ್ಕೆ ಕಾರ್ಮಿಕ ಇಲಾಖೆಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರು ಕೇಳಿರುವ ಪ್ರಶ್ನೆಗೆ ನಾಳೆ ಕಾರ್ಮಿಕ ಇಲಾಖೆಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಕೇಳಿರುವ ಪ್ರಶ್ನೆಯನ್ನು ಕಾರ್ಮಿಕ ಇಲಾಖೆಗೆ ವರ್ಗಾವಣೆ ಮಾಡಿ. ನಾಳೆ ಅಥವಾ ನಾಡಿದ್ದೋ ಸಚಿವರಿಂದ ಉತ್ತರವನ್ನು ಕೊಡಿಸಲು ಸರ್ಕಾರಕ್ಕೆ ತಿಳಿಸಲಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾಳೆ ಅಥವಾ ನಾಡಿದ್ದು ಸಚಿವರಿಂದ ಉತ್ತರವನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಪ್ರಮೋದ್ ಮಧ್ವರಾಜ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯು ಸರಿಯಿಲ್ಲ. ಹೀಗಾಗಿ ಅದನ್ನು ಸ್ವಲ್ಪ ಬದಲಾಯಿಸಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಪ್ರಶ್ನೆ ಸರಿಯಿದೆ. ನೀವು ಅರ್ಥೈಸಿಕೊಂಡಿರುವುದು ತಪ್ಪಾಗಿದೆ. ಹೀಗಾಗಿ ಅಜೆಂಡಾದಲ್ಲಿ ತಪ್ಪಾಗಿ ಬಂದಿದೆ. ಅಜೆಂಡಾದಲ್ಲಿರುವುದು ತಪ್ಪಾಗಿದೆ ಹಾಗೂ ಸರಿಯಿಲ್ಲ ಎಂದು ನಾನು ಲಿಖಿತ ರೂಪದಲ್ಲಿ ಮಾನ್ಯ ಸಭಾಪತಿಯವರ ಗಮನಕ್ಕೆ ತಂದಿದ್ದೇನೆ. ಹೀಗಾಗಿ ನೀವು ಕೊಟ್ಟಿರುವ ಉತ್ತರವು ನಿಮ್ಮ ಇಲಾಖೆಗೆ ಸರಿಯಿರಬಹುದು ಆದರೆ, ಅದು ನನ್ನ ಪ್ರಶ್ನೆಗೆ ಸರಿಯಿಲ್ಲ.

**ಸಭಾಪತಿಯವರು:-** ಈಗ ನಿಯಮ 330 ಮೇರೆಗೆ ಚರ್ಚೆ. ಮೊದಲನೆಯದು ಶ್ರೀಯುತ ಬಸವರಾಜ ಹೊರಟ್ಟಿಯವರು. ಸಂಬಂಧಪಟ್ಟ ಸಚಿವರು ಈಗ ಕೆಳಗಿನ ಮನೆಯಲ್ಲಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಸಚಿವರು ಇಲ್ಲಿಗೆ ಬರುತ್ತಾರಲ್ಲವೇ?

**ಸಭಾಪತಿಯವರು:-** ಸಚಿವರು ಬರುತ್ತಾರೆ. ಅವರು ಬಂದ ಮೇಲೆ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣ. ಅಲ್ಲಿಯವರೆಗೆ ನಂತರದ ವಿಷಯವನ್ನು ಕೈಗೆತ್ತಿಕೊಳ್ಳೋಣ. ಶ್ರೀಮತಿ ತಾರಾ ಅನೂರಾಧ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ನಿಯಮ 330 ರಡಿಯಲ್ಲಿರುವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ. ನಂತರದಲ್ಲಿ ಸರ್ಕಾರದವರು ಉತ್ತರವನ್ನು ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಳಲ್ಲಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ನಿಯಮ 330ರ ಮೇರೆಗೆ ಚರ್ಚೆ

**ವಿಷಯ:- ಇತ್ತೀಚೆಗೆ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕುಗಳ ಸಂಗತಿಗಳ ಬಗ್ಗೆ ಅತಿ ಹೆಚ್ಚಾಗಿ ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ತಡೆಗಟ್ಟಲು ಮಾಧ್ಯಮಗಳ ಮೇಲೆ ನಿರ್ಬಂಧ ಹೇರುವ ಬಗ್ಗೆ**

* * *

**ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದಿಸುತ್ತಾ, ಇತ್ತೀಚೆಗೆ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕುಗಳ ಸಂಗತಿಗಳ ಬಗ್ಗೆ ಅತಿ ಹೆಚ್ಚಾಗಿ ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ತಡೆಗಟ್ಟಲು ಮಾಧ್ಯಮಗಳ ಮೇಲೆ ನಿರ್ಬಂಧ ಹೇರುವ ಬಗೆಗಿನ ಪ್ರಸ್ತಾವನೆಯನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:-** ನಿಮ್ಮ ಪ್ರಸ್ತಾವನೆಯ ಸಂಬಂಧ ತಾವು ಏನಾದರೂ ಹೇಳುವುದಾದರೆ ಹೇಳಬಹುದು. ನಾನು ನಿಮಗೆ ಹತ್ತು ನಿಮಿಷಗಳ ಕಾಲಾವಕಾಶವನ್ನು ಕೊಡುತ್ತೇನೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೆ, ನಮಗೆಲ್ಲರಿಗೂ ಗೊತ್ತಿರುವ ಹಾಗೆ ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕು, ಸಂಗತಿಗಳ ಪ್ರಸಾರವು ಬಹಳ ಸೂಕ್ಷ್ಮ ಹಾಗೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವ ಮುಖ್ಯವಾದ ವಿಷಯವಾಗಿದೆ. ಎಲ್ಲರಿಗೂ, ಎಲ್ಲದಕ್ಕೂ ಹಕ್ಕು ಇದೆ. ಇದು ನಿಜ. ನಮ್ಮ ಸಂವಿಧಾನದ ಪ್ರಕಾರ ಎಲ್ಲರೂ ಎಲ್ಲವನ್ನೂ ಮಾತನಾಡಬಹುದು. ಅದರಲ್ಲೂ ಮುಖ್ಯವಾಗಿ ಸುದ್ದಿ ಮಾಧ್ಯಮದವರಿಗೆ ಎಲ್ಲಾ ಸುದ್ದಿಗಳನ್ನು ಮತ್ತು ವಿಷಯಗಳನ್ನು ಪ್ರಸಾರ ಮಾಡುವಂತಹ ಎಲ್ಲಾ ಹಕ್ಕು ಇದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಸೂಕ್ಷ್ಮ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ ಹಾಗೂ ಇದಕ್ಕೆ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಇವತ್ತಿನ ದಿವಸ ದೃಶ್ಯ ಮಾಧ್ಯಮಗಳು ಪ್ರಸಾರ ಮಾಡುತ್ತಿರುವ ಹಲವಾರು ಅಂಶಗಳ ಬಗ್ಗೆ ಸಾರ್ವಜನಿಕವಾಗಿ ಋಣಾತ್ಮಕ ಚರ್ಚೆಗಳು ಜಾಸ್ತಿಯಾಗುತ್ತಿವೆ. ಋಣಾತ್ಮಕವಾಗಿ ಮಾತನಾಡುವುದು ಹೆಚ್ಚಾಗುತ್ತಿದೆ. ಅಂದರೆ, ಬೆಳಗ್ಗೆ ಎದ್ದ ತಕ್ಷಣ ಜ್ಯೋತಿಷ್ಯ, ರಾತ್ರಿ ಮಲಗುವಾಗ ಕ್ರೈಂ ಸಮಾಚಾರ, ದೆವ್ವ-ಭೂತಗಳ ಧಾರಾವಾಹಿಗಳು ಪ್ರಸಾರವಾಗುತ್ತವೆ. ಯಾರೂ ನೆಮ್ಮದಿಯಿಂದ ಮಲಗಲು ಸಾಧ್ಯವಾಗದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವ ಈ ರೀತಿಯ ಹೆದರಿಸುವಂತಹ ಧಾರಾವಾಹಿಗಳು ಪ್ರಸಾರವಾಗುತ್ತವೆ. ಇಂತಹ ಪರಿಸ್ಥಿತಿಯನ್ನು ನೋಡಿದರೆ, ಎಲ್ಲೋ ಒಂದು ಕಡೆ ನಾವು ಲಕ್ಷ್ಮಣ ರೇಖೆಯನ್ನು ಎಳೆಯದೇ ಇರುವುದರಿಂದ ಮಾಧ್ಯಮಗಳಲ್ಲಿ ಧಾರಾವಾಹಿಯ ಪ್ರಸಾರಗಳು ಮೀತಿಮೀರಿ ಹೋಗುತ್ತಿವೆಯೋ ಏನೋ ಅಥವಾ ನಾವೇ ಅವುಗಳನ್ನು ಹೆಚ್ಚಾಗಿ ನೋಡಿ ಪ್ರಸಾರವನ್ನು ಹೆಚ್ಚು ಮಾಡುತ್ತಿದ್ದೇವೆ ಎಂದೆನಿಸುತ್ತದೆ. ನಾವುಗಳೇ ಪ್ರೇಕ್ಷಕರಾಗಿ ಧಾರಾವಾಹಿ ನೋಡುಗರ ಸಂಖ್ಯೆಯನ್ನು ಜಾಸ್ತಿ ಮಾಡುತ್ತಿದ್ದೇವೆ ಎಂಬ ಅನಿಸಿಕೆ ನನ್ನದಾಗಿದೆ. ಸುದ್ದಿಗಳನ್ನು ಪ್ರಸಾರ ಮಾಡುವ ಸಂದರ್ಭದಲ್ಲಿಯೂ ಕೂಡ ಅಗತ್ಯವಾದ ಸೂಕ್ಷ್ಮತೆಗಳನ್ನು ಕಳೆದುಕೊಳ್ಳುತ್ತಿದ್ದೇವೆಯೋ ಏನೋ? ಬ್ರೇಕಿಂಗ್ ನ್ಯೂಸ್‌ಗಳನ್ನು ಕೊಡುವುದಕ್ಕೆ ಸಂದರ್ಭಗಳಲ್ಲಿ ನಾವು ಹೆಚ್ಚು ಕೇಂದ್ರೀಕರಿಸುತ್ತಿದ್ದೇವೆಯೋ ಎಂದೆನಿಸುತ್ತದೆ. ಎಲ್ಲೋ ಒಂದು ಕಡೆ ಆ ಸುದ್ದಿಯನ್ನು ಸುದ್ದಿಯಾಗಿರಿಸದೇ ಅದನ್ನು ಒಂದು ರೀತಿಯ ರಸವತ್ತಾಗಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಅಥವಾ ಸ್ಪರ್ಧಾತ್ಮಕ ಲೋಕದಲ್ಲಿ ಏನೇನೋ ಘಟನೆಗಳಾಗುತ್ತಿವೆ ಎನ್ನುವ ಭಾವನೆ ನಮ್ಮಲ್ಲಿ ಖಂಡಿತವಾಗಿಯೂ ಮೂಡುತ್ತಿದೆ. ಅದರಲ್ಲೂ ಮುಖ್ಯವಾಗಿ ಹೇಳಬೇಕೆಂದರೆ, ಯಾರದೋ ಮನೆಯೊಳಗಡೆ, ಅಡುಗೆ ಮನೆಯಲ್ಲಿ ಅಥವಾ ಮಲಗುವ ಕೋಣೆಯಲ್ಲಿ ನಡೆಯುವಂತಹ ಗಂಡ-ಹೆಂಡತಿ ಜಗಳವಾಗಲೀ ಅಥವಾ ಯಾರೋ ಒಬ್ಬರಿಗೊಬ್ಬರು ಜುಟ್ಟುಗಳನ್ನು ಹಿಡಿದು ಬೀದಿಯಲ್ಲಿ ಹೊಡೆದಾಡುವುದಾಗಲೀ ಅಥವಾ ಇನ್ನೇನೋ ಗಲಾಟೆಗಳು ಅಥವಾ ಘಟನೆಗಳು, ಸಣ್ಣ ಸಣ್ಣ ವಿಚಾರಗಳು ಟಿ.ವಿ.ಯಲ್ಲಿ ಪ್ರಸಾರವಾದ ತಕ್ಷಣ ಅಯ್ಯಯ್ಯೋ! ಇದನ್ನು ನೋಡುವುದು ಬೇಡ, ಟಿ.ವಿ.ಯನ್ನು ಆರಿಸಿಬಿಡೋಣ ಎಂದೆನ್ನಿಸುತ್ತದೆ. ಇದಕ್ಕೆ ಕಾರಣವೇನೆಂದರೆ, ಮನೆಯಲ್ಲಿ ಮಕ್ಕಳಿರುವಾಗ, ಅವರುಗಳೂ ಸಹ ಇದನ್ನು ನೋಡುತ್ತಿರುತ್ತಾರೆ. ಅವರಿಗೆ ಇದರ ಬಗ್ಗೆ ಏನು ಹೇಳೋಣ? ಅಲ್ಲಿ ನಡೆಯುತ್ತಿರುವುದು ಏನು ಎಂದು ಮಕ್ಕಳು ಕೇಳಿದರೆ, ಅದಕ್ಕೆ ತಾಯಂದಿರು ಏನು ಉತ್ತರವನ್ನು ಕೊಡಬೇಕು? ಅಂತಹ ಪರಿಸ್ಥಿತಿಯಲ್ಲಿ ನಿಜವಾಗಲೂ ಮುಜುಗರಕ್ಕೊಳಗಾಗುವ ಸನ್ನಿವೇಶಗಳು ಇತ್ತೀಚೆಗೆ ಬಹಳವಾಗುತ್ತಿವೆ. ಇಂತಹ ಸಂಗತಿಗಳು ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಅಂದರೆ ದೃಶ್ಯ ಮಾಧ್ಯಮಗಳಲ್ಲಿ ಸಿನಿಮಾ ಕೂಡ ಸೇರಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಹೀಗಾಗಿ ಕೌಟುಂಬಿಕ ವಾತಾವರಣದ ಮೇಲೆ ನಿಜವಾಗಲೂ ಋಣಾತ್ಮಕ ಪರಿಣಾಮ ಬೀರುತ್ತಿರುವುದು ಖಂಡಿತವಾಗಿಯೂ ಸತ್ಯ. ನಾವು ಕೆಲವು ಬಾರಿ ಇಂತಹ ವಿಚಾರಗಳನ್ನು ಮಾತನಾಡುವುದನ್ನೇ ಬಿಟ್ಟುಬಿಡುತ್ತೇವೆ. ನಮಗೆ ಏಕೆ ಈ ವಿಚಾರ ಬೇಕು? ಅಲ್ಲಿನ ಸೂಕ್ಷ್ಮತೆಗಳ ಬಗ್ಗೆ ನಾವು ಏಕೆ ಮಾತನಾಡಬೇಕು? ಯಾರ ವಿಷಯವನ್ನು ನಾವು ಏಕೆ ನಮ್ಮ ಮೈಮೇಲೆ ಎಳೆದುಕೊಳ್ಳಬೇಕು ಎಂದೆನಿಸುತ್ತದೆ. ಆದರೆ ಇಲ್ಲಿರುವ ವಿಚಾರ ಅದಲ್ಲ. ಏಕೆಂದರೆ, ಮಾಧ್ಯಮದವರಿಗೆ ಉಪದೇಶ ಮಾಡುವಷ್ಟು ದೊಡ್ಡವರು ನಾವು ಖಂಡಿತವಾಗಿಯೂ ಅಲ್ಲ. ಆದರೆ, ಮನೆಯಲ್ಲಿ ಒಬ್ಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ ನಾನು ನನ್ನ ಸಂಸಾರವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಏಕೆಂದರೆ ನಮ್ಮ ಮನೆಯಲ್ಲಿ ಒಳ್ಳೆಯ ವಾತಾವರಣವಿರಬೇಕು. ಇವತ್ತಿಗೂ ಕೆಲವು ಮನೆಗಳಲ್ಲಿ ಯಾವುದೇ ಖಾಸಗಿ ಟಿ.ವಿ.ಚಾನಲ್‌ಗಳಿಲ್ಲದೇ ಕೇವಲ ದೂರದರ್ಶನ ಚಂದನ ವಾಹಿನಿಯನ್ನು ಮಾತ್ರವೇ ನೋಡುತ್ತಿದ್ದಾರೆ. ಮುಂದುವರೆದು ಇನ್ನೂ ಕೆಲವು ಮನೆಗಳಲ್ಲಿ ಟಿ.ವಿ.ಯೇ ಇರುವುದಿಲ್ಲ. ಅಂತಹ ಪರಿಸ್ಥಿತಿ ಇಂದಿಗೂ ಸಹ ಇದೆ. ಆ ನಿಟ್ಟಿನಲ್ಲಿ ಮಾತ್ರವೇ ನಾವು ಬೆಳಕನ್ನು ಚೆಲ್ಲಬಯಸುತ್ತೇನೆ. ನಮ್ಮಲ್ಲಿ ಸಕಾರಾತ್ಮಕ ಸುದ್ದಿಗಳು ಅಂದರೆ ಯಶಸ್ವಿ ಕಥೆಗಳ ಬದಲಾಗಿ ಬೇರೆಯದನ್ನು ಪ್ರಸಾರ ಮಾಡುತ್ತಿದ್ದಾರೆ. ಈ ವಿಚಾರವನ್ನು ನಾನು ಚಲನಚಿತ್ರವೂ ಒಳಗೊಂಡಂತೆ ಹೇಳುತ್ತಿದ್ದೇನೆ. ಇವತ್ತಿನ ಪರಿಸ್ಥಿತಿಯಲ್ಲಿ ಕಳಪೆ ಅಭಿರುಚಿಯುಳ್ಳ ವಿಷಯಗಳ ಪ್ರಸಾರಕ್ಕೆ ಹೆಚ್ಚು ಪ್ರಾಧಾನ್ಯತೆ ಸಿಗುತ್ತಿದೆ. ಯಶಸ್ವಿ ಸುದ್ದಿಗಳನ್ನು ನಾವು ಸ್ವೀಕರಿಸುತ್ತಿಲ್ಲವೇನೋ ಎಂದೆನಿಸುತ್ತಿದೆ. ಎಲ್ಲಿ ಕೆಟ್ಟ ಸುದ್ದಿಗಳು ಪ್ರಸಾರವಾಗುತ್ತಿದೆ ಅಂತಹದನ್ನು ನೋಡಲು ಟಿ.ವಿ.ಚಾನೆಲ್‌ಗಳನ್ನು ಬದಲಾಯಿಸುವಷ್ಟು ಮಟ್ಟಿಗೆ ನಾವುಗಳೂ ಸಹ ಬದಲಾಗಿ ಬಿಟ್ಟಿದ್ದೇವೆ. ಈ ಹಿಂದೆ ಯಾವುದೇ ಒಂದು ಧಾರಾವಾಹಿ, ಸಿನೆಮಾ ಅಥವಾ ನಾಟಕವನ್ನು ನೋಡಿದಾಗ ಅಥವಾ ಅಲ್ಲಿ ನಾವಿದ್ದಾಗ, ಅವುಗಳಿಂದ ನಾವು ಯಾವ ನೀತಿಯನ್ನು ಕಲಿತುಕೊಂಡೆವು, ಏನು ತಿಳಿದುಕೊಂಡೆವು ಎಂಬುದನ್ನು ಪರಸ್ಪರ ಚರ್ಚಿಸುವಷ್ಟರ ಮಟ್ಟಿಗೆ ಆ ಕಾರ್ಯಕ್ರಮಗಳು ಮೂಡಿ ಬರುತ್ತಿದ್ದವು. ಧಾರಾವಾಹಿ, ಚಲನಚಿತ್ರಗಳನ್ನು ನೋಡುವಾಗಲಾಗಲೀ ಅಥವಾ ಪತ್ರಿಕೆಯಲ್ಲಿನ ವಿಷಯವನ್ನು ಓದುವಾಗಲಾಗಲೀ ನಾವು ಅದರಲ್ಲಿನ ನೀತಿಯನ್ನು ತೆಗೆದುಕೊಳ್ಳುತ್ತಿದ್ದೆವು. We used to get inspiration. ಡಾ॥ ರಾಜ್‌ಕುಮಾರ್‌ರವರು ನಟಿಸಿದಂತಹ 'ಬಂಗಾರದ ಮನುಷ್ಯ' ಚಿತ್ರವನ್ನು ನೋಡಿ ಎಷ್ಟೋ ಜನ ನಗರಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಿ ಮತ್ತೆ ತಮ್ಮ ಜೀವನವನ್ನು ರೂಪಿಸಿಕೊಂಡು ಅಲ್ಲಿನ ವಾತಾವರಣವನ್ನು ಬದಲಾಯಿಸುವ ಮಟ್ಟಿಗೆ ಪ್ರೇರಣೆಗೊಂಡಿದ್ದರು. 'ಮಾಲ್ಗುಡಿ ಡೇಸ್'ನಂತಹ ಧಾರಾವಾಹಿಗಳನ್ನು ನೋಡಿದಾಗ, ಅದರಲ್ಲಿ ಸಣ್ಣ-ಸಣ್ಣ ಕಥೆಗಳಿದ್ದರೂ ಕೂಡ ಅದರಿಂದ ನಾವು ಏನು ನೀತಿ ಪಾಠಗಳನ್ನು ಕಲಿತುಕೊಂಡೆವು ಎನ್ನುವುದರ ಬಗ್ಗೆ ನಾವು ಬಹಳವಾಗಿ ಯೋಚನೆ ಮಾಡುತ್ತಿದ್ದೆವು, ಚಿಂತನ-ಮಂಥನಗಳನ್ನು ಮಾಡುತ್ತಿದ್ದೆವು. ನಾಯಕ, ನಾಯಕಿಯರೆಂದರೆ, ಹೀಗಿರಬೇಕು; ಕಥೆಗಳೆಂದರೆ ಹೀಗಿರಬೇಕು ಎಂಬುದಾಗಿ ಆಲೋಚನೆ ಮಾಡುತ್ತಿದ್ದೆವು. ಆದರೆ, ನಾವು ಇವತ್ತಿನ ದಿವಸ ಯಾವ ಪರಿಸ್ಥಿತಿಗೆ ಬಂದಿದ್ದೇವೆ? ರೌಡಿಗಳ ಚಿತ್ರಗಳನ್ನು ಮಾಡುತ್ತಿದ್ದೇವೆ. ಚಲನಚಿತ್ರಗಳಲ್ಲಿ ಅನಾವಶ್ಯಕ ಮಾತುಗಳನ್ನಾಡುತ್ತೇವೆ ಹಾಗೂ ಏನೇನೋ ಪದಗಳನ್ನು ಬಳಸುತ್ತಿದ್ದೇವೆ. ಟಿ.ವಿ. ಧಾರಾವಾಹಿಗಳಲ್ಲಿ ಸಣ್ಣ-ಸಣ್ಣ ಮಕ್ಕಳನ್ನು ಭೂತ-ದೆವ್ವಗಳಾಗಿ ಮಾಡುತ್ತಿದ್ದೇವೆ. ಯಾರದೋ ಮನೆಯಲ್ಲಿ ಒಬ್ಬ ಹೆಣ್ಣುಮಗಳು ಇನ್ನೊಬ್ಬ ಹೆಣ್ಣುಮಗಳ ಜೊತೆಯಲ್ಲಿ ಜಗಳವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತೆ ಮಾಡುತ್ತಿದ್ದೇವೆ. ಇವುಗಳಿಂದಾಗಿ ನಾವು ಏನು ಸಂದೇಶವನ್ನು ಕೊಡುತ್ತಿದ್ದೇವೆ? ನಾನು ತಿಳಿಸಿರುವಂತೆ ನಿಜವಾಗಿಯೂ ಮಾಧ್ಯಮದವರಿಗೆ ಎಲ್ಲಾ ಸುದ್ದಿಗಳನ್ನು ಪ್ರಸಾರ ಮಾಡುವ ಹಕ್ಕು ಇದೆ. 'ನಾವು ಎಂತಹ ಚಿತ್ರಗಳನ್ನೂ ಮಾಡುತ್ತೇವೆ, ನಮ್ಮ ಹಕ್ಕುಗಳನ್ನು ನೀವು ಏಕೆ ಕಸಿದುಕೊಳ್ಳುತ್ತೀರಿ? ಇವುಗಳಿಗೆ ಸೆನ್ಸಾರ್ ಇದೆ' ಎಂದು ಅವರು ಕೇಳಬಹುದು. ಎಲ್ಲದಕ್ಕೂ ನಿಯಂತ್ರಣವಿದ್ದರೂ ಕೂಡ ನಾವು ಎಲ್ಲಿಗೆ ಹೋಗಿ ತಲುಪುತ್ತಿದ್ದೇವೆ ಎಂಬ ಬಗ್ಗೆ ನಾವೇ ಆತ್ಮಾವಲೋಕನ ಮಾಡಿಕೊಳ್ಳುವಂತಹ ಅನಿವಾರ್ಯತೆಯುಂಟಾಗಿದೆ. ಇಂತಹ ಸದನಗಳು ಕೂಡ, ಏಕೆಂದರೆ ಇಂತಹ ವಿಚಾರದಲ್ಲಿ ಸರ್ಕಾರಕ್ಕಷ್ಟೇ ಜವಾಬ್ದಾರಿ ಇರಬೇಕು ಎಂದಲ್ಲ, ನಮಗೂ ಜವಾಬ್ದಾರಿಯಿದೆ. ನಾವು ನೋಡುವ ದೃಶ್ಯಗಳು, ಚಲನಚಿತ್ರಗಳು, ಓದುವ ಸುದ್ದಿಗಳ ಮೇಲೆ ನಾವು ಯಾವುದೇ ಪ್ರತಿಕ್ರಿಯೆ ನೀಡದೇ ಇದ್ದರೆ, ನಮಗೆ ಏಕೆ ಬೇಕು, ನಾವು ಏಕೆ ಮಾತನಾಡಬೇಕು, ಈ ವಿಚಾರ ನಮಗೇಕೆ ಬೇಕು ಎಂದು ಸುಮ್ಮನಿದ್ದರೆ ಆಗುವುದಿಲ್ಲ. ಮಾಧ್ಯಮದವರು ಇಲ್ಲಿ ಹತ್ತಿರದಲ್ಲೇ ಇದ್ದಾರೆ, ನನಗೆ ಗೊತ್ತಿರುವ ಹಾಗೆ ಯಾವುದೇ ಒಬ್ಬ ವರದಿಗಾರರಿಗಾಗಲೀ ಅಥವಾ ಮಾಧ್ಯಮದ, ಪತ್ರಿಕೆಯ ಮುಖ್ಯಸ್ಥರಿಗಾಗಲೀ ಒಂದು ಕೆಟ್ಟ ಸುದ್ದಿಯನ್ನು ತಕ್ಷಣವೇ ಪ್ರಸಾರ ಮಾಡುವುದಕ್ಕೆ ಖಂಡಿತವಾಗಿಯೂ ಮನಸ್ಸಿರುವುದಿಲ್ಲ. ಅವರುಗಳು ಮನ:ಸಾಕ್ಷಿಯಾಗಿ ಕೆಟ್ಟ ಸುದ್ದಿಗಳನ್ನು ಖಂಡಿತವಾಗಿಯೂ ಪ್ರಸಾರ ಮಾಡುವುದಿಲ್ಲ. ಆದರೆ, ಇವತ್ತಿನ ದಿವಸ ಋಣಾತ್ಮಕವಾಗಿರುವ ಆಕರ್ಷಣೆ, ಪ್ರೇಕ್ಷಕರ ವೃಂದ ಎಷ್ಟರ ಮಟ್ಟಿಗೆ ಬೆಳೆದಿದೆ, ಮಾಧ್ಯಮದವರನ್ನು ಎಷ್ಟರ ಮಟ್ಟಿಗೆ ಬೆಳೆಸಿದ್ದೇವೆ; ಪೋಷಣೆ ಮಾಡಿದ್ದೇವೆ ಎಂದರೆ, ತಕ್ಷಣ ಋಣಾತ್ಮಕ ಸುದ್ದಿಗಳನ್ನು ಪ್ರಸಾರ ಮಾಡುವಂತಹ ಪ್ರಾಮುಖ್ಯತೆ, ತಕ್ಷಣವೇ ರೋಚಕ; ರೋಮಾಂಚನಗೊಳಿಸುವ ಸುದ್ದಿಯನ್ನು, ಯಾರನ್ನೋ ಬೈಯುವ ಸುದ್ದಿಗಳನ್ನು ಪ್ರಸಾರ ಮಾಡಿದಾಗ ಅದಕ್ಕೆ ಸಿಗುವಂತಹ TRP (Television Rating Point) ಗಳು ಅಂದರೆ ಪ್ರೇಕ್ಷಕರ ವೃಂದ ಎಷ್ಟು ಹೆಚ್ಚಾಗಿದೆ ಎಂದರೆ, ಅದನ್ನು ಹೆಚ್ಚು ಮಾಡಿದವರು ನಾವೇ. ಯಾವುದೇ ಒಬ್ಬ ವರದಿಗಾರರನ್ನು, ಮಾಧ್ಯಮ ಮುಖ್ಯಸ್ಥರನ್ನು ಕೇಳಿದಾಗ ಅವರುಗಳು ಖಂಡಿತವಾಗಿಯೂ ಮಾಡಿರುವುದಿಲ್ಲ. ಆದರೆ, ಇದನ್ನು ಹೇಗೆ ನಿಯಂತ್ರಣಕ್ಕೆ ತರುವುದು? ಇದು ನಾವು ಆಲೋಚನೆ ಮಾಡುವ ವಿಚಾರವಾಗಿದೆ. ಇಂತಹ ಸಂದರ್ಭಗಳಲ್ಲಿ ನಾವು ಹೇಳುವುದೇನೆಂದರೆ, ಸ್ವ ನಿಯಂತ್ರಣವನ್ನು, ಸ್ವ ಸಂಯಮಗಳನ್ನು ಹೊಂದಿರಬೇಕು. ಇದರ ಅಗತ್ಯತೆಗಳ ಬಗ್ಗೆ ನಮಗೆ ನಾವೇ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಇಂತಹ ಸಂದರ್ಭಗಳಲ್ಲಿ ಸರ್ಕಾರ ಮಧ್ಯ ಪ್ರವೇಶಿಸುವುದು ಬಹಳ ಬಹಳ ಅನಿವಾರ್ಯವಾಗಿದೆ. ಆದರೆ, ಇಂತಹ ಸಂಗತಿಗಳ ಬಗ್ಗೆ ಬಹಳ ಸೂಕ್ಷ್ಮವಾಗಿ ಚರ್ಚಿಸಬೇಕಾಗುತ್ತದೆ. ಏಕೆಂದರೆ, ಯಾರೂ ಯಾರದೇ ಹಕ್ಕುಗಳನ್ನು ಖಂಡಿಸುವುದಕ್ಕಾಗಲೀ, ತುಂಡಿಸುವುದಕ್ಕಾಗಲೀ ಅಥವಾ ಹೇರುವುದಕ್ಕಾಗಲೀ ಆಗುವುದಿಲ್ಲ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಜವಾಗಿಯೂ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ, ಮಾಧ್ಯಮದವರನ್ನೆಲ್ಲಾ ಕರೆಸಿ, ಒಗ್ಗೂಡಿ ಮಾತನಾಡುವಂತಹ ಸಂಯಮವನ್ನು ಸರ್ಕಾರ ಬೆಳೆಸಿಕೊಳ್ಳದೇ ಹೋದರೆ, ಪರಸ್ಪರ ನಾವು ಭೇಟಿ ಮಾಡದೇ ಹೋದರೆ, ಪರಸ್ಪರ ಏನು ಮಾಡಬೇಕು, ಏನು ಮಾಡಬಾರದು ಎಂಬ ಬಗ್ಗೆ ಚರ್ಚೆಗಳನ್ನು ಮಾಡದೇ ಹೋದರೆ, ಇದಕ್ಕೆ ನಿಜವಾಗಿಯೂ ಎಲ್ಲೋ ಒಂದು ಕಡೆ ನಾವು ಲಗಾಮ ಹಾಕುವುದಕ್ಕಾಗಲಿ ಅಥವಾ ನಮ್ಮನ್ನು ನಾವು ತಿದ್ದುಕೊಳ್ಳುವುದಕ್ಕಾಗಲೀ ಆಗುವುದಿಲ್ಲ. ಏಕೆಂದರೆ ನಾವು ನಮ್ಮ ಮಕ್ಕಳಿಗೆ, ನಮ್ಮ ಸಂಸಾರಕ್ಕೆ ಏನು ಕೊಡುತ್ತೇವೆ ಎಂಬುದಕ್ಕಾಗಲೀ ದಯವಿಟ್ಟು ಯೋಚನೆ ಮಾಡಬೇಕು ಎಂಬುದು ನನ್ನ ಅನಿಸಿಕೆಯಾಗಿದೆ.

(. . ಮುಂದು . .)

(355) 22.03.2017 1.00 MGN-VK

ಶ್ರೀಮತಿ ತಾರಾ ಅನೂರಾಧ(ಮುಂದುವರೆದುದು...

ಸರ್ಕಾರದವರಲ್ಲಿ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಇದನ್ನು ನಾನು ಸಾಮಾಜಿಕ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆಯೇ ಹೊರತು ನನಗೆ ಯಾರ ಮೇಲೂ ವೈಯಕ್ತಿಕ ದ್ವೇಷವಿಲ್ಲ; ಯಾರನ್ನೂ ದೂರುವ ಉದ್ದೇಶ ನನಗಿಲ್ಲ. ಏಕೆಂದರೆ ನಮ್ಮಲ್ಲಿಯೇ ಹಲವಾರು ತಪ್ಪುಗಳಿರುತ್ತವೆ, ಹಾಗಾಗಿ ಬೇರೆಯವರನ್ನು ದೂರುವುದಕ್ಕೆ ಮುಂಚೆ ನಾವು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಮಾನ್ಯ ಪ್ರಾಣೇಶ್‌ರವರು ಶ್ರೀ ರಾಮಕೃಷ್ಣ ಪರಮಹಂಸರ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ತಾಯಿಯೊಬ್ಬಳು ತನ್ನ ಮಗುವಿಗೆ ಬೆಲ್ಲ ತಿನ್ನದಿರುವಂತೆ ತಿಳಿಹೇಳಬೇಕೆಂದು ವಿನಂತಿಸಿಕೊಂಡಂತಹ ಸಂದರ್ಭದಲ್ಲಿ ಅವರು 'ನಾನು ಬೆಲ್ಲ ತಿನ್ನುವುದನ್ನು ಮೊದಲು ಬಿಟ್ಟು ಅನಂತರ ಆ ಮಗುವಿಗೆ ಸಲಹೆ ಮಾಡುತ್ತೇನೆ' ಎನ್ನುವಂತಹ ಮಾತನ್ನು ಹೇಳಿದರಂತೆ. ಆ ರೀತಿ ಇಂತಹ ವಿಚಾರಗಳಲ್ಲಿ ನಾವು ಏನು ಮಾಡಬೇಕು, ಯಾವ ರೀತಿ ಅದನ್ನು ನಿಯಂತ್ರಿಸಬೇಕು ಎನ್ನುವುದರ ಬಗ್ಗೆ ಪ್ರತಿಯೊಬ್ಬರೂ ಗಮನ ಹರಿಸಬೇಕಾಗುತ್ತದೆ.

ಧಾರಾವಾಹಿಗಳಲ್ಲಿ ಮಕ್ಕಳನ್ನು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ತಾವು ನೋಡಿರಬಹುದು. ಇಂತಹ ಧಾರಾವಾಹಿಗಳನ್ನು ನೋಡಿದಾಗ ನಿಜಕ್ಕೂ ಬೇಸರವಾಗುತ್ತದೆ. ಧಾರಾವಾಹಿಗಳಲ್ಲಿ ಮಕ್ಕಳನ್ನು ದೆವ್ವಗಳಾಗಿ, ಭೂತಗಳಾಗಿ ಬಿಂಬಿಸುತ್ತಿರುವುದರ ಜೊತೆಗೆ ಆ ಮಕ್ಕಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಯಲ್ಲಿ ಬರುವ ಮಾತುಗಳೇನು? ಸಿನಿಮಾಗಳ ಮೇಲೆ ನಿಯಂತ್ರಣ ವಿಧಿಸುವ ಸೆನ್ಸಾರ್ ಬೋರ್ಡ್ ಜೊತೆ ಎಷ್ಟು ಜಗಳವಾಡುತ್ತೇವೆ, ಅಂತಹ ಚಿತ್ರಗಳಿಗೆ ಪ್ರಶಸ್ತಿಗಳನ್ನು ಕೊಟ್ಟಿರುವ ಉದಾಹರಣೆಗಳು ಸಹ ಇವೆ. ಎಲ್ಲಿಯೋ ಕೆಲವು ಚಿತ್ರಗಳಿಗೆ ಪ್ರಶಸ್ತಿ ಸಿಗದಿರಬಹುದು, ಆದರೆ negative thoughts ನ್ನು ನಮ್ಮ ಮನೆಯಲ್ಲಿ, ನಮ್ಮ ಮನದಲ್ಲಿ ಮಕ್ಕಳಿಗೆ ತುಂಬಿಸುವುದನ್ನು ಬಿಟ್ಟು ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡುವ ಕಥೆಗಳನ್ನು, ಒಳ್ಳೆಯ ವಾತಾವರಣವನ್ನು ಕಲ್ಪಿಸುವ ಕಥೆಗಳನ್ನು, ಯಶಸ್ವಿ ಕಥೆಗಳನ್ನು, ಅಂದರೆ, successful stories ಗಳನ್ನು ಅಳವಡಿಸಿಕೊಳ್ಳುವ ರೂಪದಲ್ಲಿ ಹೆಚ್ಚು ಪ್ರಚಾರ ಕೊಡುವ ರೂಪದಲ್ಲಿ ಮಾಧ್ಯಮಗಳಲ್ಲಿ ಪ್ರಯತ್ನಗಳಾಗಬೇಕು. ತಪ್ಪು ಮಾಡಿದವನಿಗೆ ಶಿಕ್ಷೆ ಏನಾಗಿದೆ ಎಂಬುದರ ಬಗ್ಗೆ ಸಮಾಜದಲ್ಲಿ ಹೆಚ್ಚು ಪ್ರಚಾರ ಬೇಕೇ ಹೊರತು ಅವನ ತಪ್ಪು ಏನೆಂಬುದನ್ನು ಒಂದು ವಾಕ್ಯದಲ್ಲಿ ಹೇಳಿದರೆ ಸಾಕು. ತಪ್ಪನ್ನೇ ಬಹಳ ದೊಡ್ಡದಾಗಿ ತೋರಿಸಿ, ಶಿಕ್ಷೆಯನ್ನು ತೋರಿಸದೆ ಅಥವಾ ಅದನ್ನು ಸ್ವಲ್ಪವಷ್ಟೇ ತೋರಿಸುವುದರಿಂದ ಯಾರು ಏನೇ ತಪ್ಪು ಮಾಡಿದರೂ ಅವರು ಹೊರಗಡೆ ಬರುತ್ತಾರೆ ಎನ್ನುವ ಮನೋಭಾವ ಸಮಾಜದಲ್ಲಿ ಎಲ್ಲರಿಗೂ ಬಂದಿದೆ. ದಯಮಾಡಿ ಆ ನಿಟ್ಟಿನಲ್ಲಿ ಸರ್ಕಾರ ಏನು ಉತ್ತರ ಕೊಡುತ್ತದೆ, ಏನು ಯೋಚನೆ ಮಾಡುತ್ತದೆ ಎನ್ನುವುದರ ಬಗ್ಗೆ ನನಗೆ ನಿಜಕ್ಕೂ ಬಹಳಷ್ಟು ಕುತೂಹಲ ಇದೆ.

ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ದಯಮಾಡಿ ಸರ್ಕಾರ ಮಧ್ಯಪ್ರವೇಶ ಮಾಡಿ ಈ ವಾತಾವರಣವನ್ನು ತಿಳಿಗೊಳಿಸುತ್ತದೆ, ಇಂತಹ ಪರಿಸ್ಥಿತಿಗೆ ಕಾರಣರಾದವರ ಮೇಲೆ ಕ್ರಮ ಜರುಗಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಕ್ರಮ ಎಂದರೆ, ಅವರಿಗೆ ಶಿಕ್ಷೆಯಾಗಬೇಕು ಎಂದಲ್ಲ, ಕಾನೂನು ಮುಖಾಂತರ ತರುವುದು ನಿಜ, ಆದರೂ ಕೂಡ ಇಲ್ಲಿ ಸೂಕ್ಷ್ಮತೆಯಿಂದ, ಸಂಯಮದಿಂದ ಎಲ್ಲರನ್ನೂ ಜೊತೆಗೂಡಿಸಿಕೊಂಡು ನಡೆಯುವಂತಹ ಕೆಲಸ ಸರ್ಕಾರದಿಂದ ಆಗುತ್ತದೆ, ಆ ರೀತಿಯ ಕೆಲಸ ಆಗಬೇಕೆಂದು ನಾನು ಬಯಸುತ್ತೇನೆ.

**ಡಾ:ಜಿ.ಪರಮೇಶ್ವರ(ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾಗಿರುವಂತಹ ಶ್ರೀಮತಿ ತಾರಾ ಅನೂರಾಧ ಅವರು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರವು ಈ ಕೆಳಕಂಡಂತಿರುತ್ತದೆ:

**(ಸರ್ಕಾರದ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ಸರ್ಕಾರದ ಉತ್ತರ ಸಮರ್ಪಕವಾಗಿದೆ. ಆದರೆ "If a dog bites a man it's not news. But if a man bites a dog, that is news" ಎನ್ನುವಂತಹ ಒಂದು ಮಾತಿದೆ. ಅಂದರೆ, ನಾಯಿ ಮನುಷ್ಯನಿಗೆ ಕಚ್ಚಿದರೆ ಅದು ಸುದ್ಧಿಯಾಗುವುದಿಲ್ಲ, ಆದರೆ ಮನುಷ್ಯನೇ ನಾಯಿಯನ್ನು ಕಚ್ಚಿದರೆ ಅದು ಸುದ್ಧಿಯಾಗುತ್ತದೆ. ದೂರದರ್ಶನದಲ್ಲಿ ಏನಾಗಿದೆ ಎಂದರೆ, ಈ ರೀತಿಯ ಅಡ್ಡದಾರಿಯ ವಿಚಾರಗಳನ್ನೇ ಹೇಳುವಂಥದ್ದು ಜಾಸ್ತಿಯಾಗಿದೆ. ಕೆಲವು ಬುದ್ಧಿಜೀವಿಗಳ ಹಾವಳಿ ಜಾಸ್ತಿಯಾಗಿದೆ. ಅಂತಹ ಬುದ್ಧಿಜೀವಿಗಳ ಹಾವಳಿಯಿಂದ ಬರಬಾರದಂತಹ ಧಾರಾವಾಹಿಗಳು ದೂರದರ್ಶನದಲ್ಲಿ ಪ್ರಸಾರವಾಗುತ್ತಿವೆ. ಆದ್ದರಿಂದ ಚಲನಚಿತ್ರಗಳಿಗೆ ಹೇಗೆ ಸೆನ್ಸಾರ್ ಬೋರ್ಡ್ ಇದೆಯೋ ಅದೇರೀತಿ ಧಾರಾವಾಹಿಗಳಿಗೂ ಕೂಡ ಸೆನ್ಸಾರ್ ಬರಬೇಕು ಎನ್ನುವಂತಹ ವಿಚಾರದ ಬಗ್ಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಡಬೇಕಾಗುತ್ತದೆ. ಆ ರೀತಿಯ ವ್ಯವಸ್ಥೆಯಾದಾಗ ಮಾತ್ರ ಅದು ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಇದರಲ್ಲಿ ಏನಾಗುತ್ತದೆ ಎಂದರೆ, ಚಾನಲ್‌ಗಳ ಮಾಲೀಕರು ಏತಕ್ಕೆ ಇದನ್ನು ಸೆಲೆಕ್ಟ್ ಮಾಡುತ್ತಾರೆ ಎಂದರೆ, it is a business for them. For advertisement they do it. ಉದಾಹರಣೆಗೆ ಹೇಳುವುದಾದರೆ, 1994ರಲ್ಲಿ ಟಿ.ವಿ.-9 ವಾಹಿನಿ ಪ್ರಾರಂಭವಾದಂತಹ ಸಂದರ್ಭದಲ್ಲಿ ಕೊಳವೆ ಬಾವಿಯೊಳಗೆ ಮಗುವೊಂದು ಬಿದ್ದ ದೃಶ್ಯಾವಳಿಗಳನ್ನು ಬೆಳಿಗ್ಗೆಯಿಂದ ಹಿಡಿದು ಮಾರನೆ ದಿನ ಬೆಳಿಗ್ಗೆಯವರೆಗೂ ನಿರಂತರವಾಗಿ ತೋರಿಸಿದರು. If it is a news channel, you must show it as news. ಮಾಧ್ಯಮದವರಿರುವುದು ಸಮಯಕ್ಕೆ-ಸಮಯಕ್ಕೆ ಸೇರಿಸಿ ದುಡ್ಡು ಮಾಡುವುದಕ್ಕೋಸ್ಕರ ಅಲ್ಲ; ಸದನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಮಾಧ್ಯಮದವರು ನಮ್ಮನ್ನು ಚರ್ಚೆಗೇನು ಕರೆಯುತ್ತಾರೆ, ಅವರು ನಮ್ಮನ್ನು ಕರೆಯುವುದು ನಾವು ಆ ವಿಷಯದ ಬಗ್ಗೆ ಏನು ಹೇಳುತ್ತೇವೆ ಎನ್ನುವ ಚರ್ಚೆಗಲ್ಲ; ನಾವು ಚರ್ಚೆ ಮಾಡುವಾಗ ಮಧ್ಯದಲ್ಲಿ ಜಾಹಿರಾತುಗಳನ್ನು ಕೊಟ್ಟು ದುಡ್ಡು ಮಾಡಿಕೊಳ್ಳುವುದಕ್ಕಾಗಿ. It is a pure business what they make. It should not be a business.

ನಾವು ನ್ಯೂಸ್ ಕೇಳಬೇಕಾದರೆ ಸರ್ಕಾರದ ಚಾನಲ್‌ಗಳಲ್ಲಿಯೇ ಕೇಳಬೇಕು. ಬೇರೆ ಚಾನಲ್‌ಗಳಲ್ಲಿ ಸತ್ಯಾಂಶ ಇರುವುದಿಲ್ಲ. ಯಾರೋ ಅಲ್ಲಿ 'ಹುಂಜ ಮೊಟ್ಟೆ ಇಟ್ಟಿದೆ' ಎಂದರೆ, ಹುಂಜ ಮೊಟ್ಟೆ ಇಟ್ಟಿದೆಯಂತೆ ಎನ್ನುವ ಸಂಗತ್ತಿಯನ್ನೇ ಮತ್ತೆ ಮತ್ತೆ ಪ್ರಸಾರ ಮಾಡಿ ದೊಡ್ಡ ಸುದ್ಧಿ ಮಾಡಿಬಿಡುತ್ತಾರೆ. ಮಧ್ಯದಲ್ಲಿ ಯಾರಾದರೂ ಎಲ್ಲಿಯಾದರೂ ಹುಂಜ ಮೊಟ್ಟೆ ಇಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಿದೆಯೇ ಎಂದು ಕೇಳಿದಂತಹ ಸಂದರ್ಭದಲ್ಲಿ 'ಹೌದಾ, ಹುಂಜ ಮೊಟ್ಟೆ ಇಡುವುದಿಲ್ಲವೇ? ಕ್ಷಮಿಸಿ ತಪ್ಪಾಯಿತು' ಎಂದುಬಿಡುತ್ತಾರೆ. ಈ ರೀತಿ ಅವರ ಅವಸರ ಎಷ್ಟಿದೆ ಎಂದರೆ, ಇತ್ತೀಚೆಗೆ ಟಿ.ವಿ. ಚಾನಲ್ ಸುದ್ದಿಗಾರ ಕ್ಯಾಮರಾ ಹಿಡಿದು ರೈಲ್ವೆ ಬ್ರಿಡ್ಜ್ ಬಳಿ ಕುಳಿತುಕೊಂಡಿದ್ದನ್ನು ನೋಡಿ, ಏಕೆ ಇಲ್ಲಿ ಕುಳಿತುಕೊಂಡಿದ್ದೀರಿ ಎಂದು ಕೇಳಿದಾಗ ಸರ್, ಆ ವಿಚಾರವನ್ನು ಆಮೇಲೆ ಹೇಳುತ್ತೇನೆ ಎಂದನು, 'ಆ ರೈಲ್ವೆ ಲೈನ್ ಕಿತ್ತುಹೋಗಿದೆ, ರೈಲ್ ಬಂದು ಬಿದ್ದುಹೋದ ತಕ್ಷಣ ನಾನು ಮೊದಲು ವರದಿ ಮಾಡಬೇಕು, ಅದಕ್ಕಾಗಿ ರೈಲ್ ಬಂದು ಬಿದ್ದು ಹೋಗುವುದಕ್ಕೋಸ್ಕರ ಕಾಯುತ್ತಿದ್ದೇನೆ' ಎಂದು ಆತ ಹೇಳಿದ. ಆತನಿಗೆ ಈ ರೈಲ್ವೆ ಲೈನ್ ಕಿತ್ತು ಹೋಗಿದೆ, ಇದನ್ನು ಸಂಬಂಧಪಟ್ಟವರಿಗೆ ತಿಳಿಸಿ ಮುಂದೆ ಆಗುವ ಅನಾಹುತವನ್ನು ತಪ್ಪಿಸಬೇಕೆನ್ನುವ ಸಾಮಾಜಿಕ ಜವಾಬ್ದಾರಿ ಇಲ್ಲ, ಅವನ ಜವಾಬ್ದಾರಿ ಇರುವುದು ರೈಲು ಬಂದು ಬಿದ್ದುಹೋದ ತಕ್ಷಣ ನಾನು ಮೊದಲು ನ್ಯೂಸ್ ಕೊಡಬೇಕು, ರೈಲು ಬೀಳುವುದನ್ನು ನೋಡಬೇಕು, ನಾನು ಅದರ ಫೋಟೋ ತೆಗೆಯಬೇಕು ಎನ್ನುವುದಾಗಿತ್ತು. ಇದು ಇವರ ಉದ್ದೇಶ. ಹೀಗಾಗಿ ಇಂತಹ ಚಾನಲ್‌ಗಳ ಮೇಲೆ, ಇಂತಹ ವರದಿಗಾರರ ಮೇಲೆ, ಇಂತಹ ಚಾನಲ್‌ಗಳ ಮಾಲೀಕರ ಮೇಲೆ ಯಾವ ವಿಧವಾದ ಕಾನೂನನ್ನು ತರಲಾಗುತ್ತದೆ? ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವುದರ ಜೊತೆಗೆ ನೀವು ಮಾಡಬೇಕಾದ ವ್ಯವಸ್ಥೆಗಳನ್ನು ಸಹ ಅಗತ್ಯವಾಗಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಮುಂದುವರೆದಿದೆ...

(356) 22.03.2017 01.10 SV-VK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸ್ನೇಹಿತರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ಒಂದು ವಿಚಾರಕ್ಕೆ ಒತ್ತನ್ನು ಕೊಡಲಾಗಿದೆ. ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕಿನ ಸಂಗತಿಗಳ ಬಗ್ಗೆ ಅತಿ ಹೆಚ್ಚು ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರ ಬಗ್ಗೆ ಹೇಳಿದ್ದಾರೆ. ಒಂದೆಡೆ ಸಾರ್ವಜನಿಕ ಬದುಕಿನಲ್ಲಿರತಕ್ಕಂತಹವರು, ಇನ್ನೊಂದೆಡೆ ಒಟ್ಟಾರೆ ಸಮಾಜದ ಮೇಲೆ ಬೀರತಕ್ಕಂತಹ ಪರಿಣಾಮ. 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂದು ಹಿಂದೆ ಹೇಳಲಾಗುತ್ತಿತ್ತು.

**ಸಭಾಪತಿಯವರು:-** ಈಗ 'ಕವಿ ಕಾಣದ್ದನ್ನು ಮಾಧ್ಯಮದವರು ಕಾಣುತ್ತಾರೆ'.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಈಗ ಅದನ್ನೇ ಹೇಳಲು ಹೊರಟಿದ್ದೆ. ರವಿ-ಕವಿ ಕಾಣದ್ದನ್ನು ಮಾಧ್ಯಮ ಸ್ನೇಹಿತರು ಕಾಣುತ್ತಿದ್ದಾರೆ. ನಾನು ಸುಮಾರು 35-40 ವರ್ಷದಿಂದ ಸಾರ್ವಜನಿಕ ಬದುಕಿನಲ್ಲಿದ್ದೇನೆ. ನಾನು ಲಾಯರ್, ನನ್ನ ಪತ್ನಿ ಡಾಕ್ಟರ್. ನನ್ನ ಮಗ ಈಗ ಲಾಯರ್ ಆಗಿದ್ದಾನೆ. 30 ವರ್ಷಗಳಿಂದ ಆದಾಯ ತೆರಿಗೆಯನ್ನು ಕಟ್ಟುತ್ತಿದ್ದೇವೆ. ಆದರೆ ನಮ್ಮ ಆಸ್ತಿ ಕೋಟಿಗಳಿಗೆ ಹೋಗಿಲ್ಲ. ಏಕಾಏಕಿ ಮನೆಯ ಒಳಗಡೆ ಕಾರು ಹೋಗಿ ಸೇರುವಂತಹ fallacious buildings ಅನ್ನು ಕಟ್ಟಿರುವಂತಹ ಮಾಧ್ಯಮ ಸ್ನೇಹಿತರು "ಯಾರ್ರೀ ಆ ಮಿನಿಸ್ಟರ್? ಯಾರ್ರೀ ಆ ಶಾಸಕ? ಕೇಳ್ತಾ ಇದ್ದಾರಾ?" ಎಂದರೆ ಅವರು ಎಷ್ಟು ಉದ್ಧಟತನದ ಮಾತುಗಳನ್ನು ಆಡುತ್ತಿದ್ದಾರೆ? ರಾಜಕಾರಣಿಗಳ ಬಗ್ಗೆ ಎಲ್ಲಾ ಮಾಧ್ಯಮದವರೂ ಹಾಗೆಯೇ ಎಂದು ನಾನು ಸಾರಾಸಗಟಾಗಿ ಹೇಳುವುದಿಲ್ಲ. ಒಂದು ಸಮಯದಲ್ಲಿ ಶ್ರೀ ಕೆ.ಜೆ.ಜಾರ್ಜ್ ಅವರನ್ನು ಕಂಡರೆ ಬಹಳ ಪ್ರೀತಿ. ಜಾರ್ಜ್ ಎಂದ ತಕ್ಷಣ ಏನಾದರೊಂದು ಲಿಂಕ್ ಕೊಟ್ಟು K.J.George has to resign. He has involved in it. ಹೀಗೆ ಅನೇಕರನ್ನು select ಮಾಡಿ target ಮಾಡುವ ಪ್ರವೃತ್ತಿ ಇದೆ. ಅದೇ ರೀತಿ character assassination ಮಾಡುವಂತಹದ್ದನ್ನು ಇಂದಿನ ಮಾಧ್ಯಮಗಳಲ್ಲಿ ಕಾಣಬಹುದಾಗಿದೆ. ಹಿಂದಿನ ಲೋಕಾಯುಕ್ತರಾಗಿದ್ದಂತಹ ಶ್ರೀ ಸಂತೋಷ್ ಹೆಗ್ಡೆಯವರ ವರದಿಯಲ್ಲಿ....

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಅದಕ್ಕೆ ಪರಿಹಾರವೇನೆಂದು ಹೇಳಿ. ಸರ್ಕಾರ ಏನು ಕ್ರಮ ಕೈಗೊಳ್ಳಬೇಕು? ಸರ್ಕಾರ ಇಂಥಿಂಥ ಆಕ್ಟ್ ಪ್ರಕಾರ ಇಂತಹ ಕ್ರಮ ಕೈಗೊಳ್ಳಬಹುದೆಂದು ಸರ್ಕಾರವನ್ನು ಎಚ್ಚರಿಸುವ ಸಲುವಾಗಿಯೇ ನಾನು ನಿಮ್ಮನ್ನು ಕರೆದಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಎಲ್ಲಾ ವಾಹಿನಿಗಳಲ್ಲಿಯೂ ಲೋಕಾಯುಕ್ತ ವರದಿಯಲ್ಲಿರತಕ್ಕಂತಹ ರಾಜಕಾರಣಿಗಳ ಹೆಸರುಗಳನ್ನು ಇಡೀ ರಾಜ್ಯವ್ಯಾಪಿ, ರಾಷ್ಟ್ರವ್ಯಾಪಿ ನಾವೆಲ್ಲರೂ ಚರ್ಚೆ ಮಾಡಿದ್ದೇವೆ. ಆದರೆ ಅದೇ ವರದಿಯಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಹಣ ತೆಗೆದುಕೊಂಡಿರುವಂತಹ ಮಾಧ್ಯಮ ಸ್ನೇಹಿತರು ಯಾರು ಎಂಬುದನ್ನು ಒಂದು ಪತ್ರಿಕೆಯವರಾಗಲಿ ಅಥವಾ ವಾಹಿನಿಯವರಾಗಲಿ in length ಚರ್ಚೆ ಮಾಡಿದ್ದರೆ ಅಥವಾ ಬೆಳಕು ಚೆಲ್ಲಿದ್ದರೆ ಅಂತಹವರು ಆದರ್ಶಗಳ ಬಗ್ಗೆ ಬದ್ಧತೆ ಇರುವವರು ಎಂದು ಹೇಳಬಹುದು. ನನಗೆ ಈಗಲೂ ಸ್ವಲ್ಪ ಜ್ಞಾಪಕವಿದೆ. ಶ್ರೀ ಹೆಚ್.ಡಿ.ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದ ಸಂದರ್ಭ. ಒಂದು ಸಾರಿ ಅವರ ಮೊಮ್ಮಗಳ ವಯಸ್ಸಿನ ಹೆಣ್ಣುಮಗಳು ಪ್ರೆಸ್‌ಕ್ಲಬ್‌ನಲ್ಲಿ ಮಾತನಾಡುತ್ತಾ 'Mr. Deve Gowda' ಎಂದು ಸಂಬೋಧಿಸಿದ್ದರು. ಅಂದರೆ ಎಷ್ಟರ ಮಟ್ಟಿಗೆ ಕೆಲವರಿಗೆ audacity ಇದೆ ಎನ್ನುವ ಕುರಿತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಹೇಳುವಂತಹದ್ದು. ಮಾಧ್ಯಮದಲ್ಲಿದ್ದಾರೆ ಎಂದರೆ ಅವರು ಸರ್ವಜ್ಞರು ಎಂದು ತಿಳಿದುಕೊಂಡಿದ್ದಾರೆ. So, we are above the law, we are above the constitution ಎಂದು ತಿಳಿದುಕೊಂಡಿದ್ದಾರೆ. ನಮ್ಮ ಸಂವಿಧಾನದ ರೀತ್ಯಾ Legislature, Judiciary, Executive, ಇದರ ಜೊತೆಗೆ ನಾಲ್ಕನೇ ಸ್ಥಂಭ ಎಂದು ಕರೆಯಲಾಗುವ ಮಾಧ್ಯಮವೂ ಸಹ ತನ್ನದೇ ಆದಂತಹ ಇತಿಮಿತಿಗಳನ್ನು ಹೇರಿಕೊಂಡು ಸ್ವಯಂ ನಿಯಂತ್ರಣ ಮಾಡಿಕೊಳ್ಳದಿದ್ದಲ್ಲಿ ಬಹಳ ಕಷ್ಟವಾಗುತ್ತದೆ. ಮಹಿಳಾ ಮತ್ತು ಮಕ್ಕಳ ವಿಚಾರದಲ್ಲಿ ನನಗೆ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಸಣ್ಣಪುಟ್ಟ ಘಟನೆಗಳು ಆದ ತಕ್ಷಣವೇ without verifying the genuineness ವರದಿ ಮಾಡುತ್ತಾರೆ. ಎಲ್ಲೋ ಒಂದು ಕಡೆ ಭಾವ-ನಾದಿನಿಯ ಪ್ರಕರಣದಲ್ಲಿ ಭಾವ ನಾದಿನಿಯನ್ನು ಹಿಡಿದುಕೊಂಡು ಮುತ್ತು ಕೊಟ್ಟರು, ತುಟಿಯನ್ನು ಕಚ್ಚಿದರು ಎಂದು ಎಲ್ಲಾ ವಾಹಿನಿಗಳಲ್ಲಿ ಬಿತ್ತರಿಸಲಾಯಿತು. ಆದರೆ ಅಂತಿಮವಾಗಿ ಏನಾಯಿತು? It was a conspiracy hatched by the same family. ಅದನ್ನು ಜನರಿಗೆ ತೋರಿಸಬೇಕಾದಾಗ ಅದೇ ಪರಿಣಾಮದಲ್ಲಿ ತೋರಿಸಲಾಯಿತೆ? ಇದರ ಜೊತೆಗೆ ಎಲ್ಲರೂ ಸಹ ಸಾರ್ವಜನಿಕ ಬದುಕಿನಲ್ಲಿ ಆದರ್ಶಪ್ರಾಯರಾಗಿರಬೇಕು. ಕೆಲವರು ಸಿನಿಮಾ ನೋಡುತ್ತಾರೆ, ಇಸ್ಪೀಟ್ ಆಡುತ್ತಾರೆ, ಹೆಂಡ ಕುಡಿಯುತ್ತಾರೆ, ರೇಸ್‌ಗೆ ಹೋಗುತ್ತಾರೆ, ಗರ್ಲ್ ಫ್ರೆಂಡ್ ಇದ್ದಾರೆ ಎಂದಾಗ ಅದು ಅವರ ವೈಯಕ್ತಿಕ ಬದುಕಿನ ಮೇಲೆ ಕಾನೂನುಬಾಹಿರವಾದಂತಹ ಕೃತ್ಯಗಳನ್ನು ನಡೆಸಿ ಸಮಾಜದ ಮೇಲೆ ವ್ಯವಸ್ಥೆಯ ಮೇಲೆ ದುರ್ಬಳಕೆಯಾಗುತಕ್ಕಂತಹ ಪರಿಣಾಮವನ್ನು ಬೀರತಕ್ಕಂತಹ ವಿಚಾರಗಳ ಬಗ್ಗೆ ಒತ್ತು ಕೊಡಬೇಕು. ಆದರೆ ಇಲ್ಲಿ ಏನಾಗುತ್ತಿದೆಯೆಂದರೆ ನಿಮ್ಮನ್ನೂ ಬಿಡುವುದಿಲ್ಲ, ಮುಖ್ಯಮಂತ್ರಿಗಳನ್ನೂ ಬಿಡುವುದಿಲ್ಲ, ನಮ್ಮ ಯಾರನ್ನೂ ಬಿಡುವುದಿಲ್ಲ. ಅವರಿಗೆ Evidence Act ಬೇಕಿಲ್ಲ. Criminal Procedure Code ಬೇಕಿಲ್ಲ. Indian Penal Code ಬೇಕಿಲ್ಲ. ಅವರೇ as if 24 hours ನಲ್ಲಿ, why 24 hours, 24 minutes ನಲ್ಲಿ they will come to a conclusion. ಒಂದು judgement ಕೊಟ್ಟು ಇವನು ತಪ್ಪು ಮಾಡಿದ್ದಾನೆ ಎಂದು ಹೇಳುತ್ತಾರೆ.

ಅಂಗನವಾಡಿಯವರ ಮುಷ್ಕರ ನಡೆಯುತ್ತಿದೆ. ಸರ್ಕಾರದ ಪರವಾಗಿ ನಾವೆಲ್ಲರೂ ಸಹ ಅಂದರೆ ನಾನು, ಶ್ರೀಮತಿ ಮೋಟಮ್ಮ, ಶ್ರೀ ಹೆಚ್.ಎಂ.ರೇವಣ್ಣ, ಶ್ರೀ ಶರಣಪ್ಪ ಮಟ್ಟೂರ ಎಲ್ಲರೂ ಹೋಗಿ ಅವರ ಹತ್ತಿರ ಮಾತನಾಡಿಕೊಂಡು ಬಂದಿದ್ದೇವೆ. ರಾತ್ರಿ 12 ಗಂಟೆಗೆ ಟಿ.ವಿ. ಹಾಕಿದರೆ 'ನಿದ್ರಾವಸ್ಥೆಯಲ್ಲಿರುವ ಸರ್ಕಾರ' ಎಂದು ಬಿತ್ತರಿಸಲಾಗುತ್ತಿತ್ತು. ಅವರೇನು ನಿರ್ದಿಷ್ಟವಾದಂತಹ ಮುಷ್ಕರಕ್ಕೆ ಬಂದಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಟೀಸ್ ಕೊಟ್ಟಿದ್ದಾರೆಯೇ? ನಿಜ, ಅವರಿಗೆ ತೊಂದರೆಯಾಗಿದೆ. ನಮ್ಮ ಅಕ್ಕತಂಗಿಯರು ಆ ರೀತಿ ಬೀದಿಯಲ್ಲಿರಬಾರದು.

(...ಮುಂದು)

(357) 22-03-2017 1-20 RC:BNS

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):**

ಆದರೆ ಸರ್ಕಾರ ಸಿಕ್ಕಂತಹ ಅವಕಾಶದಲ್ಲಿ ಅವರಿಗೆ ತಾತ್ಕಾಲಿಕವಾಗಿ urinals ಮತ್ತೊಂದು ಮಗದೊಂದು ಕುಡಿಯುವ ನೀರಿಗೆ ವ್ಯವಸ್ಥೆಯನ್ನು ಮಾಡಿದೆ. ಆದರೆ ಅದನ್ನು ಪರಿಶೀಲನೆ ಮಾಡದೆ, ಇರುವಂತಹ ವ್ಯವಸ್ಥೆಯೇ ಸರಿ ಇಲ್ಲ ಎನ್ನುವಂತಹ ರೀತಿಯಲ್ಲಿ ಇವತ್ತೇನು ವಾದ ಮಾಡುವಂಥದ್ದು ಇದೆ ಅದು ಸರಿಯಲ್ಲ. ಅಲ್ಲದೆ ನಾವು ಮಾತ್ರ ಉತ್ತಮರು, ಅದರಲ್ಲಿಯೂ ವಿಶೇಷವಾಗಿ ರಾಜಕಾರಣದಲ್ಲಿ ಇರುವಂತಹವರೆಲ್ಲರೂ ಸಹ ಒಂದು ರೀತಿ ಪ್ರಯೋಜನ ಇಲ್ಲದೆ ಇರುವಂತಹವರು, ಅದರಲ್ಲಿಯೂ ಬಹುತೇಕರು ಭ್ರಷ್ಟರು. ಬಹುತೇಕರು... ಆ ಪದ ಬೇಡವೆಂದು ನಾನು ಬಳಸುತ್ತಿಲ್ಲ. ಪ್ರಯೋಜನ ಇಲ್ಲದೆ ಇರುವಂತಹ ರೀತಿಯಲ್ಲಿ ಅದನ್ನು ಬಿತ್ತರಿಸುವಂಥದ್ದು ಸರಿಯಲ್ಲ.

ಮಾನ್ಯ ಸಭಾಪತಿಯವರೇ, ನಾನು ವೈಯಕ್ತಿಕ ಬದುಕಿನ ವಿಚಾರವಾಗಿ ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಮಾಧ್ಯಮದಲ್ಲಿರುವಂತಹ ಸುಮಾರು ಮೂರು ಅಥವಾ ನಾಲ್ಕು cases ನನ್ನ ಬಳಿ ಬಂದಿವೆ. ವೈಯಕ್ತಿಕ ಬದುಕಿನ ಬಗ್ಗೆ ಸಿ.ಡಿ.ಗಳನ್ನು ಮಾಡಿ ಅವರ ಮೇಲೆ ಯಾವ ರೀತಿ ಲೈಂಗಿಕ ದೌರ್ಜನ್ಯಗಳು ನಡೆದಿವೆ ಎಂಬುದು ನನ್ನ ಸಮಿತಿಗೆ ಬಂದಿವೆ. ಆದರೆ ಅದನ್ನೂ ಸಹ ಯೋಚನೆ ಮಾಡಬೇಕಲ್ಲವೆ? ನಾನು ಅದನ್ನು ಸಹ ಬಿತ್ತರಿಸಬೇಕೆಂದು ಹೇಳುವುದಿಲ್ಲ, ಅದನ್ನೂ ಸಹ ಬಿತ್ತರಿಸಬಾರದು. ಅದೇ ರೀತಿ ಇದನ್ನೂ ಸಹ ಬಿತ್ತರಿಸಬಾರದು. ಒಬ್ಬ ಮನುಷ್ಯನ ವ್ಯಕ್ತಿತ್ವ ಬೆಳೆಸಿಕೊಳ್ಳುವುದಕ್ಕೆ ಹತ್ತಾರು ವರ್ಷಗಳು ಬೇಕಾಗುತ್ತದೆ. ಎಲ್ಲೋ ಒಂದು bad momentನಲ್ಲಿ ಒಂದು incident ನಡೆದಿದ್ದರೆ ಅದೊಂದನ್ನೇ glorify ಮಾಡಿ ಅವನ ಇಡೀ ವ್ಯಕ್ತಿತ್ವವನ್ನು ಮುಗಿಸಿದರೆ ಬಹುಶಃ ಸಾರ್ವಜನಿಕ ಬದುಕಿನಲ್ಲಿ ಅನೇಕರು ಉಳಿಯುವಂಥದ್ದು ಕಷ್ಟವಾಗುತ್ತದೆ ಎನ್ನುವಂಥ ಮಾತನ್ನು ಅತ್ಯಂತ ವಿನಯವಾಗಿ ಹೇಳಬಯಸುತ್ತೇನೆ. ಮಾಧ್ಯಮ ಸ್ನೇಹಿತರಲ್ಲಿ ಈಗಲೂ ಸಹ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವಂಥವರು ಅನೇಕರಿದ್ದಾರೆ. ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರ ಗಮನ ಹರಿಸಬೇಕಾಗಿರುವಂಥದ್ದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಯಾರು ಮಾಧ್ಯಮ ಸ್ನೇಹಿತರಿದ್ದಾರೆ, there is an Act called the Cable Television Networks (Regulation) Act, 1995. ಈ Cable Television Networks (Regulation) Act, 1995 ಎಲ್ಲವನ್ನೂ ಸಹ ನಾನು refer ಮಾಡುವುದಕ್ಕೆ ಹೋಗುವುದಿಲ್ಲ. Sections 19 and 20 are very relevant:

"**Section 19**: Power to prohibit transmission of certain programmes in public interest."

ನೀವು ಯಾವುದೇ ಟಿ.ವಿ. ಸೀರಿಯಲ್ ನೋಡಿ, ಸೀರಿಯಲ್‌ಗಳನ್ನು T.V. channels telecast ಮಾಡುತ್ತವೆ. ಆ channels ಹೆಸರನ್ನು ನಾನು ಹೇಳಬಯಸುವುದಿಲ್ಲ. ನೀವು ಯಾವುದೇ ಟಿ.ವಿ. ಸೀರಿಯಲ್ ನೋಡಿ ಅಲ್ಲಿ ಇತ್ತೀಚೆಗೆ ಒಂದು ಹೊಸ trend ಕಾಣಿಸುತ್ತಿದೆ. ಏನೆಂದರೆ, 'Villain' ಯಾರಪ್ಪ ಎಂದರೆ ಮಹಿಳೆ. ನೀವು ಯಾವುದೇ ಸೀರಿಯಲ್ ನೋಡಿದರೂ ಸಹ ಒಬ್ಬ ಹೆಣ್ಣು ಮಗಳನ್ನು ಮತ್ತೊಬ್ಬ ಮಹಿಳೆ ಅಂದರೆ ಅತ್ತೆ ಅಥವಾ ಮತ್ತೊಬ್ಬರು ಹೆಚ್ಚಾಗಿ ಶೋಷಣೆ ಮಾಡುವಂಥದ್ದು majority ಆಗಿ ಕಾಣುತ್ತದೆ. ಆ ಸೀರಿಯಲ್ ನೋಡಿದ ತಕ್ಷಣ ಹೆಣ್ಣು ಮಕ್ಕಳ ಬಗ್ಗೆ ಯಾವ ರೀತಿಯಾದಂತಹ ಭಾವನೆ ಮೂಡಬಹುದು? ರಾತ್ರಿ ಸಮಯದಲ್ಲಿ criminal offences ಬಗ್ಗೆ ಬರುತ್ತದೆ. "ಕ್ರೈಂ ಸ್ಟೋರಿ" "ಕ್ರೈಂ ಡೈರಿ" "ಎಫ್.ಐ.ಆರ್." ಇನ್ನೂ ಏನೇನೋ ಬರುತ್ತದೆ. Trial conclude ಆಗಿರುವುದಿಲ್ಲ.

ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭದ ದಿವಸಗಳಲ್ಲಿ criminal side practice ಮಾಡಿ ಎರಡು murder cases conduct ಮಾಡಿದೆ. ಒಂದು ವಿಶ್ವನೀಡಂ ಹತ್ತಿರ ನಡೆದಂತಹ dowry death case, ಮತ್ತೊಂದು ಜಯನಗರದ South End Circle ಬಳಿ ನಡೆದಂತಹ ಒಂದು death case. ಆ ಎರಡೂ murder casesನ್ನು ನಾನು conduct ಮಾಡಿ ಎರಡರಲ್ಲೂ acquittal order ತೆಗೆದುಕೊಂಡು, criminal side tension ತಡೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಆಮೇಲೆ ನಾನು Constitution, civil and service matters ಗೆ ಬದಲಾವಣೆ ಮಾಡಿಕೊಂಡೆ. ಸುಮಾರು 1984-1985ನೇ ಸಾಲಿನಲ್ಲಿ ಹನುಮಂತನಗರದಲ್ಲೋ ಅಥವಾ ಕೆಂಪೇಗೌಡ ನಗರದಲ್ಲೋ ಒಬ್ಬ ವ್ಯಕ್ತಿ ಅವನ ಹೆಂಡತಿಯ ಕತ್ತು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿದು ತಲೆಯ ಸಮೇತ, ಮಚ್ಚಿನ ಸಮೇತ ಪೋಲೀಸ್ ಸ್ಟೇಷನ್‌ಗೆ ಹೋಗಿ ನನ್ನ ಹೆಂಡತಿಯ character ಸರಿ ಇರಲಿಲ್ಲ ಅದಕ್ಕೋಸ್ಕರ ನಾನು ಕೊಲೆ ಮಾಡಿದೆ ಎಂದು ಪೋಲೀಸರ ಮುಂದೆ murder ಮಾಡಿರುವುದಾಗಿ confess ಮಾಡಿಕೊಂಡರೂ ಸಹ ultimately ಆ ಕೇಸ್‌ನಲ್ಲಿ acquittal ಆಯಿತು, because of lack of evidence. Prosecution has to establish beyond doubt that he has committed an offence. That is why he should be punished under Sec.302 of the Indian Penal Code. ಆದರೆ ಈಗ ಏನಾಗಿದೆ ಎಂದರೆ without any sort of trial, criminal cases ನಲ್ಲಿ ಏನೂ ಆಗದೆ ಇದ್ದರೂ ಸಹ ಯಾರದೋ ಒಬ್ಬರ ಹೆಸರನ್ನು ತೆಗೆದುಕೊಂಡು ಇವನು ಹೀಗೆ ಮಾಡಿದ್ದಾನೆ, ಹಾಗೆ ಮಾಡಿದ್ದಾನೆ ಎಂದು ತೋರಿಸುವುದು ಎಷ್ಟರ ಮಟ್ಟಿಗೆ ಸರಿ?

**ಸಭಾಪತಿಯವರು:-** ಸರ್ಕಾರ ಏನು ಮಾಡಬೇಕೆಂದು ನೀವು ಹೇಳಲೇ ಇಲ್ಲ. ಅದನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು Section 19ರ ಬಗ್ಗೆ ಹೇಳುತ್ತೇನೆ:

***"Power to prohibit transmission of certain programmes in public interest****: Where any authorised officer thinks it necessary or expedient so to do in public interest, he may, by order, prohibit any cable operator from transmitting or re-transmitting any programme or channel if, it is not in conformity with the prescribed programme code referred to in section 5 and advertisement code referred to in section 6 or if it is likely to promote, on grounds of religion, race, language, caste or community or any other ground whatsoever, disharmony or feelings of enmity, hatred or ill-will between different religious, racial, linguistic or regional groups or castes or communities or which is likely to disturb the public tranquility."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ "Authorised Officer" ಸರ್ಕಾರ ಹೇಳಿರುವಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ವಾರ್ತಾ ಅಧಿಕಾರಿಗಳು ಮತ್ತು ರಾಜ್ಯ ಮಟ್ಟದಲ್ಲಿ ಆಯಾಯಾ ಇಲಾಖೆಯ ಕಾರ್ಯದರ್ಶಿಗಳು "Authorised Officers" ಆಗಿರುತ್ತಾರೆ.

ಅದೇ ರೀತಿಯಲ್ಲಿ,

***Section 20: Power to prohibit operation of cable television network in public interest****: (1)Where the Central Government thinks it necessary or expedient so to do in public interest, it may prohibit the operation of any cable television network in such areas as it may, by notification in the Official Gazette, specified in this behalf. Where the Central Government thinks it necessary or expedient so to do in the interest of the*

*(i) sovereignty or integrity of India; or*
*(ii) security of India; or*
*(iii) friendly relations of India with any foreign State; or*
*(iv) public order, decency or morality, it may, by order, regulate or prohibit the transmission or re-transmission of any channel or programme."*

ಇಲ್ಲಿ public order, decency or morality ಬಗ್ಗೆ ಯಾರಿಗೂ ಸಹ there is no application of mind while telecasting a news. ಆದುದರಿಂದ ನನಗನ್ನಿಸುತ್ತಿದೆ ಇವತ್ತು ರಾಜ್ಯ ಸರ್ಕಾರಕ್ಕೆ ಇದೊಂದು high time to invoke the provisions of Sections 19 and 20 of the the Cable Television Networks (Regulation) Act, 1995. ತಮಿಳುನಾಡಿನಲ್ಲಿ ದೂರದರ್ಶನದ ಬಗ್ಗೆ ಒಂದು ಕಾನೂನನ್ನು ತಂದಿದ್ದಾರೆ. ಅದೇ ರೀತಿ ತೆಲಂಗಾಣದಲ್ಲಿ ಒಂದು ಕಾನೂನನ್ನು ತಂದಿದ್ದಾರೆ. ಯಾರು public interest ನ public order, decency or morality ಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ ಅವರನ್ನು ನಿಯಂತ್ರಿಸುವಂಥದ್ದಕ್ಕೆ ಪಕ್ಕದ ರಾಜ್ಯಗಳಾದಂತಹ ತಮಿಳು ನಾಡು ಮತ್ತು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಲಂಗಾಣದಲ್ಲಿ ಯಾವ ರೀತಿ ಕಾನೂನನ್ನು ತಂದಿದ್ದಾರೆ ಆ ರೀತಿ ಇದನ್ನು ನಿಯಂತ್ರಿಸುವುದಕ್ಕೆ, ಅವರಿಗೆ under Article 19 Freedom of expression ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. There are umpteen number of judgments rendered by the Hon'ble Supreme Court of India which clearly says ನಿಮಗೂ ಸಹ ಕೆಲವು restrictions ಇದೆ. ನಿಮಗೂ ಸಹ defamation ಹಾಗೂ ಇನ್ನಿತರ provisions attract ಆಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುವುದರ ಜೊತೆಗೆ, ರಾಜ್ಯ ಸರ್ಕಾರ free ಕೊಡುವಂಥದ್ದಕ್ಕೆ as if ಅವರೇ ಸತ್ಯ ಹರಿಶ್ಚಂದ್ರರು ಬೇರೆ ಎಲ್ಲರೂ ಸಹ ಬೇರೆ ರೀತಿ ಎಂಬ ಪ್ರವೃತ್ತಿ ಹೋಗಬೇಕು ಎನ್ನುವುದಾದರೆ stringent action initiate ಮಾಡುವಂಥ ಕಾನೂನನ್ನು ಸರ್ಕಾರ ತರಬೇಕು. ಇದರ ಜೊತೆಗೆ ಯಾರು 'Authorised Officers' ಇದ್ದಾರೆ, ನಾನು ಇಷ್ಟೇ ಹೇಳುತ್ತೇನೆ Deputy Commissioner ಅವರಿಗೆ Secretary ಅವರಿಗೆ authorize ಮಾಡಬೇಡಿ.

(ಮುಂದು)

(358) 22.03.2017 KG.BNS 1.30

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಬೇರೆ ಯಾರಿಗೆ ಕೊಡಬೇಕು ಹೇಳಿ? ಯಾಕೆ ಕೊಡಬಾರದೆಂದು ಕಾರಣಗಳನ್ನು ಹೇಳುವುದಕ್ಕೆ ಹೋಗಬೇಡಿ. ಇದನ್ನು ಯಾರಿಗೆ ಕೊಡಬೇಕು ಎಂಬುದನ್ನು ಹೇಳಿ? ತಾವು ಈ ವಿಷಯದ ಮೇಲೆ ಇಷ್ಟೊಂದು ಗಂಭೀರವಾಗಿ ಮಾತನಾಡುತ್ತಿದ್ದೀರಿ. I want some direction to be given through this House to the Government. ಅದಕ್ಕಾಗಿ explanation ಬೇಡ. Come to the conclusion.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಬಹುಶಃ ನನಗೆ ಅನಿಸುತ್ತದೆ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇದನ್ನು ಚರ್ಚೆ ಮಾಡಿ ಇದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಆಯಿತು. ಅದನ್ನೇ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ಸಮಿತಿ ರಚನೆ ಮಾಡಿ ಇದರ ಬಗ್ಗೆ ಯಾವ ರೀತಿಯ ಕ್ರಮಗಳನ್ನು ಜರುಗಿಸಿದರೆ...

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಸಮಿತಿಯನ್ನು ಯಾರು ಮಾಡುವುದು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರ ಒಂದು legislature body ಯ ಒಂದು ಕಮಿಟಿ ಮಾಡಿ. ಯಾವ ರೀತಿಯ ಕಾನೂನನ್ನು ರೂಪಿಸಿದರೆ ಈ healthy atmosphere create ಮಾಡಲಿಕ್ಕೆ ಸಾಧ್ಯತೆ ಇದೆ ಎನ್ನುವುದರ ಬಗ್ಗೆ ಒಂದು ವರದಿಯ ಆಧಾರ ಮೇರೆಗೆ ಕಾನೂನಿಗೆ ಬದಲಾವಣೆ ತರುವಂತಹ ಪ್ರಯತ್ನ ಮಾಡುವಂತಹದ್ದು... ಈಗ ಏನಾಗುತ್ತದೆ, Deputy Commissioners...

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, details ಗೆ ಹೋಗಬೇಡಿ. You have come to a very good point.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಬಹುಶಃ ನನಗೆ ಅನಿಸುತ್ತದೆ ಅನುಭವ ಇರತಕ್ಕಂತಹ ಹಾಗೂ ಮಾಧ್ಯಮದಲ್ಲಿಯೇ ಕೆಲಸ ಮಾಡಿರತಕ್ಕಂತಹ ಸುಮಾರು 60 ರಿಂದ 65 ವರ್ಷದ ವಯೋಮಿತಿಯಲ್ಲಿ ಇರುವಂತಹವರು ಒಬ್ಬರು. ಸಾರ್ವಜನಿಕ ಬದುಕಿನಲ್ಲಿ ಇರತಕ್ಕಂತಹ ಯಾರಾದರೂ ಒಬ್ಬರು. ಅದೇ ರೀತಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ನಿವೃತ್ತಿ ಆಗಿರುವಂತಹ...

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ನನ್ನದೊಂದು ಸಲಹೆ. ನಿವೃತ್ತ ಜಿಲ್ಲಾ ನ್ಯಾಯಧೀಶರನ್ನು ಜಿಲ್ಲಾ ಸಮಿತಿಗಳಿಗೆ ನೇಮಕ ಮಾಡುತ್ತಾರೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೆ, ಮಾನ್ಯ ಉಗ್ರಪ್ಪನವರು ಮಾತನಾಡಲಿ ಬಿಡಿ. it is not final. It is only his suggestion. ಮಾನ್ಯ ರಮೇಶ್ ಬಾಬುರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರು ಕಮಿಟಿ ಮಾಡಬೇಕೆಂದು ಮತ್ತು ಆ ಕಮಿಟಿಯಲ್ಲಿ ಯಾರು ಯಾರು ಇರಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಹೇಳಿದ್ದನ್ನು ನಾವು ಕೇಳಬೇಕು ಅಲ್ಲವಾ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಬಹುಶಃ ಇದರ ವಿಸ್ತೀರ್ಣ ಜಾಸ್ತಿ ಇರುವಂತಹ ಹಿನ್ನೆಲೆಯಲ್ಲಿ, ಒಬ್ಬರು ಮಾಧ್ಯಮ ಮಿತ್ರರು. ಒಬ್ಬರು judiciary ಗೆ ಸಂಬಂಧಪಟ್ಟವರು. ಒಬ್ಬರು ಲೀಗಲ್‌ಗೆ ಸಂಬಂಧಪಟ್ಟವರು. ಒಬ್ಬರು ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿರುವಂತಹವರು. ಇನ್ನೊಬ್ಬರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿರುವಂತಹವರು. ಇನ್ನೊಬ್ಬರು ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಿರುವಂತಹವರು ಇರಬೇಕು. ಈ ರೀತಿ 5 ಅಥವಾ 7 ಜನರು ಇರುವಂತಹ ಒಂದು ಸಮಿತಿಯನ್ನು ಮಾಡಬೇಕು ಮತ್ತು ಅವರಿಗೆ Civil Procedure Code (CPC) apply ಆಗುವಂತಹ ರೀತಿಯಲ್ಲಿ ಇರಬೇಕು. ಏಕೆಂದರೆ, ಯಾರಿಗಾದರೂ summon ಮಾಡುವಂತಹ ರೀತಿಯಲ್ಲಿ. ನಮ್ಮ ಕಾನೂನಿನ ಚೌಕಟ್ಟಿನಲ್ಲಿ ಒಂದು status ಅನ್ನು ಕೊಡುವಂತಹ ದಿಕ್ಕಿನಲ್ಲಿ ಒಂದು ಸಮಿತಿಯನ್ನು ಮಾಡಿ. ಆಗ ಬಹುಶಃ ಈ ರೀತಿಯ ವಿನಾಕಾರಣ blackmail ಮಾಡುವಂತಹ, ವಿನಾಕಾರಣ ಆಪಾದನೆಗಳನ್ನು ಮಾಡುವಂತಹ, ವಿನಾಕಾರಣ ತೇಜೋವಧೆಗಳನ್ನು ಮಾಡತಕ್ಕಂತಹ ಪ್ರವೃತ್ತಿಗಳನ್ನು ತಡೆಯಲಿಕ್ಕೆ ಸಾಧ್ಯತೆ ಇದೆ. ಏಕೆಂದರೆ, ಸಭ್ಯರು ಸಹ ಸಾರ್ವಜನಿಕ ಬದುಕಿಗೆ ಹೋಗಬೇಕಾದರೆ ಯೋಚನೆ ಮಾಡುವ ಪರಿಸ್ಥಿತಿ ಇದೆ. ನಾವು 50% ಮಹಿಳೆಯರಿಗೆ ಮೀಸಲು ಇಟ್ಟಿದ್ದೇವೆ. ಅದರಲ್ಲಿ ಏನಾಗುತ್ತದೆ, ಈ ರೀತಿಯ allegations ಬರುವಂತಹ ಸಮಯದಲ್ಲಿ ಹೆಣ್ಣು ಮಕ್ಕಳು ಯಾಕೆ ರಾಜಕಾರಣಕ್ಕೆ ಹೋಗುತ್ತೀರಿ? ಯಾಕೆ ವಿದ್ಯಾವಂತರು ರಾಜಕಾರಣಕ್ಕೆ ಹೋಗುತ್ತೀರಿ? ಎನ್ನುವಂತಹ ಸ್ಥಿತಿ ಇದೆ. ಹಾಗಾಗಿ, ಗೌರವಯುತವಾಗಿ ರಾಜಕಾರಣದಲ್ಲಿ ಅಥವಾ ಸಾರ್ವಜನಿಕ ಬದುಕಿನಲ್ಲಿ ಇರಬೇಕೆಂದರೆ, ಈ ರೀತಿಯ ವಿನಾಕಾರಣ ಟೀಕೆಗಳಿಗೆ ಒಂದು ಕಡಿವಾಣ ಹಾಕುವಂತಹದ್ದಕ್ಕೆ ಮುಂದಾಗುವುದು ಅಗತ್ಯ ಇದೆ. ಇದು high time. ಸರ್ಕಾರ ಈ ಕುರಿತು ಒಂದು ಕಾನೂನನ್ನು ಮಾಡುವುದಕ್ಕೆ ಮುಂದಾಗಲಿ. ಇದರ ಬಗ್ಗೆ ಚಿಂತನೆಗಳು ನಡೆದು ನಮ್ಮ ರಾಜ್ಯದಲ್ಲಿಯೂ ಸಹ, ಉತ್ತಮ healthy ಪ್ರಜಾಪ್ರಭುತ್ವದ ವ್ಯವಸ್ಥೆ ಇದೆ ಎಂದಾಗಲಿ ಎಂದು ಹೇಳಿ ನಾನು ಆಶಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಎರಡು ನಿಮಿಷ ಕಾಲಾವಕಾಶ ಮಾಡಿ ಕೊಡಿ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಈಗ ಸಮಯ 1.30 ಗಂಟೆ ಆಗಿದೆ. ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಾರೆ. ಮಾನ್ಯ ಉಗ್ರಪ್ಪನವರು ವಿವರವಾಗಿ ಮಾತನಾಡಿದರು. ಹಾಗಾಗಿ, ಅವರಿಗೆ ಮಾತನಾಡಲು ಅವಕಾಶ ಕೊಟ್ಟೆ. ತಾವು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುವುದಾದರೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಿಯಮ 330 ರಡಿಯಲ್ಲಿ "Electronic ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕು ಸಂಗತಿಗಳ ಬಗ್ಗೆ ಅತಿ ಹೆಚ್ಚಾಗಿ ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ಹಲವಾರು ದುಷ್ಪರಿಣಾಮಗಳು ಬೀರುತ್ತಿವೆ" ಎಂದು ಹೇಳಿದ್ದಾರೆ. ಮಾನ್ಯ ಉಗ್ರಪ್ಪನವರೆ, ಒಂದು ನಿಮಿಷ ಕೇಳಿ. ಪ್ರತಿದಿವಸ ಟಿ.ವಿ.ಯಲ್ಲಿ ಬರುತ್ತಿರುವ ಭವಿಷ್ಯದ ಬಗ್ಗೆ ಹೇಳುತ್ತೇನೆ. ಈಗ ನನ್ನ ವೈಯಕ್ತಿಕ ವಿಷಯದ ಬಗ್ಗೆ ಹೇಳುತ್ತೇನೆ. ಆಕೆ ನನ್ನ ತಂಗಿ ಮಗಳು. ನಾನು ಆಕೆಯ ಹೆಸರನ್ನು ಹೇಳಿ ಬಿಡುತ್ತೇನೆ. ಏಕೆಂದರೆ, ನನಗೆ ಆ ಘಟನೆಯಿಂದ ಸಾಕಾಗಿ ಬಿಟ್ಟಿದೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಆಕೆಯ ಹೆಸರನ್ನು ಇಲ್ಲಿ ಹೇಳಬೇಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನನ್ನ ತಂಗಿ ಮಗಳು phone ಮಾಡಿ ಮನೆಯಲ್ಲಿ ನೆಮ್ಮದಿ ಇಲ್ಲವೆಂದು ಭವಿಷ್ಯ ಕೇಳುತ್ತಾಳೆ. ಅದಕ್ಕೆ ಸ್ವಾಮೀಜಿ ನಿಮ್ಮ ಅತ್ತೆ ಮಾವ ಸೇರಿಕೊಂಡು ನಿನಗೆ ಮಾಟ ಮಂತ್ರ ಮಾಡಿಸಿ ನಿಂಬೆಕಾಯಿ ಮತ್ತು ತೆಂಗಿನ ಕಾಯಿಯನ್ನು ಬಾಗಿಲಲ್ಲಿ ಹಾಕಿದ್ದಾರೆ. ಅದಕ್ಕೆ ನಿಮ್ಮ ಅತ್ತೆ ಮಾವ ಇಲ್ಲಿಗೆ ಬಂದರು ಎಂದರೆ ನಿನಗೆ ನೆಮ್ಮದಿ ಹಾಳಾಗುತ್ತದೆಂದು ಹೇಳಿದ್ದಾರೆ. ಆಕೆಯ ಗಂಡ ಧಾರವಾಡದ ಜೂನಿಯರ್ ಕಾಲೇಜ್‌ನಲ್ಲಿ ಪ್ರಾಂಶುಪಾಲರು. ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಆಕೆ ನನ್ನ ಸಧ್ಯ ತಂಗಿ ಮಗಳು. ಒಂದು ದಿವಸ ಆಕೆಯ ಗಂಡನ ತಾಯಿ ತಂದೆಯವರು ಮನೆಗೆ ಬಂದರೆ ಅವರನ್ನು ಹೊರಗಡೆ ಹಾಕಿದ್ದಾಳೆ. ಓಣಿಯಲ್ಲಿ ಜನರು ಸೇರಿದ್ದರು. ಆಕೆ ಅವರನ್ನು ಮನೆಗೆ ಕರೆದುಕೊಳ್ಳಲಿಲ್ಲ. ಕೊನೆಗೆ, ಆಕೆಯ ಗಂಡ ಬಂದು ನಮ್ಮ ತಂದೆ ತಾಯಿಯವರು ಬಂದಿದ್ದಾರೆ ಅವರನ್ನು ಮನೆ ಒಳಗೆ ಕರೆದುಕೊಳ್ಳಿ ಎಂದು ಹೇಳಿದ. ಆದರೂ ಸಹ, ಆಕೆ ಅವರನ್ನು ಮನೆಗೆ ಕರೆದುಕೊಳ್ಳಲಿಲ್ಲ. ಆತ ನಮ್ಮ ತಾಯಿ ತಂದೆಯವರನ್ನು ಮನೆಗೆ ಕರೆದುಕೊಳ್ಳಲಿಲ್ಲ ಎಂದ ಮೇಲೆ ನಾನು ಯಾಕೆ ಮನೆಯಲ್ಲಿ ಇರಬೇಕೆಂದು ಹೇಳಿ ಹೊರಟು ಹೋದ. ಆಕೆ ಗಂಡನಿಗೆ ನಿಮ್ಮ ತಾಯಿ ತಂದೆ ಮಂತ್ರ ಮಾಡಿಸಿದ್ದಾರೆಂದು ಟಿ.ವಿ.ಯಲ್ಲಿ ಭವಿಷ್ಯ ಹೇಳಿದರು ಎಂದು ಹೇಳಿದಳು. ಈ ರೀತಿ ಹೇಳಿದ ನಂತರ ಆತ ಆತನ ತಾಯಿ ತಂದೆಯವರನ್ನು ನೋಡಬೇಕಾ? ಅಥವಾ ಆಕೆಯನ್ನು ನೋಡಬೇಕಾ? ಕೊನೆಗೆ ಆಕೆ ಹೋಗಿ ಕೆರೆಗೆ ಹಾರಿಬಿಟ್ಟಳು. ಆಕೆಗೆ ಇಬ್ಬರು ಮಕ್ಕಳು ಇದ್ದಾರೆ. ಆಕೆಯ ಮಕ್ಕಳು ಹೋಗಿ ಆಕೆಯನ್ನು ಹಿಡಿದು ಕಾಪಾಡಿಕೊಂಡರು. ಹಾಗಾಗಿ, ಆಕೆ ಬದುಕಿಕೊಂಡಳು. ಆಕೆಯ ಮಗ ಇಂಜಿನಿಯರಿಂಗ್ ಪದವಿ ಮಾಡುತ್ತಿದ್ದಾನೆ. ಮಗಳು Diploma ಓದುತ್ತಿದ್ದಾಳೆ. ಆ ಇಬ್ಬರು ಮಕ್ಕಳು ಮತ್ತು ತಾಯಿ ಆತನ ಬಳಿ ಮಾತನಾಡುವಂತಿಲ್ಲ. ಆತ ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜ್‌ನ Principal. ಆತ ಏನು ಮಾಡಬೇಕು ಹೇಳಿ? ಶ್ರೀ ನೆ.ಲ.ನರೇಂದ್ರಬಾಬುರವರು ರಾಜಾಜಿನಗರದ ಮಾಜಿ ಎಂ.ಎಲ್.ಎ. ಹೀಗೆ ಹೇಳಿದವರು ಅವರ ಏರಿಯಾದಲ್ಲಿನ ಸ್ವಾಮಿಗಳು. ನಂತರ ನಾನು ಸ್ವಾಮಿಗಳನ್ನು ಹುಡುಕಿಕೊಂಡು ಹೋದೆ. ನನಗೆ ಕೊನೆಗೆ ಕೋಪ ಬಂದು phone ಮಾಡಿದೆ. ಆ ಸ್ವಾಮಿ ಹೊರಗಡೆ ಬರುವುದಕ್ಕೆ ತಯಾರು ಇಲ್ಲ. ಕೊನೆಗೆ ಸ್ವಾಮಿಗೆ ಬಾಯಿಗೆ ಬಂದಂತೆ ಬೈದೆ. ನಾನು ಬೈದ ನಂತರ ಕೊನೆಗೆ ಸ್ವಾಮಿ ಏನು ಮಾಡಿದ ಅಂದ್ರೆ, ಆಕೆಯನ್ನು ಕರೆದು ನೀನು ಇನ್ನು ಮೇಲೆ ಬದುಕುವುದೇ ಇಲ್ಲ. ಅದಷ್ಟು ಬೇಗ ನಿಮ್ಮ ಅತ್ತೆ ಮಾವನವರನ್ನು ಮುಗಿಸಿ ಬಿಡಿ ಎಂದು ಹೇಳಿದ. ಮಾನ್ಯ ಸಭಾಪತಿಯವರೆ, ಇದು ನಿಜವಾಗಿ ನಡೆದಿರುವಂತಹ ಘಟನೆ. ಆ ಮಕ್ಕಳು ಅವರ ತಂದೆಯವರನ್ನು ರಾತ್ರಿ ಹೊತ್ತಿನಲ್ಲಿ ಏನೂ ಮಾಡುತ್ತಾರೋ ಎನ್ನುವ ಭಯದಲ್ಲಿ ಇರುತ್ತಾರೆ. ನಾನು ಆಕೆಯ ಹೆಸರನ್ನು ತಮಗೆ ಹೇಳಬೇಕು ಅಂದುಕೊಂಡಿದ್ದೆ. ಈ ತರಹ ನಡೆದಿದೆ. ಇದು ಟಿ.ವಿ.ಯವರಿಗೆ ಏನೂ ಅಲ್ಲ. ಆಮೇಲೆ ನಾನು ಒಂದು ಬಾರಿ ಸಂದರ್ಶನಕ್ಕೆ ಹೋಗಿದ್ದೆ. ಆಗ ಆ T.V. Channel ನವರು ಆ ಸ್ವಾಮಿಗೆ ನಾಳೆ ನಿಮ್ಮ programme ಇದೆ ಎಂದು anchor ಬಡಿದಾಡುತ್ತಾನೆ. ಆ ಸ್ವಾಮಿಗಳಿಗೆ ಬೇಗ phone ಮಾಡಿ ಎಂದು ಹೇಳುತ್ತಾನೆ. ಇದು ನಡೆದಂತಹ ಘಟನೆ. ಈಗ ರಾತ್ರಿವೇಳೆ 'ಹೀಗೂ ಉಂಟೆ' ಎಂಬ ಕಾರ್ಯಕ್ರಮ ಬರುತ್ತದೆ. ಮಾನ್ಯ ಸಭಾಪತಿಯವರೆ, ಈಗ T.V. Channel ಗಳಲ್ಲಿ 50% ಮೇಲೆ, 70 ರಿಂದ 80% ಬರೇ criminal activities ಬಗ್ಗೆ ಬರುತ್ತಿವೆ. ನಾವೆಲ್ಲರೂ ಅದಕ್ಕೆ ಭಯ ಪಡುತ್ತೇವೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಸರ್ಕಾರ ಏನು ಮಾಡಬೇಕೆಂದು ತಾವು ಹೇಳಲೇ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಹೇಳಿದ್ದಾರೆ, ನಾನು ನಡೆದಂತಹ ಘಟನೆಗಳನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಘಟನೆಗಳನ್ನು ಹೇಳಬೇಡಿ. ಅದನ್ನು ಬಹಳ ಜನರು ಹೇಳುತ್ತಾರೆ. ಸರ್ಕಾರ ಏನು ಮಾಡಬೇಕು ಅದನ್ನು ಹೇಳಿ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಸರ್ಕಾರ ಇದನ್ನು ನಿಲ್ಲಿಸಬೇಕು. ಟಿ.ವಿ.ಗಳಲ್ಲಿ ಭವಿಷ್ಯ ಏಕೆ ಹೇಳಬೇಕು? ಆ ಸ್ವಾಮಿಜಿಗಳ ಭವಿಷ್ಯವೆ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿರುವುದಿಲ್ಲ. ಆ ಸ್ವಾಮಿಗಳಿಗೆ ಉದ್ಯೋಗ ಇಲ್ಲ. ಆ ಸ್ವಾಮಿಗಳು ಇಡೀ ಜಗತ್ತನ್ನು ಹಾಳುಮಾಡುತ್ತಾರೆ. ಬೆಳಿಗ್ಗೆ ಯಾವ channel ಹಾಕಿದರೂ ಬರೀ ಸ್ವಾಮಿಗಳೆ ಬರುತ್ತಾರೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸ್ವಾಮಿಗಳು ಆನೆಯ ಮೇಲೆ ಬರುತ್ತಾರೆ. ಅದನ್ನು ಸಾವಿರಾರು ಜನ ನಿಂತುಕೊಂಡು ನೋಡುತ್ತಾರೆ. ಏನು ಕಥೆ ಅವರದ್ದು.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಆಯಿತು ಬಿಡಿ. ಸರ್ಕಾರ ಏನು ಮಾಡಬೇಕೆಂದು ಹೇಳಿ? ಅವರು ಮಾಡುವಂತಹ ತಪ್ಪುಗಳನ್ನೇ ಹೇಳುತ್ತಿದ್ದೀರಿ? ಸರ್ಕಾರ ಏನು ಮಾಡಬೇಕೆಂದು ಯಾರು ಹೇಳಲೇ  ಇಲ್ಲ. ಸರ್ಕಾರ ಉತ್ತರ ಕೊಟ್ಟಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಹೇಳಿದಂತಹ ಸಲಹೆಗಳನ್ನು ನಾನು...

**ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ, ನಾನು ಇವತ್ತಿನ agenda ವನ್ನು ನೋಡಿದೆ. ಇದು ನಿಯಮ 330ರ ಕೆಳಗೆ ಬರುತ್ತಿತ್ತು. ಒಂದು Chinese delegation ಇದ್ದಿದ್ದರಿಂದ ನಾನು ಹೋದೆ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಇದಕ್ಕೆ ಸರ್ಕಾರ solution ಕೊಡುವುದು ಅಥವಾ ಶಾಸನ ಮಾಡುವುದರಿಂದ ಪರಿಹಾರ ಆಗುವುದಿಲ್ಲ. ಇದು legal issue or moral issue? Professional ethics, privilege, ಇವೆಲ್ಲ ಕಣ್ಣಿಗೆ ಕಾಣದೆ ಇರುವಂತಹವು. ಅಗೋಚರ, invisible. ಶಾಸಕರಿಗೆ privilege ಇದೆ. ನಾವು ಒಂದು ಹೆಸರಾಂತ ಹೋಟೆಲ್‌ಗೆ ಹೋಗುತ್ತೇವೆ. ಆ ಹೋಟೆಲ್‌ನಲ್ಲಿ ಕಾಯುತ್ತಿರುವವರನ್ನು ಬಿಟ್ಟು ಅವರು ನಮಗೆ ಊಟ ಕೊಡಬೇಕಾ? ನೀವು ಇಲ್ಲಿ ಶಾಸಕರು ಅಲ್ಲವೆಂದು ಅವರು ಹೇಳಬೇಕಾ? ಅವರು ಹೇಳುವುದಕ್ಕೆ ಮೊದಲೇ ನಾವೇ ಕ್ಯೂನಲ್ಲಿ ಕುಳಿತುಕೊಂಡು ಊಟ ಮಾಡಿಕೊಂಡು ಬರಬೇಕಾ? ಪತ್ರಿಕೋದ್ಯಮ ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಕಾಲದಿಂದಲೂ ಬಹಳ ದೊಡ್ಡ ಪಾತ್ರವನ್ನು ನಿರ್ವಹಿಸಿದೆ. ಎಲ್ಲಾ ಕ್ಷೇತ್ರಗಳು ಹಾದಿ ತಪ್ಪಿದಂತೆ Judiciary, Journalism, Civil Services, ರಾಜಕಾರಣ ಆಗಿದೆ. ಮಾನ್ಯ ಈಶ್ವರಪ್ಪನವರೆ, 1978ನೇ ಸಾಲಿನಲ್ಲಿ ನಾನು ಮೊದಲನೇ ಬಾರಿಗೆ ಸದನಕ್ಕೆ ಬಂದಾಗ, ಮಾನ್ಯ ಸತ್ಯರವರು, ಮಾನ್ಯ ರಘುರಾಮ್‌ಶೆಟ್ಟರು, ಮಾನ್ಯ ಮೈಸೂರು ಮಠ್‌ರವರು ಮತ್ತು ಮಾನ್ಯ ಜಯಶೀಲರಾಯರು  ಅಂತಹವರು ಸದನದಲ್ಲಿದ್ದರೆ  ನಾವು ಅವರ ಎದುರಿಗೆ ಕುಳಿತುಕೊಳ್ಳುತ್ತಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಒಂದು ರೀತಿಯ ಭಯ. ನಾವು ಮರುದಿವಸ ಸದನಕ್ಕೆ ಹೋಗಬೇಕಾಗಿತ್ತು. ಹಿಂದಿನ ದಿವಸವೇ ಅವರು ಲೇಖನಗಳನ್ನು ಓದಿಕೊಂಡು ಸದನಕ್ಕೆ ಬರುತ್ತಿದ್ದರು.

(ಮುಂದು .....)

**(359) 1.40 22-03-2017:ಎಂವಿ:ಜಿಆರ್**

**(ಸಭಾಪತಿಗಳ ಉಪಸ್ಥಿತಿ)**

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಮುಂದು..):–**

ಅವರು Journalist ಆಗಿ ಬಂದಾಗ ಹವಾಯಿ ಚಪ್ಪಲಿ, ಅದೇ ಹರಿದು ಹೋಗಿರುವ ಜುಬ್ಬ, Berkley Cigarette ಇಲ್ಲವೇ Scissors Cigarette. ಈಗಿನವರಿಗೆ ವಯಸ್ಸು ಇರುತ್ತೆ, ಈಗ ಅವರಿಗೆ 23–24 ವಯಸ್ಸು ಆಗಿರುತ್ತದೆ. ನಿಮಗೆ ಮತ್ತು ನಮಗೆ ವಯಸ್ಸು 60 ದಾಟಿರುತ್ತದೆ. ನಮ್ಮ ಹತ್ತಿರ ಅವರು ಹೇಗೆ ಮಾತನಾಡುತ್ತಾರೆಂದರೆ....

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, . . .

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, No, No, Ramesh Babu, I am coming, please wait. ಅವರ personal life ಹೇಗಿದೆ? ಮುದ್ರಣ ಮೀಡಿಯಾ ಆದರೂ ಅಷ್ಟೇ, ಎಲೆಕ್ಟ್ರಾನಿಕ್ ಮೀಡಿಯಾ ಆದರೂ ಅಷ್ಟೇ, ಎಥಿಕ್ಸ್ ಇಲ್ಲದೇ ಇದ್ದ ಮೇಲೆ, this is what happens. ಈಗ ಯಾವೊತ್ತಿನದೋ ಬೇಡ, ನಿನ್ನೆ ರಾತ್ರಿ ಸ್ವಲ್ಪ ಹೊತ್ತು ಟಿ.ವಿ. ವಾಚ್ ಮಾಡುತ್ತಿದ್ದೆ, ಈ ಹೆಣ್ಣು ಮಕ್ಕಳು ನಮ್ಮ ಅಂಗನವಾಡಿ ಕಾರ್ಯಕರ್ತೆಯರದ್ದು, ಆ ಮಕ್ಕಳ ಬಗ್ಗೆ ನಮಗೆ sympathy ಇದೆ. ನಮಗೆಲ್ಲಾ ಮಕ್ಕಳಿದ್ದಾರೆ, ಈಗ ಹತ್ತು ಸಾವಿರ ಹೆಣ್ಣು ಮಕ್ಕಳು ಏಕಾಏಕಿ ಬಂದು ಬಿಟ್ಟರೆ, ಅವರಿಗೆ sudden ಆಗಿ ಹೇಗೆ toilet facilities ಮಾಡುವುದು, drinking water facilities ಮಾಡುವುದು, ಯಾವುದೇ ಸರ್ಕಾರವಿರಬಹುದು. ಆಯಿತು ಸರ್ಕಾರಕ್ಕೆ ಒಂದು ಜವಾಬ್ದಾರಿ ಇದೆ, ಅದನ್ನು ಮಾಡಬೇಕು, ನಾನು ಅದರ merits ಗೆ ಹೋಗುತ್ತಿಲ್ಲ. ಒಂದು ಮೈಕ್ ತೆಗೆದುಕೊಂಡು ಹೋಗಿ ಇಡಬೇಕು, ಮಗುವಿಗೆ ಜ್ವರ ಬಂದಿದೆ, ಎಂದಿನಿಂದ ಜ್ವರ ಬರುತ್ತಿದೆ, ಜ್ವರ ಎಷ್ಟು ಡಿಗ್ರಿ ಇದೆ, ಜ್ವರಕ್ಕೆ ಏನೇನೂ ಮಾಡುತ್ತೀರಿ, ಜ್ವರ ಜಾಸ್ತಿಯಾಗಿ ಬಿಟ್ಟರೆ.... ಇಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ಏನು ಇದು? ಅಂದರೆ, responsibility ಇಲ್ಲ. ನಾವು ನಿರ್ವಹಣೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡತಕ್ಕಂಥ ನಮ್ಮ ನಮ್ಮ ವೃತ್ತಿಗಳ ಬಗ್ಗೆ ಜವಾಬ್ದಾರಿ ಇಲ್ಲದೇ ಹೋದಾಗ this is what happens. ‘unspecified code of conduct’ ಇರುತ್ತದೆ. That ‘unspecified code of conduct’ was more powerful than the ‘prescribed code of conduct’.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಅಷ್ಟೊಂದು ಜನ ಮಹಿಳೆಯರು ಬಂದು ಮುಷ್ಕರ ಮಾಡಬೇಕಾದರೆ, ಸ್ವಲ್ಪ ಸ್ಪಂದನೆ ಬೇಕಲ್ಲವೇ?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅದನ್ನೇ defend ಮಾಡಿಕೊಳ್ಳುವುದು ಬೇಡ.

**(ಗೊಂದಲ)**

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, No, No. ನೀವು ಬಹಳ ಆತುರದಲ್ಲಿದ್ದೀರಿ, ತಾವು ದಯಮಾಡಿ ಕೇಳಿ. No, No, please have patience.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ರಮೇಶ್ ಬಾಬುರವರೇ ತಾವು ಏಕೆ ಮಧ್ಯ ಬರುತ್ತಿದ್ದೀರಿ? ಮಾನ್ಯ ಸಚಿವರು ಪ್ರಸ್ತುತ ಮೀಡಿಯಾದಲ್ಲಿ ಏನಾಗುತ್ತಿದೆ ಎಂಬುದನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಅವರು ಏನು ಹೇಳುತ್ತಾರೆ ಕೇಳಿ. ನೀವು ಕುಳಿತುಕೊಳ್ಳಿ, ಮಧ್ಯೆ ಬಾಯಿ ಹಾಕಬೇಡಿ. ಏನು ಚರ್ಚೆ ಮಾಡುತ್ತೀರಾ? It will not go on record. ಅವರು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ, ನೀವು ಮಾತನಾಡಬೇಡಿ, ಮಧ್ಯೆ ಬಾಯಿ ಹಾಕಬೇಡಿ. ಮಾನ್ಯ ಸಚಿವರಾದಂತಹ ಶ್ರೀ ಕೆ.ಆರ್.ರಮೇಶ್‌ಕುಮಾರ್‌ರವರೆ ಒಂದು ನಿಮಿಷ, ಮಾನ್ಯ ಸದಸ್ಯರಾದಂತಹ ಶ್ರೀ ರಮೇಶ್ ಬಾಬುರವರೇ ದಯವಿಟ್ಟು ನನ್ನ ಕಡೆ ಗಮನಿಸುತ್ತೀರಾ? ಸದನದಲ್ಲಿ ಚರ್ಚೆ ಮಾಡುವುದಕ್ಕೆ ಒಂದು ನಿಯಮವಿದೆ, ನೀವು ನೇರವಾಗಿ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಹೊರಟಿದ್ದೀರಾ. ನೀವು ನಿಯಮ ಪಾಲಿಸಲಿಲ್ಲ, ಮಾತನಾಡುವುದಕ್ಕೆ ಮುಂಚೆ ನೀವು ನನ್ನ ಅನುಮತಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತೆಗೆದುಕೊಂಡಿದ್ದೀರಾ, ನೀವು ನನಗೆ address ಮಾಡಿ, ದಯಮಾಡಿ ಕುಳಿತುಕೊಳ್ಳಿ. You have to take permission from the Chair. ಅವರು ಏನೋ ಮಾತನಾಡುತ್ತಿದ್ದಾರೆ, ನೀವು ಮಧ್ಯೆ ಬಾಯಿ ಹಾಕಿಬಿಡುವುದೇನು. ಪ್ರಾಸಂಗಿಕವಾಗಿ ಒಂದು ಮಾತನಾಡಿದರೆ ಪರವಾಗಿಲ್ಲ, ಆದರೆ, ಈ ತರಹದ ಚರ್ಚೆಗೆ ನಾನು ಅನುಮತಿ ಕೊಡುವುದಿಲ್ಲ, ಈ ಪದ್ಧತಿ ಒಳ್ಳೆಯದಲ್ಲ, ನಾನು ಎಲ್ಲರಿಗೂ ಅನುಮತಿ ಕೊಡುತ್ತಿದ್ದೇನೆ. ನೀವು ಕೈಎತ್ತಿದ್ದಾಗ ನಿಮಗೂ ಅನುಮತಿ ಕೊಟ್ಟಿದ್ದೇನೆ, ಅವರಿಗೂ ಅನುಮತಿ ಕೊಟ್ಟಿದ್ದೇನೆ, ಇವರಿಗೂ ಅನುಮತಿ ಕೊಟ್ಟಿದ್ದೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಕ್ಷಮೆ ಇರಲಿ, ತಾವು ನನಗೆ ಅನುಮತಿ ಕೊಟ್ಟಿಲ್ಲ, ನಾನು ಆಗಿನಿಂದಲೂ ಕೇಳುತ್ತಿದ್ದೇನೆ, ನೀವು ನನಗೆ ಅನುಮತಿ ಕೊಟ್ಟಿಲ್ಲ. ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಮೊದಲು ಕೈ ಎತ್ತಿದವನು ನಾನು.

**ಸಭಾಪತಿಯವರು:-** ನೀವು ಸ್ವಲ್ಪ ಗಂಭೀರವಾಗಿ ಮಾತನಾಡುವುದನ್ನು ಕಲಿತುಕೊಳ್ಳಿ, ನೀವು ಹೊಸದಾಗಿ ಸದಸ್ಯರಾಗಿದ್ದೀರಾ, ಸ್ವಲ್ಪ ಹುಷಾರಾಗಿ ಮಾತನಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಕೈ ಎತ್ತಿದರೆಂದು ಎಲ್ಲರಿಗೂ ಒಟ್ಟಿಗೆ ಅನುಮತಿ ಕೊಡುವುದಿಲ್ಲ, ದಯಮಾಡಿ ಕುಳಿತುಕೊಳ್ಳಿ, ಈ ಪದ್ಧತಿ ಒಳ್ಳೆಯದಲ್ಲ. ನಾನು ಕೈ ಎತ್ತಿದವರೆಲ್ಲರನ್ನೂ ಒಮ್ಮೆಗೆ ಕರೆಯಬೇಕೆ, ನೋಡಿಕೊಂಡು ಕರೆಯುತ್ತಿದ್ದೇನೆ, ಒಬ್ಬರು ಆದ ಮೇಲೆ ಒಬ್ಬರನ್ನು, ವಿಷಯವನ್ನು ಏನು ಮುಗಿಸಿಲ್ಲ. ನಿಮಗೆ ನಾನು ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದೇನೆಯೇ? ನೀವು ಹಾಗೆಲ್ಲಾ ಮಾತನಾಡಬಾರದು ಒಳ್ಳೆಯದಲ್ಲ ಹಾಗೂ ಮಧ್ಯೆ ಬಾಯಿ ಹಾಕಬಾರದು, ಮಧ್ಯೆ ಬಾಯಿ ಹಾಕಬೇಕಾದರೆ, Chair permission ತೆಗೆದುಕೊಂಡು ಮಾತನಾಡಿ, ಪ್ರಾಸಂಗಿಕವಾಗಿ ಏನೋ ತಮಾಷೆ ಮಾಡುವುದೋ ಅಥವಾ ವ್ಯಂಗ್ಯ ಮಾಡುವುದೋ ಅದು ಇದ್ದರೆ ಪರವಾಗಿಲ್ಲ. But, this is not the way, don't behave like this. ಮಾನ್ಯ ಸಚಿವರೆ ನೀವು ಮುಂದುವರಿಸಿ ಮತ್ತು ಬೇಗ ಮುಗಿಸಿ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಇದು subject interest ಇದ್ದುದರಿಂದ ನಾನು ಓಡಿ ಬಂದೆ. ನಾನು ಅಲ್ಲೇ ಹೇಳಿಬಿಟ್ಟೆ. I am not going into the merits and demerits of that case ಎಂದು ಸ್ಪಷ್ಟವಾಗಿ ಹೇಳಿದೆ, ಆದರೆ ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ. ಅದು ಸರಿ, ಇದು ತಪ್ಪು, ಇನ್ನೊಂದು ಎಂದು ನಾನು ಹೋಗಲಿಲ್ಲ. ಆದರೆ ಒಂದು incident ಹೇಳಿದೆ ಅಷ್ಟೇ. I have raised a fundamental question.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Whether this is a moral issue or legal issue? If it is legal issue, ಆದರೆ ನಾವು ಒಂದು ಹೊಸ ಕಾನೂನನ್ನು ತರುವುದೋ ಅಥವಾ ಹಾಲಿ ಇರುವ ಕಾನೂನಿಗೆ ಅಮೆಂಡ್‌ಮೆಂಟನ್ನು ತರುವುದೋ ಏನಾದರೂ ಒಂದು ಮಾಡಬಹುದು. ನಮ್ಮಲ್ಲಿ values have fallen in all walks of life. It has happened here also. ಈಗ ನಾವು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಅನೇಕ ಸಂದರ್ಶನಗಳನ್ನು ನೋಡುತ್ತೇವೆ. ನಮ್ಮ ಶ್ರೀ ರಾಜ್‌ಠಾಕ್ರೆಯವರನ್ನು ಒಬ್ಬ ಪ್ರತಿಷ್ಠಿತ Journalist ಸಂದರ್ಶನವನ್ನು ಮಾಡುತ್ತಿರುವಾಗ ಶ್ರೀ ರಾಜ್‌ಠಾಕ್ರೆಯವರಿಗೆ ಸಿಟ್ಟು ಬಂದು ಒದ್ದು "Yes, go and lodge a complaint" ಎಂದು ಹೇಳಿ ಎದ್ದೇ ಬಿಟ್ಟರು. ದಿವಂಗತ ಕುಮಾರಿ ಜಯಲಲಿತ ಅವರನ್ನು ಸಂದರ್ಶನ ಮಾಡುವಾಗ ಏನು ಹೇಳಿದರು? "I refuse to answer your queries" ಎಂದು ಹೇಳಿದರು. ಆ ತರಹವೂ ಇದೆ, ಈ ತರಹವೂ ಇದೆ, Anchoring ಮಾಡುತ್ತಾರೆ, ನಮ್ಮನ್ನು ಕರೆಯುತ್ತಾರೆ, ನಮ್ಮನ್ನು ಮಾತನಾಡುವುದಕ್ಕೆ ಬಿಡುವುದಿಲ್ಲ, ಅವರದೇ views ಹೇಳುತ್ತಾರೆ, ನನ್ನ ಸಹೋದರಿಯಾದ ಶ್ರೀಮತಿ ತಾರಾ ಅನುರಾಧರವರು ತೇಜೋವಧೆ ಎಂಬ ಪದವನ್ನು ಉಪಯೋಗಿಸಿದ್ದಾರೆ. I am a victim of it. Please understand. ಒಂದು ದಿವಸ Public Undertakings Committee meeting ಮುಗಿಸಿಕೊಂಡು, ಸದಸ್ಯರೆಲ್ಲರೂ ಎಲ್ಲೋ ಒಂದು ಕಡೆ ಕುಳಿತುಕೊಂಡು ಊಟ ಮಾಡುತ್ತಿದ್ದೆವು. ಆಗ 'ಭೂಮಿಯನ್ನು ಕದ್ದ ರಮೇಶ್ ಕುಮಾರ್' ಎಂದು ಹೇಳಿ there was a caption in one of the TVs. ಕಷ್ಟಪಟ್ಟು ಹುಡುಕಿ ಅವರ ಫೋನ್ ನಂಬರ್ ತೆಗೆದುಕೊಂಡು, ಎಲ್ಲಪ್ಪ ಕಳ್ಳತನ ಮಾಡಿದ್ದೇನೆ, ನಾನೇ ಮಾತನಾಡುತ್ತಿದ್ದೇನೆ ಎಂದರೆ ಅದಕ್ಕೆ ಅವರು ಅದನ್ನು ಫೋನ್‌ನಲ್ಲಿ ಹೇಳುವುದಿಲ್ಲ ನೀವು ಇಲ್ಲಿಗೆ ಬರಬೇಕು ಎಂದರು. I went there. ಹೋಗುವ ಮೊದಲು ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿ, ಅವರು ಈ ತರಹ ಹಾಕಿದ್ದರು, ಅದಕ್ಕೆ ನಾನು ಅವರಿಗೆ ಕೇಳಿದೆ, ಅದಕ್ಕೆ ಅವರು ಇಲ್ಲಿಗೆ ಬನ್ನಿ ಎಂದು ಹೇಳಿದ್ದಾರೆ. ನಾಳೆ ಅವರು ನನ್ನ ಮೇಲೆ ಬೇರೆ ಇನ್ನೊಂದು ರೀತಿ ಹೇಳುವುದು ಬೇಡ. ನನಗೂ ಮತ್ತು ಅವರಿಗೂ ರಕ್ಷಣೆ ಕೊಡಿ ನಾನು ಅಲ್ಲಿಗೆ ಹೋಗುತ್ತಿದ್ದೇನೆಂದು ಹೇಳಿದೆ. ಅಲ್ಲಿಗೆ ಹೋಗಿ ನಾನು ಅವರ Reception Counter ನಲ್ಲಿ ಸುಮಾರು 45 ನಿಮಿಷಗಳ ಕಾಲ ಕಾದು ಕುಳಿತೆ. ಕೊನೆಗೆ ಅಲ್ಲಿದ್ದವರನ್ನು ಕರೆದು ಹೇಳಿದೆ, ನನ್ನ ಪಾದರಕ್ಷೆ ತೆಗೆದು ಅಲ್ಲಿಟ್ಟು, ನಾನು ಸಾರ್ವಜನಿಕ ಜೀವನದಲ್ಲಿದ್ದೇನೆ, ನಾನು ಅಂತಹ ಕೆಲಸ ಮಾಡಿದ್ದರೆ, ನಿಮ್ಮ ಟಿ.ವಿ. ಮುಖಾಂತರ ಇದನ್ನು ಜನರಿಗೆ ತೋರಿಸಿಬಿಡಿ ಇದನ್ನು ಉಪಯೋಗಿಸಿ ನನ್ನ ಮೇಲೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಹೇಳಿದರೆ. ಅದಕ್ಕೆ ಅವರು ಏನು ಹೇಳಿದರು? ಅವರಿಗೆ ನಾನು ಅದನ್ನು ತೋರಿಸುವುದಕ್ಕೆ ಹೋಗಿದ್ದೆ ಎಂದು ಹೇಳಿದರು. ಕಳ್ಳತನ ಮಾಡಿಕೊಂಡು ಬದುಕಿರಬೇಕಾ? ಶ್ರೀ ರಘುಪತಿ ಭಟ್‌ರವರ ಧರ್ಮಪತ್ನಿ ನಿಧನ ಹೊಂದಿದರು. How did she die? ಶ್ರೀ ರಘುಪತಿ ಭಟ್ ಯಾರು, ಅವರ ಪಕ್ಷ ಯಾವುದು, ಇನ್ನೊಂದು, ಮತ್ತೊಂದು, I am not going into all those things. ಆ ಹೆಣ್ಣು ಮಗಳ ವಿಚಾರವನ್ನು ಎತ್ತಿ ನೀವು ಹರಿದಾಡದೆ ಇದ್ದಿದ್ದರೆ, ಇವತ್ತಿನ ದಿವಸ ಆ ಮಕ್ಕಳು ಅನಾಥರಾಗುತ್ತಿದ್ದರೆ? Where our irresponsibility is taking us? How can a man defend himself? ನಮಗೆ social life ಇರುವುದಿಲ್ಲವೆ? Corrections ಬರುತ್ತದೆ. Corrections ಬಂದರೆ ಎಲ್ಲಾದರೂ ನಿಮಗೆ humility ಇದೆಯಾ, ಕ್ಷಮಾಪಣೆ ಕೇಳಿ, ಇಂತದ್ದನ್ನು ನಾವು ಮಾಡಿದ್ದೆವು, ಸತ್ಯವಾದ ವರದಿ ಬಂದಿದೆ, ಅವರಿಗೆ ಇದು ಸಂಬಂಧವಿಲ್ಲ ಎಂದು ಹೇಳತಕ್ಕಂಥದ್ದು ಎಲ್ಲಾದರೂ ಇದೆಯಾ? It is very easy, ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ವಧೆ ಮಾಡುವಂಥದ್ದು, ವಿಶೇಷವಾಗಿ ಹೆಣ್ಣು ಮಕ್ಕಳು, ನಮ್ಮ target ಗೆ ಸಿಗುವುದೇ ಹೆಣ್ಣು ಮಕ್ಕಳು. ನಾವು ನೆನಪಿಟ್ಟುಕೊಳ್ಳಬೇಕಾಗಿರುವುದು, ನನ್ನ ತಾಯಿ ಕೂಡ ಒಂದು ಹೆಣ್ಣು, ನನಗೆ ಒಬ್ಬಳು ಮಗಳು ಹುಟ್ಟಿದ್ದಾಳೆ ಅವಳು ಹೆಣ್ಣು, ನನ್ನ ಜೊತೆ ಸಂಸಾರ ನಡೆಸುವವಳು ಒಂದು ಹೆಣ್ಣು. ಇವರನ್ನು target ಮಾಡಿದರೆ? It's not that other than these three, rest of the women are the people, about whom you can talk. ಯಾರು ಕಂಟ್ರೋಲ್ ಮಾಡುವುದು. ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್. ಉಗ್ರಪ್ಪನವರು ಕೊಟ್ಟ ಸಲಹೆಯನ್ನು ಮಾನ್ಯ ಮಾಡುತ್ತೇನೆ. But, that's not the answer, with all humility, I am submitting to the Chair. This is an issue. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, sudden ಆಗಿ ನೋಡಿದೆ ಈ ವಿಷಯವನ್ನು ನಾನು. Kindly take up this issue on some other occasion for a full-fledged discussion. We all will come prepared about the course of journalism in the world, in India, the advent of electronic media, the good and bad of electronic media and who are the Proprietors. ಈ ಎಲೆಕ್ಟ್ರಾನಿಕ್ ಮೀಡಿಯಾವನ್ನು ಯಾರು ನಡೆಸುತ್ತಿರುವುದು? What is their interest in this country? If I am a businessman, I have my business interest. I am running a

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Channel. ನಾನು ತೀರ್ಮಾನ ಮಾಡುತ್ತೇನೆ, ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಎಸ್.ಈಶ್ವರಪ್ಪನವರು ಮುಗಿಸಿಬಿಡಬೇಕೆಂದು, ನನ್ನ ಚಾನಲ್‌ನಲ್ಲಿ ಅದೇ ಕೆಲಸ, ಊರಿನಲ್ಲಿ ಅದನ್ನು ನೋಡುವವರು ಯಾರು? ಯಾರು ಇವರ ವಿರುದ್ಧ ಇರುತ್ತಾರೋ ಅವರು ನೋಡಿ ಎಲ್ಲರಿಗೂ ಫೋನ್ ಮಾಡುವುದು, ನೋಡಿ, ನೋಡಿ ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಎಸ್.ಈಶ್ವರಪ್ಪನವರದ್ದು ಬರುತ್ತಿದೆ ಎಂದು.

**(ಮುಂದು...)**

(360) 22.03.2017 01.50 LL-GR

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಕೆ.ಆರ್. ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಂದು...)**

ನಾವು ನಮ್ಮದೇ ಆದಂತಹ ಆದರ್ಶಗಳನ್ನಿಟ್ಟುಕೊಂಡು ಸಾರ್ವಜನಿಕ ಜೀವನಕ್ಕೆ ಕಾಲಿಡುತ್ತೇವೆ. ನಮ್ಮಲ್ಲಿ ತಪ್ಪುಗಳಿದ್ದರೆ, ಒಪ್ಪುಗಳಿದ್ದರೆ ಅದನ್ನು ಶಿಕ್ಷೆ ಮಾಡುವುದಕ್ಕೆ ಜನರಿದ್ದಾರೆ. Who is punishing us? ನ್ಯಾಯಾಲಯಗಳೇ? ಜನತೆಯೇ? Ultimately, ನಾವು ಇರಬೇಕೇ ಅಥವಾ ಹೋಗಬೇಕೆ ಎನ್ನುವಂತಹ ತೀರ್ಮಾನ ಮಾಡುವಂತಹ ಹಂತಕ್ಕೆ ಇವರು ಹೋಗುವುದು ಸರಿಯಲ್ಲ. ಆಮೇಲೆ ಅವರು ಬಳಸತಕ್ಕಂತಹ ಭಾಷೆ. ವಯಸ್ಸಿನ ಅಂತರ ಬೇಡವೇ? ಒಬ್ಬ 15-16 ವರ್ಷದ ಹುಡುಗ ನನ್ನ ಬಳಿ ಬಂದರೆ ಆತ ಹೇಗಿರಬೇಕು? ಅಥವಾ ನನ್ನ ಎದುರಿಗೆ 18 ವರ್ಷದ ಮಗು ಬಂದರೆ, ನನಗೆ ನನ್ನ ಮೊಮ್ಮಗಳ ನೆನಪು ಬರಬೇಕು. ಇವರು ಸಂದರ್ಶನ ಮಾಡುತ್ತಾರಲ್ಲ..? ಇವರ ತಂದೆ-ತಾತನ ವಯಸ್ಸಿನವರು ಸಿಕ್ಕಿದಾಗ what's the language they use? Do they have the modesty? Is it permissible? ಮನೆಯಲ್ಲಿ ಹಾಗೇಯೇ ಮಾಡುತ್ತಾರೆಯೇ? ಮತ್ತು ಕೆಲವು ಚಾನೆಲ್‌ಗಳಲ್ಲಿ ಅಲ್ಲಿನ ಸಿಬ್ಬಂದಿಗಳಿಗೆ ವೇತನವೇ ನೀಡುವುದಿಲ್ಲ. ವೇತನವೆಂದರೆ, ಅವರೇ ಸಂಪಾದಿಸಿಕೊಳ್ಳಬೇಕಾಗುತ್ತದೆ ಅಷ್ಟೇ. ನನ್ನ ಚಾನೆಲ್ ನಿನಗೆ ಅನುಮತಿ ಕೊಟ್ಟಿದೆ ಎಂದರೆ ಸ್ವಲ್ಪವಾಗುವುದಿಲ್ಲ. Where are they taking us? There was an Editor of 'National Herald' called Mr.Chalapathi Rao. He was a co-prisoner with Pandit Nehru. ಶ್ರೀ ನೆಹರುರವರ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಒಂದೇ ಸೆಲ್‌ನಲ್ಲಿ ಇದ್ದವರು Chalapathi Rao of 'National Herald'. ಫಸ್ಟ್ ಲೋಕಸಭಾ ಎಲೆಕ್ಷನ್ಸ್ ಆಗುತ್ತದೆ. ತಾತ್ಕಾಲಿಕವಾಗಿ ಶ್ರೀ ನೆಹರುರವರು ಪ್ರಧಾನ ಮಂತ್ರಿಯಾಗಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಲೇ ತಕ್ಷಣ ಚುನಾವಣೆ ಬೇಡವೆಂದು ಹೇಳಿದರೆ, ಅದಕ್ಕೆ ನೆಹರುರವರು ಒಪ್ಪುವುದಿಲ್ಲ. ಅವರು ಹೇಳುತ್ತಾರೆ: "No, ತುರ್ತಾಗಿ ಮಾಡಬೇಕು. I can't continue as an *ad-hoc* Prime Minister." ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಕೂಡ ಅವರೇ ಆಗಿರುತ್ತಾರೆ. He announces a list of candidates for the Lok Sabha election. ಶ್ರೀ ಛಲಪತಿರಾವ್‌ರವರು ನೆಹರುರವರಿಗೆ ಕೇಳುತ್ತಾರೆ: "ಮಿಸ್ಟರ್ ಪಂಡಿತ್ ಜೀ, ನಿಮ್ಮ ಕಾಂಗ್ರೆಸ್ ಲಿಸ್ಟ್ ಆಫ್ ಕ್ಯಾಂಡಿಡೇಟ್ಸ್‌ನಲ್ಲಿ ಕರೆಪ್ಟ್ ಕ್ಯಾಂಡಿಡೇಟ್ಸ್ ಇದ್ದಾರೆ ಮತ್ತು ಕ್ರಿಮಿನಲ್ಸ್ ಇದ್ದಾರೆ." Do you know how Sri Nehru reacted? He said: "Give me the list Chalapathi Rao, ಈ ದೇಶದ ಸ್ವಾತಂತ್ರ್ಯಕ್ಕೆ ನಿಮ್ಮಷ್ಟೇ ನಾನು, ನನ್ನಷ್ಟೇ ನೀವು ಕಷ್ಟಪಟ್ಟಿದ್ದೀರಿ. I will go to those constituencies and tell people not to vote them. ಯಾರು ಕ್ರಿಮಿನಲ್ ಹಿನ್ನೆಲೆ ಇದ್ದವರು ಇದ್ದಾರೆ ಮತ್ತು ಕರೆಪ್ಟ್ ಎಂದು ತಾವು ಹೇಳುತ್ತಿದ್ದೀರಿ, ತಾವು ಹೇಳಿದ ಮೇಲೆ ನನಗೆ ನಿಮ್ಮ ಮಾತಿನ ಮೇಲೆ ನಂಬಿಕೆಯಿದೆ. ನಾನು ಅವರ ಕ್ಷೇತ್ರಕ್ಕೆ ಹೋಗಿ, ಅವರಿಗೆ ಮತ ನೀಡಬಾರದೆಂದು ಹೇಳುತ್ತೇನೆ." ಎಂದು ಹೇಳುತ್ತಾರೆ. That was the statesmanly relationship between a politician and a journalist.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಟೇಬಲ್ ಬಡಿಯುವುದರ ಮೂಲಕ ಬೆಂಬಲ ಸೂಚಿಸಿದರು.)**

ಆದರೆ, ಈಗ ನಾವು ಎಲ್ಲಿಗೆ ಬಂದಿದ್ದೇವೆ? Conspiracies ಗೆ ರಾಜಕೀಯ ಪಕ್ಷಗಳಲ್ಲಿರತಕ್ಕಂತಹ inner dimensions ಗೆ ರೂಪ ನೀಡುವುದಕ್ಕೆ, ಒಬ್ಬ ಮನುಷ್ಯನನ್ನು ಪ್ರೊಜೆಕ್ಟ್ ಮಾಡುವುದಕ್ಕೆ, ಇನ್ನೊಬ್ಬನನ್ನು smash ಮಾಡುವುದಕ್ಕೆ, string operations ಮಾಡುವುದಕ್ಕೆ where *is the morale?* ನಮಗೆ ಗೊತ್ತಿದೆ. ಬಹಳ ಸುಲಭವಾಗಿ ಬಯ್ಯುವುದಕ್ಕೆ ಈ ಸಮಾಜದಲ್ಲಿ ಯಾರು ಸಿಗುತ್ತಾರೆ? ನಾವುಗಳು. ಏತಕ್ಕೆ? ನಾವು scrutiny ಗೆ ಹೋಗುತ್ತೇವೆ. ಗ್ರಾಮ ಪಂಚಾಯತಿ ಸದಸ್ಯನಿಂದ ಹಿಡಿದು ಈ ದೇಶದ ಪ್ರಧಾನ ಮಂತ್ರಿ, ಶ್ರೀ ನರೇಂದ್ರ ಮೋದಿಯವರೆಗೆ ನಾವು ಜನರ ಮುಂದೆ scrutiny ಗೆ ಹೋಗಲೇಬೇಕು.

**ಸಭಾಪತಿಯವರು:–** ಐದು ವರ್ಷಗಳಿಗೊಮ್ಮೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಐ.ಎ.ಎಸ್., ಪಾಸ್ ಮಾಡಿಕೊಂಡು ಬಂದವರು... ಯಾವುದೋ ರಾಜ್ಯದಲ್ಲಿ ಹುಟ್ಟಿ ಬೆಳೆದವರು ಐ.ಎ.ಎಸ್., ಪಾಸ್ ಮಾಡಿ ಕರ್ನಾಟಕದ ಕೇಡರ್‌ಗೆ ನಿಯೋಜನೆಯಾಗುತ್ತಾರೆ. ಇಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಮಾಡುತ್ತಾರೆ. ಅವರೇನು ಇಲ್ಲಿ ಯಾವುದೇ ಎಲೆಕ್ಷನ್‌ಗೆ ನಿಲ್ಲಬೇಕಾಗಿಲ್ಲ. They go unnoticed. ನಾನು ನನ್ನ ಕಾರನ್ನು ಸುಮಾರಾಗಿ ಇಟ್ಟುಕೊಂಡು ಬಂದರೆ, "ಬಸ್‌ನಲ್ಲಿ ಓಡಾಡುತ್ತಿದ್ದವನು ನೋಡು ಆಗಲೇ ಮಗ ಕಾರು ತೆಗೆದುಕೊಂಡಿದ್ದಾನೆಂದು" ಮಾತಾಡುತ್ತಾರೆ. ಏಕೆಂದರೆ, ನಾವು ಮತ ಕೇಳುವುದಕ್ಕೆ ಹೋಗುತ್ತೇವೆ. ನಮ್ಮನ್ನು ಬಿಟ್ಟರೆ ಬಯ್ಯುವುದಕ್ಕೆ ಇನ್ನು ಯಾರು ಸಿಗುತ್ತಾರೆ? ಬಹಳ ಸುಲಭವಾಗಿ ಮಾತನಾಡುವುದಕ್ಕೆ..? ಪೊಲೀಸರು. ಆದಾದ ಮೇಲೆ ಯಾರು ಸಿಗುತ್ತಾರೆ? ಸಿನಿಮಾದವರು. ಏನೇನೆಲ್ಲಾ ತೋರಿಸುತ್ತಾರೆ? ಏನೇನೆಲ್ಲಾ ಮಾಡುತ್ತಾರೆ? ಈ ದೇಶಕ್ಕಾಗಿ ದುಡಿದವರ ಬಗ್ಗೆ ಹೇಳುತ್ತಾರೆಯೇ? ಪ್ರಾಮಾಣಿಕವಾಗಿ ಜೀವನ ಮಾಡುತ್ತಿರುವವರ ಬಗ್ಗೆ ಹೇಳುತ್ತಾರೆಯೇ? ಆದರ್ಶಗಳಿಗೋಸ್ಕರ ಸತ್ತು ಹೋದವರ ಬಗ್ಗೆ ಹೇಳುತ್ತಾರೆಯೇ? ಟಿ.ಆರ್.ಪಿ. ಗಾಗಿ ಇದೆಲ್ಲ ಮಾಡುತ್ತಾರೆ. ಇಡೀ ಕುಟುಂಬ ಒಟ್ಟಿಗೆ ಕುಳಿತುಕೊಂಡು ಸಿನಿಮಾ ನೋಡುತ್ತಿದ್ದೆವು. ಒಂದು ಮನರಂಜನೆ ಕಾರ್ಯಕ್ರಮಕ್ಕೆ ಹೋಗುತ್ತಿದ್ದೆವು. Is it possible now? ಸಾಧ್ಯವೇ? ಭಾರತೀಯ ಸಂಸ್ಕೃತಿ, ಭಾರತೀಯ ಸಂಸ್ಕೃತಿಯೆಂದು ಹೇಳುತ್ತೇವೆ. ಈಗ ಬರುತ್ತಿರುವ ಎಲ್ಲಾ ಸಿನಿಮಾಗಳಿವೆಯಲ್ಲವೇ? ಇದಕ್ಕೆ ಸಂಸ್ಕೃತಿ ಇದೆಯೇ? ಇದು ನಮ್ಮ ಸಂಸ್ಕೃತಿಯೇ?

**ಶ್ರೀ ಎಸ್. ನಾಗರಾಜ್(ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಹಿಂದಿನ ಕಾಲದ ಸಿನಿಮಾಗಳನ್ನು ಈಗ ತೋರಿಸುವುದಕ್ಕೆ ಹೋದರೆ, ಅದನ್ನು ಯಾರೂ ನೋಡುವುದೇ ಇಲ್ಲ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಫಸ್ಟ್ ಕ್ಲಾಸ್ ಆಗಿ ನೋಡುತ್ತಾರೆ. ಹಳೆಯ ಸಿನಿಮಾಗಳನ್ನು ನೋಡದೆ ಇರುವ ರೀತಿಯಲ್ಲಿ ಇವರು ಮಾಡಿಬಿಟ್ಟಿದ್ದಾರೆ ಮಾನ್ಯ ನಾಗರಾಜುರವರೇ.

**ಸಭಾಪತಿಯವರು:-** ಸಂದೇಶ್ ನಾಗರಾಜ್‌ರವರೇ ಅವರದ್ದೇ ಚಿಂತೆಯಾಗಿದೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಹೌದು. ಆ ರೀತಿಯಾಗಿದೆ... ಸದನವೆಂದರೆ, ಹೀಗೆ ಇರಲೇಬೇಕು. ನಾನು ಇನ್ನು ಉದ್ದಕ್ಕೆ ಬೆಳೆಸುವುದಕ್ಕೆ ಬಯಸುವುದಿಲ್ಲ. ತಮ್ಮಲ್ಲಿ ಕೈಜೋಡಿಸಿ ವಿನಂತಿಸಿಕೊಳ್ಳುವುದೇನೆಂದರೆ, ತಾವುಗಳು ಬಹಳ ಸಹನೆಯಿಂದ, ತಾಳ್ಮೆಯಿಂದ ನನಗೆ ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವನೆಗಳನ್ನು ವ್ಯಕ್ತಪಡಿಸಲು ನನಗೆ ಅವಕಾಶ ಮಾಡಿಕೊಡಬೇಕು. ನನಗೆ ಅದನ್ನು ನೋಡಿದ ತಕ್ಷಣ ಇಲ್ಲಿ glue ಮಾಡಿಕೊಂಡು ಕುಳಿತುಕೊಳ್ಳಬೇಕೆಂದು... ಚೀನಾ ನಿಯೋಗದವರ ಜೊತೆ ನಾವು ಹೋಗುತ್ತಿರಲಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, please provide another opportunity.

**ಸಭಾಪತಿಯವರು:-** ಓಕೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ನಾವೆಲ್ಲರೂ ಕೂಡ ತಯಾರು ಮಾಡಿಕೊಂಡು ಬರೋಣ. ಕೇವಲ ಇದನ್ನೇ ಚರ್ಚೆ ಮಾಡೋಣ. ನಾನೇನು ಹೇಳುತ್ತೇನೆಂದರೆ, ಕೇವಲ ಅವರನ್ನೇ ಗುರಿ ಮಾಡಬೇಕೆಂದಲ್ಲ. We will discuss including Judiciary. ಏನಾಗಿದೆ ಈ ದೇಶದ ಜೀವನ? ಏನಾಗಿದೆ ಸಾರ್ವಜನಿಕ ಜೀವನ? ಸಿವಿಲ್ ಸರ್ವೀಸಸ್ ಏನಾಗಿದೆ? ನ್ಯಾಯಾಂಗ ಇಲಾಖೆಯಲ್ಲಿ ಏನಾಗಿದೆ? ಮಾಧ್ಯಮ ಏನಾಗಿದೆ? ಎಲ್ಲವನ್ನು ಮುಕ್ತವಾಗಿ ಚರ್ಚೆ ಮಾಡೋಣ. Let us subject ourselves to self-introspection. ಆದುದರಿಂದ, ದಯಮಾಡಿ please give an opportunity on another occasion. Thank you very much, sir.

**ಸಭಾಪತಿಯವರು:-** ಖಂಡಿತ. ಖಂಡಿತ. ಮಾನ್ಯ ಹೊರಟ್ಟಿಯವರೆ, ತಾವು ಮಾತನಾಡಿದ್ದು ಆಯಿತು. ಈಗ ಶ್ರೀ ರಮೇಶ್‌ಬಾಬುರವರು ಮಾತನಾಡಿಲ್ಲ.

**(ಗೊಂದಲ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಸಭಾಪತಿಯವರು:-** ಸಾಕು. ಎಷ್ಟು ಹೊತ್ತು ಮಾತನಾಡುತ್ತೀರಿ? ಎರಡು ನಿಮಿಷ ಎಂದು ಹೇಳಿ ಇಪ್ಪತ್ತು ನಿಮಿಷ ಆಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ರಮೇಶ್ ಕುಮಾರ್‌ರವರು ಏನು ಹೇಳಿದರು. ಇದರ ಬಗ್ಗೆ ಸಾಕಷ್ಟು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ತಾವು ಪುನಃ ಮೊದಲಿಂದಲೂ ಮಾತನಾಡಬೇಕು. ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಎಲ್ಲವನ್ನು ನಾವು ಮಾತನಾಡುವುದಿಲ್ಲ.

**ಸಭಾಪತಿಯವರು:-** ತಾವು ತಮ್ಮ ಎಲ್ಲಾ ಘಟನೆಯನ್ನು ಹೇಳಿದ್ದೀರಿ. ಆಯಿತು. ಮುಗಿಯಿತು. ವಿಷಯದ ಮೇಲೆ ಚರ್ಚೆ ಮುಗಿಸಬೇಕಲ್ಲವೇ?

**ಡಾ॥ ಜಿ. ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿರುವಂತಹದ್ದು, ಬಹಳ ಪ್ರಾಮುಖ್ಯವಾದದ್ದು ಮತ್ತು ಬಹಳ ಗಂಭೀರವಾಗಿರುವಂತಹ ವಿಷಯ. ಇದನ್ನು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಎಲ್ಲಾ ಸದಸ್ಯರು ಕೂಡ ತಯಾರಾಗಿ ಬಂದು ಈ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡುವುದಾದರೆ ಸರ್ಕಾರ ಖಂಡಿತವಾಗಿ ಇದಕ್ಕೆ ಒಪ್ಪಿಕೊಳ್ಳುತ್ತದೆ. ಏಕೆಂದರೆ, ಇದಕ್ಕೇನಾದರೂ ಒಂದು ಪರ್ಯಾಯ ಉತ್ತರವನ್ನು ಕಂಡುಹಿಡಿಯಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾಗಿರುವಂತಹ ವಿಷಯ. ಎಲ್ಲೋ ಒಂದು ಕಡೆ ಇದಕ್ಕೆ ನಿಯಂತ್ರಣ ಮಾಡುವುದಕ್ಕಾಗಲಿ ಅಥವಾ ಸರಿಪಡಿಸುವುದಕ್ಕಾಗಲಿ ಖಂಡಿತ ಪ್ರಯತ್ನ ಮಾಡಲೇಬೇಕಾಗುತ್ತದೆ. ಅದಕ್ಕಾಗಿ ಸರ್ಕಾರ ತಯಾರಾಗಿದೆ. ಸರ್ಕಾರ ಈ ಚರ್ಚೆ ಮಾಡುವುದಕ್ಕೆ ತಯಾರಿದೆ. ತಾವು ಮುಂದೆ ಇನ್ನೊಂದು ದಿವಸ ಸಮಯ ನಿಗದಿ ಮಾಡಿ. ಈಗ ಉತ್ತರ ಕೊಡಬೇಕೆಂದು ಹೇಳಿದರೆ, ನಾನು ಕೊಡಬಲ್ಲೆ. ಆದರೆ...

**ಸಭಾಪತಿಯವರು:-** ಸರ್ಕಾರದ ಪರವಾಗಿ ಈಗಾಗಲೇ ಉತ್ತರವನ್ನು ನೀಡಿದ್ದೀರಿ.

**ಡಾ॥ ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ...

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೆ, ಮೂರೇ ನಿಮಿಷ, ಮೂರೇ ನಿಮಿಷ..

**(ಗೊಂದಲ)**

**ಡಾ॥ ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಿರತಕ್ಕಂತಹ ಉತ್ತರದ ಜೊತೆಗೆ ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇನ್ನು ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಕೈ ಮೇಲೆ ಎತ್ತುತ್ತಿದ್ದಾರೆ. ಆದುದರಿಂದ, ಊಟ ಮುಗಿಸಿಕೊಂಡು ಚರ್ಚೆ ಮುಂದುವರೆಸುವುದು ಒಳ್ಳೆಯದು. ತಾವು ಬೇರೆ ಬಿ.ಎ.ಸಿ., ಸಭೆ ಕರೆದಿದ್ದೀರಿ.

**ಸಭಾಪತಿಯವರು:–** ನಾನು ಕೂಡ ಗಡಿಯಾರ ನೋಡುತ್ತಿದ್ದೇನೆ. ಎರಡು ಗಂಟೆಗೆ ಈ ಚರ್ಚೆಯನ್ನು ಮುಗಿಸಬೇಕೆಂದು ನೋಡುತ್ತಿದ್ದೇನೆ.

**(ಗೊಂದಲ)**

**ಡಾ|| ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಇನ್ನೊಂದು ದಿವಸ ಚರ್ಚೆಗೆ ಅವಕಾಶ ಕೊಡಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಎರಡೇ ನಿಮಿಷ...

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಚರ್ಚೆಯನ್ನು ಈಗ ಮುಗಿಸಿಬಿಡಿ. ಇಲ್ಲವಾದರೆ ಊಟವಾದ ನಂತರ ಮುಂದುವರೆಸಿ. ಎರಡರಲ್ಲಿ ಒಂದು ಮಾಡಿ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಮೊದಲಿಂದಲೂ ಕೈ ಮೇಲೆ ಎತ್ತುತ್ತಿದ್ದರು. ಅವರು ಬೇರೆಯವರು ಮಾತನಾಡುವಾಗ ಮಧ್ಯದಲ್ಲಿ ಕೈ ಮೇಲೆ ಎತ್ತಿ ನನಗೆ ಅವಕಾಶ ಸಿಗಲಿಲ್ಲವೆಂದು ಕೋಪ ಮಾಡಿಕೊಂಡಿದ್ದರು. ಅದು ಒಳ್ಳೆಯದಲ್ಲ. ಆದರೆ, ಎರಡು ನಿಮಿಷ ಸಮಯಾವಕಾಶ ನೀಡಬೇಕೆಂದು ಕೇಳಿಕೊಂಡಿದ್ದಾರೆ. ಗಡಿಯಾರ ನೋಡಿಕೊಂಡು ಎರಡು ನಿಮಿಷ ಮಾತನಾಡಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ತಾವು ಹಿರಿಯರಿದ್ದೀರಿ. ತಮ್ಮ ಮೇಲೆ ನನಗೆ ಯಾವುದೇ ಕೋಪವಿಲ್ಲ. ನಾನು ತಮ್ಮ ಪೀಠಕ್ಕೆ ಗೌರವವನ್ನು ಕೊಡುತ್ತಾ, ಸರ್ಕಾರವು ಒಂದು ಕಾಯಿದೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಐ.ಪಿ.ಎಫ್. 2009 ಬೆಂಗಳೂರು, ದಿನಾಂಕ 30.01.2012 ರಲ್ಲಿ., ಮೊನ್ನೆಯು ಸಹ ಕೇಬಲ್ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ನಾವು ಕೆಲವೊಂದು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ನನ್ನ ಪ್ರಾರ್ಥನೆಯೇನೆಂದರೆ, ಈಗ ಏನು ಸರ್ಕಾರದ ಒಂದು ಕಾಯಿದೆ ಇದೆ ಅಥವಾ ನಿಯಮಾವಳಿ ಇದೆ, ಇದರಲ್ಲಿ ಟೆಲಿವಿಷನ್ ಅನ್ನು ನಿಯಂತ್ರಣ ಮಾಡುವುದಕ್ಕೆ ಅಥವಾ ಶಿಕ್ಷೆ ಹಾಕುವುದಕ್ಕೆ ಅವಕಾಶವಿಲ್ಲ. ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಸಮಿತಿ ರಚನೆ ಮಾಡಬೇಕಾದರೆ, ಜಿಲ್ಲಾಧಿಕಾರಿಗಳನ್ನು ತೆಗೆದುಬಿಟ್ಟು ಅಲ್ಲಿ ಯಾರಾದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಜಿಲ್ಲಾ ಮಟ್ಟದಲ್ಲಿ ನೇಮಕ ಮಾಡಿ. ಅದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳೆಯರು, ಇಬ್ಬರು ವಕೀಲರು, ಇಬ್ಬರು ಸಾಮಾಜಿಕ ಕಾರ್ಯಕರ್ತರು ಮತ್ತು ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಸೇರಿಸಿದರೆ ಬಹುಶಃ ಆ ಸಮಿತಿ ಪರಿಣಾಮಕಾರಿಯಾಗಿರುತ್ತದೆಯೆನ್ನುವುದು ಒಂದು ಅಭಿಪ್ರಾಯ ಮತ್ತು ಎರಡನೆಯದು ಬಹಳ ಪ್ರಮುಖವಾಗಿ ನಾನು ಆಗಲೇ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಟ್ಟಿದ್ದು ಅದನ್ನೇ. ಅದೇನೆಂದರೆ, ಪ್ರಿಂಟ್ ಮೀಡಿಯಾ ಮತ್ತು ಎಲೆಕ್ಟ್ರಾನಿಕ್ ಮೀಡಿಯಾ. ಪ್ರಿಂಟ್ ಮೀಡಿಯಾ ಬೇರೆ. ಇವತ್ತು ನಾವು ಏನು ತುರ್ತು ಪರಿಸ್ಥಿತಿಯ ಸಮಯದಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲಿ Editorial ನ್ನು ಬಿಟ್ಟು ಅವರು ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಗೊಳಿಸಿದರು. ಅಂದರೆ, ಪತ್ರಿಕೆಗಳು ಸಹ ಸಮಾಜವಾಹಿನಿಯಲ್ಲಿ ಕೆಲಸವನ್ನು ಮಾಡಿವೆ. ಇದನ್ನು ಜನರಲೈಸ್ ಮಾಡುವ ಬಗ್ಗೆ ಯಾರು yellow journalism ಗೆ ಹೋಗಿದ್ದಾರೆ ಅವರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳುವುದು ಬಿಟ್ಟರೆ, ಕೆಲವೊಬ್ಬ journalist ಗಳು, either in the print media or in the electronic media, ಆ ಬದ್ಧತೆಯನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಆ ನಿಟ್ಟಿನಲ್ಲಿ ಸರ್ಕಾರ ಪರಿಶೀಲನೆ ಮಾಡಬೇಕು. ಜೊತೆಗೆ ಈ ಚಾನೆಲ್‌ಗಳು. ನ್ಯೂಸ್ ಚಾನೆಲ್ ಬೇರೆಯಾಗುತ್ತದೆ. ಸ್ಪೋರ್ಟ್ಸ್ ಬೇರೆಯಾಗುತ್ತದೆ. Economics ಬೇರೆಯಾಗುತ್ತದೆ. ಮನರಂಜನೆ ಬೇರೆಯಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಅಂತಹವರ ಬಗ್ಗೆ ಹೇಳುವುದಕ್ಕೆ ಹೋಗಿಲ್ಲ. ಯಾರು ಇರುತ್ತಾರೆ ಅವರ ಬಗ್ಗೆ ಹೇಳುತ್ತಾರೆ. ಎಲ್ಲಾ ಚಾನೆಲ್‌ಗಳ ಬಗ್ಗೆ...

**ಸಭಾಪತಿಯವರು:-** ಆಯಿತು. ಚರ್ಚೆ ಮುಗಿಸೋಣ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಹೇಳಲಿ. ನಾವು ಕೇಳುವಂತಹ ಸಹನೆ ತೋರಬೇಕಲ್ಲವೇ?

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಎಲ್ಲರೂ ಮಾಡುವುದಿಲ್ಲ. ಕೆಲವರು ಮಾತ್ರ ಮಾಡುತ್ತಾರೆ.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೆ, ಸರ್ಕಾರದಲ್ಲಿ ಈಗಿರುವಂತಹ ನಿಯಮಾವಳಿಗಳಲ್ಲಿ ಮಾಧ್ಯಮಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಇದು ಟೆಲಿವಿಷನ್ ಕಂಟ್ರೋಲ್ ತೆಗೆದುಕೊಳ್ಳುವಂತಹ Regulatory Authority ಯು ವಾರ್ತಾ ಇಲಾಖೆ ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಈ ನಿಯಮಾವಳಿಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಕೆಲವು ಅವಕಾಶ ಮಾಡುವಂತಹ ಅಂಶಗಳನ್ನು ಸೇರಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

(361)/22-3-2017/ಎಲ್ಎಂ/ಎಂಡಿ/2-00

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಈಗಾಗಲೆ ಮಾನ್ಯ ಮಂತ್ರಿಗಳಾದ ರಮೇಶ್‌ಕುಮಾರ್‌ರವರು, ಮಾನ್ಯ ಉಗ್ರಪ್ಪನವರು ಈ ವಿಚಾರವಾಗಿ ಮಾತನಾಡಿದ್ದಾರೆ. ಇದು ಎಲ್ಲರ ಬದುಕಿನಲ್ಲಿಯು ಬರುವಂತಹ ವಿಚಾರ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಎಲ್ಲರೂ ಕೆಟ್ಟವರು ಇರುವುದಿಲ್ಲ. ಕೆಲವರು ಮಾಡಿರುವುದು ಎಲ್ಲರ ಹೆಸರನ್ನು ಕೆಡಿಸುತ್ತದೆ. ಮೊನ್ನೆ ನಾನು ಗಂಗಾವತಿಗೆ ಹೋಗಿದ್ದೆ, ಅಲ್ಲಿ ಒಂದು ಪತ್ರಿಕಾ ಗೋಷ್ಠಿಯನ್ನು ಮಾಡಿ, ಯಾವುದೋ ಒಂದು ರಾಜಕಾರಣದ ಬಗ್ಗೆ " ಕುತ್ತಾ ನಾ ಘರಕ ನಾ ಘಾಟಕಾ" ಎಂದು ಒಂದು ಹೇಳಿಕೆಯನ್ನು ಕೊಟ್ಟೆ. ಅದನ್ನು ಯಾರೋ ಒಬ್ಬ ಸಣ್ಣ ಪೇಪರ್‌ನವರು " ಅಗಸರ ನಾಯಿ ಹೊಳೆಯನ್ನು ಕಾಣಲಿಲ್ಲ, ಮನೆಯನ್ನು ಕಾಣಲಿಲ್ಲ" ಎಂದು ಬರೆದ. ಇದರಿಂದ ಇಡೀ ರಾಜ್ಯದ ತುಂಬ ಹೊರಟ್ಟಿಯವರು ಹೀಗೆ ಹೇಳಿದ್ದಾರೆ ಎಂದು ಮಡಿವಾಳ ಸಮುದಾಯದವರು ಧರಣಿ ಮಾಡಲು ಪ್ರಾರಂಭ ಮಾಡಿದರು. ಅವರ ಮಾತು ಕೇಳಿ-ಕೇಳಿ ಸಾಕಾಗಿ ಹೋಯಿತು ನನಗೆ. ಬಸವರಾಜ ಎನ್ನುವವರು ಮೈಸೂರಿನ ಮಡಿವಾಳ ಸಮಾಜದವರು ನನಗೆ ಫೋನ್ ಮಾಡಿ ಅವರ ಬಾಯಿಗೆ ಯಾವ ಭಾಷೆ ಬರುತ್ತದೆ ಆ ಎಲ್ಲಾ ಭಾಷೆಗಳಲ್ಲಿ ನನಗೆ ಬೈದಿದ್ದಾರೆ. ಪ್ರತಿದಿನ ಒಬ್ಬರು ಫೋನ್ ಮಾಡಿ ಬೈಯುತ್ತಿದ್ದಾರೆ. ಅವರು ಏನು ಬೈದಿದ್ದಾರೆ ಎನ್ನುವುದು ಇಲ್ಲಿ ಹೇಳಲು ಆಗುವುದಿಲ್ಲ. ಹೀಗೆ ಬರೆದಿರುವ ಪೇಪರ್‌ನವರಿಗೆ ಫೋನ್ ಮಾಡಿ ವಿಚಾರಿಸಿದರೆ, ಸರ್ ನೀವು ನನ್ನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಏನು ಮಾಡಬೇಕು ನೀವೇ ಹೇಳಿ. ಎಲ್ಲಿಯವರೆಗೆ ಅವರನ್ನು ತಲೆ ಮೇಲೆ ಕೂಡಿಸಿಕೊಳ್ಳುವುದು? ಒಳ್ಳೆಯ ಪತ್ರಿಕೆಗಳು ಇವೆ. ಇಲ್ಲ ಎಂದು ಹೇಳುವುದಿಲ್ಲ. ನಾವು ಸಮಿತಿಯಿಂದ ವಿದೇಶಿ ಅಧ್ಯಯನ ಪ್ರವಾಸಕ್ಕೆ ಹೋಗುತ್ತೇವೆ. ಪದೇ-ಪದೇ ಶಾಸಕರು ವಿದೇಶಿ ಪ್ರವಾಸಕ್ಕೆ ಹೋಗುತ್ತಾರೆ ಎಂದು ನಮ್ಮ ಮೇಲೆ ಟೀಕೆಗಳು ಬಂದವು. ಒಂದು ಸಾರಿ ನಾವು ಮಾನ್ಯ ನಾಣಯ್ಯನವರು ಅಧ್ಯಕ್ಷರಾಗಿದ್ದ ಸಮಿತಿಯಿಂದ ಜಪಾನ್‌ಗೆ ಹೋಗಿದ್ದೆವು. ನಾವು ಅಲ್ಲಿ ಎಲ್ಲಾ ಕಡೆ ಹೋಗಿ, 10 ವಿಶ್ವವಿದ್ಯಾಲಯಗಳಿಗೆ, ಅಲ್ಲಿಯ ಶಾಲಾ-ಕಾಲೇಜುಗಳಿಗೆ ಹೋಗಿ ಭೇಟಿ ಮಾಡಿ, ಚರ್ಚೆ ಮಾಡಿ ಅಲ್ಲಿಯ ಫೋಟೋವನ್ನು ತೆಗೆದುಕೊಂಡು, ಇಷ್ಟು ಜನ ವಿಸಿ ಗಳಿಗೆ ಇಂಗ್ಲೀಷ್ ಬರುವುದಿಲ್ಲ ಎಂದು ಅಲ್ಲಿಂದ ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇವೆ. ಒಬ್ಬ ಪತ್ರಿಕೆಯವರು ನನಗೆ ಫೋನ್ ಮಾಡಿ ಸರ್ ನೀವು ಜಪಾನ್‌ಗೆಕ್ಕೆ ಹೋಗಿ ಬಂದಿದ್ದೀರಿ ಅದರ ಮಾಹಿತಿಯನ್ನು ಕೊಡಿ ಎಂದು ಕೇಳಿದರು. ನಾನು ಕಷ್ಟಪಟ್ಟು 10 ಪುಟ ಮಾಹಿತಿಯನ್ನು ಒಂದು ವಾರದಲ್ಲಿ ತಯಾರು ಮಾಡಿ ಕಳುಹಿಸಿ ಎರಡು-ಮೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಗಳವರೆಗೆ ಕಾಯ್ದರೂ ಪತ್ರಿಕೆಯಲ್ಲಿ ವಿಷಯ ಬರಲಿಲ್ಲ. ಆಗ ನಾನು ಆ ಪತ್ರಿಕೆಯವರಿಗೆ ಫೋನ್ ಮಾಡಿ ಪತ್ರಿಕೆಯಲ್ಲಿ ಏಕೆ ಬರಲಿಲ್ಲ ಎಂದು ಕೇಳಿದಾಗ, ಅವರು ಬಿಡಿ ಸರ್ ನೀವು ಎಲ್ಲಾ half pant ಮೇಲೆ ಹೋದರೆ ಯಾವುದೇ sensational news ಆಗುವುದಿಲ್ಲ ಅದಕ್ಕಾಗಿ ಹಾಕಿರುವುದಿಲ್ಲ ಎಂದು ಹೇಳಿದರು. ಇದನ್ನು ನೋಡಿದರೆ ನಮಗೆ ನೋವಾಗುತ್ತದೆ. ಆದರೂ ನಾವು ಬಾಯಿಮುಚ್ಚಿಕೊಂಡು ಸುಮ್ಮನೆ ಕೂಡುತ್ತೇವೆ. ಈ ರೀತಿಯಾಗಬಾರದು. ಇನ್ನೊಂದು ನಿಜ ಘಟನೆಯನ್ನು ಹೇಳಿ ಮುಕ್ತಾಯಗೊಳಿಸುತ್ತೇನೆ, ನಾನು ಮತ್ತು ಮಾನ್ಯ ಕುಮಾರಸ್ವಾಮಿಯವರು ಜೊತೆಯಾಗಿ ಕಿತ್ತೂರಿಗೆ ಹೋಗಿದ್ದೆವು. ಅಲ್ಲಿ ಒಬ್ಬರು ಪಾಪ ಪ್ರೀತಿಯಿಂದ ನಮ್ಮನ್ನು ಕರೆದು ಊಟ ಮಾಡಿಸಿದರು. ನಮಗೆ ಊಟ ಮಾಡಿಸಿದ ವ್ಯಕ್ತಿಯ pant loose ಆಗಿ ಕೆಳಕ್ಕೆ ಬಿತ್ತು, ಆಗ ನಮ್ಮ ಎಲ್ಲಾ ಕಾರ್ಯಕ್ರಮವನ್ನು ಬಿಟ್ಟು 20 ಸಾರಿ ಬರೀ ಅವರ ಚಡ್ಡಿಯನ್ನೇ ತೋರಿಸಿದರು. ಇವು ನಡೆಯುತ್ತಿರುವ ಘಟನೆಗಳು. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ ಎಲ್ಲರೂ ಸೇರಿ ಒಂದು ಸಾರಿ ದೊಡ್ಡ ಚರ್ಚೆ ಮಾಡಿ ಇದಕ್ಕೆ ಏನಾದರೂ ಕಡಿವಾಣ ಹಾಕೋಣ. ಒಳ್ಳೆಯ ಚಾನೆಲ್ ಬಗ್ಗೆ ಹೇಳುವುದಿಲ್ಲ. ಆದರೆ ಒಳ್ಳೆಯವರನ್ನು ಕೆಟ್ಟವರನ್ನಾಗಿ ಮಾಡುತ್ತಾರೆ. ನನ್ನ ತಂಗಿ ಮಗಳು ಮಹಾದೇವಿ ಎಂದು ಅವಳ divorce ಬಂದಿದೆ. ಈಗ ಕುತ್ತಿಗೆಗೆ ಬಂದು ನಿಂತಿದೆ. ಅವರು ಏನು ಮಾಡಬೇಕು ಹೇಳಿ. ಇಬ್ಬರು ಮಕ್ಕಳು ಅವಳಿಗೆ, ಪ್ರತಿ ವರ್ಷ distinction marks ಬರುತ್ತಿದ್ದ ಮಗ ಈ ಗಲಾಟೆಯಲ್ಲಿ ನಾಲ್ಕು ಸಾರಿ fail ಆಗಿದ್ದಾನೆ. ಅವರು ಏನು ಮಾಡಬೇಕು ಈಗ. ಪ್ರತಿದಿನ ಕಣ್ಣೀರು ಹಾಕುತ್ತಿದ್ದಾರೆ. ಅವರ ಕಣ್ಣೀರನ್ನು ನನಗೆ ನೋಡಲು ಆಗುತ್ತಿಲ್ಲ. ಮನೆತನ ಹಾಳು ಮಾಡುವಂತಹ ಕಾರ್ಯಕ್ರಮಗಳು ಟಿವಿ ಯಲ್ಲಿ ಬರುತ್ತಿವೆ. ಅವುಗಳ ಬಗ್ಗೆ ನಾವು ಜವಾಬ್ದಾರಿ ಸ್ಥಾನದಲ್ಲಿರುವವರು ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡಬೇಕಾಗುತ್ತದೆ. ಇಂತಹ ಕಾರ್ಯಕ್ರಮಗಳಿಂದ ವೈಯಕ್ತಿಕ ಬದುಕಿಗೆ ತೊಂದರೆಯಾಗಬಾರದು ಎನ್ನುವ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಈ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ. ಹಲವು ವಿಧದ ಭಾವನೆಗಳನ್ನು ವ್ಯಕ್ತ ಮಾಡಿದ್ದೇವೆ. ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದೇವೆ, ಸರ್ಕಾರದ ಪರವಾಗಿ ಸಭಾ ನಾಯಕರು ಸ್ವಲ್ಪ ಪ್ರಮಾಣದಲ್ಲಿ ಬರವಣಿಗೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ನಿಯಮ 330ರ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೇನೆ. ಮಾನ್ಯ ಸಚಿವರಾದ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಎರಡು ಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡಿತವಾಗಿ ಪ್ರಯತ್ನ ಮಾಡೋಣ. ಚರ್ಚೆಗೆ ಕೆಲವರನ್ನು select ಮಾಡಿ ಚರ್ಚೆಗೆ ತಯಾರಾಗಿ ಬನ್ನಿ ಎಂದು ಹೇಳೋಣ. ಈಗ ಇಲ್ಲಿಗೆ ನಿಯಮ 330ರ ಮೇಲಿನ ಚರ್ಚೆ ಮುಕ್ತಾಯಗೊಳ್ಳುತ್ತದೆ. ಭೋಜನ ವಿರಾಮಕ್ಕಾಗಿ ಸದನವನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತೇನೆ.

**(ಭೋಜನ ವಿರಾಮಕ್ಕಾಗಿ ಸದನವನ್ನು 2 ಗಂಟೆ 03 ನಿಮಿಷಕ್ಕೆ ಮುಂದೂಡಲ್ಪಟ್ಟು, ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**(362) 22-03-2017 SK-AK 3.40**

**(ಉಪ ಸಭಾಪತಿಯವರ ಉಪಸ್ಥಿತಿ)**

**(ಭೋಜನ ವಿರಾಮಕ್ಕೆಂದು 2 ಗಂಟೆ 03 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ ಮಧ್ಯಾಹ್ನ 3 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.)**

**(ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಉಪ ಸಭಾಪತಿಯವರು:-** ಈಗ ವಿತ್ತೀಯ ಕಾರ್ಯಕ್ರಮಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಂದ ಮುಂದುವರೆದ ಚರ್ಚೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಅಧಿಕಾರಿಗಳ ಗ್ಯಾಲರಿ ಹಾಗೂ ಮಂತ್ರಿಗಳ ಸ್ಥಾನಗಳು ಖಾಲಿ ಇವೆ. ಹಾಗಾಗಿ ನಾನು ಯಾರಿಗಾಗಿ ಮಾತನಾಡಲಿ?

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಚರ್ಚೆಯನ್ನು ಪ್ರಾರಂಭ ಮಾಡಿ, ಅವರುಗಳು ಬರುತ್ತಾರೆ. ಸರ್ಕಾರದ ಮುಖ್ಯ ಸಚೇತಕರೆ, ಸಂಬಂಧಪಟ್ಟ ಸಚಿವರುಗಳನ್ನು ಸದನಕ್ಕೆ ಕರೆಸಿ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಆರೋಗ್ಯ ಮಂತ್ರಿಗಳನ್ನಾದರೂ ಕರೆಸಿ, ಅವರ ಇಲಾಖೆ ಬಗ್ಗೆ ಮಾತನಾಡುತ್ತೇನೆಂದು ತಮಗೆ ನಾನು ಮನವಿ ಮಾಡಿದ್ದೆನು. ಆದಾದ ನಂತರ ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರ ಬಗ್ಗೆ ಹೇಳಿದ್ದೆ, ಅವರು ಸದನಕ್ಕೆ ಬಂದು ಹೋದರು. ಉಳಿದವರು ಇಲ್ಲ. ಆದರೂ ಗತಿಯೇ ಇಲ್ಲ ನಾವು ಮಾತನಾಡಬೇಕು ಎಂದು ಹೇಳಿದೆ. ನಮಗೂ ಗತಿಯಿಲ್ಲ ಅವರಿಗೂ ಮತಿಯಿಲ್ಲ. ಮಾನ್ಯ ಸಭಾಪತಿಯವರೇ, 'ಗತಿಯೂ ಇಲ್ಲ, ಮತಿಯೂ ಇಲ್ಲ' ಎಂದು ನೀವು ಕೇಳಿರಬೇಕಲ್ಲವೇ? ಅದು ಇವತ್ತು ನಮ್ಮ ವಿಧಾನ ಪರಿಷತ್ತಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದು ಹೋಗಿದೆ. ನಮಗೆ ಗತಿಯೇ ಇಲ್ಲ ನಾವು ಮಾತಾಡಲೇಬೇಕು. ಇವರಿಗೆ ಮರ್ಯಾದೆಯೇ ಇಲ್ಲ. ಮತಿ ಇಲ್ಲ ಎಂದರೆ ಇದು ತುಂಬಾ ಒಳ್ಳೆಯ ಪದ, ಬಿಡಿ. ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮಂತ್ರಿಯವರು...

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರೇ ಒಂದೇ ಒಂದು ನಿಮಿಷ. ಈ ವಿಚಾರವಾಗಿ ಅಲ್ಲ, ಬೇರೆ ವಿಚಾರ ಹೇಳುತ್ತೇನೆ. ದಯಮಾಡಿ, ಇದು ಬೆಳಿಗ್ಗೆ ಮುಗಿದಂತಹ ವಿಚಾರ. ನಾನು ಇಲ್ಲಿಂದ ಶಾಸಕರ ಭವನದ ನನ್ನ ಕೊಠಡಿಗೆ ಹೋದೆ. ಟಿವಿ ಚಾನಲ್‌ನ್ನು ಹಾಕಿದರೆ..

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ಈಗ ಅದರ ..

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಬಹಳ serious ವಿಚಾರ ಇದೆ.

**ಉಪ ಸಭಾಪತಿಯವರು:-** ಅದು ಸರಿ. ಆದರೆ ಈಗ ಯಾವ ನಿಯಮದ ಅಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು?

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

**ಉಪಸಭಾಪತಿಯವರು:-** ದಯವಿಟ್ಟು ...

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಸದನದ ಘನತೆ ಗೌರದ ಪ್ರಶ್ನೆಯಾಗಿದೆ. “ಮಾಧ್ಯಮಗಳನ್ನು ನಿಯಂತ್ರಿಸುವುದಕ್ಕೆ ರಾಜ್ಯ ಸರ್ಕಾರ ಶಾಸಕರನ್ನು ದುರ್ಬಳಕೆ”, “ಮಾಧ್ಯಮಗಳ ವಿರುದ್ಧ ಶಾಸಕರನ್ನು ಎತ್ತಿ ಕಟ್ಟುತ್ತಿದ್ದಾರೆ”. ಮಾಧ್ಯಮಗಳನ್ನು target ಮಾಡಿದ್ದಾರೆ. ರಾಜ್ಯ ಸರ್ಕಾರದ ವೈಫಲ್ಯಗಳನ್ನು ನಾವು ಎತ್ತಿ ಹಿಡಿಯುತ್ತಿದ್ದೇವೆ. ನಮ್ಮ ಸಾಮಾಜಿಕ ಕಳಕಳಿಯನ್ನು ಶಾಸಕರು ಅರ್ಥ ಮಾಡಿಕೊಳ್ಳುತ್ತಿಲ್ಲ. ಸರ್ಕಾರ ಇಡೀ ಶಾಸಕರನ್ನು ಬಳಕೆ ಮಾಡಿಕೊಂಡು ಇವತ್ತು ನಮ್ಮ ಮೇಲೆ ನಿಯಂತ್ರಣ ತರತಕ್ಕಂಥದ್ದಕ್ಕೆ ಮುಂದಾಗಿದ್ದಾರೆಂದು ಹೇಳಿ ಪುಂಖಾನುಪುಂಖವಾಗಿ ಮನ ಬಂದಂತೆ, ಸದನದ ಚರ್ಚೆಯನ್ನು ಇಷ್ಟು ಲಘುವಾಗಿ, ಅಂದರೆ ನಾವು ಏನು ಸರ್ಕಾರದ ಕೈಗೊಂಬೆಗಳ ರೀತಿಯಲ್ಲಿ ಇವತ್ತು ಚಿತ್ರಿಸುತ್ತಿದ್ದಾರೆ ಎಂದು ಹೇಳಿದರೆ ಇವತ್ತು ಈ ಸದನಕ್ಕೆ ಏನಾದರೂ ಘನತೆ- ಗೌರವವಿದೆಯಾ? ಈ ಸದನದ ಘನತೆ- ಗೌರವವನ್ನು ಇವತ್ತು ಪ್ರಶ್ನೆ ಮಾಡುತ್ತಿದ್ದಾರೆ.

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ,...

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ತಮ್ಮಲ್ಲಿ ಅತ್ಯಂತ ವಿನಯವಾಗಿ ಕೈಮುಗಿದು ಕೇಳುತ್ತಿದ್ದೇನೆ. ಈ ಸದನ ಮತ್ತು ಕೆಳಮನೆಯ ಘನತೆ ಮತ್ತು ಗೌರವವನ್ನು ಏನಾದರೂ ಎತ್ತಿ ಹಿಡಿಯಬೇಕೆನ್ನುವುದಾಗಿದ್ದರೆ suo moto ಯಾವ 'ಬಿ ಟಿವಿ' ಚಾನಲ್‌ನವರು ಇದನ್ನು ಈಗಲೂ ಸಹ ಅವ್ಯಾಹತವಾಗಿ ಬಿತ್ತರಿಸುತ್ತಿದ್ದಾರೆ, ಇದರ ವಿರುದ್ಧ immediately, privilege has to be moved. ಇದು ಸದನದಲ್ಲಿರುವ ಎಲ್ಲರ ಅಭಿಪ್ರಾಯ. ಸದನದಲ್ಲಿರುವಂತಹವರು ಯಾರಾದರೂ privilege move ಮಾಡುವುದು ಬೇಡ ಎಂದು ಹೇಳಿದರೆ ಅದನ್ನು move ಮಾಡುವುದಿಲ್ಲ. ಆದರೆ ಈಗ ತಾನೇ..

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಬೆಳಿಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಮಾಧ್ಯಮಗಳ ಬಗ್ಗೆ ಮತ್ತು ಚಾನಲ್‌ಗಳ ಬಗ್ಗೆ ಏನು ಹೇಳಬೇಕು ಮತ್ತು ಎಷ್ಟು ಹೇಳಬೇಕು ಅದನ್ನು ಹೇಳಿಯಾಗಿದೆ. ಅದು ಎಷ್ಟು ಸರಿ ಮತ್ತು ಎಷ್ಟು ತಪ್ಪು ಎಂದು ಚರ್ಚೆ ಮಾಡಿಕೊಳ್ಳುತ್ತಾ ಹೋಗುವುದು ನನಗಂತೂ ಅದು ಸೂಕ್ತವೆನಿಸುವುದಿಲ್ಲ. ನಾನು ಬೆಳಿಗ್ಗೆ ಮಾತಾಡಬೇಕೆಂದು ಅಂದುಕೊಂಡಿದ್ದೆ ಆದರೆ ಮಾತನಾಡಿಲ್ಲ. ಅದಕ್ಕೋಸ್ಕರ ಸಭಾ ನಾಯಕರಿದ್ದೀರಿ ಇದಕ್ಕೆ ಸಂಬಂಧಪಟ್ಟಂತೆ ಯಾವ ಟಿವಿಯ ಚಾನೆಲ್‌ನಲ್ಲಿ ಬಂದಿದೆ. ಇದಕ್ಕೆ ಸಂಬಂಧಪಟ್ಟವರನ್ನು ಕರೆದು ಮಾತುಕತೆ ನಡೆಸಿ, ಈ ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಗೆ ಅನುಕೂಲವಾಗುವ ದಿಕ್ಕಿನಲ್ಲಿ ಸರ್ಕಾರ ಹೋಗಲಿ. Privilege move ಮಾಡುವುದು ಇದನ್ನು ನಾನಂತೂ ಒಪ್ಪುವುದಿಲ್ಲ. ಆಗಿದ್ದಾಯಿತು, ಬೆಳಿಗ್ಗೆ ಸಾಕಷ್ಟು ಚರ್ಚೆಯಾಗಿದೆ, ಈ ಸದನದ ಗೌರವವನ್ನು ಕಾಪಾಡುವ ದಿಕ್ಕಿನಲ್ಲಿ ನಾನು ಕೂಡ ನಿಮ್ಮ ಜೊತೆಗೆ ಇದ್ದೇನೆ. ಸಂಘರ್ಷ ಒಳ್ಳೆಯದಲ್ಲಾ, ಸಂಘರ್ಷ ಯಾರ ಹತ್ತಿರ ಮತ್ತು ಎಲ್ಲಿ ಮಾಡಬೇಕು? ಅದಕ್ಕೋಸ್ಕರ ಹೇಳುತ್ತಿದ್ದೇನೆ, ತಾವು ಸಭಾನಾಯಕರು ಸದನದಲ್ಲಿದ್ದೀರಿ. ಇದರ ಬಗ್ಗೆ ಪ್ರಸ್ತಾಪವಾಗಿದೆ. ಯಾವ ಯಾವ ಚಾನೆಲ್‌ಗಳಲ್ಲಿ ಏನೇನು ಬಂದಿದೆ. ದಯವಿಟ್ಟು, ಅದನ್ನು ತರಿಸಿಕೊಳ್ಳಿ. ಸಂಬಂಧಪಟ್ಟಂತಹ ಚಾನಲ್‌ರವರನ್ನು ಕರೆದು ಮಾತುಕತೆ ಮಾಡಿ ಇದನ್ನು ಮುಗಿಸಬೇಕೆಂಬುದು ನನ್ನ ಪ್ರಾರ್ಥನೆ. ದಯವಿಟ್ಟು privilege move ಮಾಡುವುದು ಬೇಡ ಎಂಬುದು ನನ್ನ ಮನವಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ. ನೋಡಿ ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ, ಇನ್ನೂ ಮುಕ್ತಾಯವಾಗಿಲ್ಲ. ನಾವೆಲ್ಲರೂ ಸಹ ಸರ್ಕಾರದ ಕೈಗೊಂಬೆಗಳಾಗಿ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆಯೇ? ಈ ಕುರಿತು ಸಂವಿಧಾನದ ಆಶಯಗಳ ರೀತ್ಯಾ ಆರೋಗ್ಯಕರವಾದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಯಾಗಬೇಕು ಮತ್ತು ಆರೋಗ್ಯಕರವಾಗಿ reporting ಆಗಬೇಕೆಂದು ಹೇಳಿ ಇಷ್ಟೆಲ್ಲಾ ಹೇಳಿದ್ದೇವೆ. ಅಲ್ಲಿ ಹೋಗಿ ಇಷ್ಟು ಜನ ಶಾಸಕರನ್ನು ತೋರಿಸಿ, ಇವರನ್ನು ಯಾರು ನಿಯಂತ್ರಣ ಮಾಡುವಂತಹವರು ಇಲ್ಲವೇ? ಇವರಿಗೆ ನೆಲದ ಕಾನೂನು apply ಆಗುವುದಿಲ್ಲವೇ? ಹಾಗಾದರೆ ಸದನದಲ್ಲಿ ಶ್ರೀಮತಿ ತಾರಾ ಅನೂರಾಧರವರು ಇದನ್ನು ಪ್ರಸ್ತಾಪ ಮಾಡಿರುವುದು. ಅವರನ್ನು ಸರ್ಕಾರ ಎತ್ತಿ ಕಟ್ಟಿದೆಯಾ ಅಥವಾ ಇಲ್ಲಿ ಮಾತಾಡಿದಂತಹ ಎಲ್ಲಾ ಶಾಸಕರನ್ನು ಸರ್ಕಾರ ಎತ್ತಿಕಟ್ಟಿ, ಈ ಮಾಧ್ಯಮಗಳನ್ನು ನಿಯಂತ್ರಿಸತಕ್ಕಂತಹದ್ದಕ್ಕೆ ಇವತ್ತು ಈ ರೀತಿಯ ಕಾನೂನು ಮಾಡಬೇಕೆಂದು ಹೇಳಿದೆಯಾ? ಏನಾಗಿದೆ ಎಂದು ಹೇಳಿದರೆ ಸಾರಾಸಾಗಟಾಗಿ, ಸರ್ಕಾರ ಇರಬಹುದು, ರಾಜಕಾರಣಿಗಳು ಇರಬಹುದು. ಇವರು ಒಂದು ರೀತಿ ಕೆಟ್ಟವರು ಎನ್ನುವ ರೀತಿಯಲ್ಲಿ ಬಿತ್ತರಿಸುವುದು ಸರಿಯಲ್ಲ. ಇನ್ನೂ ವಿಷಯವೇ conclude ಆಗಿಲ್ಲ. ಹೀಗೆ ಮಾತಾಡುತ್ತಾರೆ ಎಂದು ಹೇಳಿದರೆ ಹೇಗೆ?

(ಮುಂದು...)

(363) 22-03-2017 3-50 HV:AK

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್.ಉಗ್ರಪ್ಪ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಈ ಸದನದ ಘನತೆ ಗೌರವದ ಹಿನ್ನೆಲೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸದನದಲ್ಲಿ ವಿಷಯ ಚರ್ಚೆ ಮಾಡಿ ಇನ್ನೂ ಅರ್ಧ ಗಂಟೆ, ಒಂದು ಗಂಟೆಗಳ ಕಾಲವಾಗಿಲ್ಲ ಅಷ್ಟರಲ್ಲಿಯೇ, ಒಂದು ಚಾನಲ್‌ನಲ್ಲಿ '3 ಗಂಟೆಗೆ ವೀಕ್ಷಿಸಿ' ಎನ್ನುವ ಶೀರ್ಷಿಕೆಯಡಿಯಲ್ಲಿ ಸುದ್ದಿ ಪ್ರಸಾರವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ, ನಮ್ಮೆಲ್ಲರ ಘನತೆ ಗೌರವಗಳಿಗೆ ಧಕ್ಕೆಯುಂಟಾಗುತ್ತದೆ ಮತ್ತು ಈ ಸದನದ ಗೌರವಕ್ಕೂ ಧಕ್ಕೆಯುಂಟಾಗುತ್ತದೆ. ಈಗ 'ಬಿ' ಟಿ.ವಿ.ಯಲ್ಲಿ ಯಾವ ಸುದ್ದಿಗಳು ಪ್ರಸಾರವಾಗುತ್ತಿವೆ ಎನ್ನುವುದರ ಬಗ್ಗೆ ಸಿಬ್ಬಂದಿಯನ್ನು ಕಳುಹಿಸಿ ತಮ್ಮ ಕಚೇರಿಯಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಪದೇ ಪದೇ ನಾನು ಹೇಳುತ್ತಿದ್ದೇನೆ, ಈ ಸದನದ ಘನತೆ ಗೌರವವನ್ನು ಎತ್ತಿ ಹಿಡಿಯಬೇಕಾದರೆ suo moto ಅವರನ್ನು ಕರೆಯಿಸಿ, ಯಾರನ್ನು ಯಾರು ಎತ್ತಿ ಕಟ್ಟಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು ಅಥವಾ ಮಂತ್ರಿಗಳು ಯಾರು ನಮ್ಮನ್ನು ಎತ್ತಿ ಕಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕಾಗಿದೆ. ಶಾಸಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸ್ವಾತಂತ್ರ್ಯವೇ ಇಲ್ಲವೆನ್ನುವ ರೀತಿಯಲ್ಲಿ ಬಿಂಬಿಸುತ್ತಿದ್ದಾರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಿಂದ ನಾವ್ಯಾರೂ ಶಾಸಕರಾಗಿ ಇರುವುದಕ್ಕೆ ನಾಲಾಯಕ್ಕೂ ಎನ್ನುವ ಅಭಿಪ್ರಾಯ ಸಾರ್ವಜನಿಕರಿಗೆ ಹೋಗುವ ಸಾಧ್ಯತೆ ಇದೆ. ಆ ಹಿನ್ನೆಲೆಯಲ್ಲಿಯೇ ನಮ್ಮ ಹಕ್ಕುಚ್ಯುತಿಯಾಗಿದೆ ಎಂದು ಹೇಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಿಯಮಾವಳಿಗಳ ಪ್ರಕಾರ ನಾವು ಹತ್ತು ಜನ ಸದಸ್ಯರು ಎದ್ದು ನಿಂತು ಹಕ್ಕುಚ್ಯುತಿಗೆ ಒಪ್ಪಿಗೆ ನೀಡಿದರೆ, ಅದು ಹಕ್ಕುಚ್ಯುತಿಯಾಗುತ್ತದೆ. ನಾನು ಆ ಹತ್ತು ಜನರ ಸಾಮರ್ಥ್ಯವನ್ನು ಪ್ರದರ್ಶನ ಮಾಡುವುದಕ್ಕೆ ಹೋಗುವುದಿಲ್ಲ. 'ಬಿ' ಟಿ.ವಿ. ಚಾನಲ್‌ನಲ್ಲಿ ಇರುವವರು ನನಗೆ ಬಹಳ ಬೇಕಾಗಿರುವ ಸ್ನೇಹಿತರಾಗಿದ್ದಾರೆ. ಆದರೆ, ಅವರಿಂದ ಈ ರೀತಿಯ ಬೇಜವಾಬ್ದಾರಿತನದ ಮಾತುಗಳನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಆ ಚಾನಲ್‌ರವರು ನಮ್ಮ ಸರ್ಕಾರದಲ್ಲಿನ ಎಲ್ಲ ಆಗುಹೋಗುಗಳನ್ನು ಪ್ರದರ್ಶಿಸುತ್ತೇವೆಂದು ಹೇಳಿಕೊಳ್ಳುತ್ತಿದ್ದಾರೆ. ಎಲ್ಲ ಶಾಸಕರನ್ನು ಪುಸಲಾಯಿಸಿ, ಎತ್ತಿಕಟ್ಟಿ ಮಾಧ್ಯಮಗಳನ್ನು ಗುರಿಯನ್ನಾಗಿಸಿಕೊಂಡಿದ್ದಾರೆಂದು ಅವರು ತಮ್ಮ ಚಾನಲ್‌ನಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಸದನದಲ್ಲಿ ಈ ವಿಚಾರ ಚರ್ಚೆಯಾಗಿ ಇನ್ನೂ ಒಂದು ಗಂಟೆ ಮುಗಿಯುವುದರೊಳಗೆ ಈ ರೀತಿಯ ಸುದ್ದಿಯನ್ನು ಬಿತ್ತರಿಸುತ್ತಾರೆಂದರೆ, ಅವರ ಉದ್ಧಟತನ ಎಷ್ಟರಮಟ್ಟಿಗೆ ಇರಬೇಕೆನ್ನುವುದನ್ನು ನಾವೆಲ್ಲರೂ ಊಹಿಸಿಕೊಳ್ಳಬೇಕಾಗಿದೆ. ಅವರಿಗೆ ಈ ನೆಲದ ಕಾನೂನಿನ ಅರಿವು ಇದೆಯೇ ಎಂದು ಕೇಳುವುದಕ್ಕೆ ಬಯಸುತ್ತಿದ್ದೇನೆ. ದಯಮಾಡಿ ತಮ್ಮಲ್ಲಿ ಕೈಮುಗಿದು ಪ್ರಾರ್ಥಿಸುತ್ತಿದ್ದೇನೆ. ಈ ಸದನದ ಶಾಸಕರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಬೆಳಕು ಚೆಲ್ಲಿದ್ದಾರೆ ಎನ್ನುವ ಅಂಶ ಈ ರಾಜ್ಯದ ಜನತೆಗೆ ಮುಟ್ಟಬೇಕಾದರೆ, 'ನಮ್ಮನ್ನು ಎತ್ತಿಕಟ್ಟಿದ್ದಾರೆ, ನಮ್ಮನ್ನು ಪುಸಲಾಯಿಸಿದ್ದಾರೆ' ಎನ್ನುವ ಮಾತುಗಳನ್ನು ಆಡುತ್ತಿರುವವರಿಗೆ ಬುದ್ಧಿ ಕಲಿಸುವಂತಹ ಕೆಲಸಕ್ಕೆ ಈ ಸದನ ಮುಂದಾಗಬೇಕೆಂದು ತಮ್ಮಲ್ಲಿ ಅತ್ಯಂತ ವಿನಯವಾಗಿ ಮನವಿ ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ.

**ಉಪ ಸಭಾಪತಿಯವರುः–** ಮಾನ್ಯ ಉಗ್ರಪ್ಪನವರೇ, ತಾವು ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಈ ವಿಚಾರವನ್ನು suo moto ಯಾವುದೇ ನಿಯಮಾವಳಿಗಳ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆನ್ನುವುದು ತಮ್ಮೆಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಇಂತಹ ಘಟನೆಗಳು ಜರುಗಬಾರದು. ತಾವು ನಿರ್ದಿಷ್ಟವಾಗಿ ಯಾವುದೋ ಒಂದೆರಡು ಮಾಧ್ಯಮಗಳಲ್ಲಿ ಈ ರೀತಿಯ ಸುದ್ದಿ ಬಿತ್ತರಗೊಳ್ಳುತ್ತಿದೆ ಎನ್ನುವುದನ್ನು ಸದನದ ಗಮನಕ್ಕೆ ತಂದಿದ್ದೀರಿ. ತಾವು ಹೇಳಿರುವಂತೆ ಆ ರೀತಿಯ ಸುದ್ದಿಗಳು ಬಿತ್ತರಗೊಂಡಿದ್ದರೆ, ಅದು ವಿಷಾದನೀಯ ಸಂಗತಿಯಾಗಿದೆ. ಈ ವಿಚಾರದ ಮೇಲೆ ಚರ್ಚೆಯಾಗಬೇಕು, ಅದರ ಬಗ್ಗೆ ಕ್ರಮ ಜರುಗಿಸಬೇಕೆನ್ನುವ ಉದ್ದೇಶ ತಮಗಿದ್ದರೆ ತಾವು ಸೂಕ್ತವಾದ ರೀತಿಯಲ್ಲಿ ಒಂದು ನೋಟಿಸ್ ನೀಡಿ ಅದನ್ನು ಪರಿಶೀಲಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, suo moto ನಿರ್ಣಯ ಕೈಗೊಳ್ಳುವುದು ತಮಗೆ ಅಧಿಕಾರದತ್ತವಾಗಿ ಬಂದಿದೆ. ಈಗ ಪ್ರಸ್ತಾಪವಾಗಿರುವ ವಿಚಾರದ ಮೇಲೆ ಸದನದಲ್ಲಿ ಚರ್ಚೆಯಾಗುವುದಕ್ಕೆ ನೋಟೀಸ್ ಕೊಡಲೇಬೇಕು ಎನ್ನುವುದಾದರೆ, ಕೊಡುತ್ತೇನೆ. ಆ ಚಾನಲ್‌ರವರು ಬಿತ್ತರಿಸುತ್ತಿರುವ ಸುದ್ದಿಯಲ್ಲಿ ನನ್ನ ಹೆಸರನ್ನಾಗಲೀ ಅಥವಾ ನನ್ನ ಬಗ್ಗೆಯಾಗಲೀ ಪ್ರಸ್ತಾಪ ಮಾಡಿಲ್ಲ. ಆದರೆ, ಸಾರಸಗಟಾಗಿ 'ಶಾಸಕರನ್ನು ಸರ್ಕಾರ ಎತ್ತಿ ಕಟ್ಟುತ್ತಿದೆ' ಎಂದು ಬಿತ್ತರಿಸಲಾಗುತ್ತಿದೆ. ಇದರರ್ಥ ನಮಗೆ ಸ್ವಂತ ಚಿಂತನೆಗಳೇ ಇಲ್ಲವೇ?

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಈ ವಿಚಾರದ ಮೇಲೆ ಚರ್ಚೆಯಾಗಬೇಕೆನ್ನುವುದಾದರೆ ತಾವು ಒಂದು ನಿರ್ದಿಷ್ಟವಾದ ನೋಟಿಸ್ ಕಳುಹಿಸಿಕೊಡಿ ಅದರ ಬಗ್ಗೆ ಪರಿಶೀಲಿಸಲಾಗುತ್ತದೆ.

**5. ಪ್ರಕಟಣೆ**

**ಉಪ ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ:22.03.2017ರಂದು ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತದೆಂದು ಸದನದ ಗಮನಕ್ಕೆ ತರಲಾಗುತ್ತಿದೆ;

1. ಪ್ರಶ್ನೋತ್ತರ ಅವಧಿ
2. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ
3. 2017–18ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಮತ್ತು ಸರ್ಕಾರದಿಂದ ಉತ್ತರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ನಿಯಮ 330ರಡಿಯಲ್ಲಿ ನಾನು ಪ್ರಸ್ತಾಪ ಮಾಡಿರುವ ವಿಚಾರವನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ? ಬೆಳಿಗ್ಗೆ 'ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕೆಳ ಮನೆಯಲ್ಲಿದ್ದಾರೆ, ಮಧ್ಯಾಹ್ನ ತೆಗೆದುಕೊಳ್ಳಲಾಗುತ್ತದೆ' ಎಂದು ಹೇಳಿದ್ದರು ಅದನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಆಯವ್ಯಯದ ಮೇಲೆ ಮಾತನಾಡಿ ಮುಗಿಸಿದ ನಂತರ ಮಾನ್ಯ ಸಚಿವರು ಈ ಸದನಕ್ಕೆ ಬಂದರೆ, ಆಗ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಎಲ್ಲ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡು ಮುಗಿಸಬೇಕೆಂದರೆ, ಮಾನ್ಯ ಶಿಕ್ಷಣ ಸಚಿವರನ್ನು ಕರೆಯಿಸಿ ಉತ್ತರ ಕೊಡಿಸಬೇಕಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಹೊರಟ್ಟಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಮ್ಮ ವಿಷಯಕ್ಕೆ ಉತ್ತರವನ್ನು ನೀಡಲು ಒಂದು ವಾರದವರೆಗೆ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಾನು ನೋಟೀಸ್ ಕೊಟ್ಟು ಬಹಳಷ್ಟು ದಿನಗಳಾಗಿವೆ. ಅವರು ಉತ್ತರ ಕೊಡುವುದಕ್ಕೆ ಒಂದು ವಾರದ ಕಾಲಾವಕಾಶ ಕೇಳಿದರೆ ಹೇಗೆ? ಸದನ ಒಂದು ವಾರದವರೆಗೆ ನಡೆಯುತ್ತದೆಯೇ?

**ಉಪ ಸಭಾಪತಿಯವರು:-** ಮಾನ್ಯ ಶಿಕ್ಷಣ ಸಚಿವರು ಬರೆದಿರುವ ಪತ್ರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಿಯಮ 330ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರಿಸಬೇಕಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಧಾರವಾಡ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ:183/2016 ಪ್ರಕರಣ ನಡೆಯುತ್ತಿದ್ದು, ವಿವರಗಳನ್ನು ಪಡೆದು ಉತ್ತರವನ್ನು ಸಿದ್ಧಪಡಿಸಿ ಸಲ್ಲಿಸಲು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಒಂದು ವಾರಗಳ ಕಾಲಾವಕಾಶ ನೀಡಬೇಕಾಗಿ ವಿನಂತಿಸುತ್ತೇನೆ" ಎಂದು ತಿಳಿಸಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಈ ತಿಂಗಳ 28ನೇ ತಾರೀಖಿಗೆ ಅಧಿವೇಶನ ಮುಕ್ತಾಯಗೊಳ್ಳುತ್ತದೆ. ಸುಮಾರು 10-12 ದಿನಗಳಷ್ಟು ಮುಂಚಿತವಾಗಿ ನಾವು ನೋಟೀಸ್ ಕೊಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೊಂದಿಗೆ ಮಾತನಾಡಿ ತಮಗೆ ತಿಳಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆಯವ್ಯಯದ ಮೇಲೆ ಮಾತನಾಡುವುದನ್ನು ಮುಗಿಸಿದ ನಂತರ ಮಾನ್ಯ ಶಿಕ್ಷಣ ಸಚಿವರು ನಿಯಮ 330ರಡಿಯಲ್ಲಿ ನಾನು ನೀಡಿರುವ ನೋಟೀಸ್‌ಗೆ ಉತ್ತರವನ್ನು ನೀಡುವಂತೆ ತಾವು ಹೇಳಿಕಳುಹಿಸಿ. ಅವರು ಏನು ಉತ್ತರ ಕೊಡುತ್ತಾರೆ ಎನ್ನುವುದನ್ನು ನೋಡೋಣ.

**ಉಪ ಸಭಾಪತಿಯವರು:-** ಈಗ ಆಯವ್ಯಯದ ಮೇಲಿನ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಂದುವರೆಸಬೇಕು.

**6. ವಿತ್ತೀಯ ಕಾರ್ಯಕಲಾಪ**

**2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡುತ್ತಿರುವ ವಿಚಾರಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಇದ್ದಂತಹ ಯಶಸ್ವಿನಿ ಯೋಜನೆಯನ್ನು ಆರೋಗ್ಯ ಇಲಾಖೆಗೆ ವರ್ಗಾಯಿಸಲಾಗುತ್ತಿದೆ.

ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಈ ಸಾಲಿನ ಆಯವ್ಯಯದ ಭಾಷಣದ ಪುಟ ಸಂಖ್ಯೆ 64ರ ಕಂಡಿಕೆ 116ರಲ್ಲಿ;

> **" ರಾಜ್ಯ ಸರ್ಕಾರದ ವಿವಿಧ ಆರೋಗ್ಯ ವಿಮಾ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ ತರಲು ಹಾಗೂ ಎಲ್ಲಾ ಕುಟುಂಬಗಳನ್ನು ಸಾರ್ವತ್ರಿಕ ಆರೋಗ್ಯ ವ್ಯಾಪ್ತೀಕರಣದಡಿಯಲ್ಲಿ (Universal Health Coverage) ತರಲು ಉದ್ದೇಶಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆಯು ಜಾರಿಯಲ್ಲಿರುವ ನಿಯಮಾವಳಿಗಳಂತೆಯೇ ಮುಂದುವರಿಯುತ್ತದೆ. ಆದರೆ, ಈ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ತರಲಾಗುವುದು."**

ಎಂದು ಉಲ್ಲೇಖಿಸಿದ್ದಾರೆ. ಹಿಂದೆ 2003ರ ಜೂನ್ ಮಾಹೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ, ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಂಡಿಸಲಾದ ಆಯವ್ಯಯದಲ್ಲಿ;

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**" ಈ ದೇಶದಲ್ಲಿ ರೈತ ಬಾಂಧವರಿಗೆ ಯಾವುದೇ ಆರೋಗ್ಯ ರಕ್ಷಣಾ ಯೋಜನೆ ಇಲ್ಲವಿದ್ದು, ರೈತರ ಆರೋಗ್ಯ ರಕ್ಷಣೆಗಾಗಿ ಯಶಸ್ವಿನಿ ಟ್ರಸ್ಟ್ ಸ್ಥಾಪಿಸುವ ಮೂಲಕ ಯಶಸ್ವಿನಿ ಯೋಜನೆಯನ್ನು ಸಹಕಾರ ಇಲಾಖೆಯ ಉಸ್ತುವಾರಿಯಲ್ಲಿ ಅನುಷ್ಠಾನಗೊಳಿಸುವುದು"**

ಎನ್ನುವಂತಹ ತೀರ್ಮಾನವಾಗಿದೆ. ಕಳೆದ 15 ವರ್ಷಗಳಿಂದ ಇದೊಂದು ಅತ್ಯುತ್ತಮವಾಗಿರುವ ಯೋಜನೆಯಾಗಿದೆ. ಕೇವಲ ರಾಜ್ಯದಲ್ಲಿ ಮಾತ್ರವಲ್ಲ, ದೇಶ ವಿದೇಶಗಳಲ್ಲಿಯೂ ಸಹ ಈ ಯೋಜನೆ ಹೆಸರುವಾಸಿಯಾಗಿದೆ. ಬಿ.ಬಿ.ಸಿ.ಯವರು ಕೂಡ 'ಕರ್ನಾಟಕ ರಾಜ್ಯದಲ್ಲಿರುವ ಯಶಸ್ವಿನಿ ಯೋಜನೆ ಉತ್ತಮವಾಗಿರುವ ಯೋಜನೆ' ಎಂದು ಪ್ರಸಾರ ಮಾಡಿದ್ದಾರೆ. ಕಳೆದ 2003ನೇ ಇಸವಿಯಿಂದ ಇಲ್ಲಿಯವರೆಗೆ ಸುಮಾರು 13 ವಿವಿಧ ವೈದ್ಯಕೀಯ ವಿಭಾಗದಲ್ಲಿ 10.99 ಲಕ್ಷ ಯಶಸ್ವಿನಿ ಸದಸ್ಯರಿಗೆ 1265.12 ಕೋಟಿ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆಗಳನ್ನು ನಡೆಸಿದೆ. ಅದೇ ರೀತಿಯಲ್ಲಿ ಸುಮಾರು 19.75 ಲಕ್ಷ ಜನರು ಹೊರ ರೋಗಿಗಳಾಗಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ. ಸಹಕಾರಿ ಬಾಂಧವರು ಯಶಸ್ವಿನಿ ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಒಟ್ಟು 630 ಕೋಟಿ ರೂಪಾಯಿಗಳನ್ನು ಸಂದಾಯ ಮಾಡಿರುತ್ತಾರೆ. ಇದೊಂದು ರೈತರಿಗೆ ಅನುಕೂಲವಾಗುವಂತಹ ವಿಶೇಷವಾದ ಯೋಜನೆಯಾಗಿದೆ. ಈ ಯೋಜನೆಯನ್ನು ಸಹಕಾರಿ ಕ್ಷೇತ್ರದಿಂದ ಆರೋಗ್ಯ ಇಲಾಖೆಗೆ ಏತಕ್ಕೋಸ್ಕರ ವರ್ಗಾಯಿಸಲಾಗುತ್ತಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

(ಮುಂದುವರೆದಿದೆ)

(364) 22.03.2017 ಟಿ.ಸಿ.ಹೆಚ್/ಆರ್.ಎನ್, 4.00 **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):-**

ಆರೋಗ್ಯ ಇಲಾಖೆಯಲ್ಲಿ ಇರುವಂತಹ ಯೋಜನೆಗಳು ಸಾಕಷ್ಟು ಹದಗೆಟ್ಟು ಹೋಗಿವೆ. ಇವತ್ತಿಗೂ ವರ್ಷಕ್ಕೆ 2 ಲಕ್ಷ ಯಶಸ್ವಿನಿ ಫಲಾನುಭವಿಗಳು ರಾಜ್ಯದಾದ್ಯಂತ ಇರುವ 735 ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಪಡೆದಿದ್ದು, ಸುಮಾರು 823 ವಿವಿಧ ಕಾಯಿಲೆಗಳಿಗೆ ಬೇಕಾಗುವ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿನಿ ಟ್ರಸ್ಟ್ ಒದಗಿಸುತ್ತಾ ಬಂದಿದೆ. ಅತ್ಯಂತ ಸುಗಮವಾಗಿ ನಡೆಯುತ್ತಿರುವ ಯೋಜನೆಯನ್ನು ವಿಲೀನಗೊಳಿಸುವ ಪ್ರಕ್ರಿಯೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಾಲನೆ ನೀಡಿದ್ದು, ಯಶಸ್ವಿನಿ ಯೋಜನೆ ಅವಸಾನಕ್ಕೆ ಪೀಠಿಕೆ ಹಾಕಿದೆ. ಶ್ರೀ ರಮೇಶ್‌ಕುಮಾರ್ ರವರು ಬಹಳ ಬುದ್ಧಿವಂತರು. ನಾನು ಅವರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ವಿಶ್ವವಾಣಿ ದಿನಪತ್ರಿಕೆಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ:20-03-2017ರಂದು *"ಸಹಕಾರಿ ಸಂಘಗಳಿಂದ ಹೊರಗೆ! ಕಡ್ಡಿ ಉಳಿಸಲು ಗುಡ್ಡ ಕಳೆದುಕೊಳ್ಳುತ್ತಿರುವ ರಾಜ್ಯ ಸರ್ಕಾರ, ಆರೋಗ್ಯ ಇಲಾಖೆಗೆ ವ್ಯಾಪ್ತಿಗೆ ಬಂತು ಯಶಸ್ವಿನಿ"* ಎಂದು ಪ್ರಕಟಿಸಲಾಗಿದೆ. ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಾನು ಇದನ್ನು ಮೊನ್ನೆಗೆ ಮುಗಿಸುತ್ತಿದ್ದೆ. ಈ ಯೋಜನೆಯ ಬಗ್ಗೆ ಅವರ ಗಮನಕ್ಕೆ ತಂದು, ಅವರು ಇದನ್ನು ಅರ್ಥ ಮಾಡಿಕೊಂಡು ಇದನ್ನು ಬಜೆಟ್‌ನಲ್ಲಿ ತಂದಿದ್ದಾರೆ. ಸಹಕಾರಿ ಕ್ಷೇತ್ರಕ್ಕೆ ಅವರು ಯೋಚನೆ ಮಾಡಿ ವಾಪಸ್ಸು ಕೊಡಬಹುದು ಎನ್ನುವಂತಹ ನಂಬಿಕೆ ಮೇಲೆ ನಾನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಯೋಜನೆ ನಿಧಿಗೆ ಪ್ರತಿ ಸದಸ್ಯರು ವಾರ್ಷಿಕ 300 ರೂಪಾಯಿಗಳ ಶುಲ್ಕ ಇರುತ್ತದೆ. 109 ಕೋಟಿ ರೂಪಾಯಿಗಳು ಇದೆ. ಸರ್ಕಾರದ ವಂತಿಗೆ 169 ಕೋಟಿ ರೂಪಾಯಿಗಳು ಇದೆ. ಒಟ್ಟು 278 ಕೋಟಿ ರೂಪಾಯಿಗಳು ಇರುತ್ತದೆ. 2015-16ನೇ ಸಾಲಿನಲ್ಲಿ 1.77 ಲಕ್ಷ ಫಲಾನುಭವಿಗಳು ಚಿಕಿತ್ಸೆ ಪಡೆದಿದ್ದು, 281 ಕೋಟಿ ರೂಪಾಯಿಗಳನ್ನು ಆಸ್ಪತ್ರೆಗಳಿಗೆ ಪಾವತಿ ಮಾಡಲಾಗಿದೆ. ಈ ಯೋಜನೆ ಕಳೆದ 15 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಇದು ಗ್ರಾಮೀಣ ಪ್ರದೇಶದ ಜನಪ್ರಿಯ ಯೋಜನೆ ಆಗಿರುತ್ತದೆ. ಇನ್ನೂ ಬಹಳ ವಿಶೇಷ ಎಂದರೆ, ಈಗ ಆರೋಗ್ಯ ಇಲಾಖೆಯಲ್ಲಿ "ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್" ಹಾಗೂ ಇನ್ನಿತರೆ ಬೇರೆ ಬೇರೆ ಯೋಜನೆಗಳಿವೆಯಲ್ಲ ಅಲ್ಲಿ ಅವ್ಯವಹಾರಗಳಾಗಿದೆ. 15 ವರ್ಷಗಳಿಂದ ಯಶಸ್ವಿನಿ ಯೋಜನೆಯಲ್ಲಿ ಒಂದೇ ಒಂದು ಅವ್ಯವಹಾರವೂ ಕಂಡುಬಂದಿಲ್ಲ. ಈ ಸುವರ್ಣ ಆರೋಗ್ಯ ಟ್ರಸ್ಟ್, ಸುವರ್ಣ ಆರೋಗ್ಯ ಯೋಜನೆಗಳು, ವಾಜಪೇಯಿ ಆರೋಗ್ಯಶ್ರೀ ಯೋಜನೆ, ಸದಸ್ಯತ್ವ ಬಿ.ಪಿ.ಎಲ್ ಕಾರ್ಡ್‌ದಾರರು, ರಾಜೀವ್ ಆರೋಗ್ಯ ಶ್ರೀ ಸದಸ್ಯತ್ವ ಎ.ಪಿ.ಎಲ್ ಕಾರ್ಡ್‌ದಾರರು, ಇಂದಿರಾ ಸುರಕ್ಷಾ ಯೋಜನೆ, ಆತ್ಮಹತ್ಯೆಗೆ ಒಳಗಾದ ರೈತ ಕುಟುಂಬಗಳ ಸದಸ್ಯರು, ಜ್ಯೋತಿ ಸಂಜೀವಿನಿ ಯೋಜನೆ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಿರುತ್ತದೆ. ಮುಖ್ಯಮಂತ್ರಿಗಳ ಸಾಂತ್ವನ ಯೋಜನೆ ಅಪಘಾತಕ್ಕೊಳಗಾದ ವ್ಯಕ್ತಿಗಳಿಗಾಗಿ ತುರ್ತು ಚಿಕಿತ್ಸೆಗಾಗಿ ನೀಡುವ ಪರಿಹಾರ ಧನವಾಗಿರುತ್ತದೆ. ಮೇಲಿನ ಯೋಜನೆಗಳಿಗೆ ಸರ್ಕಾರ ನೂರರಷ್ಟು ಅಂದರೆ, ಸುಮಾರು 410 ಕೋಟಿ ರೂಪಾಯಿಗಳ ಅನುದಾನ ನೀಡುತ್ತಿದೆ. ಇವೆಲ್ಲಾ ಈಗ ಸುವರ್ಣ ಆರೋಗ್ಯ ಟ್ರಸ್ಟ್ ಮುಖಾಂತರ ಆಗುತ್ತಿರುವುದು. ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಆಸ್ಪತ್ರೆಗಳಿಗೆ 46 ಕೋಟಿ ರೂಪಾಯಿಗಳನ್ನು ಇನ್ನೂ ಬಾಕಿ ಕೊಡಬೇಕಾಗಿದೆ. ಮೊನ್ನೆ ದಿವಸ ಮಾನ್ಯ ಆರೋಗ್ಯ ಸಚಿವರು ಬಹಳ ಉದ್ವೇಗದಲ್ಲಿ ಮಾತನಾಡಿದರು. ನಾವು ಅಷ್ಟು ಅನುದಾನವನ್ನು ಕೊಟ್ಟಿದ್ದೇವೆ. ಇಷ್ಟು ಅನುದಾನವನ್ನು ಕೊಟ್ಟಿದ್ದೇವೆ. ಬರೀ 46 ಕೋಟಿ ರೂಪಾಯಿಗಳು ಕೊಡಲು ಬಾಕಿ ಇದ್ದರೂ ಇವರು ಈ ರೀತಿ ಮಾಡುತ್ತಿದ್ದಾರೆ. ಈ 46 ಕೋಟಿ ರೂಪಾಯಿಗಳು ಲೆಕ್ಕಕ್ಕೆ ಇಲ್ಲವೇನು? 46 ಕೋಟಿ ರೂಪಾಯಿಗಳು ದುಡ್ಡು ಅಲ್ಲವೇ? ಬರೀ 46 ಕೋಟಿ ರೂಪಾಯಿಗಳು ಅಂದರೆ ಹೇಗೆ? ಅವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

concession rate ನಲ್ಲಿ ರೈತ ಬಾಂಧವರಿಗೆ ಕೆಲಸ ಆಗಬೇಕೆಂದು ಮಾಡುತ್ತಿರುವಾಗ ಈ ರೀತಿ ಆಗುತ್ತಿದೆ. ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ, ನಂದಿನಿ ಬಡಾವಣೆ, ಬೆಂಗಳೂರು ಇಲ್ಲಿ ಸುಳ್ಳು ಬಿಲ್ಲನ್ನು ಸಲ್ಲಿಸಿ, ಹಣ ಪಡೆದಿರುವ ಬಗ್ಗೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ಇಷ್ಟೆಲ್ಲಾ ಇರುವಂತಹ ಸಂದರ್ಭದಲ್ಲಿ ಇದನ್ನು ನೀವು ಸಹಕಾರ ಇಲಾಖೆಯಿಂದ ಆರೋಗ್ಯ ಇಲಾಖೆಗೆ ವಾಪಸ್ಸು ತರುತ್ತಿದ್ದೇವೆಂದರೆ, ಯಾವ ಕಾರಣಕ್ಕೂ ದಯವಿಟ್ಟು ಇದು ಆಗಬಾರದು. ಇವರು ಇದಕ್ಕೆ ಕೊಡುತ್ತಿರುವಂತಹ ಕಾರಣ ಇನ್ನೊಂದಿದೆ. ಈ ಆರೋಗ್ಯ ಮತ್ತು ಕುಟುಂಬ ಇಲಾಖೆ ಸಚಿವರ ಪ್ರಕಾರ, ಈ ಪ್ರಸ್ತಾವಿತ ಯೋಜನೆ ಫಲಾನುಭವಿಗಳು ಮೊದಲು ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆಯನ್ನು ಪಡೆಯಬೇಕು. ಸರ್ಕಾರಿ ಆಸ್ಪತ್ರೆ ಪರಿಸ್ಥಿತಿ ಹೇಗಿದೆ ಎಂದು ನಾನು ವಿವರ ಹೇಳಲು ಹೋಗುವುದಿಲ್ಲ. ಅಲ್ಲಿ ಏನೂ ಸೌಲಭ್ಯವಿಲ್ಲ. ಅಲ್ಲಿಯವರು ಖಾಸಗಿ ಆಸ್ಪತ್ರೆಗಳಿಗೆ ತೆರಳಬೇಕಾಗುತ್ತದೆ. ಈ ಯೋಜನೆಯಿಂದ ಹಣ ಪಾವತಿಯಾಗಿ ಸರ್ಕಾರದ ಅನುದಾನ ಸರ್ಕಾರಿ ಆಸ್ಪತ್ರೆಗಳಿಗೆ ಬರುತ್ತದೆ ಎಂಬುದು ಮಾನ್ಯ ಆರೋಗ್ಯ ಸಚಿವರ ಒಂದು ವಾದವಾಗಿದೆ. ಸರ್ಕಾರಿ ಆಸ್ಪತ್ರೆಗಳ ಇಂದಿನ ಪರಿಸ್ಥಿತಿ ಶೋಚನೀಯ. ಆಸ್ಪತ್ರೆಗೆ ಬೇಕಾದಂತಹ ಉಪಕರಣಗಳು ಇಲ್ಲ. ನುರಿತ ವೈದ್ಯರು, ತಜ್ಞರುಗಳು ಇರುವುದಿಲ್ಲ. ಅಲ್ಲದೇ, 140 ತಾಲ್ಲೂಕಿನಲ್ಲಿ 10 ಬೆಡ್ ಇರುವಂತಹ ಆಸ್ಪತ್ರೆಗಳೇ ಇರುವುದಿಲ್ಲ. ಅಲ್ಲಿ ಖಾಸಗಿ ಆಸ್ಪತ್ರೆಗಳು ಕೂಡ ಇಲ್ಲ. ಇಂತಹ ಸಂದರ್ಭದಲ್ಲಿ ಇದೊಂದು ಸಚಿವರ ಆಲೋಚನೆಯಾಗಿದೆ. ಈ ರೀತಿ ಮಾಡುವುದು ಯಾವುದೇ ಕಾರಣಕ್ಕೂ ಸರಿ ಹೋಗುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಮಹತ್ವದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಅವರು ಪಟ್ಟಿ ಮಾಡಿ ಓದಿದಂತಹ ಎಲ್ಲಾ ಯೋಜನೆಗಳಿಗೆ ನಮ್ಮ ನಾಗರೀಕರ involvement ಇಲ್ಲ. ಆದರೆ ಯಶಸ್ವಿನಿ ಯೋಜನೆಯಲ್ಲಿ ನಾಗರೀಕರ involvement ಇದೆ. ರೈತರು ತಮ್ಮ ಪ್ರೀಮಿಯಂ ಹಣವನ್ನು ಕೊಟ್ಟು ತಮ್ಮ ಸದಸ್ಯತ್ವವನ್ನು ನೋಂದಾಯಿಸಿಕೊಳ್ಳುತ್ತಾರೆ. ಉಳಿದ ಯೋಜನೆಗಳಲ್ಲಿ ಆ ರೀತಿ ಇರುವುದಿಲ್ಲ. ಹಾಗಾಗಿ, ಇವರು ನೋಂದಣಿ ಮಾಡಿಕೊಳ್ಳುವಂತಹ ಶುಲ್ಕ ಒಂದು ವರ್ಷಕ್ಕೆ ಹೆಚ್ಚು ಕಡಿಮೆ 200 ಕೋಟಿ ರೂಪಾಯಿಗಳು ಹಣ ಬರುತ್ತದೆ. ಬೇರೆ ಕಡೆ ನೋಂದಣಿ ಯೋಜನೆ ಇಲ್ಲ. ಹಾಗಾಗಿ ಯಶಸ್ವಿನಿ ಯೋಜನೆಯಲ್ಲಿ ಯಾವುದೇ ವ್ಯತ್ಯಾಸಗಳು ಹಾಗೂ ಲೋಪಗಳು ಇಲ್ಲಿಯವರೆಗೆ ಕಂಡುಬಂದಿಲ್ಲ ಮತ್ತು ಜನ ಇದನ್ನು ಬಹಳವಾಗಿ ಇಷ್ಟಪಟ್ಟಿದ್ದಾರೆ ಮತ್ತು ಈ ಯೋಜನೆ ಅತ್ಯಂತ ಯಶಸ್ವಿಯಾಗಿದೆ ಮತ್ತು ಜನರ ಆರೋಗ್ಯದ ವಿಚಾರದಲ್ಲಿ ಅವರ ಸಹಾಯಕ್ಕೆ ಈ ಯೋಜನೆ ಬಹಳವಾಗಿ ಸಹಕಾರಿಯಾಗಿದೆ. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಲ್ಲೂ ಗೊಂದಲಗಳಿವೆ. ಬೇರೆ ಬೇರೆ ಯೋಜನೆಗಳಲ್ಲೂ ಗೊಂದಲಗಳಿವೆ. ದುರುಪಯೋಗದ ಪ್ರಕರಣಗಳು ದಾಖಲಾಗಿವೆ. ಆದರೆ ಈ ಯಶಸ್ವಿನಿ ಯೋಜನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಒಂದು ಪ್ರಕರಣವೂ ದಾಖಲಾಗಿಲ್ಲ ಮತ್ತು ಇದು ಯಶಸ್ವಿ ಯೋಜನೆ ಆಗಿದೆ. ಹಾಗಾಗಿ, ಇದನ್ನು ಇನ್ಯಾವುದೋ ಯೋಜನೆಗೆ ತೆಗೆದುಕೊಂಡು ಸೇರಿಸಿ ಹಾಳು ಮಾಡುವುದು ಬೇಡ. ಇದು ನಿಮ್ಮ "ಈ ಹಿಂದಿನ ಸರ್ಕಾರ ಕೊಟ್ಟಂತಹ ಅತ್ಯಂತ ಯಶಸ್ವಿ ಯೋಜನೆಗಳಲ್ಲಿ ಒಂದು". ಆ ಯಶಸ್ವಿನಿ ಯೋಜನೆ "ಯಶಸ್ವಿ" ಆಗಿರುವುದರಿಂದ, ಅದನ್ನು ಹಾಗೆಯೇ ಇಡುವುದು ಎಲ್ಲಾ ದೃಷ್ಟಿಯಿಂದ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಒಂದು ನಾಗರೀಕ ಸರ್ಕಾರದ ಜವಾಬ್ದಾರಿ ತನ್ನ ನಾಗರೀಕರ ಆರೋಗ್ಯಕ್ಕೆ ಆದ್ಯತೆ ಕೊಡುವಂಥದ್ದು. ಆ ದಿಸೆಯಲ್ಲಿ ಯಶಸ್ಸು ಕಂಡಿರುವಂತಹ ಯೋಜನೆಯನ್ನು ಏತಕ್ಕೆ ಮಟ್ಟ ಹಾಕಬೇಕು. ಏತಕ್ಕೆ ಅದನ್ನು ಕಿತ್ತು ಹಾಕಬೇಕು. ದಯಮಾಡಿ ಆ ಯಶಸ್ವಿನಿ ಯೋಜನೆಯನ್ನು ಯಥಾವತ್ತಾಗಿ ಮುಂದುವರೆಸಬೇಕೆಂದು ನಾನು ಮಾನ್ಯ ವಿರೋಧಪಕ್ಷದ ನಾಯಕರ ಮಾತಿಗೆ ನಾನು ಧನಿಗೂಡಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ದಿವಂಗತ ಮಹದೇವ ಪ್ರಸಾದ್ ರವರು ಸಹಕಾರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಈ ಯೋಜನೆ ವಿಲೀನ ಮಾಡಬೇಕೆಂದು ಪ್ರಸ್ತಾವ ಬಂತು. ಆಗ ದಿನಾಂಕ:14-09-2016ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಗೆ ಸ್ಪಷ್ಟವಾಗಿ ತಮ್ಮ ನಿಲುವನ್ನು ತಿಳಿಸಿದ್ದಾರೆ. ಅದೇ ರೀತಿ ಸಹಕಾರ ಇಲಾಖೆಯ ಕಾರ್ಯದರ್ಶಿ ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ದಿನಾಂಕ:29-09-2016ರಂದು ಯಶಸ್ವಿನಿ ಯೋಜನೆಯನ್ನು ವಿಲೀನಗೊಳಿಸಬಾರದೆಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಇಲ್ಲಿ ಅವರು ಮೊನ್ನೆ ದಿವಸ ಮಾತನಾಡುತ್ತಿರುವಂತಹ ಧಾಟಿಯಲ್ಲಿ ನನಗೆ ಅನಿಸಿದ್ದು ಏನೆಂದರೆ, ಕೆಲವು ಆಸ್ಪತ್ರೆಗಳಲ್ಲಿ ದುಡ್ಡನ್ನು ಕೊಡದಿದ್ದರೆ ಹೆಣವನ್ನೂ ಬಿಡುವುದಿಲ್ಲ. ಈ ಮಾತನ್ನು ಹೇಳಿದರು. ಅದು ಸತ್ಯ. ನಾನು ಆ ರೀತಿ ಆಸ್ಪತ್ರೆಗಳ ಬಗ್ಗೆ ಯಾವುದೇ ಕಾರಣಕ್ಕೂ ನಾವು ಬೆಂಬಲವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅದು ಯಾರೋ ಮಾಡಿದ ತಪ್ಪಿಗೆ ಇನ್ಯಾರಿಗೋ ಬಲಿ ಮಾಡಿದರೆ ಹೇಗೆ? ಈ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣನೆ ಮಾಡಬೇಕು. SAST ಇದೆಯಲ್ಲ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳಿಸುವ ಯೋಜನೆ. ಆರೋಗ್ಯ ಸಚಿವರ ಇಲಾಖೆಗಳ ಈ ಟ್ರಸ್ಟ್‌ಗಳು ಎಲ್ಲಾ ಸರಿ ಇಲ್ಲ. ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ ಒಂದರಲ್ಲಿಯೇ ಖೊಟ್ಟಿ ಬಿಲ್ಲುಗಳನ್ನು ಕೊಟ್ಟು, ಸುವರ್ಣ ಆರೋಗ್ಯ ಟ್ರಸ್ಟ್‌ಗೆ 6.24 ಕೋಟಿ ರೂಪಾಯಿಗಳನ್ನು ಮೋಸ ಮಾಡಿರುತ್ತಾರೆ. ಈ ಹಗರಣದ ಬಗ್ಗೆ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ವರದಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಈ ಆಸ್ಪತ್ರೆಯ ಹಗರಣ ಸುಳಿವು ಇದ್ದು, ಆಸ್ಪತ್ರೆಯಿಂದ ಸುವರ್ಣ ಆರೋಗ್ಯ ಟ್ರಸ್ಟ್ ಸಂಸ್ಥೆ ತಾತ್ಕಾಲಿಕವಾಗಿ ತೆಗೆದು ಹಾಕಿ, ನಂತರ ವಾಪಸ್ಸು ನೆಟ್‌ವರ್ಕ್‌ಗೆ ತೆಗೆದುಕೊಂಡು ಅಪಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುರುಪಯೋಗಕ್ಕೆ ಈ ಟ್ರಸ್ಟ್ ಸಹಕಾರಿಯಾಗಿರುತ್ತದೆ. ಈ ಬಗ್ಗೆ ಸಿ.ಐ.ಡಿ., ತನಿಖೆ ನಡೆಯುತ್ತಿದ್ದು, ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ ಹಾಗೂ ಹಣ ವಸೂಲಿಗೂ ಕೂಡ ಯಾವ ಕ್ರಮ ತೆಗೆದುಕೊಂಡಿಲ್ಲ. ನೇರವಾಗಿ 6.24 ಕೋಟಿ ರೂಪಾಯಿಗಳು ಮೋಸ ಮಾಡಿದ್ದಾರೆ. ಸಿ.ಐ.ಡಿ ತನಿಖೆ ಆಗುತ್ತಿರುವಂತಹ ಸಂದರ್ಭದಲ್ಲಿ ಅವರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ಒಂದು. ಇನ್ನೊಂದು, ಶಾಲಾ ಮಕ್ಕಳ ಆರೋಗ್ಯ ಯೋಜನೆಯಲ್ಲಿ ಯಶಸ್ವಿನಿ ಟ್ರಸ್ಟ್ ಸುಗಮವಾಗಿ ನಡೆಯುತ್ತಿದ್ದು, 2014-15ನೇ ಸಾಲಿನಲ್ಲಿ ಏಕಾಏಕಿ ಆರೋಗ್ಯ ಇಲಾಖೆ ಅಡಿಯಲ್ಲಿ ಇರಬೇಕೆಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಯಾವುದೇ ಪೂರ್ವ ತಯಾರಿ ಇಲ್ಲದೇ ಹಸ್ತಾಂತರಿಸಲಾಯಿತು. ಆದರೆ, ಕೆಲವೇ ತಿಂಗಳಲ್ಲಿ ಮತ್ತೆ ಯಶಸ್ವಿನಿ ಟ್ರಸ್ಟ್‌ಗೆ ಎರಡನೇ ಹಂತದ ಶಸ್ತ್ರಚಿಕಿತ್ಸೆಯನ್ನು ಮಾಡಬೇಕೆಂದು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ, ಇದು ಒಂದು ರಾಷ್ಟ್ರೀಯ ಕಾರ್ಯಕ್ರಮ ಎಂದು ಯಶಸ್ವಿನಿ ಟ್ರಸ್ಟ್ ಒಪ್ಪಿಕೊಂಡು ಅನುಷ್ಠಾನ ಮಾಡಿದರು.

**(ಮುಂದು.)**

(365) 22.3.2017 4.10 ಪಿಕೆ:ಆರ್‌ಎನ್

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದಿದೆ)

ಮೊದಲೂ ಕೂಡ ಈ ರೀತಿ ಪ್ರಯತ್ನ ನಡೆದು ಪುನಃ ಅದು ಸಹಕಾರಿ ಇಲಾಖೆಗೆ ವಾಪಸ್ಸು ಬಂತು. ಜ್ಯೋತಿ ಸಂಜೀವಿನ ಯೋಜನೆ ಬಗ್ಗೆ ಸರ್ಕಾರಿ ನೌಕರರುಗಳಲ್ಲಿ ಅಸಮಾಧಾನ ಇದ್ದು ಯಾವುದೇ ಸಂದರ್ಭದಲ್ಲಿ ಭುಗಿಲೇಳುವ ಸಾಧ್ಯತೆ ಇದೆ". ಇದೇರೀತಿ, accident and trauma ಗೆ ಸಂಬಂಧಿಸಿದಂತೆ ಹರೀಶ್ ಸಾಂತ್ವನ ಯೋಜನೆ, ಇದೂ ಯಶಸ್ವಿಯಾಗಿಲ್ಲ. ಎಪಿಎಲ್ ಕಾರ್ಡ್‌ನವರಿಗೆ ಅನುಷ್ಠಾನಗೊಳ್ಳುವ ರಾಜೀವ್ ಆರೋಗ್ಯಶ್ರೀ ಯೋಜನೆಯಲ್ಲಿ ಉಳ್ಳವರಿಗೆ ಕಡಿಮೇ ಪ್ಯಾಕೇಜ್ ದರದಲ್ಲಿ ಚಿಕಿತ್ಸೆ ನೀಡಬೇಕಾಗಿರುವುದರಿಂದ ಅನುಷ್ಠಾನಗೊಳಿಸಲು ಬಹುತೇಕ ಆಸ್ಪತ್ರೆಗಳು ಹಿಂಜರಿಯುತ್ತಿವೆ, ಈಗಾಗಲೇ ಕೆಲವು ಆಸ್ಪತ್ರೆಗಳು ಅನುಷ್ಠಾನ ಮಾಡುವುದನ್ನು ನಿಲ್ಲಿಸಿವೆ", ಹೀಗೆ ಇಂತಹ ಅನೇಕ ಬೇರೆ ಯೋಜನೆಗಳು ಕುಲಗೆಟ್ಟು ಹೋಗಿರುವುದರ ವಿವರ ಕೊಡುತ್ತಲೇ ಹೋಗಬಹುದು. ಯಶಸ್ವಿನಿ ಯೋಜನೆ ಬಗ್ಗೆ ಒಂದು ದೂರು ಕೂಡ ಇಲ್ಲ. ಇದು ಸಹಕಾರಿ ಕ್ಷೇತ್ರಕ್ಕೆ ಬರುವುದರಿಂದ ಅವರು ರೈತರಲ್ಲಿ ಜಾಗೃತಿ ಮೂಡಿಸುತ್ತಾರೆ. ಇಷ್ಟೊಂದು ಒಳ್ಳೆಯ ಯೋಜನೆಯನ್ನು ಏಕೆ ಬಿಡುತ್ತಿದ್ದೀರಿ? (ಈ ಹಂತದಲ್ಲಿ ಆರೋಗ್ಯ ಸಚಿವರಾದ ಮಾನ್ಯ ರಮೇಶ್‌ಕುಮಾರ್‌ರವರು ಸದನಕ್ಕೆ ಬಂದರು) ನೀವು ಸದನಕ್ಕೆ ಬಂದಿದ್ದು ದೇವರು ಬಂದ ಹಾಗಾಯಿತು. ಬೆಳಿಗ್ಗೆಯಿಂದ ದೇವರೆಲ್ಲಿ ಎಂದು ಕೇಳುತ್ತಿದ್ದೆವು.

ಬೆಳಿಗ್ಗೆಯಿಂದ ಕೆಟ್ಟ ದೇವರನ್ನು ನೋಡಿದ್ದೆವು, ಈಗ ಒಳ್ಳೆಯ ದೇವರು ಬಂತು. (ಸದನದಲ್ಲಿ ನಗು) ಯಶಸ್ವಿನಿ ಯೋಜನೆಯನ್ನು ಸಹಕಾರ ಕ್ಷೇತ್ರದಿಂದ ಏಕಾದರೂ ನೀವು ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದೀರೋ ಗೊತ್ತಿಲ್ಲ. ಇದರಿಂದ ರಾಜ್ಯದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ನಾನು ಖಾಸಗಿಯಾಗಿಯೇ ನಿಮ್ಮ ಹತ್ತಿರ ಬಂದು ಮಾತನಾಡಬೇಕು ಎಂದುಕೊಂಡಿದ್ದೆ, ನೀವು ಸರ್ಕಾರ ನಾನು ವಿರೋಧ ಪಕ್ಷ ಎನ್ನುವುದು ಅದು ಬೇರೆ. ಇದುವರೆಗೂ ನಾನು ಹೇಳಿದ್ದನ್ನು ಇನ್ನೊಂದು ಸಲ ರಿಪೀಟ್ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. 13 ವರ್ಷದ ಹಿಂದೆ, ಮಾನ್ಯ ಎಸ್.ಎಂ.ಕೃಷ್ಣಾರವರ ಕಾಲದಲ್ಲಾದ ಒಂದು ಯೋಜನೆ ಏನಿದೆ ಅದರ ಬಗ್ಗೆ ಒಂದು ಆಪಾದನೆಯೂ ಸಹ ಇಲ್ಲ. ಯಾರೋ ಕೆಲವು ಖಾಸಗಿ ವ್ಯಕ್ತಿಗಳು ಅನ್ಯಾಯ ಮಾಡುತ್ತಿದ್ದಾರೆ ಎಂದು ನಿಮಗನಿಸಿದ್ದರೆ ಅಂಥವರ ಬಗ್ಗೆ ನೀವು ಏನು ಬೇಕಾದರೂ ಕ್ರಮ ಕೈಗೊಳ್ಳಿ. ಯಾವುದೇ ಕಾರಣಕ್ಕೂ ಕೂಡ ಸಹಕಾರಿ ಕ್ಷೇತ್ರದಿಂದ ನಿಮ್ಮ ಕಡೆ ಇದನ್ನು ತರಬೇಡಿ. ದಿವಂಗತ ಮಹದೇವ್ ಪ್ರಸಾದ್‌ರವರಿದ್ದಾಗ ಅವರ ಅವಧಿಯಲ್ಲಿ ಪತ್ರ ಬರೆದಿದ್ದು ನಿಮಗೆ ಗೊತ್ತಿದೆ. ನಾನು ಮತ್ತೊಮ್ಮೆ ಇದನ್ನು ರಿಪೀಟ್ ಮಾಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ರಮೇಶ್ ಕುಮಾರ್:-** ಮಾನ್ಯ ಸಭಾಪತಿಗಳೆ, ಪ್ರಾಥಮಿಕ ಸಹಕಾರಿ ಸಂಘಗಳೇನಿವೆ, ಅವುಗಳಲ್ಲಿ ಸದಸ್ಯತ್ವವನ್ನು ಪಡೆದಿರುವವರ ಪೈಕಿ ಯಾರು ಪ್ರೀಮಿಯಮ್ ಕಟ್ಟುತ್ತಿದ್ದಾರೋ ಅವರಿಗೆ ಮಾತ್ರ ಯಶಸ್ವಿನಿ ಯೋಜನೆ ಸಿಗುತ್ತಿದೆ. ರಾಜ್ಯದ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳ ಪೈಕಿ ಶೇಕಡ 6 ರಷ್ಟು ಕುಟುಂಬಗಳು ಮಾತ್ರ ನಮ್ಮ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದುಕೊಂಡಿದ್ದಾರೆ. ಕಳೆದ 23 ವರ್ಷಗಳಲ್ಲಿ ಶೇಕಡ 1 ರಷ್ಟು ಸದಸ್ಯತ್ವವು increase ಆಗಲಿಲ್ಲ, ಎಷ್ಟಿತ್ತೋ ಅಷ್ಟೇ ಇದೆ. ಕೃಷಿಕರ ಪೈಕಿ ಶೇಕಡ 6ರಷ್ಟು ಜನ ಮಾತ್ರ ಸೊಸೈಟಿಯಲ್ಲಿದ್ದಾರೆ. ಆ ಶೇಕಡ 6 ಜನರಲ್ಲಿ ಪ್ರೀಮಿಯಮ್ ಕಟ್ಟುತ್ತಿರುವವರು ಶೇಕಡ 50ರಷ್ಟು ಜನ ಮಾತ್ರ. 835 ವ್ಯಾಧಿಗಳಿಗೆ ಈ ಯೋಜನೆ ಅಡಿ ಸಹಾಯ ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. 14 disciplines ಇದೆ. ಗರಿಷ್ಠ ಮಿತಿ ರೂ.2 ಲಕ್ಷ ಇರುತ್ತದೆ. ಒಂದು ವೇಳೆ ಒಬ್ಬ ರೈತನಿಗೆ, ಅವನ ಗ್ರಹಚಾರಕ್ಕೆ, ಅವನ ದೌರ್ಭಾಗ್ಯಕ್ಕೆ ಬ್ಲಡ್ ಕ್ಯಾನ್ಸರ್ ಬಂದರೆ, ಲ್ಯೂಕೇಮಿಯಾ ಬಂದು ಅದರ ಚಿಕಿತ್ಸೆಗೆ ರೂ. 3 ಲಕ್ಷವೋ, 4 ಲಕ್ಷವೋ ಅಥವಾ 6 ಲಕ್ಷ ಬೇಕಾಗಿದ್ದರೆ ಆತ ಎಲ್ಲಿಗೆ ಹೋಗಬೇಕು? ಈ ಯೋಜನೆಯನ್ನು ನನ್ನ ಚಕ್ರಾಧಿಪತ್ಯಕ್ಕೆ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶವಿಲ್ಲ. ಸಹಕಾರ ಸಂಘಗಳ ವಿಚಾರವೇ ಪ್ರತ್ಯೇಕವಾದುದು. ಅದು ಯಾರ ಕೈಯಲ್ಲಿದೆ, ಏಕೆ ಎಲ್ಲರಿಗೂ ಸದಸ್ಯತ್ವ ಸಿಗಲಿಲ್ಲ ಎನ್ನುವ ಸುದ್ದಿಗೆ ಹೋಗುವುದಿಲ್ಲ. ನನ್ನ ಉದ್ದೇಶ ಏನೆಂದರೆ, ಸಹಕಾರ ಸಂಘದಲ್ಲಿ ಸದಸ್ಯರಾಗಿ ಅಥವಾ ಆಗದೇ ಹೋಗಿ, ಪ್ರೀಮಿಯಮ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟುತ್ತಾರೋ ಇಲ್ಲವೋ ಒಟ್ಟಿನಲ್ಲಿ ಎಲ್ಲಾ ಕೃಷಿ ಕಾರ್ಮಿಕರಿಗೆ ಈ ಸೌಲಭ್ಯ ಸಿಗಬೇಕು. ಗರಿಷ್ಠ ಮಿತಿ ರೂ. 2 ಲಕ್ಷ ಏನಿದೆ sky should be the limit. ಅವನ ಕಾಯಿಲೆ ವಾಸಿ ಆಗಬೇಕು. ರೂ.2 ಲಕ್ಷ ಕೊಟ್ಟು ಕೈ ಎತ್ತಿ ಸರ್ಕಾರದ ಜವಾಬ್ದಾರಿ ಇಷ್ಟೇ ಎನ್ನುವ ಹಾಗೆ ಆಗಬಾರದು ಎನ್ನುವುದು ನನ್ನ ಉದ್ದೇಶವಾಗಿದೆ. ಇದು ಸರಿಯೋ ತಪ್ಪೋ ನೀವೇ ಹೇಳಿ. ಪ್ರತ್ಯೇಕವಾಗಿ "ಯಶಸ್ವಿನಿ" ಎನ್ನುವ ಟೈಟಲ್ ಹಾಗೆಯೇ ಉಳಿಯುತ್ತದೆ. ಸಹಕಾರಿ ಕ್ಷೇತ್ರದ ಸದಸ್ಯರ ವ್ಯಾಪ್ತಿಯಲ್ಲಿ ಇಲ್ಲದೇ ಇರುವ ಇತ್ತರ ರೈತರು ಕೂಡ ಇದರ ವ್ಯಾಪ್ತಿಯಲ್ಲಿ ಬರುತ್ತಾರೆ. ಪ್ರೀಮಿಯಮ್ ಕಟ್ಟುವ ಅಗತ್ಯ ಇರುವುದಿಲ್ಲ. ಗರಿಷ್ಠ ಮಿತಿ ಏನಿದೆ, ಅದನ್ನು ತೆಗೆದು ಹಾಕುತ್ತಿದ್ದೇವೆ. ಎಷ್ಟೇ ಖರ್ಚಾದರೂ ಕಾಯಿಲೆಯನ್ನು ವಾಸಿ ಮಾಡುವ ಕೆಲಸ ಸರ್ಕಾರದ್ದಾಗುತ್ತದೆ. ಇದು ನನ್ನ ಆಲೋಚನೆ. ಈಗ ತಾವು ಪ್ರತಿಕ್ರಯಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-**ನಿಮ್ಮ ಉದ್ದೇಶದ ಬಗ್ಗೆ ಖಂಡಿತಾ ಆಪಾದನೆ ಇಲ್ಲ. ರೂ. 2ಲಕ್ಷಕ್ಕೆ ಸೀಮಿತ ಎನ್ನುವುದನ್ನು ಹೇಳುತ್ತಿದ್ದೀರಿ; ಆದರೆ ಒಬ್ಬ ಸರ್ಕಾರಿ ನೌಕರನಿಗೆ ಕಿಡ್ನಿ ಹೋಯಿತು. ಆತ ಎಲ್ಲೆಲ್ಲೋ ಓಡಾಡಿಕೊಂಡು ಕೊನೆಗೆ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಗೆ ಬಂದು ಸೇರಿಕೊಂಡರು. ರೂ.23 ಲಕ್ಷ ದುಡ್ಡು ಬೇಕಾಗಿ ಬಂತು. ರೂ. 23 ಲಕ್ಷವನ್ನು ಸರ್ಕಾರ ಕೊಡುವುದಿಲ್ಲ ಎನ್ನುವುದು ನಿಮಗೆ ಗೊತ್ತಿದೆ. ಆದರೆ ರೋಗಿಗೆ ಅನುಕೂಲ ಆಗಬೇಕು. ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ಅದು ರೋಗಿಗಳಿಗೆ ಉಪಯೋಗ ಆಗದೇ ಇದ್ದರೆ ಸರ್ಕಾರಗಳೇಕೆ ಬೇಕು? ಮಾನ್ಯ ಜಗದೀಶ್ ಶೆಟ್ಟರ್‌ರವರೋ, ಮಾನ್ಯ ಯಡಿಯೂರಪ್ಪನವರೋ ಅಥವಾ ಮಾನ್ಯ ಸದಾನಂದಗೌಡರೋ ಮುಖ್ಯಮಂತ್ರಿಗಳಾಗಿದ್ದಾಗ . . .ಆಗ ಯಾರು ಮುಖ್ಯಮಂತ್ರಿಗಳಾಗಿದ್ದರು ಎನ್ನುವುದು ಮರೆತು ಹೋಗಿದೆ. ಆ ಸಂದರ್ಭದಲ್ಲಿ ವಿಶೇಷವಾಗಿ ಆರ್ಡರ್ ಮಾಡಿಸಿದೆ. ಆ ರೋಗಿಯ ಆಪರೇಷನ್ ಆಯಿತು, ಇವತ್ತು ಅವರು ಜೀವಂತವಾಗಿದ್ದಾರೆ. ರೂ. 2 ಲಕ್ಷ ಎಂದೇನು ಮಿತಿ ಇದೆಯೋ ಅದನ್ನು ತಿದ್ದುಪಡಿ ಮಾಡಿ. ಅದಕ್ಕೆ ನಾವು ಪೂರ್ಣ ಬೆಂಬಲ ಕೊಡುತ್ತೇವೆ. ಎಲ್ಲಾ ಯೋಜನೆಗಳು ನೂರಕ್ಕೆ ನೂರು ಸರಿಯಿದೆ ಎಂದು ಹೇಳುವುದಿಲ್ಲ. ಉಳಿದ ಯೋಜನೆಗಳ ಬಗ್ಗೆ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಈ ಎಲ್ಲಾ ಯೋಜನೆಗಳು ಪಕ್ಕಾ ಇದೆಯೇ? ಎಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಎನ್ನು ವುದು ನಿಮಗೆ ಗೊತ್ತಿದೆ. ರೈತರನ್ನು ಜಾಗೃತಿಗೊಳಿಸಿ. ನೀವೇ ಹೇಳಿದ ಹಾಗೆ 7-8 ಪರ್ಸೆಂಟ್ ರೈತರು ಸದಸ್ಯತ್ವ ಹೊಂದಿದ್ದಾರೆ. ನೀವು ಅವರನ್ನು ಕರೆದು ಜಾಗೃತಗೊಳಿಸಿ, ಸದಸ್ವತ್ವ ಪಡೆಯಲು ಪ್ರೇರಣೆ ಕೊಡಿ. ಯಶಸ್ವಿನಿ ಯೋಜನೆಯಿಂದ ಅನುಕೂಲವಾಗುತ್ತದೆ, ಇದರ ಮಿತಿಯನ್ನು ರೂ.5 ಲಕ್ಷದಷ್ಟು ಮಾಡುತ್ತೇವೆ, ರೂ.10 ಲಕ್ಷದಷ್ಟು ಮಾಡುತ್ತೇವೆ ಎಂದು ತಿಳಿಸಿಕೊಡಿ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಮೇಶ್‌ಕುಮಾರ್‌ರವರೇ ನೀವು ಇಂತಹ ಕೆಲಸ ಮಾಡದೇ ಇದ್ದರೆ ಬೇರೆ ಯಾರ ಕೈಯಲ್ಲಿ ಇದನ್ನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಕೆ.ಆರ್. ರಮೇಶ್‌ಕುಮಾರ್**:-ಈ ರೀತಿಯ ಸದ್ಭಾವನೆ ನಿಮಗಿದ್ದಾಗ ನಮ್ಮ ಜವಾಬ್ದಾರಿ ಇನ್ನೂ ಹೆಚ್ಚಾಗುತ್ತದೆ. ಹೊಟ್ಟೆಯೊಳಗೆ ಭಯ ಸೇರಿಕೊಳ್ಳುತ್ತದೆ. ಏಕೆಂದರೆ, ಜೀವನದಲ್ಲಿ ಒಬ್ಬೊಬ್ಬ ಮನುಷ್ಯನಿಗೆ ಒಂದೊಂದು ಅಪೇಕ್ಷೆ ಇರುತ್ತದೆ. ನಾನು, ಕೀರ್ತಿ ಇರಬೇಕು ಎಂದು ಬದುಕುವವನು. ನಿಮ್ಮಂಥವರ ವಿಶ್ವಾಸ ಕಳೆದುಕೊಂಡ ಮೇಲೆ ನಾನು ಸಾರ್ವಜನಿಕ ಜೀವನದಲ್ಲಿ ಮುಂದುವರೆಯುವ ಅವಶ್ಯಕತೆ ಇರುವುದಿಲ್ಲ. ನಾನು ಆ ರೀತಿ ನಡೆದುಕೊಳ್ಳುವ ಮನುಷ್ಯ ಅಲ್ಲ. ತಾವೇ ರೂ. 23 ಲಕ್ಷದ ಉದಾಹರಣೆ ಕೊಟ್ಟಿರಿ. 2016-17ರ ಜನವರಿ ತಿಂಗಳವರೆಗೆ ಯಶಸ್ವಿನಿ ಯೋಜನೆ ಅಡಿ ರೂ. 216 ಕೋಟಿ ಕೊಟ್ಟಿದ್ದೇವೆ. ಈ ರೂ. 216 ಕೋಟಿ ಪೈಕಿ ಕೇವಲ ರೂ.18 ಕೋಟಿ ಸರ್ಕಾರಿ ಆಸ್ಪತ್ರೆಗಳಿಗೆ reimbursement ಆಗಿದೆ. ಉಳಿದದ್ದು ಖಾಸಗಿ ಆಸ್ಪತ್ರೆಗಳಿಗೆ ಹೋಗಿದೆ. ನಾನು ಮಾನ್ಯ ಸದಸ್ಯರಲ್ಲಿ ಮತ್ತು ಈ ಸದನದಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲೂ, ಯಾವ ಕಡೆಯೂ ನಿರ್ದಿಷ್ಟ ರೋಗಕ್ಕೆ ಚಿಕಿತ್ಸೆ ಸಿಗುವುದಿಲ್ಲ ಎಂದಾದಾಗ, ನಂತರ ಖಾಸಗಿ ಆಸ್ಪತ್ರೆಗೆ ಹೋದರೆ ಸಮಸ್ಯೆ ಬರುವುದಿಲ್ಲ. ಇಲ್ಲೇ ಸಿಗುವಂಥದ್ದು, ಇಲ್ಲೇ ಆಗುವಂಥದ್ದಕ್ಕೂ ಕೂಡ ಯೋಜನೆಯಲ್ಲಿ empanel ಮಾಡಿಕೊಂಡು, ಅಲ್ಲಿಗೆ ಹೋಗಿ ಅವರು ಲಿಮಿಟ್ ನೋಡಿಕೊಂಡು ಬಿಲ್ ಮಾಡಿದರೆ ನಮಗೆ ಕಷ್ಟ ಆಗುತ್ತದೆ. ಎಲ್ಲರೂ ತಪ್ಪು ಮಾಡುತ್ತಾರೆ ಎಂದು ಖಂಡಿತವಾಗಿ ಹೇಳುವುದಿಲ್ಲ, ಲಾಠಿ ಚಾರ್ಜ್ ಮಾಡುವುದಿಲ್ಲ. ಒಳ್ಳೆಯ ರೀತಿಯಲ್ಲಿ ಸೇವೆ ಮಾಡುತ್ತಿರುವವರೂ ಇದ್ದಾರೆ, ಸಹಾಯ ಮಾಡುತ್ತಿರುವವರೂ ಇದ್ದಾರೆ. ಈ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ಸಹಕಾರ ಕೊಟ್ಟಂಥ ಎಲ್ಲರಿಗೂ ನಾನು ಕೈಮುಗಿದು ನಮಸ್ಕಾರ ಮಾಡುತ್ತೇನೆ.

(366)22.03.2017 MM-VK-4.20

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಮುಂದು):-**

ಆದರೆ ತಾವು ಹೇಳಿದಂತೆ SAST (Suvarna Arogya Suraksha Trust) ನಲ್ಲಿ ಬೇರೆ ಯೋಜನೆಗಳಲ್ಲಿಯು ಕೂಡ ಇದಾಗುತ್ತಿದೆ. ನನ್ನ ದುಃಖ ಒಂದೇ ಅದೇನೆಂದರೆ, ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ 200 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಸೇವೆಯಲ್ಲಿರುವ ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೌಕರರಿಗೆ ಮರುಪಾವತಿ ಮಾಡುವುದಕ್ಕೆ ವೈದ್ಯಕೀಯ ಚಿಕಿತ್ಸೆಗಾಗಿ ಮಾಡಿದ ಖರ್ಚಿಗೆ 300 ಕೋಟಿ ರೂಪಾಯಿ ಕೊಡುತ್ತೇವೆ. ನಮ್ಮದೆಲ್ಲಾ ಸೇರಿದರೆ 50 ರಿಂದ 60 ಕೋಟಿ ರೂಪಾಯಿ ಖರ್ಚು ನಮ್ಮದಾಗುತ್ತದೆ, ವಿವಿಧ ಏಳು ಯೋಜನೆಗಳಲ್ಲಿ ಹೆಚ್ಚು ಕಡಿಮೆ 700 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಒಟ್ಟು ಇದನ್ನೆಲ್ಲಾ ಲೆಕ್ಕ ಹಾಕಿದರೆ ಎಸ್‌ಸಿಪಿ:ಟಿಎಸ್‌ಪಿಯಲ್ಲಿರುವಂತಹ ಹಣ, ಬಾಲಸಂಜೀವಿನಿಯನ್ನೂ ಲೆಕ್ಕ ಹಾಕಿದರೆ 1200 ಕೋಟಿ ರೂಪಾಯಿಯನ್ನು ದಾಟುತ್ತೇವೆ. 1200 ಕೋಟಿಯನ್ನು ಸಮಗ್ರವಾಗಿ ಒಂದು ಕಡೆ ಇಟ್ಟರೆ, ಎಪಿಎಲ್ ಮತ್ತು ಬಿಪಿಎಲ್ ಕಾರ್ಡುಗಳನ್ನು ತೆಗೆದುಬಿಟ್ಟರೆ ಬಹುತೇಕ ಯಾರು ಕೆನೆಪದರದಲ್ಲಿದ್ದಾರೆ ಅವರನ್ನು ಬಿಟ್ಟು ಈ ರಾಜ್ಯದ ಸುಮಾರು ಎರಡು ಕೋಟಿ ಕುಟುಂಬಗಳಿಗೆ ಯಾವುದೇ ಆತಂಕವಿಲ್ಲದೇ ಔಷಧಿಯನ್ನು ಕೊಡಬಹುದು, ಚಿಕಿತ್ಸೆಯನ್ನು ಕೊಡಿಸಬಹುದು. ಒಬ್ಬ ಟೈಲರಿಂಗ್ ಕೆಲಸ ಮಾಡಿಕೊಂಡಿರುವವನು ಇರುತ್ತಾನೆ. ಅವನು ರಕ್ತದೊತ್ತಡ ಇರುವ ರೋಗಿಯಾಗಿರುತ್ತಾನೆ. ಅವನು ಪ್ರತಿ ದಿವಸ ಬೆಳಿಗ್ಗೆ ಮತ್ತು ರಾತ್ರಿ ಗುಳಿಗೆಗಳನ್ನು ತೆಗೆದುಕೊಳ್ಳಬೇಕು. ಆದರೆ ಅವನಿಗೆ ಗುಳಿಗೆಗಳನ್ನು ಕೊಳ್ಳುವ ಶಕ್ತಿ ಇರುವುದಿಲ್ಲ. ಅವನು ಕಾರ್ಡನ್ನು ತೋರಿಸಿದರೆ ಅವನಿಗೆ ಒಂದು ತಿಂಗಳಿಗಾಗುವಷ್ಟು ರೇಷನ್ ಪ್ರಕಾರ ಕಾರ್ಡಿನಲ್ಲಿ ಎಂಟ್ರಿ ಮಾಡಿ ಅವನಿಗೆ ಔಷಧಿ ಕೊಡಬೇಕು. ಮೂರ್ಛೆ ರೋಗ ಬಂದಿರುವವರು ಇರುತ್ತಾರೆ, ಸಕ್ಕರೆ ಕಾಯಿಲೆ ಬಂದಿರುವವರು ಇರುತ್ತಾರೆ, ಹೃದ್ರೋಗಿಗಳಿರುತ್ತಾರೆ. ನನ್ನ ಉದ್ದೇಶವೇನೆಂದರೆ, ಎಲ್ಲಿ ತಿರುಗಿ ಎಲ್ಲಿಂದ ಇಲ್ಲಿಗೆ ಬಂದಿದ್ದೇನೆ ಆ ಮೂಲವನ್ನು ಮರೆಯುವುದಕ್ಕೆ ನಾನು ತಯಾರಾಗಿಲ್ಲ. ಅವರ ಋಣವನ್ನು ತೀರಿಸಬೇಕೆಂದು ಇದನ್ನೆಲ್ಲಾ ಮಾಡುತ್ತಿದ್ದೇನೆ. ತಾವು ಹೇಳಿದಂತೆ ಅನುಮಾನ ಬರುವ ಏರಿಯಾಗಳು ಯಾವ್ಯಾವುದಿದೆ ಅವನ್ನು block ಮಾಡೋಣ. ಉದಾಹರಣೆಗೆ, ಯಶಸ್ವಿನಿ ಅಥವಾ ಎಸ್‌ಎಎಸ್‌ಟಿಯಲ್ಲಿ ಬಿಪಿಎಲ್ ಕಾರ್ಡ್ ಇದ್ದರೆ ಸವಲತ್ತುಗಳು ಸಿಗುತ್ತವೆ ಎನ್ನುವ ಕಾರಣಕ್ಕೆ Lamborghini ಕಾರಿನಲ್ಲಿ ಹೋಗಿ ಪಾರ್ಕ್ ಮಾಡಿಬಿಟ್ಟು ಬಿಪಿಎಲ್ ಕಾರ್ಡ್ ಕೊಟ್ಟು concession ತೆಗೆದುಕೊಂಡು ಬರುತ್ತಾರೆ. ಬಹುಶಃ ನಮ್ಮ ದೇಶದಲ್ಲಿ ಓಡಾಡುವ ಎಲ್ಲಾ ಕಾರುಗಳಲ್ಲಿ ಅತಿ ಹೆಚ್ಚು ಬೆಲೆಬಾಳುವ ಕಾರೆಂದರೆ ಅದು Lamborghini ಕಾರು. ಅಂತಹ ಕಾರಿನಲ್ಲಿ ಹೋಗುತ್ತಾನೆ. ನಮ್ಮ ವ್ಯವಸ್ಥೆಯಲ್ಲಿ ಬಿಪಿಎಲ್ ಕಾರ್ಡುಗಳನ್ನು ತೆಗೆದುಕೊಳ್ಳುವುದು ಬಹಳ ಸುಲಭವಾಗಿದೆ. ಅದನ್ನು manage ಮಾಡಿ ಕಾರ್ಡ್ ತೆಗೆದುಕೊಳ್ಳುತ್ತಾರೆ. ಆದರೆ ಇಷ್ಟೆಲ್ಲಾ 1200-1300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಸಾಮಾನ್ಯ ಮನುಷ್ಯನಿಗೆ ಏನಾದರೂ ತೊಂದರೆಯಾದರೆ, ಆರೋಗ್ಯದಲ್ಲಿ ಸಮಸ್ಯೆಯಾದರೆ ಅವನು ಧೈರ್ಯವಾಗಿ ಬದುಕಬಲ್ಲ, ನಿಶ್ಚಿಂತೆಯಾಗಿ ಬದುಕಬಲ್ಲ ಎಂದು ಸಮಾಧಾನ ಹೇಳುವುದಕ್ಕೆ ಈ ಸದನದಲ್ಲಿ ಯಾರಿಗಾದರೂ ಇದೆಯೇ? ಯಾರು ಇಲ್ಲಿ ಕುಳಿತುಕೊಳ್ಳಬೇಕು ಯಾರು ಅಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಳ್ಳಬೇಕು ಕಾಲಚಕ್ರದಲ್ಲಿ ಯಾವಾಗ ಏನೇನು ಆಗುವುದೋ ನಮಗೆ ಗೊತ್ತಿಲ್ಲ. ಇಲ್ಲಿಗೆ ನಾವು ಬಂದಿರುವುದಕ್ಕೆ ಧನ್ಯರು. ಎಲ್ಲಿ ಕುಳಿತುಕೊಳ್ಳಬೇಕು ಎನ್ನುವುದು ಆನಂತರದ ವಿಚಾರವಾಗಿದೆ. ಆದರೆ ನಾವು ಬಂದ ಹಿನ್ನೆಲೆ ಯಾವುದು? ಯಾರ ಮಧ್ಯದಿಂದ ನಾವು ಬಂದೆವು? ಅವರದಷ್ಟೇ ನನ್ನ ಮನಸ್ಸಿನಲ್ಲಿದೆ. I am worried only about them. ಆ ವರ್ಗದ ಪೈಕಿ ದುಡಿಯುವ ವರ್ಗ, ನರಳುವ ವರ್ಗ, ತುಳಿತಕ್ಕೆ ಸಿಕ್ಕಿದಂತಹವರು, ಶೋಷಣೆಗೊಳಗಾದಂತಹವರು ಒಂದು ಖಾಯಿಲೆ ಬಂದ್ರೆ ಚಿಂತಾಕ್ರಾಂತರಾಗಬಾರದು, ಆ ಕುಟುಂಬ ಚಿಂತೆಯಲ್ಲಿ ಮುಳುಗಬಾರದು ಅವರು ನಿಶ್ಚಿಂತೆಯಿಂದ ಬದುಕಬೇಕು. ಅವರಿಗೆ ಎಲ್ಲ ರೀತಿಯ ಶ್ಯೂರಿಟಿಯನ್ನು, ಭದ್ರತೆಯನ್ನು ಕೊಡುವ ಯೋಜನೆ ಸರ್ಕಾರದಲ್ಲಿ ಬರಬೇಕು. ಆಗ ಅದು ಯೋಗ್ಯ ಸರ್ಕಾರವಾಗುತ್ತದೆ. ಒಂದು ಕಾಯಿಲೆ ಬಂದರೆ ಜನರು ಅದಕ್ಕೆ ಆತಂಕ ಪಟ್ಟರೆ ನಾನು ಒಬ್ಬ ಮಂತ್ರಿಯಾಗಿ ಹೇಳುತ್ತೇನೆ ಈ ಸರ್ಕಾರ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. This is the line on which I am travelling. ಇದನ್ನು ತಾವು ಮನಸ್ಸಿನಲ್ಲಿಟ್ಟುಕೊಂಡರೆ ನನಗೆ ತಾವು ಇನ್ನೂ ಹೆಚ್ಚು ಸಹಾಯವನ್ನು ಮಾಡಬಹುದು ಎಂಬ ವಿಶ್ವಾಸ ನನಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದ ಎಲ್ಲಾ ಅಂಶಗಳಿಗೂ ನನ್ನ ಒಪ್ಪಿಗೆ ಇದೆ. ಆದರೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮುಖಾಂತರ ಮಾಡಿಸುತ್ತಿರುವ ಯೋಜನೆಗಳು ಆ ಯೋಜನೆಗಳಲ್ಲೆಲ್ಲಾ ಒಂದಲ್ಲ ಒಂದು ಸಮಸ್ಯೆಗಳಿವೆ. ಯಶಸ್ವಿನಿ ಯೋಜನೆಯಲ್ಲಿ ಯಾವ ಸಮಸ್ಯೆ ಇದೆ? ರೈತರ ಸಂಖ್ಯೆ ಕಡಿಮೆ ಇದೆ ಅದನ್ನು ಒಪ್ಪಿಕೊಳ್ಳುತ್ತೇನೆ. ಇದನ್ನು ಜಾಸ್ತಿ ಮಾಡುವುದಕ್ಕೆ ಏನನ್ನು ಮಾಡಬೇಕೋ ಅದನ್ನು ಮಾಡೋಣ. ಅವರನ್ನು ಜಾಗೃತಿ ಮಾಡೋಣ ಇದು ಮೊದಲನೆಯದು. ಎರಡನೆಯದಾಗಿ, ಇದು ಬಹಳ ಪ್ರಮುಖವಾದುದು, ನಾನು ಮುಂದುವರಿಸುತ್ತಿದ್ದಾಗ ತಾವು ಇದನ್ನು ಪ್ರಸ್ತಾಪ ಮಾಡಿದಿರಿ. ಯಶಸ್ವಿನಿ ಯೋಜನೆಯನ್ನು ಯಾವ ಕಾರಣಕ್ಕೂ ತಮ್ಮ ಇಲಾಖೆಗೆ ತೆಗೆದುಕೊಳ್ಳಬೇಡಿ. ಸಹಕಾರಿ ಕ್ಷೇತ್ರದಲ್ಲೇ ಮಾಡಿ. ಸಹಕಾರಿ ಕ್ಷೇತ್ರದಲ್ಲಿ ಮುಂದುವರಿಸುವಂತಹ ಸಂದರ್ಭದಲ್ಲಿ ಸಣ್ಣ ಸಣ್ಣ ಸಮಸ್ಯೆಗಳೇನಿವೆ ತಾವು ಸಚಿವರಾಗಿದ್ದೀರಿ, ತಮ್ಮದೇ ಸರ್ಕಾರವಿದೆ. ಯಾರು ಸಹಕಾರ ಸಚಿವರಿದ್ದಾರೆ ಅವರ ಹತ್ತಿರ ಮಾತನಾಡಿ ಯಶಸ್ವಿನಿ ಯೋಜನೆಗೆ ಇನ್ನೇನೇನು ಶಕ್ತಿ ಕೊಡಬೇಕೋ ಆ ಎಲ್ಲಾ ಶಕ್ತಿಯನ್ನು ಕೊಡಿ. ತಾವು ಸ್ವಪ್ರತಿಷ್ಠೆಯನ್ನು ಇಟ್ಟುಕೊಳ್ಳುತ್ತೀರಿ ನನಗೆ ಅದು ಇಲ್ಲ. ನನಗೆ ಎಲ್ಲವೂ ಗೊತ್ತು. ನನಗೆ ನೂರಕ್ಕೆ ನೂರು ಗೊತ್ತಿದೆ. ಅದಕ್ಕೆ ನಾನು ಎರಡೆರಡು ಸಲ ಹೇಳಿದ್ದೇನೆ ಬೇರೆ ಇಲಾಖೆಯ ಸಚಿವರಿದ್ದರು ಅವರು ಹೋದರು ಆದರೆ ನಾನು ಮಾನ್ಯ ರಮೇಶ್‌ಕುಮಾರ್‌ರವರು ಇದ್ದಾಗಲೇ ಮಾತನಾಡಬೇಕೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂದುಕೊಂಡಿದ್ದೆನು, ಹಾಗೆಯೇ ತಾವು ಬಂದಿರಿ ಸಂತೋಷ. ಇಲ್ಲಿ ಏನಾಗಿದೆ ಎಂದರೆ, ಈ ಯೋಜನೆಯಲ್ಲಿ ಫಲಾನುಭವಿಗಳು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ? ಎಷ್ಟೋ ಆಸ್ಪತ್ರೆಗಳಲ್ಲಿ ಸರಿಯಾದ ವೈದ್ಯರಿಲ್ಲ. ಉಪಕರಣಗಳನ್ನು ಬಿಟ್ಟರೆ, ಡಯಾಲಿಸಿಸ್ ಸೆಂಟರ್‌ಗಳನ್ನು ಬಿಟ್ಟರೆ 140 ತಾಲ್ಲೂಕುಗಳಲ್ಲಿ ಹೆಚ್ಚು ಕಡಿಮೆ ಎಷ್ಟು ಹಾಸಿಗೆಗಳ ಆಸ್ಪತ್ರೆಗಳಿವೆ? ತಮಗೆ ಈ ಇಲಾಖೆ ಒಂದು ಸವಾಲಾಗಿದೆ. ತಮ್ಮ ಇಲಾಖೆಯ ಉಳಿದ ಯಾವುದೇ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತಮಗೆ ಅನುಭವ ಇರುವುದರಿಂದ ಅದರ ಬಗ್ಗೆ ನಾನು ಬೆಳಕು ಚೆಲ್ಲಲು ಇಷ್ಟಪಡುವುದಿಲ್ಲ. ಈ ಇಲಾಖೆಯನ್ನು ಏನಾದರೂ ವ್ಯವಸ್ಥಿತವಾಗಿ ಮಾಡಿ ಬಡರೋಗಿಗಳಿಗೆ, ರೈತರಿಗೆ, ಕಾರ್ಮಿಕರಿಗೆ ಅನುಕೂಲ ಮಾಡಿ ಹಣ ಬೇಕಾದಷ್ಟು ಇರುತ್ತದೆ. ಕೋಟ್ಯಾಂತರ ರೂಪಾಯಿ ಹಣ ಇರುತ್ತದೆ. ಮೊನ್ನೆ ದಿವಸ ಯಾರದೋ ಒಬ್ಬರ ಬಗ್ಗೆ ಕೇಳಿದೆ, ಅವರಿಗೆ ಇದ್ದಕ್ಕಿದ್ದ ಹಾಗೆ ಹೃದಯಾಘಾತವಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಷ್ಟರಲ್ಲಿ ಪ್ರಾಣ ಹೋಯಿತು. ಅವರಿಗೆ ಎಷ್ಟು ಕೋಟಿ ಆಸ್ತಿ ಇತ್ತು ಎಂದು ಹೇಳಲು ಇಷ್ಟಪಡುವುದಿಲ್ಲ. ಬಡವರು ಸಾಯದೇ ಇರುವ ರೀತಿಯಲ್ಲಿ ನೋಡುವುದಕ್ಕೆ ದೇವರ ರೂಪದಲ್ಲಿ ತಮಗೆ ಈ ಭಾಗ ಸಿಕ್ಕಿದೆ. ಯೋಚನೆ ಮಾಡುವ ಶಕ್ತಿಯನ್ನು ಪರಮಾತ್ಮ ತಮಗೆ ಕೊಟ್ಟಿದ್ದಾನೆ. ದಯವಿಟ್ಟು ಇದನ್ನು ಸ್ವಪ್ರತಿಷ್ಠೆ ಮಾಡಿಕೊಳ್ಳಬೇಡಿ. ಈ ಯೋಜನೆಯನ್ನು ಸಹಕಾರಿ ಕ್ಷೇತ್ರದಲ್ಲೇ ಬಿಡಿ, ಅದಕ್ಕೇನೇನು ಶಕ್ತಿಯನ್ನು ತುಂಬಬೇಕೋ ತುಂಬಿ. ಏಕೆಂದರೆ, ತುಂಬಾ ಜನರು ಮಾತನಾಡಿದ್ದಾರೆ. ಮೂರು ದಿನಗಳಿಂದ ನಾನೇ ಮಾತನಾಡುತ್ತಿದ್ದೇನೆ. ಅದಕ್ಕೋಸ್ಕರ ಹೆಚ್ಚಿಗೆ ವಿವರಣೆ ಕೊಡಲು ಹೋಗುವುದಿಲ್ಲ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಸ್ವಪ್ರತಿಷ್ಠೆ ಎನ್ನುವುದು ಸೊನ್ನೆ, ನನ್ನಲ್ಲಿ ಅದು ಇಲ್ಲವೇ ಇಲ್ಲ. ನಾನು ಇಲ್ಲಿಯ ಮುಖಂಡರುಗಳನ್ನು, ನಮ್ಮ ಪಕ್ಷದ ಕೆಲವು ಸದಸ್ಯರುಗಳನ್ನು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಸಭಾಧ್ಯಕ್ಷರು ಮತ್ತು ಸಭಾಪತಿಯವರನ್ನು ಒಟ್ಟಿಗೆ ಸೇರಿಸಿ ಜಂಟಿಯಾಗಿ ಸಭೆಯನ್ನು ನಡೆಸಿ ಎಲ್ಲರ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ. ಇನ್ನೂ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಸ್ವಲ್ಪ ವಿರೋಧವಿದೆ. ಏಕೆಂದರೆ ಯಾವ ಯಾವ ಮಾಧ್ಯಮಗಳವರು ಯಾರ ಯಾರ ವಿಚಾರಗಳನ್ನು ಹೇಗೆ ಪ್ರತಿಬಿಂಬಿಸುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅನಾವಶ್ಯಕವಾಗಿ reflections ಆಗಬಾರದು. ಒಂದೇ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರಿ ಆಸ್ಪತ್ರೆಗಳನ್ನು ನಾವು ಈ ಸದನದಲ್ಲಿರುವ ಎಲ್ಲರೂ ಕೂಡ ಅದನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳನ್ನು ನಾವು ರೌರವ ಮಾಡಿದರೆ, ಅಲಕ್ಷ್ಯ ಮಾಡಿದರೆ ಮುಂದಕ್ಕೆ ಸಾಮಾನ್ಯ ಜನರಿಗೆ ಪರ್ಯಾಯ ವ್ಯವಸ್ಥೆಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದಿಲ್ಲ. ದಯವಿಟ್ಟು ಎರಡು ನಿಮಿಷ ತೆಗೆದುಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ನಾನು ಈ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ ಕೇವಲ 40ರಲ್ಲಿ ನನಗೆ ವೈದ್ಯರುಗಳು ಸಿಕ್ಕಿಲ್ಲ. ಬೇರೆ ಎಲ್ಲಾ ಕಡೆ ವೈದ್ಯರನ್ನು ಹಾಕಿದ್ದೇನೆ. ನಮ್ಮಲ್ಲಿ 207 ತಾಲ್ಲೂಕು ಆಸ್ಪತ್ರೆಗಳಿವೆ. ಮಾನ್ಯ ಪ್ರತಿಪಕ್ಷದ ನಾಯಕರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞರುಗಳ ಕೊರತೆ ಇದೆ. 31 ಜಿಲ್ಲಾ ಆಸ್ಪತ್ರೆಗಳಲ್ಲಿ ಕೆಲವು ಜಿಲ್ಲಾ ಆಸ್ಪತ್ರೆಗಳು ಮೆಡಿಕಲ್ ಕಾಲೇಜುಗಳಾಗಿವೆ. ಉಳಿದವು ನಮ್ಮ ನೇತೃತ್ವದಲ್ಲಿವೆ. ಪ್ರತಿ ತಾಲ್ಲೂಕು ಆಸ್ಪತ್ರೆಗಳಿಗೆ ಇನ್ನೆರಡು ತಿಂಗಳೊಳಗಾಗಿ ಡಯಾಲಿಸಿಸ್ ಸೌಲಭ್ಯವನ್ನು ಕೊಡುತ್ತೇವೆ. ಕೆಲಸ ಪೂರ್ಣವಾಗುತ್ತಿದೆ. ಎಲ್ಲಾ process complete ಆಗಿದೆ, ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಮೋಟಮ್ಮರವರೆ, ಟೇಬಲ್ ಕುಟ್ಟಬೇಡಿ ತಡೆಯಿರಿ. ನಾನು ಸ್ವಲ್ಪ ಹೇಳುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಡಯಾಲಿಸಿಸ್ ಸೆಂಟರ್‌ನ್ನು ಏಕೆ ಪ್ರಾರಂಭಿಸುತ್ತಿದ್ದೇವೆಂದರೆ,

**ಶ್ರೀಮತಿ ಮೋಟಮ್ಮ:-** ಅದು very important.

**ಶ್ರೀ ಕೆ.ಎಸ್. ಈಶ್ವರಪ್ಪ:-** ಹೌದು ಇದು ಬಹಳ ಪ್ರಮುಖವಾದುದು, ನಾನು ಮತ್ತೆ ಹೇಳುತ್ತೇನೆ ಆಮೇಲೆ ಟೇಬಲ್ ಕುಟ್ಟುವಿರಂತೆ. ಅವರ ಕಳಕಳಿಯ ಬಗ್ಗೆ ನಾನು ಖಂಡಿತವಾಗಿಯು ಪ್ರಶ್ನೆ ಮಾಡುವುದಿಲ್ಲ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಮೇಜು ಕುಟ್ಟುವ ಪ್ರಶ್ನೆ, ಆ ಪಾರ್ಟಿ, ಈ ಪಾರ್ಟಿಯ ಪ್ರಶ್ನೆ ಇಲ್ಲ. ಮಾನವೀಯತೆಯ ವಿಚಾರವನ್ನು ಮಾತನಾಡುತ್ತಿದ್ದೇವೆ. I don't want to become a party on this issue. ಮುನ್ನೆಚ್ಚರಿಕೆಯನ್ನು ವಹಿಸಿದ್ದೇವೆ. ಡಯಾಲಿಸಿಸ್ ಸೌಲಭ್ಯ ಏನು ಪ್ರಾರಂಭ ಮಾಡುತ್ತಿದ್ದೇವೆ ಅದನ್ನು ನಮ್ಮ ಉದ್ಯೋಗಿಗಳಿಗೆ ಪೂರ್ಣವಾಗಿ ಬಿಟ್ಟು ಬಿಟ್ಟರೆ ನಮ್ಮ ಹಿಂದಿನ ಅನುಭವದಂತೆ ಸ್ವಲ್ಪ ತೊಂದರೆಯಾಗಬಹುದು ಎನ್ನುವ ಅನುಮಾನದಿಂದ outsource ಮಾಡಿಕೊಂಡಿದ್ದೇವೆ. ರೋಗ ಬಂದವನಿಗೆ ಅನಿರ್ಬಂಧಿತವಾಗಿ ಡಯಾಲಿಸಿಸ್ ಸೌಲಭ್ಯ ಸಿಗಬೇಕು. ಹಣವನ್ನು outsource agency ಯವರಿಗೆ ನಾವು ತುಂಬಿಕೊಡುತ್ತೇವೆ. ಅದನ್ನೆಲ್ಲಾ ಪಾರದರ್ಶಕವಾಗಿ global tenders ಅನ್ನು ಕರೆದು ಪ್ರತಿಯೊಂದನ್ನು ಕೂಡ ಅತ್ಯಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೌರವಯುತವಾದ ರೀತಿಯಲ್ಲಿ ಮಾಡಿದ್ದೇವೆ. ಪ್ರೈವೇಟ್ ಆಸ್ಪತ್ರೆಗಳಿಗೆ ಹೋದರೆ ಒಂದು ಸೈಕಲ್ ಮಾಡಿಸಿಕೊಳ್ಳುವುದಕ್ಕೆ ಮೂರುವರೆಯಿಂದ ನಾಲ್ಕು ಗಂಟೆ ಸಮಯವಾಗುತ್ತದೆ. 1200 ರಿಂದ 1300 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಜಯನಗರದಲ್ಲಿ ಕರ್ನಾಟಕ ಮಾರ್ವಾಡಿ ಯೂತ್ ಫೆಡರೇಷನ್ ಎಂಬುದನ್ನು ಮಾರ್ವಾಡಿ ಸಮಾಜದ ಹುಡುಗರು ಮಾಡಿದ್ದಾರೆ. ಅದರಿಂದ they are giving subsidy service.

(ಮುಂದು)

367/22-3-2017/4.30/ಡಿಎಸ್-ವಿಕೆ

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಆರ್.ರಮೇಶ್‌ಕುಮಾರ್(ಮುಂದು):-**

300 ರೂಪಾಯಿ ತೆಗೆದುಕೊಂಡು ಮಾಡುತ್ತಿದ್ದಾರೆ. ಮೂತ್ರ ರೋಗದ ಸಮಸ್ಯೆ ಇದ್ದವನಿಗೆ, ಡಯಾಲಿಸಿಸ್ ಅಗತ್ಯ ಇದ್ದವರೆಲ್ಲರೂ ಖಾಸಗಿ ಆಸ್ಪತ್ರೆಗೆ ಹೋಗುವುದಕ್ಕಾಗುತ್ತದೆಯೇ? ಎಲ್ಲರನ್ನು ನಾವು ಅಲ್ಲಿಗೆ ಕಳುಹಿಸಿ 1300 ರೂಪಾಯಿ ಕಟ್ಟಿದರೆ ಸರ್ಕಾರ ಉಳಿಯುತ್ತದೆಯೇ? Intensive Care units, ತೀವ್ರ ನಿಗಾ ಘಟಕ, ಇವತ್ತು Jayadeva is one of the best Cardiac Institutes. ಡಾ:ಮಂಜುನಾಥ್‌ರವರ ಸಲಹೆ ಪಡೆದುಕೊಂಡು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ICU ಅನ್ನ ಪ್ರಾರಂಭ ಮಾಡುತ್ತಿದ್ದೇವೆ. Maximum ಮೂರು ತಿಂಗಳೊಳಗಾಗಿ ರೆಡಿಯಾಗುತ್ತದೆ. ICU ಮಾಡತಕ್ಕಂಥ ಉದ್ದೇಶವೇನೆಂದರೆ, ಯಾರ ಜೀವ ಆತಂಕದಲ್ಲಿರುತ್ತದೆ, ತಕ್ಷಣ ಅಮೂಲ್ಯ ಜೀವವನ್ನು ಕಾಪಾಡಿಕೊಳ್ಳುವುದಕ್ಕೆ ಅಲ್ಲಿ ventilator facility and ICU facility ಇರಬೇಕು. ಮೊದಲು ಜೀವ ಉಳಿಸಿ ಆಮೇಲೆ ಮುಂದಿನ ಎಲ್ಲಾ ಪ್ರಯತ್ನ ಮಾಡೋಣ ಎನ್ನುವಂಥದ್ದು. ಅದಕ್ಕೆ 27 ಲಕ್ಷ ರೂಪಾಯಿ ಖರ್ಚಾಗುತ್ತದೆ. 15 ಲಕ್ಷ ಶಾಸಕರ ನಿಧಿಯಿಂದ ಕೇಳಿದ್ದೇನೆ. 5 ಲಕ್ಷ ಸಂಸತ್ ಸದಸ್ಯರ ನಿಧಿಯಿಂದ ಕೇಳುತ್ತಿದ್ದೇನೆ. 7 ಲಕ್ಷ ರೂಪಾಯಿಗಳನ್ನು National Health Mission ನಿಂದ ನಾವು ಹಾಕಿಕೊಳ್ಳುತ್ತಿದ್ದೇವೆ. ಕೆಲವರು ಮುಂದೆ ಬಂದಿದ್ದಾರೆ, ಕೆಲವರು ಮುಂದೆ ಬಂದಿಲ್ಲ. ಬಂದು ಕೊಟ್ಟವರಿಗೆ ನಾವು ಧನ್ಯವಾದಗಳನ್ನು ಹೇಳುತ್ತೇವೆ. ಬಾರದೇ ಇದ್ದ ಕಡೆ ಹೋಗಿ ನಾನು ಅವರ ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೀಳುವುದಿಲ್ಲ. ನಾನು ಅವಸ್ಥೆ ಪಟ್ಟು ವ್ಯವಸ್ಥೆ ಮಾಡೇ ತೀರುತ್ತೇನೆ. Diagnostics ವಿಚಾರ, Free Diagnostics Services ಎಂದು ಕೇಂದ್ರ ಸರ್ಕಾರದಿಂದ ನಾವು ಅನುಮತಿಯನ್ನು ತೆಗೆದುಕೊಂಡು ಟೆಂಡರ್ಸ್ ಎಲ್ಲಾ finalise ಮಾಡಿದ್ದೇವೆ. ಬಹುಶಃ ಇನ್ನು ಒಂದು ತಿಂಗಳಿನಲ್ಲಿ ಖರೀದಿ ಮಾಡುತ್ತೇವೆ. Diagnostic ಉಪಕರಣ ಸರ್ಕಾರಿ ಆಸ್ಪತ್ರೆಗಳಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಬಾರದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಜಿಲ್ಲಾ ಕೇಂದ್ರದಲ್ಲಿ ಡಯಾಲಿಸಿಸ್ ಸೆಂಟರ್ ಇದೆ. ನಮ್ಮ ಪರಿಚಯದ ಒಬ್ಬ ರೋಗಿ ತೀರಿ ಹೋದರು. ನಾನು ಅವರಿಗೆ ಡಯಾಲಿಸಿಸ್ ಮಾಡಿಸುವುದಕ್ಕೆ ಆರು ತಿಂಗಳು ಪ್ರಯತ್ನ ಮಾಡಿದೆ. ಇಲ್ಲ ಸರ್, ಸೀನಿಯಾರಿಟಿ ಪಟ್ಟಿ ಇದೆ, ಸಾಧ್ಯವೇ ಇಲ್ಲ ಎಂದು ಹೇಳಿದರು. ಒಂದು ಸಲ ಒಬ್ಬ ಮನುಷ್ಯ ಡಯಾಲಿಸಿಸ್‌ಗೆ ಎಂಟ್ರಿಯಾದ ಮೇಲೆ ಅವನು ಖಾಯಂ ಆಗಿ ಡಯಾಲಿಸಿಸ್ ಮಾಡಿಸಿಕೊಳ್ಳಲೇಬೇಕು. ಜಿಲ್ಲಾ ಕೇಂದ್ರಗಳಲ್ಲೇ ಬೇಡಿಕೆಗೆ ಪೂರಕವಾಗಿ ಡಯಾಲಿಸಿಸ್ ಮಾಡುವ ವ್ಯವಸ್ಥೆ ಜಿಲ್ಲಾ ಆಸ್ಪತ್ರೆಗಳಲ್ಲೇ ಇಲ್ಲ. ನಮ್ಮ ಯೂನಿಟ್‌ಗಳಲ್ಲಿ ಡಯಾಲಿಸಿಸ್ ಮಾಡಿಕೊಳ್ಳುವವರು ದೊಡ್ಡ ಪಟ್ಟಿ ಇದೆ ಎಂದು ಅಲ್ಲಿನ ಡಿಎಸ್ ಹೇಳುತ್ತಾರೆ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:-** ಮಾನ್ಯ ಶ್ರೀಕಂಠೇಗೌಡರೆ, ನನಗೆ ಮಾತನಾಡುವ ಮನಸ್ಸು ಇರಲಿಲ್ಲ. ಇವತ್ತು ನನಗೆ ಮಾನ್ಯ ಪ್ರತಿಪಕ್ಷದ ನಾಯಕರು ಬಹಳ ದೊಡ್ಡ ಉಪಕಾರ ಮಾಡಿದರು.

ಮಾನ್ಯ ಸಭಾಪತಿಯವರೆ, ಈ ಎಲ್ಲಾ ವಿಷಯ ನನಗೆ ಗೊತ್ತಿದೆ. ಎಷ್ಟು ಜನ on wait ಇದ್ದಾರೆ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅಷ್ಟು ಮೆಷಿನ್‌ಗಳನ್ನು ಖರೀದಿ ಮಾಡುತ್ತಿದ್ದೇವೆ. ನಾನು ಮಂಡ್ಯ ಆಸ್ಪತ್ರೆಯ ಕಾಲೇಜಿಗೆ ಬಂದು ಎಕ್ಸರೇ ರೂಮಿನ ಹತ್ತಿರ ಹೋದೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ, ಜಿಲ್ಲಾ ಆಸ್ಪತ್ರೆಯಲ್ಲಿ 500mA X-ray machine ಕೆಟ್ಟು ಹೋಗಿ ಒಂಬತ್ತು ತಿಂಗಳಾಗಿದೆ. 300mA ಯಂತ್ರ ಮಾತ್ರ ಕೆಲಸ ಮಾಡುತ್ತಿತ್ತು. ರೋಗಿಗಳನ್ನು stretchers ಮೇಲೆ ಹೆಣಗಳ ರೀತಿ ಮಲಗಿಸಿ 10-12 ಜನರು ಕಾಯುತ್ತಿದ್ದಾರೆ. ಎದುರುಗಡೆ ಒಬ್ಬ Diagnostics Centre ನವರು ಇದ್ದಾರೆ. ಇಲ್ಲಿಗೆ ನಾವು ಯಾರನ್ನಾದರೂ operator ಗಳನ್ನು ಹಾಕಿಸಿದರೆ ಇವರನ್ನು ಅವರು ಕರೆದುಕೊಂಡು ಹೋಗಿಬಿಡುತ್ತಾರೆ. ಇವೆಲ್ಲಾ ನಮಗೆ ಕಷ್ಟ. ಇವೆಲ್ಲಾ ಗಮನದಲ್ಲಿಟ್ಟುಕೊಂಡೇ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ Diagnostic facilities ಇರಬೇಕೆಂದು ಸೂಕ್ತ ವ್ಯವಸ್ಥೆ ಮಾಡುತ್ತಿದ್ದೇವೆ. ಇತ್ತೀಚೆಗೆ ನಾನು ಜವಾಬ್ದಾರಿ ವಹಿಸಿಕೊಂಡ ಮೇಲೆ ಡೆಂಗ್ಯೂ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಡೆಂಗ್ಯೂ ಪ್ರಕರಣಗಳಲ್ಲಿ ತಕ್ಷಣ blood platelets shortfall ಆಗುತ್ತದೆ. ನಾವು ಸ್ವಲ್ಪ ತಿರಸ್ಕಾರ ಮಾಡಿದರೆ ಜೀವವೇ ಹೋಗಿಬಿಡುತ್ತದೆ. Blood platelets ಬೇಕೆಂದರೆ ಬೆಂಗಳೂರಿಗೆ ಬರಬೇಕು. Blood Banks ಗಳಿವೆ, Storage facility ಇದೆ. ಈಗ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ blood components ಮಾಡುತ್ತಿದ್ದೇವೆ. It's another three months. ಅದಕ್ಕೆ ನಾನು ತಮಗೆಲ್ಲಾ ಕೈ ಜೋಡಿಸಿ ಏನು ಕೇಳಿಕೊಳ್ಳುತ್ತೇನೆಂದರೆ, ಯಾವ ಖಾಸಗಿ ಆಸ್ಪತ್ರೆಗೂ ಕಡಿಮೆ ಇರಲಾರದಂತೆ ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ನಾನು ಸ್ವತಃ ಸರ್ಕಾರಿ ಆಸ್ಪತ್ರೆಯಲ್ಲಿದ್ದು ನೋಡಿರತಕ್ಕಂಥವನು. Right now, ನನ್ನ ಅಣ್ಣನ ಹೆಂಡತಿ, ಅಂದರೆ ನನ್ನ ಅತ್ತಿಗೆಯವರು knee replacement ಮಾಡಬೇಕೆಂದು ಬೌರಿಂಗ್ ಆಸ್ಪತ್ರೆಯಲ್ಲಿದ್ದಾರೆ. ಯಾರು ಎಷ್ಟೇ ಹೇಳಿದರೂ ನಾನು ಇಷ್ಟೇ ಹೇಳಿದೆ. ಖಾಸಗಿ ಆಸ್ಪತ್ರೆಗೆ ಹೋಗಬೇಕೆಂದರೆ ನಿಮ್ಮ ಇಷ್ಟ, ನನ್ನ ಮಾತು ಕೇಳುವುದಾದರೆ ಬೌರಿಂಗ್ ಆಸ್ಪತ್ರೆಗೆ ಸೇರಿಸಿ ಎಂದು ಹೇಳಿದೆ. ನಾಳೆ ಡಿಸ್‌ಚಾರ್ಜ್ ಆಗುತ್ತಾರೆ. ನಾನು ಬದನೆಕಾಯಿ ತಿನ್ನಬೇಡಿ ಎಂದು ಜನರಿಗೆ ಕತೆ ಹೇಳಿ ನಮ್ಮ ಮನೆಯಲ್ಲಿ ಬದನೆಕಾಯಿಯನ್ನು ಮಾಡುತ್ತಿಲ್ಲ. ಬದನೆಕಾಯಿ ತಿನ್ನಬಾರದು ಎಂದರೆ ತಿನ್ನಬಾರದು. "ಹೇಳುವುದು ವೇದಾಂತ, ತಿನ್ನುವುದು ಬದನೆಕಾಯಿ" ಎಂದು ಹೇಳುವಂತಹ ದಾಸ ನಾನಲ್ಲ. ದಯಮಾಡಿ ಸರ್ಕಾರಿ ಆಸ್ಪತ್ರೆಗಳ ವಿಚಾರದಲ್ಲಿ ನಿಮ್ಮೆಲ್ಲರ ಸಹೃದಯ ಬೆಂಬಲ ನನಗಿರಲಿ. ಸಾರ್ವಜನಿಕರಿಗೆ, ಬಡವರಿಗೆ, ಸರ್ಕಾರಿ ಆಸ್ಪತ್ರೆಗಳ credibility ಹೋಗಿಬಿಟ್ಟರೆ, ವಿಶ್ವಾಸಾರ್ಹತೆ ಹೋಗಿಬಿಟ್ಟರೆ ಅದಕ್ಕೆ ಪರ್ಯಾಯ ಇರುವುದಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ರೇಟ್ ಇರುತ್ತದೆಯೋ ನಮಗೆ ಗೊತ್ತಿಲ್ಲ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. One particular anti cancer drug... ನಾನು ನಮ್ಮ ಪ್ರಧಾನ ಕಾರ್ಯದರ್ಶಿಗಳನ್ನು ಕರೆದುಕೊಂಡು ದೆಹಲಿಗೆ ಹೋಗಿದ್ದೆ. ಒಂದು ಡೋಸ್‌ಗೆ 13,800 ರೂಪಾಯಿ ಮಾರ್ಕೆಟ್ ಮಾಡುತ್ತಾರೆ. All India Institute of Medical Sciences ನಲ್ಲಿ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಬಂದ ಮೇಲೆ 'ಅಮೃತ್' ಎನ್ನುವ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಯಾರು manufacture ಮಾಡುತ್ತಾರೆ ಅವರಿಂದ ನೇರವಾಗಿ ಗ್ರಾಹಕರಿಗೆ ಹೋಗುತ್ತದೆಂದು ಎಲ್ಲಾ ತೆರಿಗೆಯನ್ನು ತೆಗೆದು ಒಂದು ಕೌಂಟರ್ ಮಾಡಿದ್ದಾರೆ. ವ್ಯತ್ಯಾಸ ಎಷ್ಟು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು ಎಂದು ಅಂದಾಜು ಮಾಡಿ. 13,800 ರೂಪಾಯಿಗೆ ಮಾರುವಂತಹ ಔಷಧ ಕೇವಲ 280 ರೂಪಾಯಿಗೆ ಸಿಗುತ್ತಿದೆ. ನಾವು ಏನು ಮಾಡಬೇಕು ಎಂಬುದನ್ನು ಹೇಳಿ? ಕಿದ್ವಾಯಿ ಆಸ್ಪತ್ರೆ ಬಿಟ್ಟರೆ ಬೇರೆ Cancer Institute ಇಲ್ಲ. ಅನಿವಾರ್ಯವಾಗಿ ಬೇರೆ ಕಡೆಯಿಂದಲೂ ಇಲ್ಲಿಗೆ ಬರುತ್ತಾರೆ. ಕಿದ್ವಾಯಿಯಲ್ಲೂ ನಮ್ಮವರು ಹೇಳಿ ಕೊಡುವವರಿದ್ದಾರೆ. ಅಲ್ಲಿಗೆ ಹೋಗಿ, ಇಲ್ಲಿಗೆ ಹೋಗಿ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನಿಮ್ಮಂಥವರು ಯಾರಾದರೂ ಕೊಟ್ಟರೆ ಒಂದು ಲಕ್ಷ, ಎರಡು ಲಕ್ಷ ಬರೆಯುತ್ತಾರೆ. 6 ಲಕ್ಷ, 8 ಲಕ್ಷ ರೂಪಾಯಿಗಳಾದರೆ ಅವರ ಗತಿ ಏನಾಗಬೇಕು? ಇದು ಬಿಡಿಸಲಾಗದ ಸಮಸ್ಯೆ. ನನಗಂತೂ ನಿಮ್ಮೆಲ್ಲರ ಸಹಕಾರ ಇದೆ. ನಾನು ಸದುದ್ದೇಶದಿಂದ ಹೋಗುತ್ತಿದ್ದೇನೆ ಎನ್ನುವ ಧೈರ್ಯದ ಮೇಲೆ, ಪ್ರಾಮಾಣಿಕವಾಗಿ, ಪ್ರತಿ ದಿವಸ ನನ್ನನ್ನು ನಾನೇ ಶಪಿಸಿಕೊಂಡು, ಈ ಕೆಲಸಕ್ಕೆ ಅನೇಕ ಜನರನ್ನು ನಾನು ಮೈಮೇಲೆ ಹಾಕಿಕೊಳ್ಳುತ್ತಿದ್ದೇನೆ. ಔಷಧಿಗಳ ವಿಚಾರವನ್ನು ನಾನು ತಮಗೆ ಹೇಳುತ್ತೇನೆ. ನಾನು ಪಕ್ಷವನ್ನು ನೋಡುವವನಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು ಖಂಡಿತ ಮೈಮೇಲೆ ಹಾಕಿಕೊಳ್ಳುತ್ತಿಲ್ಲ. ಅವರೇನು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆಯೋ ಆ ಎಲ್ಲದ್ದಕ್ಕೂ ಕೂಡ ನಾವು ಪೂರ್ಣ ಸಹಕಾರ ಕೊಡುತ್ತೇವೆ. ಅದರಲ್ಲೇನು ಅನುಮಾನ ಬೇಡ. ಅವರು, ನಾನು ತಪ್ಪು ಮಾಡುತ್ತಿದ್ದೇನೆ, ಯಾರ್ಯಾರನ್ನೋ ನಿಷ್ಠೂರ ಕಟ್ಟಿಕೊಳ್ಳುತ್ತಿದ್ದೇನೆ ಅಂದುಕೊಂಡಿದ್ದಾರಲ್ಲಾ, ಕೆಲವರ ನಿಷ್ಠೂರವನ್ನು ಕಟ್ಟಿಕೊಳ್ಳಲೇಬೇಕಾಗುತ್ತದೆ. ನಿಷ್ಠೂರ ಕಟ್ಟಿಕೊಳ್ಳಲಿಲ್ಲವೆಂದರೆ ಯಾರೂ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ಬಡವರಿಗೋಸ್ಕರ ನಿಷ್ಠೂರ ಕಟ್ಟಿಕೊಳ್ಳಬೇಕಾಗುತ್ತದೆ. ಅದರಲ್ಲಿ ಏನೂ ತಪ್ಪಿಲ್ಲ. ಬೇರೆ ಯಾರಿಗೋಸ್ಕರ ನಿಷ್ಠೂರ ಕಟ್ಟಿಕೊಳ್ಳುತ್ತಿದ್ದಾರೆ? ಇದನ್ನು ನಿಷ್ಠೂರ ಎಂದುಕೊಳ್ಳುವುದು ಬೇಡ. ಇದು ಕರ್ತವ್ಯ, ನಿಷ್ಠೂರ ಹೇಗಾಗುತ್ತದೆ? ಕರ್ತವ್ಯ ನಿರ್ವಹಿಸುವುದಕ್ಕೆ ಹೋಗುತ್ತಿದ್ದಾರೆ. ಅವರ ಜೊತೆ ನಾವು ಇರುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಸರ್ಕಾರಿ ಆಸ್ಪತ್ರೆಗಳನ್ನು ಶಕ್ತಿಶಾಲಿ ಆಗಿ ಮಾಡಬೇಕೆನ್ನುವ ಮಾನ್ಯ ಸಚಿವರ ಕಾಳಜಿಗೆ ನಾವು ಬೆಂಬಲ ಕೊಡುವುದಕ್ಕೆ ತಯಾರಿದ್ದೇವೆ. ಸೌಲಭ್ಯಗಳಿಲ್ಲದಿದ್ದರೆ ಯಾವ ಸರ್ಕಾರಿ ಆಸ್ಪತ್ರೆಗಳ ಕಡೆಗೆ ಜನರು ಮುಖ ಮಾಡುತ್ತಾರೆ? ಸರ್ಕಾರಿ ಆಸ್ಪತ್ರೆಗಳಲ್ಲಿ ಸವಲತ್ತುಗಳು ಸಿಗುತ್ತಿಲ್ಲ. ಈಗ ಉದಾಹರಣೆಗೆ ನಮ್ಮ ಮಂಡ್ಯದ ಆಸ್ಪತ್ರೆಯಲ್ಲಿ 25-30 ವರ್ಷಗಳಲ್ಲಿ ಹೆರಿಗೆ ವಾರ್ಡ್ capacity ಏನಿತ್ತು ಅಷ್ಟೇ ಇದೆ. ಒಂದು ಹಾಸಿಗೆಯಲ್ಲಿ ಒಂದು ಬಾಣಂತಿ ಈ ಕಡೆ, ಮತ್ತೊಂದು ಬಾಣಂತಿ ಆ ಕಡೆ, ಎರಡೂ ಕಡೆ ಮಗು ಇರುತ್ತದೆ. ಕೆಳಗಡೆ ಹಾಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಲಗಿಸುತ್ತಾರೆ. ಸರ್ಕಾರ ಸವಲತ್ತು ಕೊಟ್ಟರೆ ಮೊದಲ ಆದ್ಯತೆ ನಮ್ಮವರು ಸರ್ಕಾರಿ ಆಸ್ಪತ್ರೆಗೆ ಕೊಡುತ್ತಾರೆ. ಆದರೆ ಸವಲತ್ತು ಇಲ್ಲ. ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲ. ಯಾವುದಾದರೂ X-ray, Scanning ಕೇಂದ್ರಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಮೈಸೂರು ಆಸ್ಪತ್ರೆಯಲ್ಲಿ ನಾನು ಒಂದು ಸಲ ಡಾಕ್ಟರ್ ಹತ್ತಿರ ಹೋಗಿ ದೊಡ್ಡ ಗಲಾಟೆ ಮಾಡಿದೆ. ಒಬ್ಬ ಬಡ ರೋಗಿಗೋಸ್ಕರ ಗಲಾಟೆ ಮಾಡಿ ಅವರ ಹತ್ತಿರ ನಾನು scan ಮಾಡಿಸಿದೆ. ಈ Scanning, X-ray, ಎಲ್ಲದಕ್ಕೂ ಹೊರಗಡೆ ಬರೆಯುತ್ತಾರೆ. ಯಾವುದೇ ಮಾತ್ರೆಗಳನ್ನು ಹೊರಗಡೆಗೆ ಬರೆಯುತ್ತಾರೆ. ನಾನು ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಮೊದಲು ಮೂಲಭೂತ ಸೌಕರ್ಯಗಳನ್ನು ಚೆನ್ನಾಗಿ ಕೊಡಿ. ಎಲ್ಲಾ ಸವಲತ್ತು, ಸೌಕರ್ಯಗಳನ್ನು ಕೊಡಿ. ಸಹಜವಾಗಿ ಜನ ಆ ಕಡೆ ಮುಖ ಮಾಡುತ್ತಾರೆ. ಅಲ್ಲಿಯವರೆಗೂ ನಾವು ಏನೇ ಹೇಳಿದರೂ ಜನ ಆ ಕಡೆ ಬರುವುದಿಲ್ಲ. ಹಾಗಾಗಿ ದಯಮಾಡಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ನಾನು ಅಭಿನಂದಿಸುತ್ತೇನೆ. ಏಕೆಂದರೆ, ಸರ್ಕಾರಿ ಆಸ್ಪತ್ರೆಗೆ ಎಲ್ಲರೂ ಹೋಗಬೇಕು, ನಮ್ಮಂಥವರೂ ಹೋಗಬೇಕು ಎನ್ನುವ ಕಳಕಳಿಯನ್ನು ನಮ್ಮಲ್ಲಿ ಉಂಟು ಮಾಡುತ್ತಿದ್ದಾರೆ. ನಾನು ಎಂ.ಎಲ್.ಎ. ಆಗಿದ್ದು 1980-82 ರಲ್ಲಿ, ಎರಡು ಮಕ್ಕಳ ಹೆರಿಗೆ ವಾಣಿವಿಲಾಸ್ ಆಸ್ಪತ್ರೆಯಲ್ಲಿ ಆಯಿತು. ನಾನು ಎಂ.ಎಲ್.ಎ. ಆಗಿ ಯಾವುದಾದರೂ ಖಾಸಗಿ ನರ್ಸಿಂಗ್ ಹೋಮ್‌ಗೆ ಹೋಗಬಹುದಿತ್ತು. ಆದರೆ ಕೆಲವರಿಗೆ ಆ ರೀತಿ ಕಳಕಳಿ ಇದೆ. ಮಾನ್ಯ ಸಚಿವರು ಈಗ ಇನ್ನಷ್ಟು ಕಳಕಳಿಯನ್ನು ಉಂಟು ಮಾಡುತ್ತಿದ್ದಾರೆ. ಇವತ್ತು ನಮ್ಮ ಸೊಸೆಯಂದಿರು ಹೆರಿಗೆಗೆ ಒಬ್ಬ ಸೊಸೆ Cloudnine Hospital ಗೆ ಹೋದರು, ಮತ್ತೊಬ್ಬ ಸೊಸೆ Columbia Asia Hospital ಗೆ ಹೋದರು. ಒಂದೊಂದು ಸಿಸೆರಿಯನ್ ಹೆರಿಗೆಗೆ ಒಂದೊಂದು ಲಕ್ಷಕ್ಕೂ ಮೇಲ್ಪಟ್ಟು ಖರ್ಚಾಗಿದೆ. ಖಾಸಗಿ ಆಸ್ಪತ್ರೆಗೂ ಸರ್ಕಾರಿ ಆಸ್ಪತ್ರೆಗೂ ಎಷ್ಟೊಂದು ವ್ಯತ್ಯಾಸ ಇದೆ. ಮಾನ್ಯ ಸಚಿವರು ಹೇಳಿದ್ದಕ್ಕೆ ಹೇಳಬೇಕೆಂದು ಅನಿಸಿತು. ಕೆಲವರಿಗೆ ಸರ್ಕಾರಿ ಆಸ್ಪತ್ರೆ ಬಗ್ಗೆ ಬಹಳ ಕಳಕಳಿ ಇರುತ್ತದೆ. ಮಾನ್ಯ ಡಿ.ಎನ್.ಪುಟ್ಟೇಗೌಡರು, ಅಷ್ಟು ಹುಷಾರಿಲ್ಲದೆ ನಡೆಯುವುದಕ್ಕಾಗದಿದ್ದರೂ ಮಾನ್ಯ ಸಚಿವರ ಹತ್ತಿರ ಬಂದು ಕುಳಿತುಕೊಂಡು, ಮೂಡಿಗೆರೆಯ ನೂರು ಹಾಸಿಗೆಯ ಆಸ್ಪತ್ರೆ ನಾನು ಮತ್ತು ಮೋಟಮ್ಮ ಸೇರಿ ಮಾಡಿಸಿರುವುದು ಎಂದು ಹೇಳಿದರು. ಅಲ್ಲಿಯ ಪರಿಸ್ಥಿತಿ ನೋಡಿದರೆ ನಮಗೆ ನಾಚಿಕೆ ಆಗುತ್ತದೆ. ನೂರು ಹಾಸಿಗೆಯ ಆಸ್ಪತ್ರೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡ್ಮಿಟ್ ಆದವರು ಕೇವಲ 5-10 ಜನ ಮಾತ್ರ. ನೂರು ಹಾಸಿಗೆಯ ಆಸ್ಪತ್ರೆಯಲ್ಲಿ 5-10 ಜನ ಎಂದು ಹೇಳಿದರೆ ಅಲ್ಲಿನ ಪರಿಸ್ಥಿತಿಯ ಬಗ್ಗೆ ಜನರಿಗೆ ಎಷ್ಟು ವಿಶ್ವಾಸ ಇದೆ ಎಂಬುದು ಗೊತ್ತಾಗುತ್ತದೆ.

(ಮುಂದು)

(368) 22.03.2017/ 4.40/ ಕೆಹೆಚ್/ಬಿಎನ್ಎಸ್

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಮೋಟಮ್ಮ (ಮುಂದು):-** ಇವರ ಹತ್ತಿರ ಹೋಗಿ ಆಸ್ಪತ್ರೆಯನ್ನು ಸರಿ ಮಾಡಿಸಿ, ನಾನೇ ಆಕಸ್ಮಾತ್ತಾಗಿ ಊರಿಗೆ ಬಂದಾಗ ಏನಾದರೂ ಹೆಚ್ಚು-ಕಡಿಮೆಯಾದರೆ ನಾನು ಎಲ್ಲಿಗೆ ಹೋಗಬೇಕೆಂದು ಶ್ರೀ ಡಿ.ಎಂ.ಪುಟ್ಟೇಗೌಡರನ್ನು ಕೇಳಿದರು. ನಂತರ ಇವರು 4 ಕೋಟಿ ರೂಪಾಯಿಗಳನ್ನು ಆಸ್ಪತ್ರೆಯ ಅಭಿವೃದ್ಧಿಗೆ ಹಣವನ್ನು ಕೊಟ್ಟು, ಈಗ ಆಸ್ಪತ್ರೆಯ ರಿಪೇರಿಯಾಗುತ್ತಿದೆ. ಆದರೆ ಆ ಜನರಿಗೆ ವಿಶ್ವಾಸ ಬರಬೇಕಾದರೆ, ಕಳಕಳಿಯಿರುವ ವೈದ್ಯರು ಬರಬೇಕಲ್ಲವೇ? ಕಳಕಳಿಯಿರುವ ವೈದ್ಯರು ಬರದೇ ಇದ್ದರೆ, ನಾವು ಎಷ್ಟೇ ಆಸ್ಪತ್ರೆಯನ್ನು ರಿಪೇರಿ ಮಾಡಿದರೂ, ಇನ್ನೂ 150 ಬೆಡ್ ಆಸ್ಪತ್ರೆ ಮಾಡಿದರೂ ಜನ ಬರುವುದಿಲ್ಲ ಎನ್ನುವುದು ನನ್ನ ಒಂದು ಮನವರಿಕೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾಧ್ಯಮದವರು ಸಹ ಇದ್ದಾರೆ. ಪ್ರಮುಖವಾದ ಸಂದೇಶವಿದು. ಜನೌಷಧಿ. ಇದಕ್ಕೆ ಪ್ರಧಾನ ಮಂತ್ರಿಗಳು "ಜನೌಷಧಿ" ಎಂದು ಹೆಸರಿಟ್ಟಿದ್ದಾರೆ. Generic medicine ಮಾರಾಟ ಮಾಡುವುದು ಏನು ತಪ್ಪು? ನನಗೆ ಕೆಲವರು ಪ್ರಧಾನ ಮಂತ್ರಿಗಳು . . . ಆ ರೀತಿಯೆಲ್ಲ ಇಲ್ಲಪ್ಪಾ ಎಂದು ನಾನು ಹೇಳಿದೆ. ಒಂದು branded ಔಷಧಿಯನ್ನು ಒಂದು ರೂಪಾಯಿಗೆ ಮಾರಿದರೆ, ಜನರಿಗೆ ಮೂವತ್ತು ನಯಾಪೈಸೆಗೆ generic ಔಷಧಿಗಳು ಸಿಗುತ್ತದೆ. ಇದನ್ನು World Health Organisation (W.H.O.) ಅವರು approve ಮಾಡಿದ್ದಾರೆ. ಇದು ಯೋಗ್ಯವಾಗಿರುವ ಔಷಧಿಯೆಂದು approve ಮಾಡಿದ್ದಾರೆ. ಕಂಡು ಕಂಡು 70 ಪೈಸೆ ಜಾಸ್ತಿ ಕೊಡಬೇಕೆಂದರೆ ಯಾರು ಒಪ್ಪುತ್ತಾರೆ. ನಾವು ಕೇಂದ್ರ ಸರ್ಕಾರದವರ ಜೊತೆ ಒಡಂಬಡಿಕೆ ಮಾಡುತ್ತೇವೆ. 200 ಜನೌಷಧಿ ಮಳಿಗೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಪ್ರತಿ 15 ಕಿ.ಮೀ ವ್ಯಾಪ್ತಿಯೊಳಗಡೆ ambulance ಅನ್ನು ತರುತ್ತಿದ್ದೇವೆ. ಕೆಲವು ಕಡೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲ. ಮಲ್ಲೇಶ್ವರಂನಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಗೆ surprise inspection ಗೆ ನಾನು ಹೋಗಿದ್ದೆ. ನನಗೆ ಆಶ್ಚರ್ಯವಾಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

It is one of the best hospitals. ಶ್ರೀ ಶ್ರೀಕಂಠೇಗೌಡರೇ ತಾವು ಇಷ್ಟೊತ್ತು ಹೇಳಿದ್ದೀರಿ. ಆ ಆಸ್ಪತ್ರೆಯಲ್ಲಿ ಎಲ್ಲ ಸೌಲಭ್ಯಗಳು ಇವೆ ಮತ್ತು ಶುಚಿಯಾಗಿದೆ. ಆದರೆ ಆ ಆಸ್ಪತ್ರೆಯಲ್ಲಿ ಅರ್ಧದಷ್ಟು ಜನರಿಲ್ಲ. ಅರ್ಧದಷ್ಟು ಬೆಡ್ ಖಾಲಿಯಾಗಿವೆ. ಮಲ್ಲೇಶ್ವರಂನಲ್ಲಿ ಅಲ್ಲೇ ಪಕ್ಕದಲ್ಲಿ ಅರ್ಧ ಫರ್ಲಾಂಗ್ ಆಚೆಗೆ ಹೋಗುವುದಕ್ಕೆ ನಾಚಿಕೆಯಾಗುತ್ತದೆ. ಆ ರೀತಿಯ ವಾತಾವರಣವಿದೆ. ಈಗ ಆಸ್ಪತ್ರೆಗಳು marketing ಮಾಡುತ್ತಾರೆ. ಏರ್‌ಪೋರ್ಟ್ ರಸ್ತೆಯಲ್ಲಿ, ಬೇರೆ ಕಡೆಯೆಲ್ಲ ಬೋರ್ಡ್ ಹಾಕಿದ್ದಾರೆ ನೋಡಿ. Gall bladder stone ತೆಗೆಯಬೇಕೇ ನಮ್ಮಲ್ಲಿಗೆ ಬನ್ನಿ ಚೆನ್ನಾಗಿ ತೆಗೆಯುತ್ತೇವೆ. Stent ಹಾಕಿಸಿಕೊಳ್ಳಬೇಕೇ ನಮ್ಮಲ್ಲಿ ಬನ್ನಿ ಚೆನ್ನಾಗಿ ಜೋಡಿಸುತ್ತೇವೆ. ಹೆರಿಗೆ ಮಾಡಿಸಬೇಕೇ, ನಿಮಗೆ ಗೊತ್ತಿಲ್ಲದಂತೆ ಹೆರಿಗೆ ಮಾಡಿಬಿಡುತ್ತೇವೆ. ಯಾರು ತಿರುಪತಿಗೆ ಹೋಗಬೇಡಿ. ಅವರು ಬಹಳ rough. ನಾವು nice ಆಗಿ ಮಾಡುತ್ತೇವೆಂದು ಕರೆಯುತ್ತಾರೆ. ನಾನು ಹೇಳುತ್ತಿರುವುದು. ನಾನು ವೃತ್ತಿಯಿಂದ ಕ್ಷೌರಿಕ. ಇದು ನನಗೆ ಕುಲ ಕಸುಬು. ನಾನು ಬದ್ಧತೆಯಿಂದ ಮಾಡತಕ್ಕಂಹದ್ದು. ನನಗೆ ಇದನ್ನು ನಮ್ಮ ತಾತ, ನಮ್ಮ ತಂದೆ ಹೇಳಿಕೊಟ್ಟು ಹೋಗಿದ್ದಾರೆ. ನಾನು ಶ್ರದ್ಧೆಯಿಂದ ಮಾಡುತ್ತೇನೆ. ಭಕ್ತಿಯಿಂದ ಮಾಡುತ್ತೇನೆ. ನಿಮಗೆ ನೋವು ಆಗದೇ ಇರುವ ರೀತಿ ಮಾಡುತ್ತೇನೆ. ನಿಮಗೆ ಗಾಯ ಆಗದೆ ಇರುವ ಹಾಗೆ ಮಾಡುತ್ತೇನೆ. ಬನ್ನಿರಿ ಎಂದರೆ, gel and shampoo ಸಿಗುತ್ತದೆ, ಕನ್ನಡಿ ಇರುತ್ತದೆ. Dye ಹಾಕುತ್ತಾನೆಂದು ಅಲ್ಲಿಗೆ ಹೋಗಿ, ಆಮೇಲೆ ಕಾಯಿಲೆ ಎಂದು ನನ್ನ ಹತ್ತಿರ ಬಂದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಬೇಕು. Government hospitals ಬಗ್ಗೆ ಶ್ರೀಮತಿ ಮೋಟಮ್ಮನವರು ಹೇಳಿದರು. ನಾನು ಮತ್ತು ಅವರು 1978ರಲ್ಲಿ ಅಸೆಂಬ್ಲಿಗೆ ಆರಿಸಿ ಬಂದವರು. ಶ್ರೀಮತಿ ಮೋಟಮ್ಮನವರು ಹೋಗಬೇಕೆಂದರೂ ಸಹ ನರ್ಸಿಂಗ್ ಹೋಂಗಳು ಇರಲಿಲ್ಲ. ಹಾಗಾಗಿ ಇವರು ವಾಣಿವಿಲಾಸ್ ಆಸ್ಪತ್ರೆಗೆ ಹೋದರು.

(ಸದನದಲ್ಲಿ ನಗುವಿನ ಅಲೆ)

ಒಂದು ಕಾಲಕ್ಕೆ ಬೆಂಗಳೂರಿನಲ್ಲಿ Bowring and Lady Curzon hospital, Victoria, Vani Vilas, Minto ಆಸ್ಪತ್ರೆಗಳನ್ನು ಬಿಟ್ಟರೆ ಬೇರೆ ಆಸ್ಪತ್ರೆಗಳು ಇರಲಿಲ್ಲ. ಇದು ಹೇಗೆ ಪ್ರಾರಂಭವಾಯಿತು ಎಂಬ ಬಗ್ಗೆ ಚರ್ಚೆಗೆ ಹೋಗುವುದು ಬೇಡ. ಅವರು ನಮ್ಮ ವಿರೋಧಿಗಳೇನು ಅಲ್ಲ. ಅವರು ಅವರ ಬಗ್ಗೆ defend ಮಾಡಿಕೊಡುವ ಹಾಗೆ ಇಲ್ಲ. ನಾನು ಅವರ ಬಗ್ಗೆ ಒಂದು ಮಾತನ್ನು ಕೂಡ ಹೇಳುವುದಿಲ್ಲ. ನಮ್ಮ ಆಸ್ಪತ್ರೆಗಳ ಬಗ್ಗೆ ಇಷ್ಟು assurance ಕೊಡುತ್ತೇನೆ. ಒಂದೇ ಒಂದು ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಿಂದ ಕೇಳಿಕೊಳ್ಳುವುದು ಇಷ್ಟೆ. ವೈದ್ಯರು ಮತ್ತು ಉಳಿದ ಸಿಬ್ಬಂದಿಗಳು ಯಾರು ಇರುತ್ತಾರೆ, ಅವರ ವರ್ಗಾವರ್ಗಿಯಲ್ಲಿ ಚೀಟಿಗಳನ್ನು ಮತ್ತು ಪತ್ರಗಳನ್ನು ಕೊಡಿ ನಾನು ಬೇಸರ ಮಾಡಿಕೊಳ್ಳುವುದಿಲ್ಲ. ಏಕೆಂದರೆ ಅವರು ಯಾವುದೋ ಒಂದು influence ತೆಗೆದುಕೊಂಡು ಬರುತ್ತಾರೆ. ಒಂದೇ ಜಾಗದಲ್ಲಿ ಉಳಿಯುವುದಕ್ಕೆ ಪ್ರಯತ್ನಪಡುತ್ತಾರೆ. ಅಲ್ಲಿ ಒಂದು ಖಾಸಗಿ ನರ್ಸಿಂಗ್ ಹೋಂ ಇರುತ್ತದೆ ಅಥವಾ ಇನ್ನು ಏನೋ interest ಇರುತ್ತದೆ. ನಾವು ಆಡಳಿತವನ್ನು ನಿರ್ಭಯವಾಗಿ ನಡೆಸುವುದಕ್ಕೆ ಆಗುವುದಿಲ್ಲ. ಮೊದಲನೆಯದಾಗಿ, ಉಪಯೋಗ ಮಾಡುವುದೇ ಜಾತಿಯನ್ನು, ಆದಾದ ಮೇಲೆ ಮತ್ತೆ ಪಾರ್ಟಿಯನ್ನು, ಮೂರನೆಯದಾಗಿ ಉಪಯೋಗ ಮಾಡುವುದೇ ಹಣವನ್ನು, Caste, party or cash ನ ಉಪಯೋಗ ಮಾಡುತ್ತಾರೆ. ಒಂದು ವೇಳೆ ಒಬ್ಬ ಕುಂಬಾರನು ಇರುತ್ತಾನೆ. ಅವನು ಒಳ್ಳೆಯ ವೈದ್ಯ. ಅವನ ಜಾತಿಗೆ ಸೇರಿದ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ನೂ ಗತಿಯಿಲ್ಲ. ಅವನು ಯಾವ ಪಾರ್ಟಿಗೂ ಸೇರಿಲ್ಲ. ಅವನ ಹತ್ತಿರ ಹಣವಿಲ್ಲ. ಅವನ ಗತಿಯೇನಾಗಬೇಕು. ದುಷ್ಟನಾದವನು ಈ ಮೂರರಲ್ಲಿ ಯಾವುದಾದರೂ ಒಂದು advantageous position ನಲ್ಲಿ ಇರಬಹುದು. ಎಲ್ಲ ಇಲಾಖೆಗಳಲ್ಲೂ ಇರಬಹುದು. ಅದು ಹಾಳಾಗಿ ಹೋಗಲಿ. ಆರೋಗ್ಯ ಇಲಾಖೆಯಲ್ಲಿ ಆ ರೀತಿಯಲ್ಲಿ ಆಗುವುದು ಬೇಡ. ನೀವು ಒಂದು resolution ಮಾಡಿಬಿಡಿ. ಈ ಸದನದಲ್ಲಿ ನಾನು ಮಾಡಿರುವುದರಲ್ಲಿ ಏನಾದರೂ ತಪ್ಪುಗಳಿದ್ದರೆ, ನೀವು ಕೊಟ್ಟ ಶಿಕ್ಷೆಯನ್ನು ನಾನು ತೆಗೆದುಕೊಳ್ಳುತ್ತೇನೆ. ವರ್ಗಾವರ್ಗಿಯ ವಿಚಾರದಲ್ಲಿ ವೈದ್ಯಾಧಿಕಾರಿಗಳು, ಅರೆ ವೈದ್ಯಾಧಿಕಾರಿಗಳು, ಸಿಬ್ಬಂದಿಗಳ ಹತ್ತಿರ ನಾವು ನಿಮಗೆ ಜುಲುಮೆ ಮಾಡುವುದಿಲ್ಲವೆಂದು ಕೊಟ್ಟುಬಿಡಿ. ಇದನ್ನು ಮೇಲ್ಮನೆಯವರು ಮಾಡಿದ್ದಾರೆ, ಅದರ ಹಾದಿ ತುಳಿಯಬೇಕು ಎಂದು ಅಲ್ಲಿಯೂ ಸಹ ಹೇಳುತ್ತೇನೆ. ನೋಡಿ, ಮೂರು ತಿಂಗಳಿನಲ್ಲಿ ನಮ್ಮ ಇಲಾಖೆ ಹೇಗೆ ಇರುತ್ತದೆ! ಇಷ್ಟನ್ನು ಹೇಳಿ ಮಾನ್ಯ ಸಭಾಪತಿಯವರೆ, ಮಾನ್ಯ ಪ್ರತಿಪಕ್ಷದ ನಾಯಕರು . . . .

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚುವರಿ ಸಿಬ್ಬಂದಿಯೆಂದು ಮಾಡಿದ್ದಾರೆ. ಕೆಲವು ಕಡೆ ತೆಗೆದು ಹಾಕಿ, ಬೇರೆ ಕಡೆಗೆ ಸ್ಥಳಾಂತರ ಮಾಡುತ್ತಿದ್ದಾರೆ. ಫಾರ್ಮಸಿಸ್ಟ್ . . .

**ಶ್ರೀ ಕೆ.ಆರ್. ರಮೇಶ್‌ಕುಮಾರ್:–** ಮಾನ್ಯ ಸಭಾಪತಿಯವರೆ, ಹೆಚ್ಚುವರಿ ಯಾವುದೋ, ಕಡಿಮೆ ಯಾವುದೋ, deputation ಯಾವುದೋ, ನನಗೆ ಸಾಕಾಗಿ ಹೋಗಿದೆ. ನಾನು ಹುಚ್ಚಾಸ್ಪತ್ರೆಗೆ ಹೋಗುವುದು ಒಂದು ಬಾಕಿ ಇದೆ. ನಮ್ಮಲ್ಲಿ ಅದೆಷ್ಟು ಸಂಘಗಳಿವೆಯೋ ಗೊತ್ತಿಲ್ಲ. 108 ಎಂದು ಒಬ್ಬನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಾನೆ. 204 ಎಂದು ಒಬ್ಬನು ಬರುತ್ತಾನೆ. ಕಾಂಟ್ರ್ಯಾಕ್ಟ್ ನರ್ಸ್‌ಗಳು ಎಂದು ಒಬ್ಬರು ಬರುತ್ತಾರೆ. 'ಡಿ' ಗ್ರೂಪ್ ಎಂದು ಒಬ್ಬರು ಬರುತ್ತಾರೆ. 'ಆಯುಷ್' ವೈದ್ಯರು ಎಂದು ಒಬ್ಬರು ಬರುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀ ರಮೇಶ್‌ಕುಮಾರ್‌ರವರೆ ನೀವು ಈಗ ಹುಚ್ಚಾಸ್ಪತ್ರೆಗೆ ಸೇರಿದರೆ ಖಂಡಿತವಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಎಂದು ಪತ್ರವನ್ನು ಕೊಡುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಶ್ರೀ ಈಶ್ವರಪ್ಪನವರ ಅಭಿಮಾನಕ್ಕೆ ನಾನು ಋಣಿಯಾಗಿದ್ದೇನೆ. ನಾನು ಹುಚ್ಚಾಸ್ಪತ್ರೆ ಎಂದು ಏಕೆ ಹೇಳಿದೆ ಎಂದರೆ ನಾನು ಈಗ ಅಲ್ಲೇ ಇರುವುದು.

(ಸದನದಲ್ಲಿ ನಗುವಿನ ಅಲೆ)

ಅಲ್ಲಿಗೆ ಹೋಗುವುದರಿಂದ ಖರ್ಚು ಏನೂ ಹೆಚ್ಚು ಬರುವುದಿಲ್ಲ. ಆದ್ದರಿಂದ ತೊಂದರೆಯಿರುವುದಿಲ್ಲ. ಇಲ್ಲೆ ಅಪಾಯ ಹೆಚ್ಚು. ನಾನು ಏನು ಮಾಡುತ್ತೇನೆಂದರೆ, ನಾನು ಹುಚ್ಚಾಸ್ಪತ್ರೆಗೆ ಹೋಗುವಾಗ, ಶ್ರೀ ಈಶ್ವರಪ್ಪನವರೇ ತಾವು ಸಹ ನನ್ನ ಜೊತೆಯಲ್ಲಿ ಬನ್ನಿ ಎಂದು ಹೇಳುತ್ತೇನೆ. ಏಕೆ ಗೊತ್ತಾ? ಒಂದು ಮಾತ್ರ ಖಂಡಿತವಾಗಿ ಆಗುತ್ತದೆ. ಇಲ್ಲಿನ ಸಮಸ್ಯೆ ಸ್ವಲ್ಪನಾದರೂ ಕಡಿಮೆಯಾಗುತ್ತದೆ.

(ಸದನದಲ್ಲಿ ನಗುವಿನ ಅಲೆ)

ಶ್ರೀ ಪರಮೇಶ್ವರ್‌ರವರು ನೆಮ್ಮದಿಯಿಂದ ಉಸಿರಾಡುತ್ತಾರೆ. ಅಲ್ಲಿ ಸುಧಾರಣೆಯಾಗುತ್ತದೋ, ಇಲ್ಲವೋ ನಮಗೆ ಗೊತ್ತಿಲ್ಲ. ಮಾನ್ಯ ಸಭಾಪತಿಯವರೆ, ನೀವು ಬಹಳ ದೊಡ್ಡ ಹೃದಯದಿಂದ ನನಗೆ intervention ರೂಪದಲ್ಲಿ ನನ್ನ ಭಾವನೆಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ... There is a saying by George Bernard Shaw, "Men of rank don't belong to any party. If at all they belong to any party, they are not only fools, but are slaves." ಎಂದರೆ ಅತ್ಯುನ್ನತ ಶ್ರೇಣಿಗೆ ಸೇರಿದಂತಹ ಮನುಷ್ಯ, ಸೇರಬೇಕೆನ್ನುವ ಬಯಕೆಯಿರುವಂತಹ ಮನುಷ್ಯ ಪಕ್ಷಕ್ಕೆ ತನ್ನನ್ನು ತಾನು ನಿರ್ಬಂಧಿಸಿ ಹಗ್ಗ ಹಾಕಿ ಕಟ್ಟಿಕೊಳ್ಳಬಾರದು. ಒಂದು ವೇಳೆ ಈ ರೀತಿಯಲ್ಲಿ ಕಟ್ಟಿಹಾಕಿಕೊಂಡರೆ ಅವನು ಮೂರ್ಖನಷ್ಟೇ ಅಲ್ಲ; ಗುಲಾಮನಾಗಿರುತ್ತಾನೆ. ನಾನು ಮೂರ್ಖನಾಗುವುದಕ್ಕೂ ಮತ್ತು ಗುಲಾಮನಾಗುವುದಕ್ಕೂ ಇಷ್ಟಪಡುವುದಿಲ್ಲ. ಸಾರ್ವಜನಿಕ ಸೇವೆ ಮಾಡುವಾಗ ಅಪರೂಪಕ್ಕೆ ನಮಗೆ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ಅವಕಾಶ ನಮ್ಮ ಜೀವನದಲ್ಲಿ ಸಿಕ್ಕಿದೆ. ಸದನದಲ್ಲಿ ಎಲ್ಲರ ಕಾಳಜಿ ಕೂಡ ಸಾರ್ವಜನಿಕ ಹಿತವಾಗಿದೆ. ಅವರೆಲ್ಲರೂ ನನ್ನ ಮೇಲೆ ಸದ್ಭಾವನೆಗಳನ್ನು ಏನು ಇಟ್ಟುಕೊಂಡಿದ್ದಾರೆ, ನಾನು ಈ ಜವಾಬ್ದಾರಿಯಲ್ಲಿರುವ ತನಕ ಅದಕ್ಕೆ ಚ್ಯುತಿಬಾರದಂತೆ ನಡೆದುಕೊಳ್ಳುತ್ತೇನೆಂದು ತಿಳಿಸಿ ನಿಮ್ಮೆಲ್ಲರ ಸಹಕಾರವನ್ನು ಮತ್ತೊಮ್ಮೆ ಬಯಸಿ, ನೀವು ಹೇಳಿರುವ ಎಲ್ಲ ವಿಚಾರಗಳಲ್ಲೂ ಕೂಡ ನಾನು ಸ್ಪಂದಿಸುತ್ತೇನೆ. Immediate ಆಗಿ meeting ಕರೆಸುವುದಕ್ಕೂ ವ್ಯವಸ್ಥೆಯನ್ನು ಮಾಡುತ್ತೇನೆ. ನಿಮ್ಮ ಸಲಹೆಯನ್ನು ಪಡೆದೇ "ಯಶಸ್ವಿನಿ" ವಿಚಾರದಲ್ಲೂ ಸಹ ಮುಂದೆ ಹೆಜ್ಜೆ ಇಡುತ್ತೇನೆ. ನಾನು ಆತುರದ ನಿರ್ಣಯವನ್ನು ಮಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, . . .

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ age, ಎಂದು ಹೇಳಿದರೆ ಶ್ರೀ ಅಲ್ಲಮ ಪ್ರಭು ಪಾಟೀಲ್‌ರವರಿಗೆ ಬೆಳಗ್ಗೆ you are pretending that you are working but you are incapable of working and to produce results ಎಂದು ಹೇಳಿದೆ. ಆ ರೀತಿಯಲ್ಲಿ ಏನಾದರೂ yardstick ಇಟ್ಟುಕೊಳ್ಳುತ್ತೇವೆ. ಆ ರೀತಿಯಲ್ಲಿ ನೀವು ಯಾರ್‍ಯಾರು ಇದ್ದೀರೆಂದು census ಮಾಡಿಸುತ್ತೇನೆ. ಶ್ರೀ ಪ್ರತಾಪಚಂದ್ರ ಶೆಟ್ಟಿ ಯವರು he is still capable of working but, he is a quiet worker, ಗೊತ್ತಾಗುವುದಿಲ್ಲ. ನೀವೇನು ನಾಚಿಕೆಪಡಬೇಕಾಗಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರಿ ಆಸ್ಪತ್ರೆಗಳೆಂದರೆ ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ನರಕದ ಕಛೇರಿ. ನೀವು ಆಸಕ್ತಿಯನ್ನು ತೆಗೆದುಕೊಂಡಿದ್ದೀರಿ. ಮೂರು ತಿಂಗಳಿನಲ್ಲಿ ಅದಕ್ಕೆ ಒಂದು ರೂಪ ಕೊಡುತ್ತೇನೆಂದು ಹೇಳಿದ್ದೀರಿ. ವೈದ್ಯಾಧಿಕಾರಿಗಳು, ವೈದ್ಯರು ಪುಣ್ಯಾತ್ಮರು ಯಾರು ಇದ್ದಾರೆ. ಅವರ ಮನಸ್ಸನ್ನು ಸ್ವಲ್ಪ ಯಾವ ರೂಪದಲ್ಲಿ ಬದಲಾವಣೆ ಮಾಡಬೇಕೆಂಬ ಬಗ್ಗೆ, ನೀವು ಬಿಗಿ ಮಾಡಬೇಕೆಂದು ಸಿಟ್ಟು ಮಾಡಿಕೊಂಡು, ಜೋರು ಮಾಡಿಕೊಂಡು ಕ್ರಮ ತೆಗೆದುಕೊಂಡರೆ ಏನೇನು ಬದಲಾವಣೆಯಾಗುವುದಿಲ್ಲ. ನೀವು Training Camp ಮಾಡುತ್ತೀರಾ, ಅದನ್ನು ದಯವಿಟ್ಟು ಮಾಡಿ. ಯಾರೂ ಮಾಡದೇ ಇದ್ದಿದ್ದು ನೀವು ಮಾಡಬಹುದು. ಆಯವ್ಯಯದ ಮೇಲೆ ನಾನು ಮಾತನಾಡುತ್ತಿರುವುದೋ ಅಥವಾ ಶ್ರೀ ರಮೇಶ್‌ಕುಮಾರ್ ಮಾತನಾಡುತ್ತಿರುವುದೋ ನನಗೆ ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಾಗುತ್ತಿಲ್ಲ. ಸಂತೋಷ. ಶ್ರೀ ರಮೇಶ್‌ಕುಮಾರ್‌ರವರಿಗೆ ಅನುಭವ ಇದೆ. ಇನ್ನು ಸಾಕಷ್ಟು ಮಾಡಬೇಕೆನ್ನುವ ಆಸಕ್ತಿ ಮತ್ತು ಕಳಕಳಿ ಇದೆಯಲ್ಲವೇ? ಅದನ್ನು ನಾವು ಮೆಚ್ಚುತ್ತೇವೆ.

(ಮುಂದು)

369/22-03-2017/4-50/bkp-bns

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು. . )**

ಆದರೆ, ಅದು ಬರೀ ನಿಮ್ಮ ಭಾವನೆಯಾಗಿ, ನಿಮ್ಮ ಹತ್ತಿರ ಮಾತ್ರ ಉಳಿದುಕೊಳ್ಳಬಾರದು. ಭಾವನೆಯಾಗಿ ಉಳಿದರೆ ಏನು ಲಾಭವಾಗುತ್ತದೆ? ಅದಕ್ಕೆ ನಮ್ಮ ಸಹಕಾರ ಬೇಕೆಂದು ಕೇಳುತ್ತೀರಿ, ನಾವು ಏನು ಬೇಕಾದರೂ ಸಹಕಾರವನ್ನು ಕೊಡುತ್ತೇವೆ. ಅದರಲ್ಲಿ ಏನೂ ಅನುಮಾನವಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಬಹಳ ಆಸಕ್ತಿಯಿಂದ ಟೇಬಲ್ ಗುದ್ದಿದ್ದಾರೆ. ಸಂತೋಷ ನನಗೆ. 2013-14ನೇ ಸಾಲಿನ ಆಯವ್ಯಯದಲ್ಲಿ ಏನು ಹೇಳಲಾಗಿದೆ ಎಂದರೆ "ಪ್ರತಿ ಜಿಲ್ಲೆಯ ಒಂದು ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕವೊಂದನ್ನು ಸ್ಥಾಪಿಸಲಾಗುವುದು" ಎಂದು ಹೇಳಿದ್ದೀರಿ. ಈಗ ನಾವು 2017-18ನೇ ಸಾಲಿನಲ್ಲಿದ್ದೇವೆ. ಪ್ರಸ್ತುತ 20 ಜಿಲ್ಲೆಯ ಆಸ್ಪತ್ರೆಗಳು, 3 ಪ್ರಮುಖ ಆಸ್ಪತ್ರೆಗಳು ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಸಾಲಿನಲ್ಲಿ ಉಳಿದ 114 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದ್ದೀರಿ. ಈ ಬಜೆಟ್‌ಗೆ ಏನಾದರೂ ಬೆಲೆ ಇರಬೇಕಲ್ಲವೇ? ನೀವು ಇದಕ್ಕೆ ದುಡ್ಡು ಕೊಟ್ಟಿಲ್ಲವೆಂದು ನಾನು ಹೇಳುತ್ತಿಲ್ಲ. 114 ತಾಲ್ಲೂಕುಗಳಲ್ಲಿ ಈ ಘಟಕಗಳು ಇಲ್ಲ. (2013-14ನೇ ಸಾಲಿನ ಬಜೆಟ್) ಇದು ನಿಮ್ಮ ಮೊದಲನೆ ಬಜೆಟ್. 2017-18ನೇ ಸಾಲಿನ ಬಜೆಟ್ ಸೇರಿದಂತೆ ಎರಡೂ ಬಜೆಟ್ ಪುಸ್ತಕಗಳು ನನ್ನ ಕೈಯಲ್ಲಿ ಇದೆ. ಈ ಬಜೆಟ್‌ನ ಭಾಷಣಕ್ಕೂ ಇದಕ್ಕೂ . . . ನಾನು ನಿಮ್ಮ ಮೇಲೆ ಅಪಾದನೆಯನ್ನು ಹಾಕುವುದಿಲ್ಲ. ನಾನು ಸರ್ಕಾರದ ಮೇಲೆ ಅಪಾದನೆಯನ್ನು ಹಾಕುತ್ತಿದ್ದೇನೆ. ಮಂತ್ರಿಗಳು ಬರುತ್ತಾರೆ, ಮಂತ್ರಿಗಳು ಹೋಗುತ್ತಾರೆ. ಅದಕ್ಕೆ ನಾನು ಹೇಳುತ್ತಿರುವುದೇನೆಂದರೆ, ಏನು ನಿಮ್ಮ ಅಪೇಕ್ಷೆ ಇದೆ, ಇದು ಅಪೇಕ್ಷೆಯಾಗಿ ಉಳಿಯಬಾರದು. ತಾವು ಒಂದು ಮಾತನ್ನು ಹೇಳಿದಿರಿ. ಯಶಸ್ವಿನಿ ಯೋಜನೆಗೆ ಸಂಬಂಧಪಟ್ಟಂತೆ ನಮ್ಮನ್ನೆಲ್ಲಾ ಕರೆದು ಕೇಳಿ, ನಿಮಗೆ ಗೊತ್ತಿರುವಂತೆ ಕರ್ನಾಟಕದಲ್ಲಿರುವಂತಹ ತಜ್ಞರು, ಅನೇಕ service motive ಇರುವ ಆಸ್ಪತ್ರೆಗಳಿವೆ. ಅದರಲ್ಲಿ ತಜ್ಞ ವೈದ್ಯರುಗಳು ಸಹ ಇದ್ದಾರೆ. ದಯವಿಟ್ಟು ಅವರನ್ನೂ ಸಹ ಕರೆಯಿರಿ. ನಾನು ಅನೇಕ ವರ್ಷಗಳಿಂದ ನೋಡುತ್ತಿದ್ದೇನೆ. ಸರ್, ಒಳ್ಳೆಯ Health Minister ತನ್ನಿ ಎಂದು ಬಹಳ ಜನರು ಹೇಳುತ್ತಾರೆ. ಅವರನ್ನು ಆ Health

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Ministers ಹತ್ತಿರ ಕರೆದುಕೊಂಡು ಹೋಗಿ ಮಾತನಾಡಿಸಿದ್ದೇನೆ. ಆ Health Ministers ಗೆ ಅವರು ಏನು ಹೇಳುತ್ತಿದ್ದಾರೆಂದು ಅರ್ಥವೇ ಆಗುವುದಿಲ್ಲ. ನಿಮಗೆ ಸಾಕಷ್ಟು ಅನುಭವ ಇದೆ. ಅದಕ್ಕೋಸ್ಕರ ನಾನು ವಿವರಕ್ಕೆ ಹೋಗುವುದಿಲ್ಲ.

ನಾನು ಸರ್ಕಾರಿ ಆಸ್ಪತ್ರೆ ಬಗ್ಗೆ ಹೇಳಿದೆ. ನಾನು ತುಂಬಾ ನೊಂದು ಹೇಳುತ್ತಿದ್ದೇನೆ. ಅವುಗಳು ನರಕದ ಕಚೇರಿಗಳೆಂದು ಹೇಳುತ್ತಿದ್ದೇನೆ. ಅವುಗಳನ್ನು ಬದಲಾವಣೆ ಮಾಡಲಿಕ್ಕೆ ನಿಮಗೆ ಆಸಕ್ತಿ ಇದೆ. ಆ ಡಾಕ್ಟರ್‌ಗಳ ಮನಸ್ಸಿನ ಭಾವನೆಗಳನ್ನು ವ್ಯತ್ಯಾಸ ಮಾಡುವ ದಿಕ್ಕಿನಲ್ಲಿ ಏನು plan ಮಾಡಬೇಕೋ ಮಾಡಿ. ನಾನು ತುಂಬಾ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಡಾಕ್ಟರ್‌ಗಳ ವರ್ಗಾವಣೆಗೆಂದು ನಾನು ಒಂದೇ ಒಂದು ಪತ್ರವನ್ನೂ ಸಹ ನಿಮಗೆ ಕಳುಹಿಸುವುದಿಲ್ಲ. ಕಳುಹಿಸಿದರೆ ತಾನೇ ಇವರು ಮಾಡದೇ ಇರುವುದಕ್ಕೆ? ನಾನು ಪತ್ರವನ್ನು ಕಳುಹಿಸುವುದಿಲ್ಲವೆಂದು ಹೇಳಿದೆ. ನೀವು ಒಳ್ಳೆಯ ಕೆಲಸ ಮಾಡಿಕೊಂಡು ಹೋಗಬೇಕೆಂದು ತೀರ್ಮಾನ ಮಾಡಿಕೊಂಡ ಮೇಲೆ ನಾನು ಏತಕ್ಕೆ ನಿಮಗೆ ಅಡ್ಡ ಬರಲಿ? ನಿಮಗೆ ಸಹಕಾರ ಕೊಡಬೇಕಾಗಿರುವುದು ನಮ್ಮ ಡ್ಯೂಟಿ. ನೀವು ಆ ದಿಕ್ಕಿನಲ್ಲಿ ಯಾವ್ಯಾವ ಆಸ್ಪತ್ರೆಗೆ ಯಾರ್ಯಾರನ್ನು ಕಳುಹಿಸಬೇಕೆಂದು ನಿಮಗೆ ಗೊತ್ತಿರುತ್ತದೆ. ನೀವು ಅದನ್ನು ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ನೀವು ಪತ್ರವನ್ನು ಕಳುಹಿಸಿಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರು ಬೇಡವೆಂದು ಹೇಳಿದರು, ಅದಕ್ಕೆ ಕಳುಹಿಸಲಿಲ್ಲ. ಬೇಕೆಂದರೆ ಕಳುಹಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಏನಾದರೂ ಪತ್ರ ಕಳುಹಿಸಿದ್ದೀರೋ ಇಲ್ಲವೋ ಎನ್ನುವುದು ಗೊತ್ತಾಗಲಿ ಎಂದು ಕೇಳಿದೆ ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೋಡಿ, ಪತ್ರ ಕಳುಹಿಸದೇ ಇರುವಂತಹ ಶಾಸಕನೇ ಇರುವುದಿಲ್ಲ. ನೂರು ಕಳುಹಿಸಿರುತ್ತೇವೆ, ಸಾವಿರ ಕಳುಹಿಸಿರುತ್ತೇವೆ, ಅದು ನೆನಪು ಇರುತ್ತದೆಯೇ? ಬಂದವರಿಗೆಲ್ಲಾ ಪತ್ರ ಕೊಟ್ಟಿರುತ್ತೇವೆ. ಅವನು ಕಳ್ಳನೋ, ಸುಳ್ಳನೋ ಅದು ನಮಗೆ ಗೊತ್ತಿರುವುದಿಲ್ಲ. ನಮಗೆ ಓಟು ಬೇಕು. ಇರುವ ವಿಚಾರ. ಸತ್ಯವನ್ನೇ ನಾನು ಜೀವನ ಪೂರ್ತಿ ಹೇಳುತ್ತಿರುವುದಾಗಿದೆ. ಇಡೀ ಜೀವನ ನೀವು ಸುಳ್ಳು ಹೇಳುತ್ತೀರಿ. ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ. . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಒಂದು ನಿಮಿಷ, ಶ್ರೀಯುತ ಈಶ್ವರಪ್ಪನವರೆ, ಆ ಕೊನೆಯ ವಾಕ್ಯವನ್ನು ಹೇಳಿ. ನೋಡಿ, ನೀವು ಹಿರಿಯರಿದ್ದೀರಿ. ಆದರೆ, ಜೀವನದಲ್ಲಿ ಎಲ್ಲಾ ಸತ್ಯವನ್ನು ಹೇಳುತ್ತಿದ್ದೇನೆ ಎನ್ನುವ ಹಾಗೆ ಇದ್ದರೆ ಬಹುಶಃ ನಿಮ್ಮ ಘಟನಾವಳಿಗಳನ್ನು ನೋಡಿದರೆ . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಬಿಡಿ, ಎಲ್ಲೆಲ್ಲೋ ಹೋಗುವುದು ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:-** ಒಂದು ನಿಮಿಷ ಕೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲ, ಕೇಳುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ನನಗೆ ಸುಳ್ಳು ಹೇಳುವುದು ಎಂದು ನೀವು ಹೇಳಿದಿರಿ. ಸುಳ್ಳಿನ ಕಂತೆ ಎಂದರೆ ಈಶ್ವರಪ್ಪ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಎಲ್ಲಿಂದ ಎಲ್ಲಿಗೋ ಹೋಗುವುದು ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ಭ್ರಷ್ಟ ಹಣದ counting machine . . .ಇಟ್ಟಿರುವುದು ಎಂದರೆ ಈಶ್ವರಪ್ಪ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಯಿತು, very good. ತುಂಬಾ ಸಂತೋಷ.

**ಶ್ರೀ ವಿ.ಎಸ್.ಉಗ್ರಪ್ಪ:-** ಮತ್ತೆ ಏನು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಯಿತು, ಒಪ್ಪಿಕೊಂಡೆ.

**ಶ್ರೀ ವಿ.ಎಸ್.ಉಗ್ರಪ್ಪ:-** ನೋಡಿ, ನೀವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಒಪ್ಪಿಕೊಂಡಾಯಿತು. ಮತ್ತೆ ಚರ್ಚೆ ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:-** ಈ ರೀತಿಯ ರಾಜಕಾರಣಕ್ಕೆ ಏತಕ್ಕೆ ಬೆಲೆ ಬರುವುದಿಲ್ಲವೆಂದರೆ ಓಟಿಗೋಸ್ಕರ, ಅವನು ಕಳ್ಳನಾದರೂ ಕೊಡುತ್ತೇವೆ ಎಂದರೆ ಮತ್ತೇನು ಹೇಳಬೇಕು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಯಿತು, ನೀವು ಸತ್ಯ ಹರಿಶ್ಚಂದ್ರ . . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ. ವಿ.ಎಸ್.ಉಗ್ರಪ್ಪ:-** ಕಾನೂನನ್ನು ಗಾಳಿಗೆ ತೂರಿ. . ಭಾರತೀಯ ಜನತಾ ಪಾರ್ಟಿಯವರ mind set ಏನು ಎನ್ನುವುದಕ್ಕೆ ಈಶ್ವರಪ್ಪನವರ . . . ಇದಾಗಿದೆ.

**ಶ್ರೀ ಭಾನು ಪ್ರಕಾಶ್:-** ನೀವು ಬಿಜೆಪಿ ಬಗ್ಗೆ ಹೇಳಬಾರದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮತ್ತೆ ಇನ್ನು ಏನು ಹೇಳಬೇಕು? ಓಟಿಗೋಸ್ಕರ ನಾವು ಏನು ಬೇಕಾದರೂ ಕೊಡಬೇಕಾಗುತ್ತದೆ ಎಂದರೆ . . . ನೀವು leader ಆಗಿ ಈ ರೀತಿ ಮಾತನಾಡುತ್ತಿದ್ದೀರಿ?

(ಗೊಂದಲ)

**ಉಪ ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಭಾನುಪ್ರಕಾಶ್:-** ಶ್ರೀಯುತ ಉಗ್ರಪ್ಪನವರು ಪಾರ್ಟಿ ಬಗ್ಗೆ ಹೇಳಬಾರದು.

**ಉಪ ಸಭಾಪತಿಯವರು:-** ಶ್ರೀಯುತ ಉಗ್ರಪ್ಪನವರೆ, ಶ್ರೀಯುತ ಭಾನು ಪ್ರಕಾಶ್‌ರವರೆ, ಶ್ರೀಯುತ ಸೋಮಣ್ಣ ಬೇವಿನಮರದರವರೆ, ಶ್ರೀಯುತ ಪೂಜಾರ್‌ರವರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಕುಳಿತುಕೊಳ್ಳಿ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:-** ಶ್ರೀಯುತ ಭಾನುಪ್ರಕಾಶ್‌ರವರೆ, ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ generic ಔಷಧಿಗಳ ಮಳಿಗೆ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಇದೇ ರೀತಿಯಲ್ಲಿ ಕಳೆದ ಬಾರಿಯೂ ಆಗಿದೆ. ಮತ್ತೆ, ನಾನು ಏನು ಹೇಳುತ್ತೇನೆಂದರೆ ಇದು ಬರೀ ಬಜೆಟ್‌ನಲ್ಲಿ ಬಂದರೆ ಸಾಕಾಗುವುದಿಲ್ಲ. ಅದನ್ನು ಹೇಗೆ ಮಾಡಬೇಕು, ಅದರ ಬಗ್ಗೆ ಆಸಕ್ತಿ ಇದೆಯೋ ಇಲ್ಲವೋ ಅಥವಾ generic ಔಷಧಿ ಮಳಿಗೆಗಳನ್ನು ತೆಗೆಯದೇ ಇರುವ ರೀತಿಯಲ್ಲಿ ಈ ದೊಡ್ಡ ದೊಡ್ಡ ಔಷಧಿ ಕಂಪನಿಗಳ ಪ್ರಭಾವ ಏನಾದರೂ ಇದೆಯೇ? ಇದರಷ್ಟು ಬಡವರಿಗೆ ಅನುಕೂಲ ಮಾಡಿಕೊಡುವಂತಹದ್ದು ಬೇರೆ ಇನ್ನೊಂದು ಇಲ್ಲ. ಕನಿಷ್ಟ ಸರ್ಕಾರಿ ಆಸ್ಪತ್ರೆಗಳಲ್ಲಿಯಾದರೂ ಉಪಯೊಗ ಮಾಡಿ. ಬಡವರು ಬದುಕುತ್ತಾರೆ. ಇಲ್ಲದಿದ್ದರೆ, ಏನಾಗುತ್ತದೆ ಎಂದರೆ ಆಸ್ಪತ್ರೆಗಳಲ್ಲಿ ಔಷಧಿ ಇಲ್ಲವೆಂದು ಹೇಳಿ ಡಾಕ್ಟರ್‌ಗಳು ಔಷಧಿ ಚೀಟಿ ಬರೆದುಕೊಡುತ್ತಾರೆ. ಚೀಟಿ ಬರೆದುಕೊಟ್ಟ ನಂತರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವನು ಏನು ಮಾಡಬೇಕು? ಅವನ ಹತ್ತಿರ ದುಡ್ಡಿಲ್ಲವೆಂದು ಹೇಳಿ ಅವನು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತಾನೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್;–** ವಿರೋಧ ಪಕ್ಷದ ನಾಯಕರು ಗಮನಿಸಬೇಕು. ವಿರೋಧ ಪಕ್ಷದ ನಾಯಕರು ಬಹಳ ಜಾಣರಿದ್ದಾರೆ. ನನ್ನನ್ನು ಚುಚ್ಚಿ ಮಾತನಾಡಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇಲ್ಲ, ಇಲ್ಲ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಇಲ್ಲ. I am happy about it. ನಾವು ಈಗಾಗಲೇ ಒಂದು ಸರ್ಕಾರಿ ಆಜ್ಞೆಯನ್ನು ಕಳುಹಿಸಿದ್ದೇವೆ. ನಮ್ಮ ಸರ್ಕಾರಿ ವೈದ್ಯರುಗಳು ಸರ್ಕಾರಿ ಆಸ್ಪತ್ರೆಗೆ ಹೋಗುವಂತಹ ನಮ್ಮ ರೋಗಿಗಳಿಗೆ ಔಷಧಿ ಚೀಟಿಯನ್ನು ಬರೆದು ಕೊಡುವಂತಿಲ್ಲ. ನಾವು ಔಷಧಿಗಳ ಸರಬರಾಜು ಏನಿದೆ, ಅದನ್ನು ನಾವು ಆನ್‌ಲೈನ್‌ನಲ್ಲಿ ಮಾಡುತ್ತಿದ್ದೇವೆ. ಪ್ರತಿ ತಿಂಗಳು ನಮ್ಮ ಆಸ್ಪತ್ರೆಯ incharge ವೈಧ್ಯಾದಿಕಾರಿಗಳು ಯಾರಿರುತ್ತಾರೆ, ಹೊರ ರೋಗಿಗಳ, ಒಳ ರೋಗಿಗಳ ಅಗತ್ಯತೆಯ ಆಧಾರವನ್ನಿಟ್ಟುಕೊಂಡು Indent ಮಾಡಬೇಕು. ನಾನು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಾಗ ಸ್ವಲ್ಪ ಹೆಚ್ಚು ಕಡಿಮೆ 100 ಕೋಟಿ ರೂಪಾಯಿಗಳಷ್ಟು date expiry ಆಗಿದ್ದ ಔಷಧಿ ಇತ್ತು. ಅವಧಿ ಮೀರಿದ ಔಷಧಿ ಇತ್ತು. ಅದನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಿದ್ದೇವೆ. Generic medicine ವಿಚಾರದಲ್ಲಿ Red Cross Society ನವರು ಬಂದು, ನಮಗೆ ಮೊದಲ ಆದ್ಯತೆ ಕೊಡಬೇಕೆಂದರು. Red Cross Society ಯವರ ಬಗ್ಗೆ ಯಾರು ಅನುಮಾನ ಪಡಬೇಕಾಗಿಲ್ಲ. ಅವರು ಬಂದು, ಕೊನೆಯದಾಗಿ 20 ಅಷ್ಟೇ ಮಾಡುತ್ತೇವೆಂದು ಹೇಳಿದರು. ಎಂ.ಎಸ್.ಐ.ಎಲ್. ಮುಖಾಂತರ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡುತ್ತಿದ್ದೇವೆ, everything is ready. Stalls ಎಲ್ಲಾ ಮಾಡುತ್ತಿದ್ದೇವೆ, ಕೆಲವು ಕಡೆ ಪ್ರಾರಂಭವಾಗಿ ಬಿಟ್ಟಿದೆ. ಖಂಡಿತವಾಗಿಯೂ ಸಹ ನಿಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ. ನಾವೂ ಸಹ ಅದೇ ದಿಕ್ಕಿನಲ್ಲಿದ್ದೇವೆ. ಯಾರದ್ದೂ ಸಹ ನಮ್ಮ ಮೇಲೆ ಪ್ರಭಾವ ಸಾಧ್ಯವಿಲ್ಲ. ನೀವು ಮಾತ್ರ ನಮ್ಮ ಮೇಲೆ ಪ್ರಭಾವ ಬೀರುತ್ತಿದ್ದೀರಿ. ಇದು ಒಳ್ಳೆಯ ಪ್ರಭಾವ. ಇದಕ್ಕೆ ನಾನು ಒಳಗಾಗುತ್ತೇನೆ. ಯಾರೂ ಸಹ ನನ್ನ ಮೇಲೆ ಪ್ರಭಾವ ಬೀರಲಿಕ್ಕೆ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇನ್ನು ನಾನು ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ, ಸರ್ಕಾರಿ ಆಸ್ಪತ್ರೆಗಳನ್ನು ಸುಧಾರಣೆ ಮಾಡುತ್ತೇವೆಂದು ಹೇಳಿ ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೊರಗಡೆಯೂ ಸಹ ತಾವು ಹೇಳುತ್ತಾ ಬಂದಿದ್ದೀರಿ. ಶ್ರೀಯುತ ರಮೇಶ್ ಕುಮಾರ್‌ರವರು ಎದ್ದು ನಿಂತರು ಎಂದರೆ ಸಾಕಷ್ಟು ಮಾತನಾಡುತ್ತಾರೆ. ಸಾಕಷ್ಟು ಸಮಯವನ್ನು ಸಹ ತೆಗೆದುಕೊಳ್ಳುತ್ತಾರೆ. ಅದು ಬರೀ ಉಪನ್ಯಾಸವಾಗಬಾರದು. ಏಕೆಂದರೆ, ಈ ಸರ್ಕಾರಿ ಆಸ್ಪತ್ರೆಗಳಿಗೆ ರೋಗಿಗಳನ್ನು ಸೇರಿಸಲಿಕ್ಕೆ ಅವರು ಏತಕ್ಕೆ ಇಷ್ಟಪಡುವುದಿಲ್ಲವೆಂದರೆ ಅಲ್ಲಿಗೆ ಹೋದರೆ ಅವನು ವಾಪಸ್ಸು ಬರುತ್ತಾನೋ ಇಲ್ಲವೆಂದು ಹೇಳಿ ಸೇರಿಸುವುದಿಲ್ಲ. ಅನೇಕರು ನಮಗೆ ಫೋನ್ ಮಾಡುತ್ತಾರೆ. ಸರ್, ಸರ್ಕಾರಿ ಆಸ್ಪತ್ರೆಗೆ ಸೇರಿಸಬೇಕೆಂದು ಹೇಳುತ್ತಾರೆ. ನಿಮ್ಮ ಆಸಕ್ತಿಯನ್ನು ನೋಡಿ ನಾನು ಸಹ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ, ಜನಕ್ಕೆ ನಂಬಿಕೆ ಇಲ್ಲ. ಸರ್ಕಾರಿ ಆಸ್ಪತ್ರೆಗೆ ಹೋದರೆ ಬದುಕಿ ಬರುತ್ತಾನೋ ಇಲ್ಲವೆಂದು ಅವರಿಗೆ ನಂಬಿಕೆ ಇಲ್ಲ. ಬೇಡ ಸರ್, ಯಾವುದಾದರೂ ಖಾಸಗಿ ಆಸ್ಪತ್ರೆ ಇದ್ದರೆ ಹೇಳಿ ಸರ್ ಎಂದು ಕೇಳುತ್ತಾನೆ. ಬಿಲ್ ಕಡಿಮೆ ಮಾಡಿಸಿ ಸರ್ ಎಂದು ಕೇಳುತ್ತಾನೆ.

**ಮುಂದು. . .**

(370) 22.03.17 SPR-GR 5.00

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಇದು ನಿಮಗೂ ಅನುಭವವಾಗಿರಬೇಕು. ಅದಕ್ಕಾಗಿಯೇ ನಾನು ಜಾಸ್ತಿ ವಿವರಕ್ಕೆ ಹೋಗುವುದಿಲ್ಲ. ಆರೋಗ್ಯ ಇಲಾಖೆಯನ್ನು ಸುಧಾರಣೆ ಮಾಡುವ ದಿಕ್ಕಿನಲ್ಲಿ ಏನೇನು ಪ್ರಯತ್ನಗಳನ್ನು ಮಾಡಬೇಕು ದಯವಿಟ್ಟು ಅವುಗಳನ್ನೆಲ್ಲಾ ಮಾಡಿ. ನಾನು ಸಾಕಷ್ಟು ಅಂಶಗಳನ್ನು ಬರೆದುಕೊಂಡು ಬಂದಿದ್ದೇನೆ. ನಿಮಗೆ ಹೆಚ್ಚಿನ ಅನುಭವವಿರುವುದರಿಂದ ವಿವರಗಳಿಗೆ ಜಾಸ್ತಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಮತ್ತೊಂದು ವಿಚಾರವೇನೆಂದರೆ . .

**ಉಪಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ಬೇಗ ಮುಗಿಸಿ, ಏಕೆಂದರೆ ತಾವು ಐದು ಗಂಟೆಗಳ ಸಮಯಾವಕಾಶವನ್ನು ತೆಗೆದುಕೊಂಡಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನನ್ನ ಭಾಷಣದ ಅವಧಿಯಲ್ಲಿ ಶ್ರೀ ರಮೇಶ್ ಕುಮಾರ್‌ರವರು ಒಂದು ಗಂಟೆಗಳ ಸಮಯಾವಕಾಶವನ್ನು ತೆಗೆದುಕೊಂಡಿದ್ದಾರೆ.

**ಉಪಸಭಾಪತಿಯವರು:-** ಇಲ್ಲಿ ಎಲ್ಲವೂ ಕೂಡ ದಾಖಲೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇನ್ನು ಐದು ನಿಮಿಷಗಳ ಕಾಲಾವಕಾಶವನ್ನು ಮಾತ್ರವೇ ನಾನು ತೆಗೆದುಕೊಳ್ಳುತ್ತೇನೆ. ನಿಮಗೆ ಗೊತ್ತಿರುವಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 16/05/2013 ರಂದು ವೈಸ್ ಚಾನ್ಸಲರ್‌ರವರ ನೇತೃತ್ವದಲ್ಲಿ ನಾಲ್ಕು ಜನ ಸದಸ್ಯರುಗಳಾದ ಶ್ರೀ ಎಂ.ಜಿ.ಕೃಷ್ಣನ್, ಶ್ರೀ ಬಿ.ಎಸ್.ವಿಶ್ವನಾಥ, ಆರ್ಥಿಕ ಇಲಾಖೆಯ ಆರ್ಥಿಕಾಧಿಕಾರಿ ಶ್ರೀ ಕೆ.ಜೆ.ಸುರೇಶ್‌ರವರು ಹಾಗೂ ಮತ್ತೊಬ್ಬರು ಸದಸ್ಯರಾಗಿರುವಂತಹ ಒಂದು ಸಮಿತಿಯು ನೇಮಕಗೊಂಡಿತ್ತು. ಈ ನಾಲ್ಕು ಜನ ಸದಸ್ಯರು 95 ಲಕ್ಷ ರೂಪಾಯಿಗಳಷ್ಟು ಮುದ್ರಣ ವಿಚಾರಕ್ಕೆ ಮುಂಗಡ ಹಣವನ್ನು ಕೊಟ್ಟಿದ್ದು ತಪ್ಪು, ಇವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಕರ್ನಾಟಕ ರಾಜ್ಯಪಾಲರ ಸಚಿವಾಲಯದಿಂದ ವೈಸ್ ಚಾನ್ಸಲರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು ರವರಿಗೆ ಪತ್ರವು ಹೋಗಿದೆ. ಆದರೆ, ಮೂರು ಸದಸ್ಯರುಗಳ ವಿರುದ್ಧ ಪ್ರಥಮ ವರ್ತಮಾನ ವರದಿಯು ದಾಖಲಾಗಿದ್ದು, ಇನ್ನೋರ್ವ ಸದಸ್ಯರಾದ ಶ್ರೀ ಕೆ.ಜೆ.ಸುರೇಶ್‌ರವರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇವರ ಹಿಂದೆ ಯಾರು ಇದ್ದಾರೆ? ರಾಜ್ಯಪಾಲರು ಪತ್ರವನ್ನು ಬರೆದರೂ ಕೂಡ ಏಕೆ ಶ್ರೀ ಕೆ.ಜೆ.ಸುರೇಶ್‌ರವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ? ಈ ಘಟನೆಯನ್ನು ನಾವು ಏನೆಂದು ತಿಳಿದುಕೊಳ್ಳಬೇಕು? ದಿನಾಂಕ 20/08/2015 ರಂದು ಏಳು ಅಧಿಕಾರಿಗಳ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದಾರೆ. ಉದ್ದೇಶಪೂರ್ವಕವಾಗಿ ಕುಲಪತಿಗಳಾದ ಪ್ರೊಫೆಸರ್ ಶಿವಲಿಂಗಯ್ಯರವರು ಪ್ರೊಫೆಸರ್ ಶ್ರೀ ಕೆ.ಜೆ.ಸುರೇಶ್‌ರವರ ಹೆಸರನ್ನು ಕೈಬಿಟ್ಟಿದ್ದಾರೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಸದರಿಯವರ ವಿರುದ್ಧವೂ ಪ್ರಕರಣವನ್ನು ದಾಖಲು ಮಾಡಬೇಕು. ಮತ್ತೊಂದು ವಿಚಾರವೇನೆಂದರೆ, ಏಕೆ ಇಲ್ಲಿಯವರೆಗೆ ಪ್ರಕರಣವನ್ನು ದಾಖಲು ಮಾಡಿಲ್ಲ? ಇದಕ್ಕೆ ಸಂಬಂಧಪಟ್ಟವರ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು.

ರಾಜ್ಯದ ಎಲ್ಲಾ 17 ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಅವ್ಯವಹಾರದ ಬಗ್ಗೆ ತನಿಖಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ ಹಾಗೂ 15 ದಿನಗಳಲ್ಲಿ ವರದಿ ಕೊಡಬೇಕೆಂದು ಸೂಚನೆಯನ್ನೂ ಸಹ ಕೊಟ್ಟಿದ್ದಾರೆ. ಇದು ಬಹಳ ಕಡೆ ಜಾರಿಯಾಗಿಲ್ಲ. ಏಕೆ ವರದಿಗಳು ಬಂದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯ ಹುದ್ದೆಯಲ್ಲಿ ಹಿರಿಯ ಪ್ರೊಫೆಸರ್‌ಗಳನ್ನು ನೇಮಕ ಮಾಡಬೇಕು. ಶಿಕ್ಷಣ ಇಲಾಖೆಯ ಬಗ್ಗೆ ನಿಮಗೆ ಸಾಕಷ್ಟು ವಿಚಾರಗಳು ತಿಳಿದಿವೆ. ಹಿರಿಯ ಪ್ರೊಫೆಸರ್‌ನ್ನು ನೇಮಕ ಮಾಡುವ ಸ್ಥಳದಲ್ಲಿ ಒಬ್ಬ ಸಾಮಾನ್ಯ ಗುಮಾಸ್ತನನ್ನು ನೇಮಕ ಮಾಡಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಕುವೆಂಪು ವಿಶ್ವವಿದ್ಯಾನಿಲಯವು ಸಂಪೂರ್ಣವಾಗಿ ಆ ಗುಮಾಸ್ತನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಂತ್ರಣದಲ್ಲಿದೆ. ಆ ವ್ಯಕ್ತಿಯನ್ನು ಸದರಿ ಸ್ಥಳದಿಂದ ವರ್ಗಾವಣೆ ಮಾಡಬೇಕೆಂದು ಅನೇಕ ಪತ್ರಗಳು ಬಂದಿದ್ದರೂ ಕೂಡ ಇವತ್ತಿನವರೆಗೆ ಸದರಿ ವ್ಯಕ್ತಿಯನ್ನು ವರ್ಗಾವಣೆ ಮಾಡಿರುವುದಿಲ್ಲ. ಆ ಭ್ರಷ್ಟ ಗುಮಾಸ್ತ ಕುವೆಂಪು ವಿಶ್ವವಿದ್ಯಾನಿಲಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾನೆ. ಹೀಗಾಗಿ ತಕ್ಷಣವೇ ಈ ವಿಚಾರದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯ ವಿಚಾರವೇನೆಂದರೆ, ನಮ್ಮ ವಿಧಾನ ಪರಿಷತ್ತಿನಲ್ಲಿ ನಾವು ಕಾನೂನಿಗೆ, ನೀತಿ-ನಿಯಮಗಳಿಗೆ ಸಂಪೂರ್ಣವಾಗಿ ಬೆಲೆಯನ್ನು ಕೊಡುತ್ತಾ ಬಂದಿದ್ದೇವೆ. ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಮಂಡಿಸಬೇಕೆಂದು ನ್ಯಾಯಾಲಯವೂ ಸಹ ಹೇಳಿದೆ. ಮಾನ್ಯ ಸಭಾಪತಿಗಳು ಕೂಡ ಎರಡೆರಡು ಬಾರಿ ಆ ಸ್ಥಾನದಿಂದ ರೂಲಿಂಗ್‌ನ್ನು ಕೊಟ್ಟಿದ್ದಾರೆ. ಸರ್ಕಾರವು ಸದರಿ ವರದಿಯ ಮಂಡನೆಯನ್ನು ಇವತ್ತು-ನಾಳೆ ಮಾಡುತ್ತೇವೆಂದು ಇವತ್ತಿನವರೆಗೂ ಹೇಳಿಕೊಂಡು ಬಂದಿದೆ. ಆದರೆ ಇವತ್ತಿನವರೆಗೆ ವರದಿಯನ್ನು ಏಕೆ ಮಂಡನೆ ಮಾಡಿಲ್ಲವೆಂದು ಗೊತ್ತಾಗುತ್ತಿಲ್ಲ. ಅನೇಕ ನಾಯಕರುಗಳು ವಕ್ಫ್ ಮಂಡಳಿಯ ಸ್ವತ್ತನ್ನು ಲೂಟಿ ಮಾಡಿರುವುದರಿಂದ, ವರದಿಯನ್ನು ಮಂಡಿಸುವುದರಿಂದ ಅವರುಗಳಿಗೆ ತೊಂದರೆಯುಂಟಾಗುತ್ತದೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಸದರಿ ವರದಿಯನ್ನು ಸರ್ಕಾರವು ಮಂಡನೆ ಮಾಡುತ್ತಿಲ್ಲ. ವಕ್ಫ್ ಮಂಡಳಿಗೆ ಸೇರಿದ 54,000 ಎಕರೆಯಷ್ಟು ಆಸ್ತಿಯು ದುರ್ಬಳಕೆಯಾಗಿದೆ. ಸರ್ಕಾರದ ಮಾರ್ಗಸೂಚಿಯಂತೆ, 2,30,000 ಕೋಟಿ ರೂಪಾಯಿಗಳಷ್ಟು ಆಸ್ತಿ ವಕ್ಫ ಮಂಡಳಿಯದ್ದಾಗಿರುತ್ತದೆ. ಸದರಿ ಸ್ವತ್ತಿನ ಮಾರುಕಟ್ಟೆಯ ಬೆಲೆಯು 15,00,000 ಕೋಟಿ ರೂಪಾಯಿಗಳಾಗಿರುತ್ತದೆ. ಸದನದಲ್ಲಿ ಮಾನ್ಯ ಸಭಾಪತಿಗಳು ರೂಲಿಂಗ್‌ನ್ನೂ ಕೊಟ್ಟಿದ್ದರೂ ಸಹ ಸರ್ಕಾರವು ಸದರಿ ವರದಿಯನ್ನು ಮಂಡನೆ ಮಾಡಿರುವುದಿಲ್ಲ. ನ್ಯಾಯಾಲಯದ ಆದೇಶವಿದ್ದರೂ ಸಹ ಸದರಿ ವರದಿಯನ್ನು ಸರ್ಕಾರವು ಮಂಡನೆ ಮಾಡುವುದಿಲ್ಲ ಎಂದಾದರೆ ಈ ಸರ್ಕಾರವನ್ನು ನಾವು ಏನೆಂದು ಕರೆಯಬೇಕು? ಹೊರಗಡೆ ಹೋರಾಟ ಮಾಡುವುದು ಬೇರೆ ವಿಚಾರ. ಆದರೆ, ನಮಗೆ ಬೇರೆ ದಾರಿ ಇಲ್ಲದೇ ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡುವುದೇನೆಂದರೆ, 15,00,000 ಕೋಟಿ ರೂಪಾಯಿಗಳಷ್ಟಿರುವ ವಕ್ಫ್ ಸ್ವತ್ತಿನಲ್ಲಿ ನಡೆದಿರುವ ಅವ್ಯವಹಾರದಲ್ಲಿ ಘಟಾನುಘಟಿ ನಾಯಕರುಗಳು ಭಾಗಿಯಾಗಿದ್ದಾರೆ. ಅವರುಗಳೆಲ್ಲರ ಹೆಸರುಗಳು ಸದರಿ ವರದಿಯಲ್ಲಿ ನಮೂದಾಗಿವೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಯಾವ ಸರ್ವೇ ನಂಬರ್‌ಗಳಲ್ಲಿ ಎಷ್ಟೆಷ್ಟು ಸ್ವತ್ತನ್ನು ಒತ್ತುವರಿ ಮಾಡಿದ್ದಾರೆ ಆ ಮಾಹಿತಿಗಳೆಲ್ಲವೂ ಈ ವರದಿಯಲ್ಲಿದೆ. ಹೀಗಾಗಿ ನಾವು ವಿವರಗಳಿಗೆ ಹೋಗುವುದಿಲ್ಲ. ಇದಕ್ಕಾಗಿ ಸಮಯವೂ ಇಲ್ಲ. ದಯವಿಟ್ಟು ಶ್ರೀ ಅನ್ವರ್ ಮಾನಪ್ಪಾಡಿರವರು ರಾಜ್ಯ ಸರ್ಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿರುವ ವರದಿಯನ್ನು ಸಭಾಪತಿಯವರ ರೂಲಿಂಗ್, ನ್ಯಾಯಾಲಯದ ಆದೇಶಗಳ ಹಿನ್ನೆಲೆಯಲ್ಲಿ ತಕ್ಷಣವೇ ಮಂಡನೆ ಮಾಡಬೇಕೆಂದು ಒತ್ತಾಯ ಮಾಡಿ . . .

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಶಿವಮೊಗ್ಗ ಜಿಲ್ಲೆಯಲ್ಲಿ ಏನಾದರೂ ವಕ್ಫ್ ಸ್ವತ್ತು misuse ಆಗಿದೆಯೇ?

**ಉಪಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ಈ ಬಗ್ಗೆ ಚರ್ಚೆ ಮಾಡಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ನನ್ನ ಮಾತನ್ನು ಕೇಳಿ. ರಾಜಕಾರಣ ಮಾಡುತ್ತಿರುವಂತಹ ವ್ಯಕ್ತಿಗಳು ನಾವು.

**ಉಪಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಈ ಕಡೆಗೆ ತಿರುಗಿ ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಿಮ್ಮ ಕಡೆಗೆ ತಿರುಗಿ ಮಾತನಾಡುವುದಕ್ಕೆ ನೀವು ಭ್ರಷ್ಟಾಚಾರವನ್ನು ಮಾಡಿಲ್ಲ. ಮಾನ್ಯ ಸದಸ್ಯರು ಭ್ರಷ್ಟಾಚಾರ ಮಾಡಿರುವ ಬಗ್ಗೆ ಕೇಳಿದ್ದಾರೆ, ಆದ್ದರಿಂದ ಅವರ ಕಡೆಗೆ ತಿರುಗಿ ಮಾತನಾಡುತ್ತಿದ್ದೇನೆ. ಯಾರು ಯಾರು ಏನೇನು ಮಾಡಿದ್ದಾರೆ ಎಂಬ ಅಂಶಗಳ ಬಗ್ಗೆ ಸದರಿ ವರದಿಯಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಬೇರೆ ಇನ್ನೇನು ವಿಶೇಷವಾಗಿ ನಾನು ಹೇಳುತ್ತಿಲ್ಲ. ಬಹಳ ದೊಡ್ಡ ದೊಡ್ಡವರ ಹೆಸರುಗಳು ನಮೂದಾಗಿವೆ. ಅದನ್ನು ಹೇಳುವುದರಿಂದ ನನಗೆ ವೈಯಕ್ತಿಕವಾಗಿ ಏನೂ ಲಾಭವಿಲ್ಲ. ಅವರ ಹೆಸರುಗಳನ್ನು ಹೇಳುವುದರಿಂದ ಅವರನ್ನು ಮತ್ತೊಮ್ಮೆ ಹರಾಜು ಹಾಕಿದ ಹಾಗಾಗುತ್ತದೆ. ಖಂಡಿತವಾಗಿಯೂ ಇದನ್ನು ಬಿಟ್ಟರೆ ನನಗೆ ವೈಯಕ್ತಿಕವಾಗಿ ಲಾಭವಿಲ್ಲ. ಅದಕ್ಕೆ ನಾನು ಇಷ್ಟವೂ ಪಡುವುದಿಲ್ಲ. ನಾನು ಹೇಳುವುದೇನೆಂದರೆ, 54,000 ಎಕರೆಗಳಷ್ಟು ವಕ್ಫ್ ಸ್ವತ್ತು ದುರ್ಬಳಕೆಯಾಗಿದ್ದು, ಇದರ ಮೌಲ್ಯವು 15,00,000 ಕೋಟಿ ರೂಪಾಯಿಗಳಷ್ಟಿರುತ್ತದೆ. ಸದರಿ ಸ್ವತ್ತು ದುರುಪಯೋಗವಾಗಿದೆ ಎಂದು ವರದಿಯಾದ ಮೇಲೂ ಕೂಡ, ಸದರಿ ವರದಿಯನ್ನು ಸರ್ಕಾರವು ಮಂಡನೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಹೀಗಾಗಿ ನಾನು ಕೇಳುತ್ತಿದ್ದೇನೆ. ಒಂದು ವೇಳೆ ಸರ್ಕಾರದವರು ಸದರಿ ವರದಿಯನ್ನು ಮಂಡನೆ ಮಾಡುತ್ತೇವೆಂದು ಒಪ್ಪಿಕೊಂಡಿಲ್ಲವೆಂದಿದ್ದರೆ ನಾನು ಅದನ್ನು ಕೇಳುತ್ತಿರಲಿಲ್ಲ. ಸಭಾಪತಿಯವರು ರೂಲಿಂಗ್‌ನ್ನು ಕೊಟ್ಟಿದ್ದರು ಹಾಗೂ ಸರ್ಕಾರದವರು ಅದನ್ನು ಒಪ್ಪಿಕೊಂಡಿದ್ದಾರೆ. ನಮ್ಮ ವಿಧಾನ ಪರಿಷತ್ತಿಗೆ ನೂರಾ ಹತ್ತು ವರ್ಷಗಳ ಇತಿಹಾಸವಿದೆ ಎಂದು ನಾವು ಹತ್ತತ್ತು ಬಾರಿ ಹೇಳುತ್ತಿರುತ್ತೇವೆ. ಸಭಾಪತಿಯವರ ರೂಲಿಂಗ್‌ಗೆ ಬೆಲೆಯಿಲ್ಲವೆಂದಾದರೆ, ವಿಧಾನ ಪರಿಷತ್ತಿಗೆ ಏನು ಬೆಲೆ ಬರುತ್ತದೆ? ಈ ಕಾರಣಕ್ಕಾಗಿಯೇ ನಾನು ಸದರಿ ವರದಿಯನ್ನು ತಕ್ಷಣವೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸರ್ಕಾರವು ಮಂಡನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಸಾಕಷ್ಟು ಸಮಯಾವಕಾಶವನ್ನು ನನಗೆ ನೀಡಿದ್ದರಿಂದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬುರವರೇ, ನಿಮಗೆ ಎಷ್ಟು ಸಮಯ ಬೇಕಾಗುತ್ತದೆ?

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ 20-25 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ. ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. 2013ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಬಹಳ ನಿರೀಕ್ಷೆಯೊಂದಿಗೆ ಅಧಿಕಾರಕ್ಕೆ ಬಂದಂತಹ ಕಾಂಗ್ರೆಸ್ ಸರ್ಕಾರ ದಿನಾಂಕ 12/07/2013 ರಲ್ಲಿ ತನ್ನ ಮೊದಲನೆಯ ಆಯವ್ಯಯವನ್ನು ಮಂಡನೆ ಮಾಡಿತ್ತು. ಚುನಾವಣಾ ಪೂರ್ವದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಪ್ರಣಾಳಿಕೆಯ ಮೂಲಕ ಆಶ್ವಾಸನೆಗಳನ್ನು ಕೊಟ್ಟಿತ್ತು. ಬಹುತೇಕವಾಗಿ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸುವ ಪ್ರಯತ್ನವಾಗಿ ಸದರಿ ಬಡ್ಜೆಟ್‌ನ್ನು ಮಂಡನೆ ಮಾಡಿತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಂಡನೆ ಮಾಡಿದ ಬಡ್ಜೆಟ್‌ನ ಮೊದಲನೇ ಕಂಡಿಕೆಯನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಜನತೆಯ ಸಂರಕ್ಷಣೆ ನಮ್ಮ ಪ್ರಥಮ ಕರ್ತವ್ಯ. ಜನರ ಅವಶ್ಯಕತೆಗಳ ಈಡೇರಿಕೆ; ಮತ್ತು ಅವರ ಅಗತ್ಯಗಳ ಪೂರೈಕೆ ನಮ್ಮ ಸರ್ಕಾರದ ಜವಾಬ್ದಾರಿ. ರಾಜ್ಯದ ಜನತೆಯ ಬಯಕೆಗಳೂ ಸಹ ಬಹಳ ಹೆಚ್ಚೇನಿಲ್ಲ. ತಮ್ಮ ಸ್ವಂತದ್ದು ಎನಿಸಿಕೊಳ್ಳುವ ಒಂದು ನಿವೇಶನ; ತಲೆಯ ಮೇಲೊಂದು ಸೂರು; ಕುಡಿಯಲು ಸ್ವಚ್ಛ ನೀರು; ಮಾರುಕಟ್ಟೆ ಸಂಪರ್ಕಿಸಲು ಉತ್ತಮ ರಸ್ತೆಗಳು; ಮನೆ ಬೆಳಗಲು ವಿದ್ಯುತ್; ಆರೋಗ್ಯ ರಕ್ಷಣೆಯ ಕನಿಷ್ಠ ಸವಲತ್ತುಗಳು; ತಮ್ಮ ಮಕ್ಕಳ ಉತ್ತಮ ಬದುಕಿಗೊಂದು ಶಿಕ್ಷಣ; ನೆಮ್ಮದಿಯ ಜೀವನಕ್ಕಾಗಿ ಅಗತ್ಯವಾದ ಕಾನೂನು ಮತ್ತು ಶಿಸ್ತು ಪಾಲನಾ ವ್ಯವಸ್ಥೆ, ಇವು ಶ್ರೀಸಾಮಾನ್ಯರ ಗೌರವಯುತ ಜೀವನಕ್ಕೆ ಬೇಕಾದ ಕನಿಷ್ಠ ಅವಶ್ಯಕತೆಗಳು.

ಮುಂದುವರೆದು, ಇವುಗಳನ್ನು ಅನುಷ್ಠಾನಗೊಳಿಸಲು ಬದ್ಧತೆಯಿದೆ ಹಾಗೂ ಅವರು ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಮೂಲಭೂತವಾಗಿ ಅವಶ್ಯಕವಾಗಿರುವಂತಹ ನೀರು, ರಸ್ತೆ, ಸೂರು, ನಿವೇಶನ, ವಿದ್ಯುತ್, ಶಿಕ್ಷಣ, ಆರೋಗ್ಯ ಇವುಗಳಿಗೆಲ್ಲಾ ತಮ್ಮ ಆದ್ಯತೆಯನ್ನು ಕೊಡುವಂತಹ ಮಾತನ್ನು ತಮ್ಮ ಬಡ್ಜೆಟ್‌ನಲ್ಲಿ ಮಂಡನೆ ಮಾಡಿದ್ದರು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(371) 22.03.2017 5.10 MGN-GR

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು(ಮುಂದುವರೆದುದು...**

ಬಹಳ ಪ್ರಮುಖವಾಗಿ ಇನ್ನೊಂದು ವಿಚಾರವನ್ನು 2013–14ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರದವರು ಪ್ರಸ್ತಾಪ ಮಾಡಿದ್ದಾರೆ. ಅಂದರೆ, *"ಕರ್ನಾಟಕದಲ್ಲಿ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ, ಅದನ್ನು ಸರಿದಾರಿಗೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಕರ್ನಾಟಕದಲ್ಲಿ ಸಾಲದ ಹೊರೆ ಜಾಸ್ತಿಯಾಗಿದೆ, ಹಾಗಾಗಿ ಸಾಲದ ಹೊರೆಯಿಂದ ರಾಜ್ಯವನ್ನು ಸರಿದಾರಿಗೆ ತಂದು ಆರ್ಥಿಕ ಚೇತನವನ್ನು ಕೊಡುತ್ತೇವೆ"* ಎನ್ನುವಂತಹ ಮಾತನ್ನು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. *"ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ, ತೆರಿಗೆ ಸೋರಿಕೆಯ ನಿಯಂತ್ರಣ ಮತ್ತು ತೆರಿಗೆ ತಪ್ಪಿಸುವಿಕೆಯನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದರೆ ರಾಜ್ಯದ ತೆರಿಗೆ ರಾಜಸ್ವದಲ್ಲಿ ಖಂಡಿತ ಹೆಚ್ಚಳವಾಗುತ್ತಿತ್ತು. ತನ್ಮೂಲಕ ಸಾಲ ಎತ್ತುವಳಿಯ ಅವಲಂಬನೆ ಕಡಿಮೆಯಾಗುತ್ತಿತ್ತು. ತಮಗೆಲ್ಲಾ ತಿಳಿದಿರುವಂತೆ ಪ್ರಸ್ತುತ ಸಾಲ ಮತ್ತು ಎತ್ತುವಳಿಗಳು ತುಂಬಾ ದುಬಾರಿಯಾಗಿವೆ. ಈ ದುಬಾರಿ ಸಾಲಗಳನ್ನು ತೆಗೆದುಕೊಂಡರೆ ಮುಂದಿನ ಪೀಳಿಗೆಯ ಮೇಲೆ ಬೃಹತ್ ಸಾಲದ ಹೊರೆಯನ್ನು ಹೊರಿಸಿದಂತಾಗುತ್ತದೆ."* ಇದು ಸನ್ಮಾನ್ಯ ಮುಖ್ಯಮಂತ್ರಿಯವರು ತಮ್ಮ ಆಯವ್ಯಯದ ಭಾಷಣದಲ್ಲಿ ಮಾಡಿರುವಂತಹ ಪ್ರಸ್ತಾಪ.

2013–14ನೇ ಸಾಲಿನ ಆಯವ್ಯಯದ ಬಗ್ಗೆ ನಮಗೆ ಒಂದು ವಿಶ್ವಾಸವಿತ್ತು; ನಂಬಿಕೆ ಇತ್ತು. ಈ ರಾಜ್ಯ ಸರ್ಕಾರ ಮುಂದೆ ಕರ್ನಾಟಕವನ್ನು ಸಾಲಮುಕ್ತ ರಾಜ್ಯವನ್ನಾಗಿ ಮಾಡುತ್ತದೆ ಅಥವಾ ಸಾಲ ತೆಗೆದುಕೊಳ್ಳುವಂತಹ ಪ್ರಯತ್ನಕ್ಕೆ ಇತಿಶ್ರೀ ಹಾಡುತ್ತದೆ; ಯಾವುದೇ ಕಾರಣಕ್ಕೆ ಮತ್ತೆ ರಾಜ್ಯ ಸರ್ಕಾರ ಸಾಲದ ಹೊರೆಯನ್ನು ಈ ರಾಜ್ಯದ ಜನರ ಮೇಲೆ ಹಾಕುವುದಿಲ್ಲ ಎನ್ನುವ ಭಾವನೆ ಇತ್ತು. ಆದರೆ ಇವತ್ತು ಅವರು ಮಂಡನೆ ಮಾಡಿರುವಂತಹ ಆಯವ್ಯಯದಲ್ಲಿ ಈ ಪ್ರಸಕ್ತ ಸಾಲಿನಲ್ಲಿ 36 ಸಾವಿರ ಕೋಟಿ ರೂಪಾಯಿಗಳ ಸಾಲದ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅಂದರೆ, ಒಟ್ಟು ಆಯವ್ಯಯ ಗಾತ್ರದ ಶೇಕಡ 20ರಷ್ಟು ಹಣವನ್ನು ಸಾಲದ ಮೂಲಕ ತರುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅಂದರೆ, ರಾಜ್ಯದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಈ ಸದನದ ಮುಂದೆ ಬಜೆಟ್ ಮೂಲಕ ಏನು ಆಶ್ವಾಸನೆಯನ್ನು ಕೊಟ್ಟರು, ಬಹುಶಃ ಅದಕ್ಕೆ ವ್ಯತಿರಿಕ್ತವಾಗಿ ಈಗ ನಡೆದುಕೊಳ್ಳುತ್ತಿದ್ದಾರೆ. ಈ ಆಯವ್ಯಯ ಈ ಸರ್ಕಾರದ ಆರ್ಥಿಕ ವ್ಯವಸ್ಥೆಯ ಒಂದು ಸಂಪೂರ್ಣ ಚಿತ್ರಣವನ್ನು ಯಾವ ರೀತಿ ಬಿಂಬಿಸುತ್ತಿದೆ ಎಂದರೆ, ಈ ರಾಜ್ಯ ಸರ್ಕಾರ ಆರ್ಥಿಕ ಸಂಪನ್ಮೂಲಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರೋಢೀಕರಣದಲ್ಲಿ ಸಂಪೂರ್ಣವಾದಂತಹ ವಿಫಲತೆಯನ್ನು ಕಂಡಿದೆ, ಅದೇ ಕಾರಣಕ್ಕಾಗಿ ಇವರು ಇವತ್ತು ಸಾಲ ಎತ್ತುವಳಿಯಂತಹ ಒಂದು ಅನಿವಾರ್ಯ ಪರಿಸ್ಥಿತಿಗೆ ಮುಂದಾಗಿದ್ದಾರೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ.

ಬಹುತೇಕ ಸಂದರ್ಭಗಳಲ್ಲಿ, ಈ ಸದನದ ಹೊರಗೆ ಮತ್ತು ಒಳಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಆರ್ಥಿಕ ಸಚಿವರಾಗಿ ಮತ್ತು ಮುಖ್ಯಮಂತ್ರಿಗಳಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ಬಹಳಷ್ಟು ಅಂದರೆ, ಸುಮಾರು 200 ಆಶ್ವಾಸನೆಗಳನ್ನು ಕೊಟ್ಟಿದ್ದು, ಅದರಲ್ಲಿ ಸುಮಾರು 135 – 140 ಆಶ್ವಾಸನೆಗಳನ್ನು ಈಡೇರಿಸಿರುವುದಾಗಿ ತಿಳಿಸಿದ್ದಾರೆ. ಮಾನ್ಯ ರೇವಣ್ಣನವರಿಗೆ ಇದರ ನಿಖರವಾದ ಸಂಖ್ಯೆ ಗೊತ್ತಿರಬಹುದು, ಅದೇರೀತಿ ಮಾನ್ಯ ಆರೋಗ್ಯ ಸಚಿವರು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕಾ ರಚನಾ ಸಮಿತಿಯ ಅಧ್ಯಕ್ಷರಾಗಿದ್ದುದರಿಂದ ಬಹುಶಃ ಅವರಿಗೆ ನಮಗೆಲ್ಲರಿಗಿಂತಲೂ ಇದು ಬಹಳ ಚೆನ್ನಾಗಿ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿನ ಎರಡು ಅಂಶಗಳ ಬಗ್ಗೆ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಕಾರಣವೆಂದರೆ, ಅವರು ಕೊಟ್ಟಂತಹ ಪ್ರಣಾಳಿಕೆಯಲ್ಲಿ ಇವತ್ತಿನವರೆಗೆ ಶೇಕಡ 35 ರಿಂದ 40ರಷ್ಟು ಮಾತ್ರವೇ ಜಾರಿಯಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈ ಸರ್ಕಾರದ 5ನೇ ಆಯವ್ಯಯವನ್ನು ಮಂಡನೆ ಮಾಡಿದ್ದು, ಚುನಾವಣಾ ಪ್ರಣಾಳಿಕೆಯ ಆಶ್ವಾಸನೆಗಳಲ್ಲಿ ಸುಮಾರು 110 – 120 ನ್ನು ನಾವು ಜಾರಿಗೆ ಕೊಟ್ಟಿದ್ದೇವೆ ಎನ್ನುವಂತಹ ವಿಚಾರವನ್ನು ಅವರೇ ತಿಳಿಸಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟಂತೆ ಒಂದೆರಡು ಇಲಾಖೆಯ ಬಗ್ಗೆ ಅವರು ಕೊಟ್ಟಂತಹ ಆಶ್ವಾಸನೆ ಮತ್ತು ಯಾವುದರಲ್ಲಿ ಸರ್ಕಾರ ವಿಫಲತೆ ಹೊಂದಿದೆ ಎನ್ನುವುದರ ಬಗ್ಗೆ ಮಾತ್ರ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ.

ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಒಟ್ಟು 20 ಭರವಸೆಗಳನ್ನು ಪ್ರಣಾಳಿಕೆಯ ಮೂಲಕ ಕಾಂಗ್ರೆಸ್ ಪಕ್ಷ ನೀಡಿತ್ತು. ಅದನ್ನೇ ಅವರು ತಮ್ಮ 2013-14ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದರು. ಈ ಆಶ್ವಾಸನೆಗಳಲ್ಲಿ ಪ್ರಮುಖವಾಗಿ ವಿಫಲತೆಯನ್ನು ಕಂಡಿರುವುದು. 2013ರ ಪ್ರಣಾಳಿಕೆಯಲ್ಲಿ –

"To offer continuous 3 phased quality electricity to all the farmers in the State for their irrigation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

pump sets and for lighting purposes for 24 hours of the day."

ಎಂದು ಹೇಳಿದ್ದಾರೆ. ಬಹುತೇಕ ಈ ಸಾಲಿನ ಆಯವ್ಯಯದಲ್ಲಿ ಈ ಅಂಶವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು touch ಮಾಡಿಯೇ ಇಲ್ಲ. ಈ ರಾಜ್ಯದಲ್ಲಿ ನಿರಂತರವಾಗಿ ದಿನದ 24 ಗಂಟೆಗಳ ಕಾಲವೂ 3 ಫೇಸ್ ವಿದ್ಯುತ್ತನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಅವತ್ತಿನ ದಿವಸ ತಾವೇನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದಿರಿ, ಅದನ್ನು ನೀವು ಇವತ್ತಿನವರೆಗೂ ಜಾರಿ ಮಾಡುವುದಕ್ಕಾಗಿಲ್ಲ. ಅದೇ ರೀತಿ ಅನೇಕ ಹೋಬಳಿ ಕೇಂದ್ರಗಳಲ್ಲಿ ಕೃಷಿ ಸಲಕರಣೆಗಳ ದುರಸ್ತಿಗೆ ಕ್ಲಿನಿಕ್ ಒಂದನ್ನು ತೆರೆಯುವುದಾಗಿ ತಿಳಿಸಿದ್ದಿರಿ. ಆದರೆ ಇವತ್ತಿನವರೆಗೂ ಸರ್ಕಾರದಲ್ಲಿ ಅದನ್ನು ಜಾರಿ ಮಾಡುವುದಕ್ಕಾಗಿಲ್ಲ. 1500 ಕೋಟಿ ರೂಪಾಯಿಗಳ ಒಂದು ಆವರ್ತಕ ನಿಧಿಯನ್ನು 2013-14ನೇ ಸಾಲಿನಲ್ಲಿ ಸ್ಥಾಪಿಸಿಕೊಡುವುದಾಗಿ ತಿಳಿಸಿದ್ದಿರಿ, ಆದರೆ ಇವತ್ತಿನವರೆಗೂ ಅದನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈ ಸಾಲಿನ ಆಯವ್ಯಯದಲ್ಲಿ 'ಕೃಷಿಭಾಗ್ಯ' ಎನ್ನುವಂತಹ ಒಂದು ಹೊಸ ಯೋಜನೆಯನ್ನು ಜಾರಿಗೆ ಕೊಡುವುದಾಗಿ ತಿಳಿಸಿದ್ದಾರೆ. ಕೊಟ್ಟಂತಹ ಆಶ್ವಾಸನೆಗಳನ್ನು ಜಾರಿಗೊಳಿಸುವಲ್ಲಿ ಈಗಾಗಲೇ ವಿಫಲತೆಯನ್ನು ಕಂಡಿರುವಂತಹ ಸರ್ಕಾರ 'ಕೃಷಿಭಾಗ್ಯ' ಯೋಜನೆಯನ್ನು ಜಾರಿಗೆ ಕೊಡುತ್ತೇವೆ ಎಂದು ಹೇಳುವಂತಹ ಸಮಯದಲ್ಲಿ ಯಾವ ಆಧಾರದ ಮೇಲೆ ಈ ರಾಜ್ಯದ ರೈತರು ಈ ಸರ್ಕಾರದ ಮೇಲೆ ನಂಬಿಕೆಯನ್ನು ಇಡಬೇಕಾಗುತ್ತದೆ? ಸನ್ಮಾನ್ಯ ಮುಖ್ಯಮಂತ್ರಿಯವರು ಅಥವಾ ಸರ್ಕಾರ ಈ ವಿಚಾರದ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ.

ಈ ರಾಜ್ಯದಲ್ಲಿ ಕಳೆದ ವರ್ಷ ಸುಮಾರು 1450 ರೈತರು ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ ರೈತರಿಗೆ ಚೈತನ್ಯವನ್ನು ತುಂಬುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿತ್ತು. ಕನಿಷ್ಟಪಕ್ಷ ಆತ್ಮಹತ್ಯೆ ಮಾಡಿಕೊಂಡಿರುವಂತಹ ರೈತರ ಪ್ರತಿಯೊಂದು ಕುಟುಂಬಕ್ಕೆ ಒಂದು ಉದ್ಯೋಗವನ್ನು ಕೊಡುವಂತಹ ವ್ಯವಸ್ಥೆಯನ್ನಾದರೂ ಸರ್ಕಾರ ಮಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಯವರು ಈ ಸಾಲಿನ ಆಯವ್ಯಯದಲ್ಲಿ ರೈತರ ಸಾಲ ಮನ್ನಾ ಯೋಜನೆಯನ್ನು ಘೋಷಣೆ ಮಾಡುತ್ತಾರೆ ಎಂದು ಈ ಸರ್ಕಾರದ ಮೇಲೆ ರೈತಾಪಿ ವರ್ಗ ಏನು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದರು, ಕನಿಷ್ಟ ಪಕ್ಷ ಅದಕ್ಕೆ ಉತ್ತೇಜನ ಕೊಡುವಂತಹ ಕೆಲಸವನ್ನಾದರೂ ಅವರು ಮಾಡಬೇಕಾಗಿತ್ತು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಹೊಣೆ ಹಾಕುವುದು, ಇನ್ನೊಬ್ಬರ ಕಡೆಗೆ ಕೈ ತೋರಿಸುವಂಥದ್ದನ್ನು ಮಾಡುವ ಬದಲು ಕನಿಷ್ಠಪಕ್ಷ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂಥದ್ದು ಅಥವಾ ಒಂದು slab rate ನಲ್ಲಿ ಸುಮಾರು ರೂ. 25,000 ಅಥವಾ ರೂ. 50,000 ಸಾಲವನ್ನಾದರೂ ಮನ್ನಾ ಮಾಡುವಂತಹ ಯೋಜನೆಯನ್ನು ಸರ್ಕಾರ ಘೋಷಣೆ ಮಾಡಿ, ಅದರಿಂದ ರೈತರಿಗೆ ಶಕ್ತಿ ತುಂಬುವಂತಹ ಕೆಲಸವನ್ನು ಮಾಡಬಹುದಾಗಿತ್ತು. ಆದರೆ ಅಂತಹ ಯಾವುದೇ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಲಿಲ್ಲ.

**ಶ್ರೀಮತಿ ಮೋಟಮ್ಮ:-** ರಾಹುಲ್ ಗಾಂಧಿಯವರು ರಾಜ್ಯಕ್ಕೆ ಭೇಟಿಕೊಟ್ಟು ಹಿಂತಿರುಗಿದ ನಂತರ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ ರೂ. 5 ಲಕ್ಷಗಳನ್ನು ಘೋಷಣೆ ಮಾಡಲಾಗಿದೆ. ಅಂತಹ ಎಲ್ಲ ರೈತ ಕುಟುಂಬಗಳಿಗೆ ಸರ್ಕಾರಿ ನೌಕರಿಯನ್ನು ಕೊಡುವುದಕ್ಕಾಗಿಲ್ಲ ಎನ್ನುವಂತಹ ವಿಚಾರವನ್ನು ನಾವು ಸಹ ಒಪ್ಪುತ್ತೇವೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಮೋಟಮ್ಮನವರ ಮಾಹಿತಿಗಾಗಿ ಧನ್ಯವಾದಗಳು. ಆದರೆ ಆತ್ಮಹತ್ಯೆ ಮಾಡಿಕೊಂಡಿರುವ 1450 ಜನ ರೈತ ಕುಟುಂಬಗಳಿಗೆ ನಿಮ್ಮ ಘೋಷಣೆಯ ಪ್ರಕಾರ ಏನು ರೂ. 5 ಲಕ್ಷಗಳನ್ನು ಕೊಡಬೇಕಾಗಿತ್ತು, ಅದು ತಲುಪಿಲ್ಲ. ಸನ್ಮಾನ್ಯ ರಾಹುಲ್ ಗಾಂಧಿಯವರು ರಾಜ್ಯಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಮಂಡ್ಯ ಮತ್ತಿತರ ಕೆಲವು ಭಾಗಗಳಲ್ಲಿನ ಕೇವಲ 250 ರಿಂದ 300 ಕುಟುಂಬಗಳಿಗೆ ಮಾತ್ರ ವಿತರಣೆಯಾಗಿರುವುದನ್ನು ಹೊರತುಪಡಿಸಿದರೆ, ಆ ಆರ್ಥಿಕ ನೆರವು ಇನ್ನುಳಿದ ರೈತ ಕುಟುಂಬಗಳಿಗೆ ತಲುಪಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೆ, ವರದಿಯ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಮುಖಾಂತರ ಪರಿಹಾರದ ಮೊತ್ತವನ್ನು ಸರ್ಕಾರ ತಲುಪಿಸುತ್ತಿದೆ. ಪತ್ರಿಕೆಗಳಲ್ಲಿ ಬಂದಿರುವ 1450 ಜನ ರೈತರಿಗೆ ಕೊಡಲಿಕ್ಕೆ ಇಲ್ಲಿ ಅವಕಾಶ ಇಲ್ಲ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಅಭಿಪ್ರಾಯಕ್ಕಾಗಿ ಧನ್ಯವಾದಗಳು. ನನ್ನ ಭಾವನೆ, ನನ್ನ ಅನಿಸಿಕೆಗಳನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ. ಕೊಟ್ಟಿರುವುದು; ಬಿಟ್ಟಿರುವುದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ನನಗೆ ಬಂದಿರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿ ಇದು. ಸರ್ಕಾರಕ್ಕೆ ವರದಿ ಬಂದಿದೆಯೋ, ಇಲ್ಲವೋ? 1450 ಜನ ರೈತರ ಆತ್ಮಹತ್ಯೆ ಆಗಿರುವುದನ್ನು ಸರ್ಕಾರ ಒಪ್ಪಿಕೊಂಡಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಸರ್ಕಾರ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೆ, ಮಾನ್ಯ ಬೋಸರಾಜು ಅವರು ತಿಳಿಸಿದಂತಹ ವಿಚಾರವೆಂದರೆ, compensation ನ್ನು Deputy Commissioner disburse ಮಾಡಿದಾಗ ಅದು ವಾಸ್ತವ ಸಂಗತಿಯಾಗಿರುತ್ತದೆ. ಸುಳ್ಳು ಹೇಳುವುದಕ್ಕೆ ಅವಕಾಶವೇ ಇರುವುದಿಲ್ಲ, ಅಲ್ಲವೆ? ಆ ವಾಸ್ತವಾಂಶವನ್ನು ತಾವು ತಿಳಿದುಕೊಂಡು ಹೇಳಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ಅವರು ತಿಳಿಸಿದರು.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ನನ್ನ ಕಳಕಳಿಯ ಮನವಿ ಇಷ್ಟೆ. ರಾಜ್ಯದಲ್ಲಿ 1450 ಜನ ರೈತರೇನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅದರಲ್ಲಿ ಬೋಗಸ್ ಇದ್ದರೆ ಆ ಅಂಕಿ-ಅಂಶಗಳನ್ನು ನೀವು ರಾಜ್ಯದ ಮುಂದೆ ಇಡಬೇಕಾಗುತ್ತದೆ. ಆ ರೈತರು ಸಾಲದ ಬಾಧೆ ಅಥವಾ ಬೆಳೆ ನಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿಲ್ಲ, ಸಾರಾಯಿ ಕುಡಿದು ಸತ್ತಿದ್ದಾರೆ ಎಂದು ಬಳ್ಳಾರಿ ಪ್ರಕರಣದಲ್ಲಿಯೋ ಅಥವಾ ಬೇರೆ ಯಾವುದೋ ಪ್ರಕರಣದಲ್ಲಿ ಸರ್ಕಾರ ತಿಳಿಸಿದೆ. ಆ ರೀತಿ ಹೇಳುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ. ನನ್ನ ಅಂಕಿ-ಅಂಶಗಳನ್ನು ನೀವು ಒಪ್ಪಿಕೊಳ್ಳಬೇಕೆಂದೇನೂ ಇಲ್ಲ. ನನಗಿರುವ ಮಾಹಿತಿ, ನನಗಿರುವ ಅಂಕಿ-ಅಂಶಗಳನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೆ, 2013ರ ಪ್ರಣಾಳಿಕೆಯಲ್ಲಿ –

"To offer Agriculture, Horticulture and allied subjects in selected Industrial Training Institutes as new skill development programs."

ಎಂದು ಹೇಳಿದ್ದಾರೆ. ಇದು ಸಹ ತಾವು ಕೊಟ್ಟಂತಹ ಒಂದು ಆಶ್ವಾಸನೆ. ಸದರಿ ಪ್ರಣಾಳಿಕೆಯಲ್ಲಿ –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> "It shall be the endeavour of the Congress Party to construct godown facilities, cold storages and such other requirements at the Grama Panchayat levels and Towns. The Government shall offer interest free loans to such farmers for the above constructions,"

ಎಂದು ಹೇಳಿದ್ದಾರೆ. ಅಂದರೆ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗೋದಾಮುಗಳನ್ನು ಕಟ್ಟುತ್ತೇವೆ, ರೈತರಿಗೆ ಅದಕ್ಕೆ ಸಂಪೂರ್ಣವಾದಂತಹ ಸಬ್ಸಿಡಿಯನ್ನು ಕೊಡುತ್ತೇವೆ ಎಂದು ತಿಳಿಸಲಾಗಿದೆ. ಇದು ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ಹೊರತು ತಾಲ್ಲೂಕು ಮಟ್ಟದಲ್ಲಿ ಅಲ್ಲ. ಇದು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿರುವಂತಹ ಆಶ್ವಾಸನೆಯಾಗಿದ್ದು, ಇವತ್ತಿನವರೆಗೂ ಇದನ್ನು ಈಡೇರಿಸುವುದಕ್ಕೆ ಸಾಧ್ಯವಾಗಿಲ್ಲ. ನಾನು ಕೆಲವು ಉದಾಹರಣೆಗಳನ್ನಷ್ಟೇ ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ನಾನು ಸಾಂದರ್ಭಿಕವಾಗಿ ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆಯೇ ಹೊರತು, ಇದರಲ್ಲಿ ನನಗೆ ಬೇರೆ ಯಾವುದೇ ದುರುದ್ದೇಶವಿಲ್ಲ. ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಏನು 20 ಆಶ್ವಾಸನೆಗಳನ್ನು ಕೊಟ್ಟಿತ್ತು, ಅದರಲ್ಲಿ 12 ಆಶ್ವಾಸನೆಗಳು ಇನ್ನೂ ಈಡೇರಿಲ್ಲ. ಅಂದರೆ, ಇದರ ಪ್ರಮಾಣ it is around 60%. I will now come to the Education Department. ಇದೇ ಕೃಷಿಯ ಅಂಶದಲ್ಲಿನ ಮತ್ತೊಂದು ವಿಚಾರವೆಂದರೆ,

> "To offer Agriculture, Horticulture and allied subjects at the High School and PUC level to enable the students to get into Agricultural Universities for higher education."

ಇದು ಇವತ್ತಿನವರೆಗೂ ಅನುಷ್ಠಾನಗೊಂಡಿಲ್ಲ. ಸದರಿ ಪ್ರಣಾಳಿಕೆಯ ಮತ್ತೊಂದು ಅಂಶವೆಂದರೆ:

> "To offer all the subsidies directly to the farmers for purchase of modern agricultural equipment under the supervision of the Deputy Commissioner."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

So far, this is not implemented. The Manifesto further reads:

> "To waive loans of Areca farmers affected by yellow leaf disease as per the recommendation of the Gorak Singh Committee constituted by the Government of India."

ಇವತ್ತಿನವರೆಗೂ ಅನುಷ್ಠಾನಗೊಂಡಿಲ್ಲ. The Manifesto further reads:

> "To offer adequate compensation during drought and famine situations, for the loss of agricultural produce, postpone the recovery of distressed loans, waive complete interest and pay the tuition fees to the children of affected farmers studying in any Educational Institutions admitted under Government quota."

ಅಂದರೆ, ಬರಗಾಲಕ್ಕೆ ಒಳಗಾಗಿರುವ ಯಾವ ರೈತ ಕುಟುಂಬಗಳಿರುತ್ತವೆಯೊ, ಅಲ್ಲಿ ಕೃಷಿ ಉತ್ಪಾದನೆಯಲ್ಲಿ ಆಗಿರುವಂತಹ ನಷ್ಟವನ್ನು ತುಂಬಿಸಿಕೊಡುವಂಥದ್ದು, recovery of distressed loans ನ್ನು ಮುಂದೆ ಹಾಕುವಂಥದ್ದು, waive complete interest ಅಂದರೆ ಅಲ್ಲಿರುವಂತಹ ಸಂಬಂಧಪಟ್ಟಂತಹ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ waive off ಮಾಡುವಂಥದ್ದು, ಆ ರೈತರ ಮಕ್ಕಳ ಶೈಕ್ಷಣಿಕ ಶುಲ್ಕವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದು ಇಂತಹ ಕೆಲವು ಆಶ್ವಾಸನೆಗಳನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿತ್ತು.

(ಮುಂದು)

(372) 22.03.2017 05.20 SV-MD

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್ ಬಾಬು(ಮುಂದು):-**

ಇದುವರೆವಿಗೂ ಅದನ್ನು ಜಾರಿಗೆ ತರಲಾಗಿಲ್ಲ. *"To make Prakruthi Vikopa Parihara Nidhi a permanent fund as an immediate relief by creating an*

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*initial corpus fund of Rs. 1500 crores."* ಇದನ್ನು ಕಾಂಗ್ರೆಸ್ ಪಕ್ಷದ manifesto ಜೊತೆಗೆ 2013-14ರ ಆಯವ್ಯಯದಲ್ಲಿಯೂ ಸಹ ಘೋಷಣೆಯನ್ನು ಮಾಡಲಾಗಿತ್ತು. ಅದನ್ನು ಜಾರಿಗೆ ತರಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. Like that if you come to the Education Department, ನಾನು ಎರಡು ಉದಾಹರಣೆಯನ್ನು ಕೊಡಲು ಇಷ್ಟಪಡುತ್ತೇನೆ. *"To strengthen every Government School as 'Shikshana Samarasya Vidya Kendra' by constructing residential accommodation for the teachers, providing facility for sports, gardens, computer learning centres etc. in the same campus, and not to close any Government Schools on the pretext of viability."* ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುವುದಿಲ್ಲವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿರುತ್ತಾರೆ. ಇದರ ಜೊತೆಗೆ ಕ್ಯಾಂಪಸ್‌ಗಳನ್ನು create ಮಾಡಿ ಶಿಕ್ಷಕರಿಗೆ ಸರ್ಕಾರಿ ಶಾಲಾ ವ್ಯಾಪ್ತಿಯಲ್ಲಿರುವುದಕ್ಕೆ ಕ್ವಾರ್ಟರ್ಸ್, ಅಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡುವಂತಹದ್ದು, ಮಕ್ಕಳಿಗೆ ಕ್ರೀಡಾ ವಾತಾವರಣ ಕಲ್ಪಿಸುವಂತಹದ್ದು, ಇವೆಲ್ಲವನ್ನೂ ಕೊಡಲಾಗುವುದು ಎಂದು ಹೇಳಿದ್ದರು. ಇವತ್ತಿನವರೆಗೂ ಇದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. *"To make Kannada compulsory as the medium of instruction upto 7th standard, and to offer English as the language of study from 1st standard itself in all the schools."* ಇದು ಪ್ರಣಾಳಿಕೆಯಲ್ಲಿ, 2013-14ರ ಬಜೆಟ್‌ನಲ್ಲಿಯೂ ಹೇಳಿದ್ದರು. ಇಂಗ್ಲಿಷ್ ಅನ್ನು ಒಂದು ಮಾಧ್ಯಮವಾಗಿ, ಒಂದು ಭಾಷೆಯಾಗಿ ಕೊಡುತ್ತೇವೆಂದು ಈ ಬಜೆಟ್‌ನಲ್ಲಿಯೂ ಹೇಳುತ್ತಾರೆ. ಐದು ವರ್ಷ ಕಳೆದರೂ ಜಾರಿಗೆ ತರಲು ಸರ್ಕಾರಕ್ಕೆ ಆಗಲಿಲ್ಲವೆಂದರೆ ಈ ವರ್ಷ ಜಾರಿ ಮಾಡುತ್ತಾರೆಂದು ಯಾವ ಆಧಾರದ ಮೇಲೆ ಜನಸಾಮಾನ್ಯರು ನಂಬಿಕೆ ಇಡಲು ಸಾಧ್ಯವಾಗುತ್ತದೆ? *"To appoint well trained Kannada Teachers in all schools including the schools run by the Linguistic and Religious Minorities."* ಇವತ್ತಿನವರೆಗೂ ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ಸಂಪೂರ್ಣ ಮಟ್ಟದಲ್ಲಿ ನೇಮಕಾತಿ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. *"To start one Womens' College in every district with hostel facilities."* ಒಟ್ಟು 30 ಜಿಲ್ಲೆಗಳಲ್ಲಿ

ನಾಲ್ಕೈದು ಜಿಲ್ಲೆಗಳನ್ನು ಹೊರತುಪಡಿಸಿ 25-26 ಜಿಲ್ಲೆಗಳಲ್ಲಿ Womens' Colleges with hostel facilities ಒದಗಿಸಿಲ್ಲ. So far Government has not come forward to do it and fill up vacancies in all the Educational Institutions. ಎಷ್ಟು ಉದ್ಯೋಗಗಳು ಖಾಲಿ ಇವೆ ಎಂದು ನಿನ್ನೆಯೂ ಸಹ ಮಾನ್ಯ ಶ್ರೀಕಂಠೇಗೌಡರು ಮತ್ತು ಅನೇಕ ಸ್ನೇಹಿತರು ಪ್ರಶ್ನೆಯನ್ನು ಕೇಳಿದ್ದರು. ಸುಮಾರು 60ರಿಂದ 70 ಸಾವಿರ ಉದ್ಯೋಗಗಳು ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಖಾಲಿ ಇವೆ. ಎಲ್ಲಾ vacancy fill up ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಇದುವರೆಗೂ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. *"To provide free laptops/digital notepads to all PUC students."* It is one more assurance given by the Congress Government in its Manifesto as well as in the Budget. ಇವತ್ತಿನವರೆವಿಗೂ ಕಾಂಗ್ರೆಸ್ ಪಕ್ಷಕ್ಕೆ ಇದನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಶಿಕ್ಷಣ ಇಲಾಖೆಯಲ್ಲಿ 11 ಭರವಸೆಗಳನ್ನು ಕೊಟ್ಟರು. ಆರು ಭರವಸೆಗಳನ್ನು ಕೂಡ ಇವತ್ತಿನವರೆವಿಗೂ ಈಡೇರಿಸಿಲ್ಲ. So what message this Government is going to give to the public? At the same time, 2013-14ರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟಂತಹ allocation of funds ರೂ.15,680 ಕೋಟಿ. ಈಗ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥದ್ದು ರೂ.18,266 ಕೋಟಿ. ಅಂದರೆ ರೂ.2,586 ಕೋಟಿ ಹೆಚ್ಚುವರಿ ಹಣವನ್ನು ಐದು ವರ್ಷದಲ್ಲಿ ತಾವು ಕೊಟ್ಟಿದ್ದೀರಿ. As per the percentage, ಶೇ.16ರಷ್ಟು ಜಾಸ್ತಿಯಾಗಿದೆ. Again if we come to the total value of the Budget, 2013-14ರಲ್ಲಿ 1,21,611 ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಮಂಡನೆ ಮಾಡಿದರು. ಈಗ ಮಂಡನೆ ಮಾಡಿರುವಂತಹ ಬಜೆಟ್ 1,86,561 ಕೋಟಿ. ಅಂದರೆ 5 ವರ್ಷಗಳಲ್ಲಿ ಸರ್ಕಾರದ budget size growth ಶೇ.53. ಶಿಕ್ಷಣ ಕ್ಷೇತ್ರಕ್ಕೆ ಬಂದಾಗ 16% enhancement ಕೊಡಲಾಗಿದೆ. ಇಲ್ಲಿ ಬಜೆಟ್ ಶೇ.53 growth ಆದಾಗ ಸರ್ಕಾರ proportionate ಆಗಿ ಹಣ ಕೊಡುವುದಿಲ್ಲ.

ದಿ:21.03.2017ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಬ್ಬ ಲೇಖಕರು 'ಏನನ್ನೋ ತೋರಿಸಿ ಇನ್ನೇನನ್ನೋ ಮುಚ್ಚಿಡುವ ಬಜೆಟ್' ಎಂಬ ಒಂದು ಲೇಖನ ಬರೆದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವಂತಹ ಹಣ ಬರೀ ಸಂಬಳಕ್ಕೆ ವ್ಯಯವಾಗುತ್ತಿದೆಯೇ ವಿನಃ ಅಲ್ಲಿನ infrastructure ಏನಿದೆ, ಅದನ್ನು develop ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲವೆಂದು ಅವರು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಸರ್ಕಾರ ರೂ.18,000 ಕೋಟಿ ಕೊಟ್ಟರೆ, ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬೇಡಿಕೆಗಳಿವೆ. ಮಾನ್ಯ ಶಿಕ್ಷಣ ಮಂತ್ರಿಗಳು ಕುಮಾರನಾಯಕ್ ವರದಿಯನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಹೇಳಿದರು. ಪ್ರೌಢಶಾಲಾ ಶಿಕ್ಷಕರು ಮತ್ತು ಪಿ.ಯು.ಸಿ. ಶಿಕ್ಷಕರು increment ಅನ್ನು ಕೇಳಿದಾಗ ಏಳನೇ ವೇತನ ಆಯೋಗದಲ್ಲಿ ಅದನ್ನು ಸರಿಪಡಿಸುತ್ತೇವೆ. ಅಲ್ಲಿಯವರೆಗೂ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬುವಂತಹ ಪ್ರಯತ್ನವನ್ನು ಮಾಡಿಲ್ಲ. Planning and Non-planningನಲ್ಲಿರತಕ್ಕಂತಹ ವ್ಯತ್ಯಾಸದಲ್ಲಿ ಇನ್ನೇನು ಹಬ್ಬ ಎರಡು-ಮೂರು ದಿನ ಇರುವಾಗ ಇವತ್ತು ಹಣ ಬಿಡುಗಡೆಯಾಗಿದೆ. ಮೂರು-ನಾಲ್ಕು ತಿಂಗಳುಗಳಿಂದ ಸಂಬಳವಿಲ್ಲದೆ ಶಿಕ್ಷಕರು suffer ಆಗಿದ್ದಾರೆ. ಅಂದರೆ what message this Budget is going to give to the State? ರಾಜ್ಯ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಳೆದ ಬಜೆಟ್‌ನಲ್ಲಿ K-2 (Khajaane-2) ಮಾಡುವ ಮೂಲಕ ಇಲ್ಲಿರುವ ವ್ಯತ್ಯಾಸಗಳನ್ನು ಸರಿಪಡಿಸಲಾಗುವುದು ಎಂಬ ಆಶ್ವಾಸನೆಯನ್ನು ಸರ್ಕಾರ ಕೊಟ್ಟಿತ್ತು. ಯೋಜನೆ-ಯೋಜನೇತರ ನಡುವಣ ವ್ಯತ್ಯಾಸವನ್ನು ಸರಿಪಡಿಸುತ್ತೇವೆ ಮತ್ತು K-2 (Khajaane-2) ಮುಖಾಂತರ ನಿವಾರಣೆ ಮಾಡುತ್ತೇವೆ ಎಂದು ಪುನಃ ಅದನ್ನೇ ಹೇಳಲಾಗುತ್ತಿದೆ. ಇದಕ್ಕೆ ರಾಜ್ಯಸರ್ಕಾರಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ಸರ್ಕಾರದ ನಿಧಾನಗತಿಗೆ ಅಧಿಕಾರಿಗಳಾಗಲೀ, ನೌಕರರಾಗಲೀ, ಶಿಕ್ಷಕರಾಗಲೀ ಏಕೆ suffer ಆಗಬೇಕು? ಮಾನ್ಯ ಆರೋಗ್ಯ ಸಚಿವರು ಇಲ್ಲಿಯೇ ಇದ್ದಾರೆ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಸುದೀರ್ಘವಾದ ಚರ್ಚೆಯನ್ನು ಮಾಡಲಾಗುತ್ತಿದೆ. ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ‘ಜ್ಯೋತಿ ಸಂಜೀವಿನಿ’ ಎಂಬ ಯೋಜನೆಯನ್ನು ಸರ್ಕಾರ ತಂದಿದೆ. ಅದರಲ್ಲಿ ಪಟ್ಟಿಯಾಗಿರುವ ಕಾಯಿಲೆಗಳು ಕೇವಲ 7. ಬೇರೆ ತರಹದ ಕಾಯಿಲೆಗಳಾದ ಸಮಯದಲ್ಲಿ ಬೇರೆ ತರಹದ ಚಿಕಿತ್ಸೆಗಳಾದಂತಹ ಸಂದರ್ಭದಲ್ಲಿ ಅವರಿಗೆ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಲ್ಲಿಯೂ ಸಹ ceiling limits ಇದೆ. Maximum expenditure ಎರಡು ಲಕ್ಷಕ್ಕೆ ಸೀಮಿತವಾಗಿದೆ. ಯಾವುದಾದರೂ ಗುರುತರವಾದಂತಹ ಕಾಯಿಲೆಗೆ ನೌಕರರು ಒಳಗಾದಂತಹ ಸಂದರ್ಭದಲ್ಲಿ ತಮ್ಮ ಚಿಕಿತ್ಸೆಯನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆದುಕೊಳ್ಳಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅಥವಾ ರಾಜ್ಯಸರ್ಕಾರ ಏನು ಲೋಪಗಳಾಗಿವೆಯೋ ಅದನ್ನು ಸರಿಪಡಿಸಬೇಕಾಗುತ್ತದೆ.

ಪ್ರಮುಖವಾಗಿ ಕೃಷಿ ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ನಾನು ಇಲ್ಲಿ ನನ್ನ ಅಭಿಪ್ರಾಯವನ್ನು ಹಂಚಿಕೊಂಡಿದ್ದೇನೆ. ಅದೇ ರೀತಿಯಲ್ಲಿ 95-96ರವರೆಗೆ ಅನುದಾನರಹಿತ ಶಾಲೆಗಳನ್ನು ಅನುದಾನ ವ್ಯಾಪ್ತಿಗೆ ತರಲಾಗಿದೆ. ಅದಾದ ನಂತರ ಇವತ್ತಿನವರೆಗೂ ಖಾಸಗಿ ಶಾಲೆಗಳನ್ನು ಅನುದಾನದ ವ್ಯಾಪ್ತಿಗೆ ತರುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಿಲ್ಲ. ಸಾವಿರಾರು ಶಿಕ್ಷಕರು ಮತ್ತು ಉಪನ್ಯಾಸಕರು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಶಿಕ್ಷಣ ಕಾಯ್ದೆಯನ್ವಯ ಅವರಿಗೆ ಹಂತ ಹಂತವಾಗಿ ಅನುದಾನವ್ಯಾಪ್ತಿಗೆ ತರುವಂಥದ್ದು ಸರ್ಕಾರದ ಕರ್ತವ್ಯವಾಗಿದೆ. ಬಹುತೇಕ ಶಿಕ್ಷಕರು ಊಟಕ್ಕೂ ಕಷ್ಟ ಪಡುವಂತಹ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ವಿಶೇಷವಾಗಿ ಪಿ.ಯು ವ್ಯಾಪ್ತಿಯಲ್ಲಿ ಸುಮಾರು 16,000 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಿನ್ನೆ ಅಂಗನವಾಡಿ ಕಾರ್ಯಕರ್ತೆಯರ ಕುರಿತು ಮೇಲ್ಮನೆ ಮತ್ತು ಕೆಳಮನೆ ಎರಡೂ ಕಡೆಯಲ್ಲಿ ಚರ್ಚೆಯಾಗಿದೆ. ಅವರೆಲ್ಲ ರೂ.10,000ಗಳ ವೇತನವನ್ನು ನೀಡಬೇಕು ಎಂದು ಕೇಳುತ್ತಿದ್ದಾರೆ. ಆದರೆ ಪಿ.ಯು.ಸಿಯಲ್ಲಿ ಅಥವಾ ಪದವಿ ತರಗತಿಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವವರಿಗೆ ಎಂಟು ಸಾವಿರ-ಎಂಟೂವರೆ ಸಾವಿರ ಸಂಬಳವನ್ನು ಕೊಡುತ್ತಿದ್ದಾರೆ. ರಜೆ ಬಂದಾಗ ಅವರ ಸಂಬಳ ಕಡಿತಗೊಳಿಸಲಾಗುತ್ತದೆ. ಬೇಸಿಗೆ ರಜೆ ಬಂದಂತಹ ಸಂದರ್ಭದಲ್ಲಿ ಅವರನ್ನು ಕೆಲಸದಿಂದ ತೆಗೆದುಹಾಕಿ ಮರುನೇಮಕ ಮಾಡಿಕೊಳ್ಳಲಾಗುತ್ತದೆ. ಇನ್ನೊಂದು ಕಡೆ ಕನಿಷ್ಟ ವೇತನವನ್ನು ನಿಗದಿ ಮಾಡುವಂತಹ ಕೆಲಸವನ್ನು ಸರ್ಕಾರವೇ ಮಾಡುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಹಮಾಲಿಗಳಿಗಾಗಲೀ ನಾಲ್ಕನೇ ದರ್ಜೆ ನೌಕರರಿಗಾಗಲಿ ರಾಜ್ಯ ಸರ್ಕಾರದಿಂದ ದಿನಗೂಲಿಯನ್ನು ನಿಗದಿ ಪಡಿಸಲಾಗುತ್ತದೆ. ಆ ದಿನಗೂಲಿಯನ್ನು ತೆಗೆದುಕೊಂಡರೂ ಸಹ 15-16 ಸಾವಿರ ರೂಪಾಯಿ ವೇತನವನ್ನು ಕೊಡಬೇಕಾಗುತ್ತದೆ. ಸರ್ಕಾರಿ ನೌಕರರಿಗೆ ಕೊಡುವಂತಹ ವೇತನಕ್ಕೆ ಸರಿಸಮಾನವಾಗಿ ಗುತ್ತಿಗೆ ನೌಕರರಿಗೂ ನೀಡಬೇಕೆಂಬ ಒಂದು ತೀರ್ಪನ್ನು ಇತ್ತೀಚೆಗೆ ಸುಪ್ರೀಂ ಕೋರ್ಟ್ ಕೊಟ್ಟಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಶಿಕ್ಷಣ ಇಲಾಖೆಯಲ್ಲಿರುವ ಅಸಮಾನತೆಗಳನ್ನು ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೆ, ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ ಪ್ರತಿಪಕ್ಷದ ನಾಯಕರು ಆಗಲೇ ಪ್ರಸ್ತಾಪವನ್ನು ಮಾಡಿದರು. "ಯಶಸ್ವಿನಿ" ವಿಚಾರವಾಗಿಯೂ ಸಹ ಅವರು ಮಾತನಾಡಿದರು. ಮಾನ್ಯ ಆರೋಗ್ಯ ಸಚಿವರು 6% ರೈತರು ಅಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯನ್ನೂ ಕೊಟ್ಟರು. ನಾನೂ ಸಹ ಸಹಕಾರ ಕ್ಷೇತ್ರದಿಂದ ಬಂದಿರುವುದರಿಂದ ಒಟ್ಟು ರಾಜ್ಯದಲ್ಲಿರತಕ್ಕಂತಹ ಸುಮಾರು 39,000 ಸಹಕಾರ ಸಂಘಗಳಲ್ಲಿ ಸುಮಾರು ಒಂದು ಕೋಟಿ ಜನ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಸ್ವಾಭಾವಿಕವಾಗಿ ಅಷ್ಟು ಕುಟುಂಬಗಳೂ ಸದಸ್ಯತ್ವವನ್ನು ಪಡೆದುಕೊಳ್ಳುತ್ತವೆ. ನಮ್ಮಲ್ಲಿ PMCS (Primary Milk Co-operative Society), VSSN (Vyavasaya Seva Sahakara Bank Niyamitha), Multi Purpose Cooperative Society, Urban Co-Operative Banks, TAPCMS (Taluk Agricultural Produce Co-operative Marketing Society Limited), PICARD Banks (Primary Co-operative Agriculture and Rural Development Bank,), DCC Banks (District Cooperative Central Bank) ಬರುತ್ತವೆ. ಯಾವುದೇ ಸಂಘದ ಶಾಖೆಯಲ್ಲಿ ಅವರು ಸದಸ್ಯರಾಗಿದ್ದರೂ ಸಹ ಯಶಸ್ವಿನಿ ಯೋಜನೆಯನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಿದೆ. ಯಶಸ್ವಿನಿ ಯೋಜನೆಯನ್ನು ಪಡೆದುಕೊಳ್ಳುವಲ್ಲಿಯೂ ಸಹ ಒಂದು bifurcation ಮಾಡಲಾಗಿದೆ. ಪಟ್ಟಣ ಪ್ರದೇಶದಲ್ಲಿರುವವರಿಗೆ ಕೊಡುವಂತಹ ವಂತಿಗೆಯನ್ನು ಜಾಸ್ತಿ ಮಾಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹವರಿಗೆ ಕಡಿಮೆ ಇದೆ. ಎಸ್‌ಸಿ/ಎಸ್‌ಟಿ ವಿಚಾರ ಬಂದಂತಹ ಸಂದರ್ಭದಲ್ಲಿ ಸರ್ಕಾರವೇ ಅವರ ಹಣವನ್ನು ಭರ್ತಿ ಮಾಡುತ್ತದೆ.

(ಮುಂದು)

**(373) 22.03.2017 KG.MD 5.30**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್ ಬಾಬು (ಮುಂದು...)-**

ಇದನ್ನು ಮೇಲುಸ್ತುವಾರಿ ಮಾಡುವುದಕ್ಕೆ ಒಂದು trust ರಚನೆ ಮಾಡಿದ್ದಾರೆ. ಆಗಲೇ ಸನ್ಮಾನ್ಯ ಕೆ.ಎಸ್.ಈಶ್ವರಪ್ಪನವರು ಮಾತನಾಡುವ ಸಂದರ್ಭದಲ್ಲಿ ಇದರಲ್ಲಿ ಸಹ ದೂರುಗಳು ಇಲ್ಲವೆಂದು ಹೇಳಿದರು. ನಾನು ಇದನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿಯೂ ಸಹ ಬಹಳ ದೊಡ್ಡ ಹಗರಣಗಳು, ದೊಡ್ಡ ವ್ಯಾಪ್ತಿಯ ಭ್ರಷ್ಟಚಾರಗಳು ನಡೆಯುತ್ತಿವೆ ಎಂದು ಇತ್ತೀಚೆಗೆ ಕೇಳಿಬಂದಿದೆ. ಯಶಸ್ವಿನಿ ಯೋಜನೆ ಅಡಿಯಲ್ಲಿ ಚಿಕಿತ್ಸೆಗಾಗಿ ಹೋಗುವಂತಹ ರೈತರಿಂದ ಅಥವಾ ಸದಸ್ಯರಿಂದ ಸಹಿಗಳನ್ನು ಪಡೆದುಕೊಂಡು ಆಸ್ಪತ್ರೆಗಳು ಹೆಚ್ಚಿನ ಮೊತ್ತವನ್ನು claim ಮಾಡುವಂತಹ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳನ್ನು ಹೊರತು ಪಡಿಸಿ ಕೆಲವು ಖಾಸಗಿ ಆರೋಗ್ಯ ಸಂಸ್ಥೆಗಳು ಇಂತಹ ಕೆಲಸವನ್ನು ಮಾಡುತ್ತಿವೆ. ಅದಕ್ಕಿಂತ ಬಹಳ ಪ್ರಮುಖವಾಗಿ ಸಹಕಾರ ಇಲಾಖೆಗೆ ಬಂದರೆ, ಮಾನ್ಯ ಮುಖ್ಯ ಮಂತ್ರಿಗಳ ವ್ಯಾಪ್ತಿಗೆ ಈ ಖಾತೆ ಬರುತ್ತದೆ. ಒಂದು ಸಹಕಾರ ಕಾಯಿದೆಯನ್ನು ಕೇಂದ್ರ ಸರ್ಕಾರದ ಯು.ಪಿ.ಎ ಸರ್ಕಾರ 97ನೇ ಸಂವಿಧಾನದ ತಿದ್ದುಪಡಿಯ ಮೂಲಕ ಸಹಕಾರ ಸಂಘವನ್ನು ಸ್ಥಾಪನೆ ಮಾಡುವುದನ್ನು ಸಂವಿಧಾನದ ಹಕ್ಕು ಎಂಬುದಾಗಿ ಪರಿವರ್ತನೆ ಮಾಡಿದ್ದಾರೆ. ಬಹುತೇಕ ಸಹಕಾರ ಸಂಘಗಳು ಸರ್ಕಾರದ ಹಸ್ತಕ್ಷೇಪದಲ್ಲಿ ಕೆಲಸ ಮಾಡಬಾರದೆನ್ನುವ ಒಂದು ಉದ್ದೇಶವನ್ನು ಇಟ್ಟುಕೊಂಡು ಇವತ್ತು ಆ ಸಂವಿಧಾನಕ್ಕೆ ತಿದ್ದುಪಡಿ ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಆದರೆ, ಇವತ್ತು ಕರ್ನಾಟಕದಲ್ಲಿ ಬಹುತೇಕ ಸಹಕಾರ ಇಲಾಖೆ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ನಿಯಮ 17ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಸರ್ಕಾರಿ ಸವಲತ್ತುಗಳಿಲ್ಲದೇ, ಸರ್ಕಾರದ ಷೇರು ಧನವಿಲ್ಲದೆಯೇ, ಸರ್ಕಾರದ ಸಹಾಯವಿಲ್ಲದೆಯೇ ಕೆಲಸ ಮಾಡುವಂತಹ ಸಹಕಾರ ಸಂಘಗಳೂ ಸಹ ಪ್ರತಿಯೊಂದು ನೇಮಕಾತಿ, ಮತ್ತೊಂದಕ್ಕೆ ಇವರ ಅನುಮತಿಯನ್ನು ಪಡೆದುಕೊಳ್ಳುವಂತಹ ಒಂದು ಪರಿಸ್ಥಿಯನ್ನು ನಿರ್ಮಾಣ ಮಾಡಿದ್ದಾರೆ. ಅಂದರೆ, ಪರೋಕ್ಷವಾಗಿ ಸಹಕಾರ ಸಂಘಗಳ ಮೇಲೆ ನಿಯಂತ್ರಣ ಇಡುವಂತಹ ಪ್ರಯತ್ನವನ್ನು ರಾಜ್ಯ ಸರ್ಕಾರ ಇವತ್ತು ಸಹಕಾರಿ ನಿಯಮಗಳ ತಿದ್ದುಪಡಿ ಮೂಲಕ ಮಾಡಿದೆ. ಇದಕ್ಕೆ ಸಂಬಂಧಪಟ್ಟಂತೆ, ಲಿಖಿತ ಪ್ರಶ್ನೆಗೆ ಲಿಖಿತ ಉತ್ತರವನ್ನು ರಾಜ್ಯ ಸರ್ಕಾರ ಕೊಟ್ಟಿದೆ. ನಾನು ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ದಯಮಾಡಿ ನೀವು PICARD Bank ನಲ್ಲಿಯೋ, DCC Bank ನಲ್ಲಿಯೋ, Apex Bank ನಲ್ಲಿಯೋ ಸರ್ಕಾರದ ಹಿಡಿತ ಇರಬೇಕು ಅಂದರೆ ಅದಕ್ಕೆ ಒಂದು justification ಇರುತ್ತದೆ. ನೀವು ಮಾಡುವಂತಹದ್ದೂ ಸರಿ ಇರುತ್ತದೆ. ಅದೇ Urban Cooperative Banks, ಸುಮಾರು 276 ಸಹಕಾರಿ ಬ್ಯಾಂಕ್‌ಗಳು ರಾಜ್ಯದಲ್ಲಿ ಬಹಳ ಲಾಭದಾಯಕವಾಗಿ ಕೆಲಸವನ್ನು ಮಾಡುತ್ತಿವೆ. ಷೆಡ್ಯೂಲ್ ಬ್ಯಾಂಕ್‌ಗಳಿಗೆ ಪ್ರತಿಸ್ಪರ್ಧೆಯನ್ನು ಒಡ್ಡಿ ಕೆಲಸವನ್ನು ಮಾಡುತ್ತಿವೆ. ಅಂತಹ ಬ್ಯಾಂಕ್‌ಗಳ ಮೇಲೆ ನೀವು ನಿಯಂತ್ರಣ ಹೊಂದುವಂತಹದ್ದು ಒಳ್ಳೆಯ ಬೆಳವಣಿಗೆ ಆಗುವುದಿಲ್ಲ. ಸಹಕಾರಿ ಕ್ಷೇತ್ರದ ಕತ್ತು ಹಿಸುಕುವಂತಹ ಕೆಲಸ ಆಗುತ್ತದೆ. ಅದೇ ನೀವು ಸೌಹಾರ್ದ ಸಹಕಾರಿ ಸಂಘಗಳ ವಿಚಾರಕ್ಕೆ ಬಂದರೆ ಅದರಲ್ಲಿ ನಿಮಗೆ ಯಾವುದೇ ನಿಯಂತ್ರಣ ಇರುವುದಿಲ್ಲ. ಅದೇ ನೀವು ಸಹಕಾರಿ ಸಂಘಗಳ ವಿಚಾರಕ್ಕೆ ಬಂದರೆ ನೀವು ನಿಯಂತ್ರಣವನ್ನು ಇಟ್ಟುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೀರಿ. ಮಾನ್ಯ ಸಭಾಪತಿಯವರೆ, ದಯಮಾಡಿ ಅಂತಹ ವಿಷಯದಲ್ಲಿ ಸ್ವಲ್ಪ ಕಾನೂನುಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಸರಳವಾದಂತಹ ಕಾನೂನುಗಳ ಮೂಲಕ ಅವರಿಗೆ ಸುಲಭವಾದಂತಹ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ ಎನ್ನುವಂತಹ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಮುಖ್ಯ ಮಂತ್ರಿಯವರು ಮೊದಲನೇ ಬಜೆಟ್‌ನಲ್ಲಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದರು. ಬಹುತೇಕ ಮಾಧ್ಯಮಗಳಲ್ಲಿ ಇದು ಅಹಿಂದ ಪರವಾದಂತಹ ಬಜೆಟ್ ಎಂದು ವರ್ಣನೆ ಆಯಿತು. ಅದು ಮೊದಲನೇ ಬಜೆಟ್ ಇರಬಹುದು. ಎರಡನೇ ಬಜೆಟ್ ಇರಬಹುದು ಅಥವಾ ಇವತ್ತಿನ ಬಜೆಟ್ ಇರಬಹುದು. ಇವತ್ತು ಸಹ ಮಾಧ್ಯಮಗಳಲ್ಲಿ ಬರುವಂತಹದ್ದು ಈ ಬಜೆಟ್ ಅಹಿಂದ ಜಪ ಮಾಡಿರುವಂತಹ ಬಜೆಟ್ ಎನ್ನುವಂತಹ ಮಾತನ್ನು ನಾವು ಮಾಧ್ಯಮಗಳಲ್ಲಿ ಕಾಣುತ್ತಿದ್ದೇವೆ. ಅದೇ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಇನ್ನೊಂದು ಮಾತನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡುತ್ತಾರೆ. "ಸರ್ವ ಜನರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆ" ಈ ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಅಂತಹ ಸಂದರ್ಭದಲ್ಲಿ ಬಹುತೇಕ ಬದಲಾವಣೆಯ ಬಜೆಟ್‌ನ್ನು ಕೊಡಬೇಕಾಗಿತ್ತು ಎನ್ನುವಂತಹ ಮಾತನ್ನು ಹೇಳುತ್ತೇನೆ. ದಿನಾಂಕ 19-3-2017 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಮಾನ್ಯ ಪದ್ಮರಾಜ ದಂಡಾವತಿ‌ರವರು ಬರೆದಿರುವಂತಹ ಲೇಖನದ ಒಂದು ಭಾಗವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ;

> "ನಮ್ಮದು ಸರ್ವರನ್ನು ಒಳಗೊಂಡ ಮಾನವೀಯ ಮುಖವುಳ್ಳ ಸರ್ವೋದಯದ ಅಭಿವೃದ್ಧಿ ಮಾದರಿ. ಇದಕ್ಕೆ ಪೂರಕವಾಗಿ ಸಂವಿಧಾನದ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವಿಸ್ತೃತ ಆರ್ಥಿಕ ವಿನ್ಯಾಸವನ್ನು ಕಳೆದ ನಾಲ್ಕು ಆಯವ್ಯಯಗಳಲ್ಲಿ ನಾನು ಜನತೆಯ ಮುಂದಿಟ್ಟಿದ್ದೇನೆ. ಅದನ್ನು ಮತ್ತಷ್ಟು ವಿಸ್ತರಿಸುವ, ಎತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಈ ಆಯವ್ಯಯದಲ್ಲಿ ಮಾಡಿದ್ದೇನೆ. ಅಭಿವೃದ್ಧಿಯ ಫಲ ಜನಜೀವನದಲ್ಲಿ ಪ್ರತಿಫಲಿತವಾಗಬೇಕೆಂಬುದು ನನ್ನ ಬಯಕೆ. ಇದೇ ನಮ್ಮ ಸರ್ಕಾರದ ಸಾಧನೆಯ ನಿಜವಾದ ಮಾನದಂಡವೆಂದು ನಾನು ನಂಬಿದ್ದೇನೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೋಧಿಸುವವರು ರಾಮರಾಜ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ. ಜನಪರ ಸರ್ಕಾರವೆಂದರೆ ಅಭಿವೃದ್ಧಿ ವಿರೋಧಿ ಸರ್ಕಾರ ಎನ್ನುವಂಥ ಬಾಲಿಶವೂ, ಸಂಕುಚಿತವೂ ಅದ ಕಲ್ಪನೆಗಳು ಅದು ಹೇಗೋ ವಿತ್ತೀಯ ವಲಯದಲ್ಲಿ ನುಸುಳಿಬಿಟ್ಟಿವೆ". ತಮ್ಮ ಈ ನಂಬಿಕೆಗೆ ಪೂರಕವಾಗಿ ಮುಖ್ಯಮಂತ್ರಿ ಕಳೆದ ನಾಲ್ಕು ವರ್ಷಗಳಲ್ಲಿ ವಿವಿಧ ವರ್ಗಗಳಿಗೆ ಮಾಡಿದ 'ಅನುದಾನ ವಿತರಣೆ' ಯ ಮುಂದುವರಿಗೆ ಜೊತೆಗೆ ತೀರಾ ಕಡೆಗಣಿತವಾದ ಜೇನುಕುರುಬ, ಕೊರಗ, ಸೋಲಿಗ, ಎರವ, ಕಾಡುಕುರುಬ ಮತ್ತು ಮಲೆಕುಡಿಯರಂಥ ಆದಿವಾಸಿ ಸಮುದಾಯಗಳನ್ನು ಕೂಡ ಹುಡುಕಿ ಅವರಿಗೂ ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಒದಗಿಸಿದ್ದಾರೆ".

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೆ, ಮುಂದುವರಿದು ಹೇಳುತ್ತಾರೆ.,

"ಕಳೆದ ನಾಲ್ಕು ಬಜೆಟ್‌ಗಳಲ್ಲಿ ಅಹಿಂದ ವರ್ಗದ ಕಲ್ಯಾಣಕ್ಕೆ ತೆಗೆದಿರಿಸಿದ ದುಡ್ಡಿನಿಂದಾಗಿ ಆ ಸಮುದಾಯಗಳ ಬದುಕಿನಲ್ಲಿ ಯಾವ ಬದಲಾವಣೆ ಆಗಿದೆ ಎಂಬುದರ ಒಂದು ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಅವರು ಇದೇ ಬಜೆಟ್‌ನಲ್ಲಿ ಮಾಡಬೇಕಾಗಿತ್ತು. ಅದರಿಂದ ಅವರೇ ಹೇಳಿದ ಹಾಗೆ 'ಅಭಿವೃದ್ಧಿಯ ಫಲ ಜನಜೀವನದಲ್ಲಿ ಹೇಗೆ ಪ್ರತಿಫಲಿತವಾಗಿದೆ' ಎಂದು ಗೊತ್ತಾಗುತ್ತಿತ್ತು. ಅಹಿಂದ ವರ್ಗದ ಜೀವನ ಮಟ್ಟದಲ್ಲಿ ಅಂಥ ಮಾರ್ಪಾಡು ಆಗಿದ್ದರೆ ಅದು ರಾಜ್ಯದ ಒಟ್ಟು ಆರ್ಥಿಕ ಅಭಿವೃದ್ಧಿಯಲ್ಲಿಯೂ ವ್ಯಕ್ತವಾಗುತ್ತಿತ್ತು. ಮತ್ತು ಬಜೆಟ್ಟಿನ ಮೇಲಿನ ಹೊರೆಯನ್ನು ಕಡಿಮೆ ಮಾಡುತ್ತಿತ್ತು."

ಮಾನ್ಯ ಸಭಾಪತಿಯವರೆ, ನಾನು ಈ ಮಾತನ್ನು ಇಲ್ಲಿ ಏಕೆ ಪ್ರಸ್ತಾಪ ಮಾಡಿದ್ದೇನೆ ಅಂದರೆ, ಮಾನ್ಯ ಮುಖ್ಯ ಮಂತ್ರಿಯವರು ಹಣವನ್ನು ಕೊಟ್ಟಿದ್ದಾರೆ. ಐದು ಬಜೆಟ್‌ಗಳಲ್ಲಿ ಶೋಷಿತ ಸಮುದಾಯಗಳಿಗೆ, ಹಿಂದುಳಿದ ವರ್ಗದವರಿಗೆ ಮತ್ತು ದಲಿತ ವರ್ಗದವರಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಮಗೆ ಬೇಕಾಗಿರುವಂತಹದ್ದು progress report. ಸರ್ಕಾರ ಕೊಟ್ಟಿರುವಂತಹ ಹಣದಲ್ಲಿ ಏನು ಬದಲಾವಣೆ ಆಗಿದೆ? ಶೈಕ್ಷಣಿಕವಾಗಿ ಎಷ್ಟು ಪ್ರಗತಿಯಾಗಿದೆ? ಸಾಮಾಜಿಕವಾಗಿ ಆ ಸಮುದಾಯಗಳು ಎಷ್ಟು ಪ್ರಗತಿಯಾಗಿವೆ? ಇದನ್ನು ಇಲ್ಲಿಯವರೆಗೂ ಸರ್ಕಾರ ರಾಜ್ಯದ ಜನತೆಗೆ ತಿಳಿಸುವಂತಹ ಪ್ರಯತ್ನವನ್ನು ಮಾಡಿಲ್ಲ. ಅದನ್ನೇ ಪದ್ಮರಾಜ ದಂಡಾವತಿರವರು ಲೇಖನದಲ್ಲಿ ಹೇಳಿದ್ದು. 'ಫಲಿತವಾಗಿದೆ' ಎನ್ನುವ ಮಾತಿಗೆ ಅರ್ಥ ಬರಬೇಕಾದರೆ, ರಾಜ್ಯ ಸರ್ಕಾರ ಅದರ progress report ಅನ್ನು ಕೊಡಬೇಕಾಗುತ್ತದೆ. ಬರೀ ಹಣದ ಬಿಡುಗಡೆ ಒಂದೇ ರಾಜ್ಯ ಸರ್ಕಾರಕ್ಕೆ ಮಾನದಂಡವಾಗುವುದಿಲ್ಲ ಎನ್ನುವ ಮಾತನ್ನು ತಮ್ಮ ಲೇಖನದಲ್ಲಿ ಹೇಳುತ್ತಾರೆ. ಅದೇರೀತಿ...

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರೆ, ಬೇಗ conclude ಮಾಡಿ.

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೆ, ಎರಡು ನಿಮಿಷಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ನಡೆಯುತ್ತಿರುವ ಅಂಗನವಾಡಿ ಕಾರ್ಯಕರ್ತರ ಪ್ರತಿಭಟನೆಯನ್ನು ನಿಭಾಯಿಸಲು ಸಹ ಮಹಿಳಾ ಮತ್ತು ಮಕ್ಕಳಾ ಕಲ್ಯಾಣ ಇಲಾಖೆಗೆ ಸಾಧ್ಯವಾಗಿಲ್ಲ. ಆದರೆ, ಈ ಸಲದ ಬಜೆಟ್‌ನಲ್ಲಿ ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘೋಷಣೆಯನ್ನು ಮಾಡಿದ್ದಾರೆ. "ಸಮಗ್ರ ಅಧ್ಯಯನಕ್ಕಾಗಿ ಡಾ||ಜಯಮಾಲ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಸಮಿತಿಯ ಪ್ರಮುಖ ಶಿಫಾರಸ್ಸುಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಆಳವಡಿಸಲಾಗಿದೆ". ಬಹುತೇಕ ಲೈಂಗಿಕ ಕಾರ್ಯಕರ್ತರ ಸಮಸ್ಯೆ ಮತ್ತು ಅವರ ಜೀವನಗಳನ್ನು ಕುರಿತು ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಇದು ಒಂದು ಒಳ್ಳೆಯ ಕೆಲಸ ಆಗಿದೆ. ರಾಜ್ಯ ಸರ್ಕಾರ ಈ ಸಮಗ್ರ ವರದಿಯನ್ನು ಸದನದ ಮುಂದೆ ಮಂಡನೆ ಮಾಡುವುದರ ಜೊತೆಗೆ implementation ಮಾಡಬೇಕು. ಕೇವಲ ಇಲ್ಲಿ ವರದಿ ಮಂಡನೆ ಮಾಡುವಂತಹದ್ದು ಅಥವಾ ಇನ್ನೊಂದು ಸಮಿತಿಯನ್ನು ರಚನೆ ಮಾಡುವಂತಹದ್ದು ಪರಿಹಾರ ಆಗುವುದಿಲ್ಲ. ಡಾ||ಜಯಮಾಲರವರ ವರದಿಯನ್ನು ಒಳ್ಳೆಯ ವರದಿ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಡಾ||ಜಯಮಾಲರವರ ವರದಿಯನ್ನು ಸದನದಲ್ಲಿ ಮಂಡನೆ ಮಾಡುವುದರ ಜೊತೆಗೆ ಅದರ implementation ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ. ಅದರ ಜೊತೆಗೆ ಇನ್ನೊಂದು ಪ್ರಶ್ನೆಯನ್ನು ಎತ್ತಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾವಿಕವಾಗಿ ಮಾತನಾಡುತ್ತಾ ಒಂದು ಮಾತನ್ನು ಹೇಳುತ್ತಾರೆ;

> "ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ಗೆ ತಿದ್ದುಪಡಿ" ಮಹಾರಾಷ್ಟದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಆದಂತಹ ಒಂದು ಎಸ್‌ಸಿ/ಎಸ್‌ಟಿ ಅನುದಾನ ಬಳಕೆಗೆ ತಿದ್ದುಪಡಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಇಂತಹ ಕಾಯ್ದೆಯನ್ನು ಜಾರಿಗೆ ತಂದಿದ್ದಾರೆ. ಇದನ್ನು ಮೆಚ್ಚುವಂತಹ ವಿಚಾರ. ಆದರೆ, ಅವರು ಮುಂದುವರಿದು ಈ ರೀತಿ ಹೇಳುತ್ತಾರೆ. "ಈವರೆವಿಗೂ, ಯೋಜನಾ ಗಾತ್ರವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಮೂಲವೆಂದು ಪರಿಗಣಿಸಲಾಗುತ್ತಿತ್ತು. 2017-2018 ರಿಂದ ಯೋಜನೆ ಮತ್ತು ಯೋಜನೇತರದಲ್ಲಿನ ವಿಂಗಡಣೆಯು ಇಲ್ಲದೇ ಹೋಗುವುದರಿಂದ ಈ ಮೂಲವನ್ನು ಬದಲಾಯಿಸಬೇಕಾಗುತ್ತದೆ. ಸಂಚಿತ ನಿಧಿಯಿಂದ ವಿನಾಯಿತಿ ವೆಚ್ಚಗಳನ್ನು ಕಳೆದು ಸಿಗುವ ಹಂಚಿಕೆಗೊಳಿಸಬಹುದಾಗ ಆಯವ್ಯಯವನ್ನು ಮೂಲವೆಂದು ಪರಿಗಣಿಸಲಾಗುವುದು. ವಿನಾಯಿತಿ ವೆಚ್ಚಗಳೆಂದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಬಾರದ ವೆಚ್ಚಗಳಾದ ವೇತನ, ವೇತನಾನುದಾನ (ಜಿಐಎ), ಪಿಂಚಣಿ, ಆಡಳಿತಾತ್ಮಕ ವೆಚ್ಚ, ರಾಜ್ಯ ಸರ್ಕಾರದ ಸಾಲ ಮತ್ತು ಆಯವ್ಯಯೇತರ ಸಾಲಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣದಿಂದ ಉಂಟಾಗುವ ಅಸಲು ಮರುಪಾವತಿ ಮತ್ತು ಬಡ್ಡಿ ಪಾವತಿ ಮತ್ತು ಪ್ರಕಟಿಸಲಾಗುವ ಇತರೇ ಆಡಳಿತಾತ್ಮಕ ಸ್ವರೂಪದ ವೆಚ್ಚಗಳು. ಈ ಹಂಚಿಕೆಗೊಳಿಸಬಹುದಾದ ಆಯವ್ಯಯದ 24.1% ಅನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಗಾಗಿ ನಿಗದಿಪಡಿಸಲಾಗುವುದು. ಈ ಸಂಬಂಧ ಈ ಅಧಿವೇಶನದಲ್ಲಿ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ತರಲಾಗುವುದು".

ಮಾನ್ಯ ಸಭಾಪತಿಯವರೆ, ಅಂದರೆ ಏನು ಎಸ್‌ಸಿ/ಎಸ್‌ಟಿ ಯೋಜನೆಗಳ implementation ಗಾಗಿ ಇಲ್ಲಿ ಅನುದಾನವನ್ನು ಕೊಟ್ಟಿದ್ದಾರೆ ಅಥವಾ ಬಜೆಟ್‌ನಲ್ಲಿ allocation ಮಾಡಿದ್ದಾರೆ ಅದರಲ್ಲಿ ವೇತನ ಮತ್ತು ಇತರೇ ವೆಚ್ಚ ಹಾಡುವುದಕ್ಕೆ, ಸಾಲ ಮರುಪಾವತಿ ಮಾಡುವುದಕ್ಕೆ, ಸಾಲ ಬಡ್ಡಿ ಕೊಡುವುದಕ್ಕೆ ಬಳಕೆ ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಪ್ರಾಸ್ತವಿಕವಾಗಿ ಹೇಳಿದ್ದಾರೆ. ಒಂದು ಕಡೆ, ಆ ವರ್ಗಕ್ಕೆ ಬಜೆಟ್ ಗಾತ್ರಕ್ಕೆ ಅಥವಾ ಜನಸಂಖ್ಯೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಿ ಅನುದಾನವನ್ನು ಕೊಟ್ಟು ಇನ್ನೊಂದು ಕಡೆ ವೇತನ ಕೊಡುವುದಕ್ಕೆ, ಸಾಲ ಮರುಪಾವತಿ ಮಾಡುವುದಕ್ಕೆ, ಬಡ್ಡಿ ಮರುಪಾವತಿ ಮಾಡುವುದಕ್ಕೆ ಬಳಸಿಕೊಳ್ಳುತ್ತೇವೆ ಅಂದರೆ, ಅದರ ಫಲ ಯಾವ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಿಗುತ್ತದೆ ಎನ್ನುವುದು ನನ್ನ ಪ್ರಶ್ನೆ. ಮಾನ್ಯ ಸಭಾಪತಿಯವರೆ, ದಯವಿಟ್ಟು ಇದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಇದೇ ಸಮಯದಲ್ಲಿ ನಾನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬಯಲುಸೀಮೆ ಮಂಡಳಿಗೆ ಕಳೆದ ಸಾಲಿನಲ್ಲಿ ಸುಮಾರು 40 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದರೆ. ಈ ವರ್ಷದ ಬಜೆಟ್‌ನಲ್ಲಿ ಅದಕ್ಕೆ ಸ್ವಲ್ಪ ಹೆಚ್ಚುವರಿ ಮಾಡಿ ಅದನ್ನು ಕೊಟ್ಟಿದ್ದಾರೆ.

(ಮುಂದು .....)

**(374):5.40:22-03-2017:ಎಂವಿ:ಎಕೆ**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್ ಬಾಬು (ಮುಂದು..):-**

ಬಯಲು ಸೀಮೆಯ ಮಂಡಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿ ಚರ್ಚೆಯನ್ನು ಮಾಡಿದಂತಹ ಸಂದರ್ಭದಲ್ಲಿ, ಸರ್ಕಾರ ಸಾಲ ಮರುಪಾವತಿ ಮಾಡುವುದಕ್ಕೆ ಮತ್ತು ವೇತನ ಕೊಡುವುದಕ್ಕೆ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಹೇಳಿದರು. ಅಂದರೆ ಒಂದು ಕಡೆ ಬಯಲು ಸೀಮೆ ಮಂಡಳಿಯ ಮೂಲಕ ಆ ಪ್ರದೇಶಾಭಿವೃದ್ಧಿ ಮಾಡುತ್ತೇವೆಂದು ಹೇಳುವುದು, ಕೊಟ್ಟಂತಹ ಹಣವನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳುವುದು, ಇದರಿಂದ ಏನು ಸಂದೇಶವನ್ನು ಸರ್ಕಾರ ಈ ರಾಜ್ಯಕ್ಕೆ ಕೊಡುತ್ತದೆ ಎಂಬ ಮಾತನ್ನು ನಾನು ಮತ್ತೊಮ್ಮೆ ಕೇಳುತ್ತಾ, ಅದಕ್ಕೆ ಈ Article quote ಮಾಡಿರುವುದು. ಏನನ್ನೋ ತೋರಿಸಿ, ಇನ್ನೇನನ್ನೋ ಮುಚ್ಚಿಡುವಂತಹ ಬಜೆಟ್. ದಯಮಾಡಿ ಆ ರೀತಿ ಆಗುವುದು ಬೇಡ. ರಾಜ್ಯ ಸರ್ಕಾರ ಯಾವ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಿದೆ, ಆ ಯೋಜನೆಗಳಿಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಬಹಳ ವಿಶೇಷವಾಗಿ ಕೃಷಿ ವಲಯ ಮತ್ತು ಶಿಕ್ಷಣ ವಲಯಕ್ಕೆ ಆದ್ಯತೆಯ ಮೇಲೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎಂಬ ಮಾತನ್ನು ಹೇಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀ ಎಂ.ನಾರಾಯಣಸ್ವಾಮಿಯವರು ಮಾತನಾಡುವುದು.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 2017-18ನೇ ಸಾಲಿನ ಬಜೆಟ್ ಪರವಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಬಜೆಟ್‌ನ್ನು ಏನು ಮಂಡನೆ ಮಾಡಿದ್ದಾರೋ, ಈ ಬಜೆಟ್ ಬಡವರ ಪರವಾಗಿ, ಎಲ್ಲಾ ವರ್ಗದವರ ಪರವಾಗಿ, ಅಭಿವೃದ್ಧಿಯ ಪರವಾಗಿ ಮತ್ತು ಪ್ರಗತಿಪರವಾಗಿ ಇರುವುದರಿಂದ ಅವರಿಗೆ ಧನ್ಯವಾದಗಳನ್ನು ಹೇಳುವುದರ ಮುಖಾಂತರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ. 2013ನೇ ಸಾಲಿನಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ನಾಡಿನ ಸಮಸ್ತ ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರು, ನಮ್ಮ ಸರ್ಕಾರವನ್ನು ಅಧಿಕಾರಕ್ಕೆ ತಂದರೆ, ನಾವು ಈ ತರಹದ ಎಲ್ಲಾ ಕೆಲಸಗಳನ್ನು ಮಾಡುತ್ತೇವೆಂದು ಭರವಸೆಗಳನ್ನು ಕೊಟ್ಟಿದ್ದರು. ಆ ಭರವಸೆಗಳನ್ನು ಅನುಷ್ಠಾನಕ್ಕೆ ತರುವಂತಹ ರೀತಿಯಲ್ಲಿ, 2013ರಿಂದ ಇಂದಿನವರೆವಿಗೂ ಮಂಡನೆ ಮಾಡಿರುವಂತಹ ಐದು ಬಜೆಟ್‌ಗಳಲ್ಲೂ ಕೂಡ, ವರ್ಷದಿಂದ ವರ್ಷಕ್ಕೆ, ಪ್ರಗತಿಯನ್ನು ಕಾಣುವುದರ ಮುಖಾಂತರವಾಗಿ, ನಮ್ಮ ಸರ್ಕಾರ ಈ ನಾಡಿನ ಸಮಸ್ತ ಜನತೆಗೆ ಕೊಟ್ಟಂತಹ ವಾಗ್ದಾನವನ್ನು, ನುಡಿದಂತೆ ನಡೆದುಕೊಂಡು ಬರುತ್ತಿರುವುದನ್ನು ನಾವು ಕಂಡಿದ್ದೇವೆ. ಇವತ್ತಿನ ದಿವಸ ಬಜೆಟ್‌ನ ಗಾತ್ರ 1,86,501 ಕೋಟಿ ರೂಪಾಯಿಗಳಾಗಿದ್ದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದುವರೆವಿಗೂ ಯಾರೂ ಕೂಡ ಇಷ್ಟು ದೊಡ್ಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದ ಬಜೆಟ್‌ನ್ನು ಕೊಟ್ಟಿರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದೇನೆ. ಯಾವುದೇ ಇಲಾಖೆಗಳು ಇರಬಹುದು, ಎಲ್ಲಾ ಇಲಾಖೆಗಳಿಗೂ ಕೂಡ ಸಮಾನವಾದಂತಹ ಅದಕ್ಕೆ ಅನುಗುಣವಾದಂತಹ ರೀತಿಯಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಉದಾಹರಣೆಗೆ, ಶಿಕ್ಷಣ ಇಲಾಖೆಗೆ ಸುಮಾರು 22,667 ಕೋಟಿ ರೂಪಾಯಿಗಳನ್ನು, ನಗರಾಭಿವೃದ್ಧಿ ಇಲಾಖೆಗೆ ಸುಮಾರು 18,227 ಕೋಟಿ ರೂಪಾಯಿಗಳನ್ನು, ಜಲಸಂಪನ್ಮೂಲ ಇಲಾಖೆಗೆ ಸುಮಾರು 18,028 ಕೋಟಿ ರೂಪಾಯಿಗಳನ್ನು, ಇಂಧನ ಇಲಾಖೆಗೆ ಸುಮಾರು 14,094 ಕೋಟಿ ರೂಪಾಯಿಗಳನ್ನು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸುಮಾರು 14,061 ಕೋಟಿ ರೂಪಾಯಿಗಳನ್ನು ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಸುಮಾರು 11,717 ಕೋಟಿ ರೂಪಾಯಿಗಳನ್ನು, ಅಂದರೆ ಈಗ ಎಲ್ಲಾ ಇಲಾಖೆಗಳನ್ನು ತೆಗೆದುಕೊಂಡರೂ ಕೂಡ, ಎಲ್ಲಾ ಇಲಾಖೆಗಳಿಗೆ ಸರಿ ಸಮಾನವಾದಂತಹ ಪಾಲನ್ನು ಕೊಡುವುದರ ಮುಖಾಂತರವಾಗಿ ಇಷ್ಟು ದೊಡ್ಡ ಬಜೆಟ್‌ನ್ನು ಮಂಡನೆ ಮಾಡಿರುವಂಥದ್ದು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳುತ್ತಿದ್ದರು, ಏಕೆಂದರೆ, ಅವರು ಹಿರಿಯ ಸದಸ್ಯರಿದ್ದಾರೆ, ಅವರು ಮಾತನಾಡಬೇಕಾದರೆ ಅವರನ್ನು ನೋಡಿ ಕಲಿಯತಕ್ಕಂಥದ್ದು ಬಹಳಷ್ಟು ಇದೆ. ಮಾತು ಮಾತಿಗೂ ಅವರು 2013-14ರ ಬಜೆಟ್ ಪುಸ್ತಕವನ್ನು ತೋರಿಸಿ, ಈ ರೀತಿ ನಿಮ್ಮ ಸರ್ಕಾರ ಹೇಳಿತ್ತು ಎಂದು ಹೇಳಿದರು. ಅವರಲ್ಲಿ ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕಿಂತ ಹಿಂದಿನ ಬಜೆಟ್ ಪುಸ್ತಕಗಳನ್ನು ತೆಗೆದುಕೊಳ್ಳಲಿ, ಅವರ ಸರ್ಕಾರ ಆಡಳಿತದಲ್ಲಿದ್ದಂತಹ ಸಂದರ್ಭದಲ್ಲಿ ಏನೇನು, ಯಾವ್ಯಾವ ರೀತಿ ಮಾಡಿದ್ದರು ಎನ್ನತಕ್ಕಂಥದ್ದನ್ನು ನೋಡಬಹುದು. ಇವೊತ್ತು ಅವರು ಮಾತನಾಡುತ್ತಾ, ಮುಖ್ಯಮಂತ್ರಿಗಳು ಏನು 2013-14ನೇ ಸಾಲಿನಲ್ಲಿ ಹೇಳಿದ್ದರು, ಕರ್ನಾಟಕ ರಾಜ್ಯದ ಜನತೆ ಸಾಲ ಸಿಗುತ್ತದೆ ಎಂದು ಸಾಲ ಮಾಡಿಬಿಟ್ಟರೆ, ಅವರ ಮನೆಯ ಮೇಲೆ ಮತ್ತು ಜನರ ಮೇಲೆ ಸಾಲದ ಹೊರೆಯನ್ನು ಹೊರಿಸಬೇಕಾಗುತ್ತದೆ ಎಂಬುವಂತಹ ಮಾತನ್ನು ಹೇಳಿದರು. ಈ ವರ್ಷ ಸುಮಾರು 37,092 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದಾರೆ ಎನ್ನುವಂತಹ ಮಾತನ್ನು ಹೇಳಿದರು. ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇವೆ. ಮೂವತ್ತೇಳು ಸಾವಿರ ಕೋಟಿ ರೂಪಾಯಿಗಳ ಗಾತ್ರ ಬಹಳಷ್ಟು ದೊಡ್ಡದಾಗಿ ಕಾಣುತ್ತದೆ. ಆದರೆ ಬಜೆಟ್‌ನ ಗಾತ್ರ 1,86,501 ಕೋಟಿ ರೂಪಾಯಿಗಳು. ಇವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಏನು ಬಜೆಟ್ ಮಂಡನೆ ಮಾಡಿದ್ದರೋ, ಅವತ್ತಿನ ದಿವಸ ಕೂಡ ಕಾನೂನಿನ ಪ್ರಕಾರ ಶೇಕಡ 25ರಷ್ಟು ಒಳಗಡೆ ಸಾಲ ಮಾಡುವಂಥದ್ದಕ್ಕೆ ಅನುಮತಿ ಇದೆ. ಇವರ ಸರ್ಕಾರ ಅಧಿಕಾರದಲ್ಲಿದ್ದಾಗ ಕೂಡ ಗರಿಷ್ಠವಾದ ಪ್ರಮಾಣದಲ್ಲಿ ಸಾಲವನ್ನು ಮಾಡಿರುವಂಥದ್ದು, ಆದರೆ ಇವತ್ತಿನ ದಿವಸ ಮೂವತ್ತೇಳು ಸಾವಿರ ಕೋಟಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳ ಅಂಕಿ-ಅಂಶ ದೊಡ್ಡದಾಗಿ ಕಾಣಬಹುದು. ಅವರೂ ಕೂಡ ಗರಿಷ್ಠವಾದ ಪ್ರಮಾಣದಲ್ಲಿ ಸಾಲ ಮಾಡಿದ್ದರು. ಆದರೆ, 1,86,501 ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಯಾವ ರೀತಿ ನಾವು ಕ್ರೋಢೀಕರಣ ಮಾಡುತ್ತೇವೆಯೋ, ಅದರ ಜೊತೆಗೆ ಸಾಲವನ್ನು ಕೂಡ ಮಾಡಬೇಕಾಗುತ್ತದೆ. ಆ ಒಂದು ನಿಟ್ಟಿನಲ್ಲಿ ಇವತ್ತಿನ ಬಜೆಟ್‌ನ್ನು ಮಂಡನೆ ಮಾಡಿರುವಂಥದ್ದು. ಸನ್ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ನಿಜವಾಗಿಯೂ ಎಲ್ಲರೂ ಕೂಡ ಒಪ್ಪಲೇಬೇಕಾಗಿರುವಂಥದ್ದು. ಇವತ್ತಿನ ದಿವಸ ಸರ್ಕಾರದ ಅಧೀನದಲ್ಲಿರತಕ್ಕಂಥ ಕಾರ್ಖಾನೆಗಳು ಬಿಳಿ ಆನೆಗಳಾಗಿ ನಮಗೆ ಹೊರೆಯಾಗಿದೆ, ಅಂತಹವುಗಳನ್ನು ಮುಚ್ಚತಕ್ಕಂಥ ಪ್ರಯತ್ನ ಮಾಡಬೇಕು ಎಂದು ಅವರು ಹೇಳಿದರು. ನಿಜವಾಗಿಯೂ ಕೂಡ ಇಂತಹ ಸಲಹೆಗಳನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಏನೆಂದರೆ, ನಮ್ಮ ಕೇಂದ್ರ ಸರ್ಕಾರದ ಪ್ರಪ್ರಥಮ ಮಾನ್ಯ ಪ್ರಧಾನ ಮಂತ್ರಿಗಳಾದಂತಹ ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರುರವರು ನಮ್ಮ ರಾಜ್ಯಕ್ಕೆ ಮತ್ತು ನಮ್ಮ ನಾಡಿಗೆ ಒಂಭತ್ತು ನವರತ್ನಗಳನ್ನು ಅಂದರೆ Public Sector Undertakings ಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ BEL, BEML, HAL, ITI ಮತ್ತು BHEL ನಂತಹ ಕಾರ್ಖಾನೆಗಳನ್ನು ನಮಗೆ ಕೊಟ್ಟಿದ್ದಾರೆ. ಉದಾಹರಣೆಗೆ, ನಮ್ಮ ಮನೆಯ ಪಕ್ಕದಲ್ಲಿರುವಂತಹ BEML ಕಾರ್ಖಾನೆಯ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. BEML ಕಾರ್ಖಾನೆ ಒಂದು defence ಕಾರ್ಖಾನೆ. ಅದು ರಕ್ಷಣಾ ಇಲಾಖೆಗೆ ಸಂಬಂಧಪಟ್ಟಂತಹ ಕಾರ್ಖಾನೆ, ರಾಷ್ಟ್ರದ ರಕ್ಷಣಾ ಇಲಾಖೆಗೆ ಬೇಕಾದಂತಹ ಸಲಕರಣೆಗಳನ್ನು ಕೊಡುತ್ತಿರುವಂತಹ ಒಂದು ಲಾಭದಾಯಕ ಕಾರ್ಖಾನೆ. ಸುಮಾರು 56 ವರ್ಷಗಳಿಂದ ಆ ಕಾರ್ಖಾನೆ ಲಾಭ ಗಳಿಸುತ್ತಿದೆ. ಪ್ರಸ್ತುತ ಅದರಲ್ಲಿ ಸುಮಾರು ಹದಿಮೂರು ಸಾವಿರ ಜನ ಕಾರ್ಮಿಕರಿದ್ದಾರೆ. ಬೆಂಗಳೂರು ನಗರದಲ್ಲಿ BEML ಕಾರ್ಖಾನೆ ಹಾಗೂ Corporate Office ಇದೆ. KGF ನಲ್ಲಿ ಕಾರ್ಖಾನೆ ಇದೆ, ಮೈಸೂರಿನಲ್ಲಿ ಕಾರ್ಖಾನೆ ಇದೆ. ಕೇರಳದ ಪಾಲಕ್ಕಾಡದಲ್ಲಿ ಕಾರ್ಖಾನೆ ಇದೆ. ಇವತ್ತಿನ ದಿವಸ ಇದರ ಒಟ್ಟು ಆಸ್ತಿ ಸುಮಾರು ಒಂದೂವರೆ ಲಕ್ಷ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುತ್ತಿದೆ. Public Sector Undertakings ಸುಮಾರು ಶೇಕಡ 46ರಷ್ಟು Public Share ಹೊಂದಿರತಕ್ಕಂಥದ್ದು, ಇನ್ನುಳಿದಿರುವ ಶೇಕಡ 54ರಷ್ಟು ಸರ್ಕಾರದ ಅಧೀನದಲ್ಲಿದೆ. ಹೀಗಿರುವಾಗ ಕೇಂದ್ರ ಸರ್ಕಾರ ಏತಕ್ಕಾಗಿ ಈ ತರಹ ಮಾಡುತ್ತದೆಂದು ನಮಗೆ ಗೊತ್ತಿಲ್ಲ. ಇವತ್ತಿನ ದಿವಸ ಶೇಕಡ 26ರಷ್ಟು share ಅನ್ನು privatisation ಮಾಡುವುದಕ್ಕೆ ಹೋಗುತ್ತಿದ್ದಾರೆ. ದಯಮಾಡಿ ತಾವು ಏನು ಕಾಳಜಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟಿದ್ದೀರೋ, ಯಾವುದು loss making ಕಾರ್ಖಾನೆಗಳು ಇವೆಯೋ, ಅಂತಹವುಗಳನ್ನು ಮುಚ್ಚಬೇಕು. ಬಿಳಿ ಆನೆಗಳಾಗಿ ಹೊರೆಯಾಗಿದೆ ಎಂದು ಹೇಳಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇವತ್ತಿನ ದಿವಸ ಲಾಭ ಮಾಡುತ್ತಿರುವಂತಹ ಈ ಕಾರ್ಖಾನೆಗಳನ್ನು ಏತಕ್ಕಾಗಿ ಕೇಂದ್ರ ಸರ್ಕಾರ ಮುಚ್ಚುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ತಾವು ತಮ್ಮ ಶಕ್ತಿಯನ್ನು ಉಪಯೋಗಿಸಿಕೊಂಡು, ಕೇಂದ್ರಕ್ಕೆ ಒಂದು ಮನವಿಯನ್ನು ಕೊಡಬೇಕು. ಇದು ಸುಮಾರು ಹದಿಮೂರು ಸಾವಿರ ಕುಟುಂಬಗಳ ಪ್ರಶ್ನೆಯಾಗಿದೆ, ಅದು ಕರ್ನಾಟಕ ರಾಜ್ಯದ ಆಸ್ತಿಯಾಗಿದೆ. ಅದನ್ನು ಮುಚ್ಚುವಂತಹ ಪ್ರಯತ್ನ ಆಗಬಾರದು, ಅದನ್ನು ಉಳಿಸಿಕೊಳ್ಳಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಜೊತೆಗೆ ಮಾನ್ಯ ಸದಸ್ಯರಾದಂತಹ ಶ್ರೀ ರಮೇಶ್ ಬಾಬು ರವರು ಮಾತನಾಡುತ್ತಾ ಹೇಳುತ್ತಿದ್ದರು, ಕೃಷಿ ಇಲಾಖೆಯಲ್ಲಿ ಯಾವುದೇ ರೀತಿಯ ಸಾಧನೆ ಮಾಡಲಿಲ್ಲ, ಕಾಂಗ್ರೆಸ್ ಪಕ್ಷದವರು 160 ಪ್ರಣಾಳಿಕೆಯನ್ನು ತಂದರು, ಆ 160 ಪ್ರಣಾಳಿಕೆಗಳಲ್ಲಿ 120-130ನ್ನು ಸಾಧನೆ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ನನಗೆ ಕಾಣುತ್ತಿಲ್ಲವೆಂಬ ಮಾತನ್ನು ಹೇಳಿದರು. ನಾನು ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಕೃಷಿ ಯಂತ್ರದಾರ ಕೇಂದ್ರಗಳನ್ನು ಯಾವುದನ್ನೂ ತೆಗೆದಿಲ್ಲ ಎನ್ನುವಂಥದ್ದನ್ನು ಹೇಳಿದ್ದಾರೆ. ಇವತ್ತಿನ ದಿವಸ ಪುಸ್ತಕದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಕೃಷಿ ಉತ್ಪಾದನಾ ವೆಚ್ಚ ತಗ್ಗಿಸಲು ಮತ್ತು ಕೃಷಿ ಕಾರ್ಮಿಕರ ಕೊರತೆ ನಿವಾರಿಸಲು, ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಒದಗಿಸಲಾಗಿದೆ. ಅಲ್ಲದೇ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಮುಖಾಂತರವಾಗಿ ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಕೊಡುವಂತಹ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈ ಯೋಜನೆಯ ಅಡಿಯಲ್ಲಿ ಸುಮಾರು 10.5 ಲಕ್ಷ ಜನ ರೈತರು ಅನುಕೂಲವನ್ನು ಪಡೆದುಕೊಂಡಿರುವಂಥದ್ದು. ನಮ್ಮ ಸರ್ಕಾರ ಏನು ವಾಗ್ದಾನ ಮಾಡಿದೆ, ಅದರ ಪ್ರಕಾರ ಹೆಜ್ಜೆಯನ್ನು ಇಟ್ಟುಕೊಂಡು ಅದನ್ನು fulfil ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿ ರೈತರ ಕೃಷಿ ಯಂತ್ರಗಳು ಮತ್ತು ಕೃಷಿ ಸಂಸ್ಕರಣೆ ಸಲಕರಣೆಗಳನ್ನು ವಿತರಿಸಲಾಗಿದೆ. ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ನೀಡಲು, ಸುಮಾರು 350 ಕೃಷಿ ಯಂತ್ರದಾರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರಿಂದ 4.3 ಲಕ್ಷ ರೈತರು ಈ ಕೇಂದ್ರಗಳಿಂದ ಸೇವೆಗಳನ್ನು ಪಡೆದುಕೊಂಡಿರತಕ್ಕಂಥದ್ದು. ನಾವು ಬಜೆಟ್‌ನಲ್ಲಿ ಏನು ಹೇಳಿದ್ದೇವೆಯೋ ಮತ್ತು ಏನು ವಾಗ್ದಾನ ಮಾಡಿದ್ದೇವೆಯೋ ಅದರ ಪರವಾಗಿ ನಡೆದುಕೊಂಡು ಹೋಗುತ್ತಿರತಕ್ಕಂಥದ್ದು ನಮ್ಮ ಸರ್ಕಾರ. ಜೊತೆಯಲ್ಲಿ ಕೃಷಿ ಸಾಲದ ಬಗ್ಗೆ ಶೂನ್ಯ ಬಡ್ಡಿಯಲ್ಲಿ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ರೈತರಿಗೆ ಸಾಲವನ್ನು ಕೊಡತಕ್ಕಂಥದ್ದು ನಮ್ಮ ಯೋಜನೆ. ಈಗ ಅದಕ್ಕಿಂತ ಒಂದು ಹೆಜ್ಜೆಯನ್ನು ಮುಂದೆ ಇಟ್ಟು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡ ಮೂರರ ಬಡ್ಡಿಯಲ್ಲಿ ಸುಮಾರು ಹತ್ತು ಲಕ್ಷದ ತನಕ ಸಾಲ ಕೊಡುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಶೂನ್ಯ ಬಡ್ಡಿಯಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟರೆ, ವ್ಯವಸಾಯ ಮಾಡುವುದಕ್ಕೆ ಅದು ಸಾಕಾಗುವುದಿಲ್ಲ, ಆದುದರಿಂದ ಹೆಚ್ಚಿಗೆ ಕೊಡಬೇಕು, ಅವರನ್ನು ಸ್ವಾವಲಂಭಿಗಳನ್ನಾಗಿ ಮಾಡಬೇಕೆಂದು ಹೇಳಿ, ಕೇವಲ ಶೇಕಡ ಮೂರರಷ್ಟು ಬಡ್ಡಿಯ ರೂಪಾಂತರದಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಒಬ್ಬ ರೈತರಿಗೆ ಸಾಲ ಕೊಡತಕ್ಕಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿಕೊಂಡು ಬರುತ್ತಿದೆ. ರೈತರು ಆತ್ಮಹತ್ಯೆ ಮಾಡಿಕೊಂಡರೆ, ಯಾರೂ ಕೂಡ ಹೇಳುವವರಿಲ್ಲ ಮತ್ತು ಕೇಳುವವರಿಲ್ಲ, ಸರ್ಕಾರದಿಂದ ಏನೂ ಆಗಿಲ್ಲವೆಂಬ ಮಾತನ್ನು ಹೇಳಿದರು. ಇದುವರೆವಿಗೂ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡರೆ ಕೇವಲ ಎರಡು ಲಕ್ಷ ರೂಪಾಯಿಗಳ ಪರಿಹಾರ ಧನ ಕೊಡುವಂತಹ ಕೆಲಸ ನಡೆಯುತ್ತಿತ್ತು. ಆದರೆ ಸನ್ಮಾನ್ಯ ರಾಹುಲ್ ಗಾಂಧಿಯವರು ರಾಜ್ಯಕ್ಕೆ ಭೇಟಿ ನೀಡಿದ್ದಂತಹ ಸಂದರ್ಭದಲ್ಲಿ, ತೀವ್ರವಾದ ಬರಗಾಲ ಈ ರಾಜ್ಯದಲ್ಲಿದೆ ಆದುದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ, ನಿಮ್ಮ ಪರವಾಗಿ ನಾವು ಇದ್ದೇವೆ.

**(ಮುಂದು...)**

(375) 22.03.2017 05.50 LL-AK

**ಉಪಸಭಾಪತಿಯವರ ಉಪಸ್ಥಿತಿ**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದು...)**

ನಿಮಗೆ ಶಕ್ತಿಯನ್ನು ತುಂಬುತ್ತೇವೆ ಎನ್ನುವಂತಹ ಮಾತನ್ನು, ಭರವಸೆಯನ್ನು ಕೊಟ್ಟು ಹೋದರು. ಅದು ಕೇವಲ ಭರವಸೆ ಮತ್ತು ಮಾತಾಗಿ ಉಳಿಯಲಿಲ್ಲ. 2 ಲಕ್ಷ ರೂಪಾಯಿ ಏನು ಪರಿಹಾರದ ಹಣ ಕೊಡುತ್ತಿದ್ದರು, ಅದನ್ನು 5 ಲಕ್ಷ ರೂಪಾಯಿಗಳಿಗೆ ಸರ್ಕಾರ ಏರಿಸಿದೆ. ಯಾರು ಯಾರು ನಿಜವಾದ ಪ್ರಾಮಾಣಿಕ ರೈತರು ಸಾಲ ಮಾಡಿ ಅಥವಾ ಬರಗಾಲಕ್ಕಾಗಿ ಪ್ರಾಣವನ್ನು ಕಳೆದುಕೊಂಡಿದ್ದಾರೋ ಅಂತಹವರನ್ನು ಗುರುತು ಮಾಡಿ ಜಿಲ್ಲಾಧಿಕಾರಿಯ ಮುಖಾಂತರವಾಗಿ ಅವರಿಗೆ ಪರಿಹಾರ ಕೊಡತಕ್ಕಂತಹ ಕೆಲಸವನ್ನು ಪ್ರಾಮಾಣಿಕವಾಗಿ ನಮ್ಮ ಸರ್ಕಾರ ಮಾಡಿದೆ.

ಜಲ ಸಂಪನ್ಮೂಲ ಇಲಾಖೆಯಲ್ಲಿ ಇವತ್ತಿನ ದಿವಸ ಎತ್ತಿನಹೊಳೆ ಯೋಜನೆ... ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಮಾತನಾಡುತ್ತಾ ಹೇಳಿದರು, "ಎತ್ತಿನಹೊಳೆ ಎನ್ನತಕ್ಕಂತಹ ಒಂದು ಯೋಜನೆಯಲ್ಲಿ ಕೇವಲ ಅದಕ್ಕೆ ಬೇಕಾಗಿರತಕ್ಕಂತಹ ಮಷಿನರಿಗಳು, ಪೈಪುಗಳನ್ನು ಬೇಕಾದಷ್ಟು ಖರೀದಿ ಮಾಡಿಟ್ಟುಕೊಂಡಿದ್ದಾರೆ ಎನ್ನತಕ್ಕಂತಹ ಮಾತನ್ನು"... ಸ್ವಾಮಿ, ಒಂದು ವಿಷಯವನ್ನು ನಾನು ಸದನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬಯಸುತ್ತೇನೆ. ಆ ಭಾಗದಲ್ಲಿರತಕ್ಕಂತಹ ರೈತರಿಗೆ ಒಂದು ರೀತಿಯಾದರೆ, ಬಯಲು ಸೀಮೆಯಲ್ಲಿರತಕ್ಕಂತಹ ನಾವುಗಳು, ಅಂದರೆ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ರಾಮನಗರ ಇಲ್ಲಿ ಯಾವುದೇ ರೀತಿಯ ನೀರಾವರಿ ಯೋಜನೆಗಳು ಇಲ್ಲ. ಬೋರ್‌ವೆಲ್‌ಗಳನ್ನು ಕೊರೆದರೆ 1000 ರಿಂದ 1200 ಅಡಿಗಳ ಒಳಗೆ ಹೋದರೂ ಕೂಡ ನಮಗೆ ನೀರು ಸಿಗುತ್ತಿಲ್ಲ. ಅಂತರ್ಜಲ ಕುಸಿದು ಹೋಗಿದೆ. ಅದಕೋಸ್ಕರವಾಗಿ ಎತ್ತಿನಹೊಳೆ ಯೋಜನೆಯಿಂದ ನೀರನ್ನು ತರತಕ್ಕಂತಹ ಒಂದು ಯೋಜನೆಯನ್ನು ನಮ್ಮ ಸರ್ಕಾರ ಕೈಗೆತ್ತಿಕೊಂಡಿದೆ. ಅದಕ್ಕಾಗಿ ಇವತ್ತು ಸುಮಾರು 1000 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚನ್ನು ಮಾಡತ್ತಿದ್ದು. ಕೆಲಸ ಪ್ರಾರಂಭವಾಗಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಗಮನ ಸೆಳೆದು ಸರ್ಕಾರಕ್ಕೆ ಸಲಹೆಗಳನ್ನು ಕೊಡಲಿ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇವತ್ತಾದರೂ, ನಾವು ಆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಇನ್ನು 5 ವರ್ಷಕ್ಕಾದರೂ ಆ ನೀರು ಇಲ್ಲಿಗೆ ತಲುಪಬೇಕಲ್ಲವೇ? ಯಾರಾದರೂ ಒಬ್ಬರೂ ಪ್ರಾರಂಭ ಮಾಡಬೇಕಲ್ಲವೇ? ಆ ಒಂದು ನಿಟ್ಟಿನಲ್ಲಿ ನಮ್ಮ ಸರ್ಕಾರ ಈ ಕೆಲಸವನ್ನು ಕೈಗೊಂಡಿದೆ. ನಮಗೆ ಕುಡಿಯುವುದಕ್ಕೆ ನೀರಿಲ್ಲ. ಜಾನುವಾರುಗಳಿಗೆ ನೀರಿಲ್ಲ. ಮಳೆ ಬರುತ್ತಿಲ್ಲ. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿದ್ದು, ಆ ನೀರನ್ನು ಇಲ್ಲಿಗೆ ತರತಕ್ಕಂತಹ ಕೆಲಸ ಇಂದು ನಾವು ಮಾಡಬೇಕಾಗಿದೆ. ಜೊತೆಯಲ್ಲಿ ಆ ಭಾಗದಲ್ಲಿರತಕ್ಕಂತಹ ಶಾಸಕರುಗಳು ಈ ಕೆಲಸವನ್ನು ವಿರೋಧ ಮಾಡುತ್ತಿದ್ದರೂ ಕೂಡ, ಅವೆಲ್ಲವನ್ನು ಎದುರಿಸಿಕೊಂಡು ನಾವು ಈ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ನಾವು ಇಂದು ಕೆಲಸ ಮಾಡುತ್ತಿದ್ದೇವೆ. ಆದುದರಿಂದ, ಆ ಎತ್ತಿನಹೊಳೆ ಯೋಜನೆಯಲ್ಲಿ ಏನೇನು components ಅನ್ನು ತೆಗೆದುಕೊಂಡಿದ್ದೇವೆ... ಅವುಗಳನ್ನು ಖರೀದಿ ಮಾಡಿದಂತಹ ಸಮಯದಲ್ಲಿ ಒಂದು ದರ ಇತ್ತು ಅಥವಾ ಅದನ್ನು ನಾಳೆ ತೆಗೆದುಕೊಳ್ಳಬೇಕಾದರೆ ದರ ಹೆಚ್ಚಾಗಬಹುದು. ಅವನ್ನು ತೆಗೆದುಕೊಂಡಿರತಕ್ಕಂತಹದ್ದು ಒಳ್ಳೆಯದು. ಆದರೆ ಅದರ ಕೆಲಸ ಭರದಿಂದ ಸಾಗಬೇಕು ಎನ್ನುವುದು ನಮ್ಮ ಇಚ್ಛೆಯಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಒಟ್ಟು 65 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವಂತಹ ಏತ ನೀರಾವರಿ ಯೋಜನೆಗೆ ಸುಮಾರು 883.5 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ನಾನು ಆಗಲೇ ಹೇಳಿದಂತೆ, ಈ ಭಾಗದಲ್ಲಿರತಕ್ಕಂತಹ ಕೆರೆಗಳು ಸಂಪೂರ್ಣವಾಗಿ ಬತ್ತಿ ಹೋಗಿವೆ. ಸಂಪೂರ್ಣವಾಗಿ ಈ ಭಾಗದ ರೈತರು ಮಳೆಯನ್ನೇ ಅವಲಂಬಿಸಿ ವ್ಯವಸಾಯ ಮಾಡತಕ್ಕಂತಹದ್ದು ಇದೆ. ಆದುದರಿಂದ ನಮ್ಮ ಸರ್ಕಾರ ಮುಂದಾಲೋಚನೆಯನ್ನು ಮಾಡುವುದರ ಮುಖಾಂತರ, ಈ ಭಾಗಕ್ಕೆ ಯಾವುದೇ ರೀತಿಯ ನದಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲ ಮತ್ತು ಕೆರೆ ಮೂಲಗಳಿಲ್ಲವಾದ್ದರಿಂದ ಈ ನೀರನ್ನು ಹಾಯಿಸುವುದರ ಮುಖಾಂತರವಾಗಿ ಈ ಭಾಗಕ್ಕೆ ನೀರನ್ನು ತರಬೇಕೆನ್ನುವಂತಹ ಒಂದು ಸುದೀರ್ಘ ಒಂದು ಯೋಜನೆಯನ್ನು ಸರ್ಕಾರ ಹಮ್ಮಿಗೊಂಡಿದೆ. ಜೊತೆಗೆ ಅಂತರ್ಜಲ ಮಟ್ಟವನ್ನು ಮೇಲೆತ್ತಬೇಕೆನ್ನುವ ಉದ್ದೇಶದಿಂದ ಬೆಂಗಳೂರು ನಗರದ ಕಲುಷಿತ ನೀರು ಏನಿದೆಯೋ ಆ ನೀರನ್ನು ಸಂಸ್ಕರಣೆ ಮಾಡಿ, ಅದನ್ನು ಏತ ನೀರಾವರಿ ಮುಖಾಂತರವಾಗಿ ಕೆರೆಗಳನ್ನು ತುಂಬಿಸುವಂತಹ ಒಂದು ಪ್ರಮುಖವಾಗಿರುವಂತಹ ಕೆಲಸವನ್ನು ಕೂಡ ನಮ್ಮ ಸರ್ಕಾರ ಕೈಗೆತ್ತಿಕೊಂಡಿದೆ.

ಇನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಬಗ್ಗೆ... ಆ ಭಾಗದಿಂದ ಬಂದಿರತಕ್ಕಂತಹ ಶ್ರೀ ರಮೇಶ್‌ಬಾಬುರವರು, "ಬಜೆಟ್ ಗಾತ್ರ ಶೇಕಡ 53 ರಷ್ಟು ಮತ್ತು 54 ರಷ್ಟು ಜಾಸ್ತಿಯಾಗಿದೆ, ಅದರ ಅನುಪಾತದಲ್ಲಿ ಸಮವಾಗಿ ಎಲ್ಲಾ ಇಲಾಖೆಗಳಿಗೆ ಹಂಚಬೇಕಾಗಿತ್ತು" ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ಮಾತುಗಳನ್ನು ನಾವು ಒಪ್ಪುತ್ತೇವೆ. ಆದರೆ ನಮ್ಮ ಸರ್ಕಾರ ಮಾಡಿರುವ ಯೋಜನೆಗಳನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಸರ್ಕಾರ ಪ್ರತಿವರ್ಷ ಸುಮಾರು 63 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ ಕೊಡತಕ್ಕಂತಹ ಕಾರ್ಯಕ್ರಮ, 47 ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ಕೊಡುತ್ತಿರುವಂತಹ ಯೋಜನೆ, ಹೈಸ್ಕೂಲ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ 5 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ನೀಡುವ ಕಾರ್ಯಕ್ರಮ, ಬಿಸಿಯೂಟ ಕಾರ್ಯಕ್ರಮ ಸುಮಾರು 60 ಲಕ್ಷ ಜನರಿಗೆ ಕೊಡುತ್ತಿರುವಂತಹದ್ದು ಮತ್ತು ವಾರದಲ್ಲಿ 3 ದಿನ ಮಕ್ಕಳಿಗೆ ಹಾಲು ಕೊಡುತ್ತಿರುವಂತಹದ್ದನ್ನು ಈ ಬಜೆಟ್‌ನಿಂದ ವಾರದಲ್ಲಿ 5 ದಿನ ಹಾಲು ಕೊಡತಕ್ಕಂತಹ ಕಾರ್ಯಕ್ರಮವನ್ನು ಇವತ್ತು ನಮ್ಮ ಸರ್ಕಾರ ಕೈಗೊಂಡಿದೆ. ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕು. ಇವತ್ತಿನ ದಿವಸ ಮಕ್ಕಳು ವ್ಯಾಸಂಗ ಮಾಡುವುದಕ್ಕೆ ಪ್ರಾಥಮಿಕ ಶಾಲೆಗಳಿಗೆ ಬರುತ್ತಿಲ್ಲ, ಎಲ್ಲರೂ ಕೂಡ ಕಾನ್ವೆಂಟ್ ಶಾಲೆಗಳಿಗೆ ಹೋಗಬೇಕು, ಇಂಗ್ಲೀಷ್ ಭಾಷೆಯನ್ನು ಓದಬೇಕೆನ್ನುವಂತಹ ಆಸೆಯನ್ನಿಟ್ಟುಕೊಂಡಿರುವಂತಹ ಮಕ್ಕಳನ್ನು ಮತ್ತೆ ಸರ್ಕಾರಿ ಶಾಲೆಗಳಿಗೆ ಎಳೆಯಬೇಕು ಎನ್ನುವಂತಹ ಉದ್ದೇಶದಿಂದ ಮೊದಲನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಕಲಿಸಬೇಕು ಎನ್ನುವಂತಹ ಹೊಸ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಕೈಗೊಂಡಿದೆ. ವಿದ್ಯಾರ್ಥಿಗಳು ಸರ್ಕಾರಿ ಶಾಲೆಗೆ ಬರಬೇಕಾದರೆ ಅವರಿಗೆ... ಏನು ಇಂಗ್ಲೀಷ್ ಶಾಲೆಗೆ ಅಂದರೆ ಖಾಸಗಿ ಶಾಲೆಗಳಿಗೆ ಹೋಗುವ ಮಕ್ಕಳು ಯಾವ ರೀತಿ ಹೋಗುತ್ತಾರೆ ಅದೇ ರೀತಿ ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳಿಗೆ ಯಾವುದೇ ರೀತಿಯ ಭೇದಭಾವ ಇರಬಾರದು, ಅವರನ್ನು ಆಕರ್ಷಣೆ ಮಾಡಬೇಕು ಎನ್ನುವಂತಹ ದೃಷ್ಟಿಯಿಂದ ವಿದ್ಯಾರ್ಥಿಗಳ ಪ್ರೇರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. ಶೂ ಮತ್ತು ಸಾಕ್ಸ್ ವಿತರಣೆ, ಜುಲೈ ತಿಂಗಳಿನಿಂದ ಜಾರಿಗೆ ಬರುವಂತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾರದಲ್ಲಿ 5 ದಿನ ಹಾಲು ವಿತರಣೆ, ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಡಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ 4 ಲಕ್ಷ ಮಕ್ಕಳಿಗೆ ಸಾರವರ್ಧಕ ಅಕ್ಕಿ ಉಪಯೋಗ 4 ಜಿಲ್ಲೆಗಳಿಗೆ ವಿಸ್ತರಣೆ ಮತ್ತು ಹೊಸದಾಗಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವಂತಹ ಹೆಣ್ಣುಮಕ್ಕಳಿಗೆ ಸಮವಸ್ತ್ರ ಕೊಡುತ್ತಿದ್ದೆವು. ಆದರೆ, ಈ ವರ್ಷದಿಂದ ಚೂಡೀದಾರ್ ಅನ್ನು ಕೊಡಬೇಕು ಎನ್ನುವಂತಹ ಹೊಸ ಯೋಜನೆಯನ್ನು ನಮ್ಮ ಸರ್ಕಾರ ಕೈಗೊಂಡಿದೆ.

ಉನ್ನತ ಶಿಕ್ಷಣದ ಬಗ್ಗೆ... ನಮ್ಮ ಸರ್ಕಾರ ಏತಕ್ಕೆ ಈ ಮಾತನ್ನು ಹೇಳುತ್ತಿದೆಯೆಂದರೆ, ಬದ್ಧತೆಯಿರುವ ಸರ್ಕಾರ ವಿದ್ಯಾರ್ಥಿಗಳಿಗೆ ಸಂಪೂರ್ಣವಾದಂತಹ ಶಿಕ್ಷಣ ಕೊಡಬೇಕು. ಕರ್ನಾಟಕ ರಾಜ್ಯದ ಶಿಕ್ಷಣ ಈ ದೇಶಕ್ಕೆ ಒಂದು ಮಾದರಿಯಾಗಿರಬೇಕು. ಒಂದು ಉತ್ತಮವಾದಂತಹ ಶಿಕ್ಷಣ ಕೊಡತಕ್ಕಂತಹ ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವಂತಹ ಉದ್ದೇಶವನ್ನಿಟ್ಟುಕೊಂಡು ಇವತ್ತಿನ ದಿವಸ ಉನ್ನತ ಶಿಕ್ಷಣದಲ್ಲಿ ಹೈದರಾಬಾದ್-ಕರ್ನಾಟಕ ಸ್ವಲ್ಪ ಹಿಂದುಳಿದಿರತಕ್ಕಂತಹ ಪ್ರದೇಶವಾಗಿರುವುದರಿಂದ ರಾಯಚೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದರ ಮುಖಾಂತರವಾಗಿ ಆ ಭಾಗದಲ್ಲಿರುವಂತಹ ವಿದ್ಯಾರ್ಥಿಗಳಿಗೆ ತನ್ನದೇ ಆದಂತಹ ವಿಶ್ವವಿದ್ಯಾಲಯವನ್ನು ತೆಗೆದುಕೊಳ್ಳುವುದರ ಮೂಲಕ ಅವರೂ ಕೂಡ ಉತ್ತಮವಾದಂತಹ ವ್ಯಾಸಂಗವನ್ನು ಪಡೆದುಕೊಳ್ಳಲಿ ಎನ್ನುವಂತಹ ನಿಟ್ಟಿನಲ್ಲಿ ಹೊಸ ವಿಶ್ವವಿದ್ಯಾನಿಲಯವನ್ನು ನಮ್ಮ ಸರ್ಕಾರ ಕೊಟ್ಟಿದೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಬಗ್ಗೆ ಬಹಳಷ್ಟು ಮಾತುಕತೆಯನ್ನು ಇದುವರೆವಿಗೂ ನಾವು ಆಡಿದ್ದೇವೆ. ಸನ್ಮಾನ್ಯ ಮಂತ್ರಿಗಳು ಸಹ ಈ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ಇವೆಲ್ಲದಕ್ಕಿಂತ ನಮಗೆ ಬಹಳಷ್ಟು ಮುಖ್ಯವಾಗಿರುವುದನ್ನು ಆಗಲೇ ಅವರು ಹೇಳಿದ್ದಾರೆ. ಏನಪ್ಪಾ ಅಂದರೆ, ಜೆನರಿಕ್ ಔಷಧಿ ಬಗ್ಗೆ. ಮಾನ್ಯ ಮಂತ್ರಿಗಳೇ ಹೇಳಿದ ಹಾಗೆ ಒಂದು ಔಷಧಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಸುಮಾರು 13 ಸಾವಿರ ರೂಪಾಯಿಗಳ ದರ ಪಡೆಯುತ್ತಿದ್ದಾರೆ ಎನ್ನುವಂತಹದ್ದು, ನಿಜವಾಗಲೂ ಕೂಡ ಕೇವಲ 250 ರೂಪಾಯಿಗೆ ಸಿಗತಕ್ಕಂತಹ ಔಷಧಿಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಸುಮಾರು 13 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಆದುದರಿಂದ ಬಡ ಜನತೆಗೆ ಅದನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತಿದೆ. ಸರ್ಕಾರ ಆ ವಿಚಾರವನ್ನು ಯೋಚನೆ ಮಾಡಿ ಇವತ್ತು "ಜನೌಷಧಿ ಔಷಧಿ ಮಳಿಗೆ"ಗಳನ್ನು ಪ್ರಾರಂಭ ಮಾಡಬೇಕು. ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ ಕೂಡ ಕೈಗೆಟುಕುವ ಬೆಲೆಯಲ್ಲಿ ಔಷಧಿಗಳು ಸಿಗಬೇಕು. ಇವತ್ತು ಏನು ಬಡವರಿದ್ದಾರೆ. ಅವರೆಲ್ಲರೂ ಕೂಡ ಖಾಸಗಿ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಆ ಔಷಧಿಗಳನ್ನು ಅವರ ಕೈಗೆಟುಕುವ ಬೆಲೆಯಲ್ಲಿ ಕೊಡುವುದಾದರೆ ನಿಜವಾಗಿಯೂ ಕೂಡ ಅವರಿಗೆ ಸಹಾಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಂತಾಗುತ್ತದೆ ಎನ್ನುವಂತಹ ಒಂದು ವಿಷಯವನ್ನು ಇಟ್ಟುಕೊಂಡು ಇವತ್ತು ಜನೌಷಧಿ ಔಷಧಿ ಮಳಿಗೆಗಳನ್ನು ತೆರೆಯುವಂತಹ ಒಂದು ಬೃಹತ್ ಆದ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ.

ಅದೇ ರೀತಿಯಾಗಿ ಆಂಬ್ಯುಲೆನ್ಸ್‌ಗಳು. ಇವತ್ತಿನ ದಿವಸ ಸುಮಾರು 711 ಆಂಬ್ಯುಲೆನ್ಸ್‌ಗಳು ರಾಜ್ಯ ಆರೋಗ್ಯ ಇಲಾಖೆಯಿಂದ ಏನು ಕಾರ್ಯನಿರ್ವಹಿಸುತ್ತಿದೆಯೋ ಅವುಗಳ ಜೊತೆಯಲ್ಲಿ 827 ಆಂಬ್ಯುಲೆನ್ಸ್‌ಗಳನ್ನು ಒಟ್ಟುಗೂಡಿಸಿದ್ದಾರೆ. ಮೊದಲು ಒಬ್ಬ ರೋಗಿಗೆ ಅನಾಹುತವಾದರೆ, ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕಾಗಿ ಫೋನ್ ಮಾಡಿ ಗಂಟೆಗಟ್ಟಲೆ ಕಾಯಬೇಕಾಗಿತ್ತು. ಈ ಎಲ್ಲಾ ಅಂಶಗಳನ್ನು ಮನಗಂಡು ಇವತ್ತಿನ ದಿವಸ ಕೇವಲ ಸುಮಾರು 10 ರಿಂದ 15 ಕಿಲೋಮೀಟರ್‌ಗಳ ವ್ಯಾಪ್ತಿಯಲ್ಲಿ ಒಂದೊಂದು ಆಂಬ್ಯುಲೆನ್ಸ್ ಸಿಗಬೇಕು, ಬಡವನಿಗೆ ಕೈಗೆಟುಕುವ ರೀತಿಯಲ್ಲಿ ಆಂಬ್ಯುಲೆನ್ಸ್ ಸಿಗಬೇಕು ಎನ್ನುವಂತಹ ದೃಷ್ಟಿಯನ್ನಿಟ್ಟುಕೊಂಡು, ಆಂಬ್ಯುಲೆನ್ಸ್‌ಗಳನ್ನು ಹೆಚ್ಚು ಮಾಡುವುದರ ಮುಖಾಂತರ ಈ ಒಂದು ಸೇವೆಯನ್ನು ನಮ್ಮ ಸರ್ಕಾರ ಕೊಟ್ಟಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಇವತ್ತಿನ ದಿವಸ ಸರ್ಕಾರ ಒಂದು ಐತಿಹಾಸಿಕವಾದಂತಹ ತೀರ್ಮಾನವನ್ನು ತೆಗೆದುಕೊಳ್ಳುವುದರ ಮುಖಾಂತರವಾಗಿ ಸುಮಾರು 6 ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದೆ. ಕರ್ನಾಟಕ ರಾಜ್ಯದ ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರು ಈ 6 ಜಿಲ್ಲೆಗಳಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡುವುದರ ಮುಖಾಂತರವಾಗಿ, ನನಗೆ ತಿಳಿದಮಟ್ಟಿಗೆ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿಯೂ ಕೂಡ ಇಂದು ಸರ್ಕಾರಿ ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗುತ್ತಿವೆ.

(ಮುಂದು)

(376)/22-3-2017/ಎಲ್ಎಂ/ಆರ್ಎನ್/6-00

**ಶ್ರೀ ಎಂ.ನಾರಾಯಣಸ್ವಾಮಿ**(ಮುಂದು):- ವೈದ್ಯಕೀಯ ಸೀಟ್‌ಗಾಗಿ ಬೇರೆ ಕಡೆಯಿಂದ ಬಂದು ಕಾಯುತ್ತಾ ಕುಳಿತುಕೊಳ್ಳುವುದನ್ನು ತಪ್ಪಿಸಬೇಕು ಎನ್ನುವ ಉದ್ದೇಶದಿಂದ ಹೊಸ ವೈದ್ಯಕೀಯ ಕಾಲೇಜುಗಳನ್ನು ನಮ್ಮ ಸರ್ಕಾರ ಪ್ರಾರಂಭಿಸುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ನಮ್ಮ ಮಕ್ಕಳಿಗೆ ಸರ್ಕಾರ ಕೋಳಿ ಮೊಟ್ಟೆ ಕೊಡುತ್ತಿರುವುದು, ಹಾಲು ಕೊಡುವುದನ್ನು ನಾವು ಮೆಚ್ಚುತ್ತೇವೆ. ನಮಗೆ ಖುಷಿ ಇದೆ. ಎಲ್ಲವನ್ನು ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಮಾಡುವುದಿಲ್ಲ. ಎಲ್ಲದರಲ್ಲಿಯೂ ನಾವು ರಾಜಕಾರಣ ಮಾಡುವುದಿಲ್ಲ. ಮಾಡದೆ ಇರುವುದರ ಬಗ್ಗೆ ಮಾತ್ರ ನಾವು ಹೇಳುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸುಮಾರು 220 ಹಾಸಿಗೆಗಳ ಸಾಮರ್ಥ್ಯ ಇರುವಂತಹ ಅಪಘಾತ ಚಿಕಿತ್ಸಾ ಕೇಂದ್ರವನ್ನು ಹೊಸದಾಗಿ ಸ್ಥಾಪನೆ ಮಾಡುತ್ತಿದ್ದಾರೆ. ಇಂದಿರಾನಗರದಲ್ಲಿ ತಮ್ಮದೆ ಆದ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಸುಮಾರು 35 ಕೋಟಿ ರೂ.ಗಳ ವೆಚ್ಚದಲ್ಲಿ ವಿನೂತನವಾದ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಎಲ್ಲವು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ನೂತನವಾಗಿ ಕೈಗೊಂಡ ಕಾರ್ಯಕ್ರಮಗಳು.

ವಸತಿ ಇಲಾಖೆ ಬಗ್ಗೆ ಹೇಳುವುದಾದರೆ, ಕರ್ನಾಟಕ ಸರ್ಕಾರದಲ್ಲಿ ಕಾಂಗ್ರೆಸ್ ಯಾವಾಗ ಅಧಿಕಾರಕ್ಕೆ ಬಂತು, 2013 ರಿಂದಲೂ ಪ್ರತಿ ಬಜೆಟ್‌ನಲ್ಲಿಯು ಮಾನ್ಯ ಮುಖ್ಯಮಂತ್ರಿಗಳು ವಸತಿ ಯೋಜನೆ ಬಗ್ಗೆ ಘೋಷಣೆ ಮಾಡಿಕೊಂಡು ಬಂದಿದ್ದಾರೆ. ವರ್ಷಕ್ಕೆ ಮೂರು ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಯಾರಿಗೆ ಸೂರು ಇಲ್ಲ, ಯಾರಿಗೆ ನಿವೇಶನ ಇಲ್ಲ ಅವುಗಳನ್ನು ಜನರಿಗೆ ಕೊಡುವುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ, ವರ್ಷಕ್ಕೆ ಮೂರು ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ನಮ್ಮ ಸರ್ಕಾರ ಹೇಳಿದೆ. ಈಗಾಗಲೇ ಸುಮಾರು ಹತ್ತೂವರೆ ಲಕ್ಷ ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ಈ ವರ್ಷ ಸುಮಾರು 7 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಸುಮಾರು ಆರು ಲಕ್ಷ ಮನೆಗಳನ್ನು, ಬೆಂಗಳೂರು ನಗರದಲ್ಲಿ ಒಂದು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವುದರ ಮುಖಾಂತರ ಸರ್ಕಾರ ಕೊಟ್ಟಿರುವ ಆಶ್ವಾಸನೆಗಳ ಪ್ರಕಾರ ನಡೆದುಕೊಂಡು ಬರುತ್ತಿದೆ.

ನಗರಾಭಿವೃದ್ಧಿ ಇಲಾಖೆ ಬಗ್ಗೆ, ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ಹೇಳಬೇಕಾದರೆ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಮೂಲಸೌಕರ್ಯ ಅಭಿವೃದ್ಧಿಗೆ ಎಂದು ಇದುವರೆಗೆ ಎಷ್ಟು ಸರ್ಕಾರಗಳು ಬಂದಿವೆ, ಹೋಗಿವೆ, ಆದರೆ ಬೆಂಗಳೂರು ಮಹಾನಗರಪಾಲಿಕೆಗೆ ಅತಿ ಹೆಚ್ಚು ಹಣವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಿರುವ ನಿದರ್ಶನ ಏನಾದರೂ ಇದ್ದರೆ, ಅದು ಮಾನ್ಯ ಸಿದ್ದರಾಮಯ್ಯನವರ ಸರ್ಕಾರ. ಸುಮಾರು 7,300 ಕೋಟಿ ರೂ.ಗಳನ್ನು ಕೊಡುವುದರ ಮುಖಾಂತರ ಬೆಂಗಳೂರು ನಗರದ ಅಭಿವೃದ್ಧಿಗೆ ಅತಿ ಹೆಚ್ಚು ಒತ್ತನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿಯ 198 ವಾರ್ಡ್‌ಗಳಲ್ಲಿ ಯಾವುದೇ ತಾರತಮ್ಯ ಇಲ್ಲದೆ, ಪ್ರತಿಯೊಂದು ವಾರ್ಡ್‌ಗೆ ಸರಿಸಮಾನವಾದ ಹಣವನ್ನು ಬಿಡುಗಡೆ ಮಾಡುವುದರ ಮುಖಾಂತರ, ರಸ್ತೆಗಳ ಅಭಿವೃದ್ಧಿ, ಚರಂಡಿಗಳ ಅಭಿವೃದ್ಧಿ ಇತ್ಯಾದಿ ಮೂಲಸೌಲಭ್ಯಗಳ ಅಭಿವೃದ್ಧಿಯನ್ನು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಮಾಡಿಕೊಂಡು ಬರುತ್ತಿದೆ. ಈಗ ಹೊಸದಾಗಿ ಸುಮಾರು 690 ಕೋಟಿ ರೂ.ಗಳ ವೆಚ್ಚದಲ್ಲಿ 80 ಕಿ,ಮೀ ಉದ್ದದ ರಸ್ತೆ ಮಾಡಲಾಗುತ್ತದೆ. 43 ಪ್ರಮುಖ ರಸ್ತೆಗಳನ್ನು ಆಯ್ದುಕೊಂಡು ಅವುಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಕೆಲಸವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಅದೇ ರೀತಿ ಸುಮಾರು 350ಕೋಟಿ ರೂ.ಗಳನ್ನು ವೆಚ್ಚ ಮಾಡುವುದರ ಮುಖಾಂತರ Tender SURE (SPECIFICATIONS FOR URBAN *ROAD* EXECUTION) ಎನ್ನುವ ಕಾರ್ಯಕ್ರಮಕ್ಕೆ ಕೊಡುವುದು ಬೇಡ, ಅವರು ಎಷ್ಟು ಉತ್ತಮವಾದ footpath ರಸ್ತೆಗಳನ್ನು ನಿರ್ಮಾಣ ಮಾಡುತ್ತಾರೆ, ಅದೇ ರೀತಿ ನಾವೇ ಮಾಡಬೇಕು ಎಂದು ಸುಮಾರು 25 ಕಿ.ಮೀ ಉದ್ದದ ರಸ್ತೆಗಳಿಗೆ ಸುಮಾರು 250 ಕೋಟಿ ರೂ.ಗಳನ್ನು ಖರ್ಚು ಮಾಡುವುದರ ಮುಖಾಂತರ ಈ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಕೈಗೆತ್ತಿಕೊಂಡಿದೆ. ಬೆಂಗಳೂರಿನಲ್ಲಿ ಓಡಾಡುವವರಿಗೆ ಇಲ್ಲಿಯ ಸಂಚಾರ ದಟ್ಟಣೆ ಬಗ್ಗೆ ಗೊತ್ತಿದೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ peak hour ನಲ್ಲಿ ಹೋಗಬೇಕಾದರೆ ಗಂಟೆಗಟ್ಟಲೆ ರಸ್ತೆಯಲ್ಲಿಯೇ ಕಾಯಬೇಕಾಗಿದೆ. ಇದನ್ನು ಮನಗಂಡ ಸರ್ಕಾರ ಇವತ್ತು ಸುಮಾರು 12 ಕಾರಿಡಾರ್‌ಗಳನ್ನು ಗುರುತಿಸಿದೆ. ಈ 12 ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಬೇಕೆಂದು ಸುಮಾರು 150 ಕೋಟಿ ರೂ.ಗಳನ್ನು ಖರ್ಚು ಮಾಡುವುದರ ಮುಖಾಂತರ ಈ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಬೇಕು ಎಂದು ಈ ಕಾಮಗಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ಪಾದಚಾರಿಗಳ ಮಾರ್ಗ ಎನ್ನುವುದು ಇವತ್ತು ರಸ್ತೆಯೇ ಆಗಿ ಹೋಗಿದೆ. ಇವತ್ತು ರಸ್ತೆ, footpath ಎರಡು ಒಂದೇ ಆಗಿ ಹೋಗಿದೆ. ಮನುಷ್ಯ ಎಲ್ಲಿ ನಡೆದುಕೊಂಡು ಹೋಗಬೇಕು, ಎಲ್ಲಿ ವೆಹಿಕಲ್ ಹೋಗಬೇಕು ಎನ್ನುವುದೆ ಗೊತ್ತಾಗುತ್ತಿಲ್ಲ. ಆದ್ದರಿಂದ ಸುಮಾರು 200 ಕಿ.ಮೀ ಉದ್ದದ footpath ಗಳನ್ನು ಅಭಿವೃದ್ಧಿ ಮಾಡಬೇಕೆಂದು ಈ ಬಜೆಟ್‌ನಲ್ಲಿ ತೆಗೆದುಕೊಂಡಿದ್ದಾರೆ.

ಎಲ್ಲದಕ್ಕಿಂತ ಮಿಗಿಲಾಗಿ ಐತಿಹಾಸಿಕವಾದ ಕಾರ್ಯಕ್ರಮವನ್ನು ನನ್ನ ಸರ್ಕಾರ ಕೊಟ್ಟಿದೆ. ಇದನ್ನು ಎಲ್ಲರೂ ಶ್ಲಾಘಿಸಬೇಕು. ಮೊದಲ ಬಾರಿಗೆ ಇದನ್ನು Pilot Project ಆಗಿ ಬೆಂಗಳೂರಿನಲ್ಲಿ ತೆಗೆದುಕೊಳ್ಳಲಾಗಿದೆ. ಬೆಂಗಳೂರು ಮಹಾನಗರದಲ್ಲಿ 198 ವಾರ್ಡ್‌ಗಳು ಇವೆ. ಬೆಂಗಳೂರಿನ ಜನಸಂಖ್ಯೆ ಇವತ್ತು ಒಂದು ಕೋಟಿ ತಲುಪಿದೆ. ಸುಮಾರು 15 ರಿಂದ 20 ಲಕ್ಷ ಜನರು ಪ್ರತಿದಿನ ಬೆಂಗಳೂರಿಗೆ ಬಂದು ಹೋಗುತ್ತಾರೆ. ಇವರೆಲ್ಲರಿಗೂ ಅನುಕೂಲವಾಗಬೇಕೆಂದು "ನಮ್ಮ ಕ್ಯಾಂಟೀನ್" ಎನ್ನುವ ಕ್ಯಾಂಟೀನ್‌ನ್ನು ಪ್ರಾರಂಭಿಸಲು ಘೋಷಣೆ ಮಾಡಿದ್ದಾರೆ. ಬೆಂಗಳೂರಿನ ಶಾಸಕರು ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಕ್ಯಾಂಟೀನ್‌ಗೆ "ಇಂದಿರಾ ಕ್ಯಾಂಟೀನ್" ಎಂದು ಹೆಸರು ಇಡಬೇಕೆಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲಹೆಯನ್ನು ಕೊಟ್ಟು ಮನವಿಯನ್ನು ಮಾಡಿಕೊಂಡಿದ್ದೇವೆ. ಆದರೆ ಸರ್ಕಾರ ಏನು ಮಾಡುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ. ಈ ಕ್ಯಾಂಟೀನ್‌ನಲ್ಲಿ ಪ್ರತಿ ದಿನ ಬೆಳಗ್ಗೆ 5 ರೂ.ಗೆ ತಿಂಡಿ, ಮಧ್ಯಾಹ್ನ ಊಟ 10 ರೂ.ಗೆ, ರಾತ್ರಿ ಊಟ 10 ರೂ.ಗೆ ಕೊಡುವಂತಹ ಐತಿಹಾಸಿಕವಾದ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಘೋಷಣೆ ಮಾಡಿದೆ. ಇದಕ್ಕಾಗಿ ಈ ಸದನದ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಲು ಇಚ್ಛೆಪಡುತ್ತೇನೆ.

"ನಮ್ಮ ಮೆಟ್ರೋ"ದ ಮೊದಲನೆಯ ಹಂತದ ಕೆಲಸ ಈಗಾಗಲೇ ಮುಗಿಸಿದ್ದಾರೆ. ಎರಡನೆ ಹಂತಕ್ಕೆ ಇವತ್ತು ಕೈ ಇಟ್ಟಿದ್ದಾರೆ. ಸುಮಾರು 72 ಕಿ.ಮೀ ಗಳಷ್ಟು, ಸುಮಾರು 20,405 ಕೋಟಿ ರೂ.ಗಳ ವೆಚ್ಚದಲ್ಲಿ ಮೆಟ್ರೋ ಕಾರ್ಯಾರಂಭ ಮಾಡುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿಯೇ ಇದ್ದಾರೆ, ಕೇಂದ್ರದಿಂದ ಈ ಕಾಮಗಾರಿಗಾಗಿ ಎಷ್ಟು ಅನುದಾನ ಬರಬೇಕಾಗಿದೆ ಅದನ್ನು ಆದಷ್ಟು ಬೇಗ ಕೊಡಿಸಬೇಕು. ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವುದರಿಂದ ದೇಶ-ವಿದೇಶದಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ಆದರೆ ಈಗ ಬೆಂಗಳೂರಿಗೆ ಹೋಗುವುದು ಎಂದರೆ, ಟ್ರಾಫಿಕ್ ಜಾಸ್ತಿ ಎಂದು, ಬರುತ್ತಿರುವಂತಹ ಹೂಡಿಕೆದಾರರು ವಾಪಸ್ ಹೋಗುತ್ತಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ರಾಜಕಾರಣ ಮಾಡುವುದು ಬೇಡ. ನಾವು-ನೀವು ಕೈಜೋಡಿಸುವುದರ ಮುಖಾಂತರ ಬೆಂಗಳೂರು ನಗರಕ್ಕೆ ಒಳ್ಳೆಯ ಹೆಸರನ್ನು ತಂದುಕೊಡಬೇಕು. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಏನು ಅನುದಾನ ಬರಬೇಕಾಗಿದೆ ಅದನ್ನು ಬೇಗ ಕೊಡಿಸುವಂತಹ ಕೆಲಸದಲ್ಲಿ ತಾವು ಕೈ ಜೋಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ಮೆಟ್ರೋ ಯೋಜನೆಯಲ್ಲಿ ಹೊಸೂರು ರೋಡ್, ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರಂಗೆ ಸುಮಾರು 4200 ಕೋಟಿ ರೂ.ಗಳ ವೆಚ್ಚ ಮಾಡಿ ಎರಡನೆ ಹಂತದ ಮೆಟ್ರೋ ತರಲು ಘೋಷಣೆ ಮಾಡಿದ್ದಾರೆ. ಇದು ನಿಜವಾಗಿಯು ಶ್ಲಾಘನೀಯ ಎಂದು ಹೇಳಬಯಸುತ್ತೇನೆ. ರಾಜ್ಯದಲ್ಲಿ ಸಬರ್ಬನ್ ರೈಲ್ವೆ ತರಲು ಸರ್ಕಾರ ಯೋಚನೆ ಮಾಡಿದೆ. ಬೆಂಗಳೂರಿನಲ್ಲಿ ಇಷ್ಟೊಂದು ದಟ್ಟಣೆಯಾಗಲು ಕಾರಣ ಒಬ್ಬೊಬ್ಬರು ಒಂದೊಂದು ಕಾರಿನಲ್ಲಿ ಓಡಾಡುತ್ತಾರೆ. ಪ್ರತಿದಿನಕ್ಕೆ ಬೆಂಗಳೂರಿನಲ್ಲಿ ಸುಮಾರು 6000 ಹೊಸ ವೆಹಿಕಲ್‌ಗಳ registration ಆಗುತ್ತಿದೆ. ತಿಂಗಳಿಗೆ ಎಷ್ಟು ಆಗುತ್ತಿದೆ, ವರ್ಷಕ್ಕೆ ಎಷ್ಟು ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಬೆಂಗಳೂರು ಜನಸಂಖ್ಯೆ ಒಂದು ಕೋಟಿ ಇದ್ದರೆ ಸುಮಾರು 60 ರಿಂದ 70 ಲಕ್ಷ ವೆಹಿಕಲ್‌ಗಳು ಇಲ್ಲಿವೆ. ಇದರಲ್ಲಿ ಸುಮಾರು 45 ಲಕ್ಷ ದ್ವಿಚಕ್ರ ವಾಹನಗಳು ಇವೆ. ಇನ್ನು ಉಳಿದಿರುವುದು ನಾಲ್ಕು ಚಕ್ರವಾಹನಗಳು. ಇಷ್ಟು ವೆಹಿಕಲ್‌ಗಳು ಓಡಾಡಲು ನಮಗೆ ರಸ್ತೆಗಳು ಸಾಕಾಗುತ್ತಿಲ್ಲ. ಇವತ್ತು ಬೆಂಗಳೂರು ಬೆಳೆದುಬಿಟ್ಟಿದೆ. ಅದಕ್ಕೆ ತಕ್ಕ ಹಾಗೆ ರಸ್ತೆಗಳನ್ನು ಅಗಲೀಕರಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲು ಆಗುತ್ತಿಲ್ಲ. ಇರುವ ರಸ್ತೆಯಲ್ಲಿಯೇ ಓಡಾಡಬೇಕು. ಅದರೆ ದಿನದಿಂದ ದಿನಕ್ಕೆ ವೆಹಿಕಲ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ಎಲ್ಲ ದೂರದೃಷ್ಟಿಯನ್ನು ಇಟ್ಟುಕೊಂಡು ಸಬರ್ಬನ್ ರೈಲ್ವೆ ಪ್ರಾರಂಭ ಮಾಡಲು ನಮ್ಮ ಸರ್ಕಾರ ಘೋಷಣೆ ಮಾಡಿದೆ. ಇದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 341 ಕೋಟಿ ರೂ.ಗಳ ಅನುದಾನವನ್ನು ಸರ್ಕಾರ ಇಟ್ಟಿದೆ. ಕೇಂದ್ರ ರೈಲ್ವೆ ಇಲಾಖೆ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಳ್ಳುವುದರ ಮುಖಾಂತರ ಇದನ್ನು ಅನುಷ್ಠಾನಕ್ಕೆ ತರಬೇಕೆಂದು ನಮ್ಮ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಹೇಳಬೇಕಾದರೆ, ಬೆಂಗಳೂರು ನಗರದಲ್ಲಿರುವ ಜನರಿಗೆ ನಿವೇಶನಗಳನ್ನು ಕೊಡಬೇಕೆಂದು ನಮ್ಮ ಸರ್ಕಾರ ನಿವೇಶನಗಳನ್ನು ಕೊಡಲು ಬಡಾವಣೆ ನಿರ್ಮಾಣ ಮಾಡುತ್ತಿದೆ. ಹಿಂದೆ ಯಾವ ಸರ್ಕಾರವು ಬಡವಾಣೆಯನ್ನು ನಿರ್ಮಾಣ ಮಾಡಿರಲಿಲ್ಲ. ಈ ಬಾರಿ ನಮ್ಮ ಸರ್ಕಾರದಿಂದ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಒಂದು ಬಡಾವಣೆಯನ್ನು ನಿರ್ಮಾಣ ಮಾಡಿ ಸುಮಾರು 5000 ನಿವೇಶನಗಳನ್ನು ಕೊಡುವಂತಹ ಐತಿಹಾಸಿಕವಾದ ಕೆಲಸಕ್ಕೆ ಕೈ ಹಾಕಿದೆ. ಇದರಿಂದ ಎಲ್ಲರಿಗೂ ನಿವೇಶನಗಳು ಸಿಗುತ್ತವೆ. ಭೂಮಿಯ ಬೆಲೆ ಕೋಟ್ಯಾಂತರ ರೂ.ಗಳಾಗಿ ಗಗನಕ್ಕೆ ಏರಿದೆ. ಬಡಾವಣೆ ಮಾಡಲು ಜನರು ಇವತ್ತು ಭೂಮಿಯನ್ನು ಬಿಟ್ಟುಕೊಡುತ್ತಿಲ್ಲ. ಅದಕ್ಕಾಗಿ ನಮ್ಮ ಸರ್ಕಾರ joint venture ಮಾಡಿಕೊಂಡು 40-50% ನಲ್ಲಿ ಜಾಗವನ್ನು ತೆಗೆದುಕೊಳ್ಳುವ ಮುಖಾಂತರ, ಅಭಿವೃದ್ಧಿಪಡಿಸಿರುವ ಭೂಮಿಯಲ್ಲಿ 40% ಭೂಮಿಯನ್ನು ರೈತರಿಗೆ ಕೊಟ್ಟು ಇನ್ನು ಉಳಿದ 60% ಭೂಮಿಯನ್ನು ನಿವೇಶನಗಳಿಗಾಗಿ ಅರ್ಜಿ ಹಾಕಿಕೊಂಡವರಿಗೆ ಹಂಚಿಕೆ ಮಾಡುವ ಕೆಲಸವನ್ನು ಬಿಡಿಎ ವತಿಯಿಂದ ಮಾಡುತ್ತಿದೆ.

(ಮುಂದು)

(377) 22-03-2017 6-10 ಬಿಎಸ್‌ಡಿ:ಆರ್‌ಎನ್

**ಶ್ರೀ ಎಂ. ನಾರಾಯಣಸ್ವಾಮಿ (ಮುಂದು)**

ಇನ್ನು ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಸುಮಾರು ವರ್ಷಗಳಿಂದ ಕೂಗು ಇದ್ದು, ತಾಲ್ಲೂಕು ಕೇಂದ್ರಗಳಾದಾಗ ಅತೀ ಹೆಚ್ಚಿನ ಸೌಲಭ್ಯಗಳು ಸಿಗಬಹುದೆಂಬ ದೃಷ್ಟಿಯಿಂದ ಬೇಡಿಕೆ ಇಟ್ಟಿದ್ದ ವಿಷಯವು ನೆನೆಗುದಿಗೆ ಬಿದ್ದಿತ್ತು. ಈ ಸಾರಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ತಾಲ್ಲೂಕಿಗಳ ರಚನೆ ಯಾವುದೇ ಕಾರಣಕ್ಕೂ ನಿಲ್ಲಬಾರದೆಂದು ಸುಮಾರು 49 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನೊಬ್ಬ ಬೆಂಗಳೂರಿನ ಶಾಸಕನಾಗಿ ನಾಡಪ್ರಭು ಕೆಂಪೇಗೌಡರ ಹೆಸರಿನ ಯಲಹಂಕವನ್ನು ನೂತನವಾಗಿ ತಾಲ್ಲೂಕಾಗಿ ಘೋಷಣೆ ಮಾಡಿರುವುದರಿಂದ ನನ್ನ ಮತ್ತು ಸದನದ ಪರವಾಗಿ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾಡಪ್ರಭು ಕೆಂಪೇಗೌಡ ಎಂದು ಮಾನ್ಯ ಸದಸ್ಯರು ಮೂರ್‍ನಾಲ್ಕು ಸಾರಿ ಹೇಳಿದ್ದು, ಅದರ ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ಅವರು ಪ್ರಸ್ತಾಪ ಮಾಡಲಿಲ್ಲ. ದಯಮಾಡಿ ಅದನ್ನು ಹೇಳಬೇಕು.

**ಶ್ರೀ ಎಂ. ನಾರಾಯಣಸ್ವಾಮಿ:-** ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದು, ಅದನ್ನು ಖಂಡಿತವಾಗಿ ಮಾಡುತ್ತಿದ್ದು, ಮಾನ್ಯ ಸದಸ್ಯರಷ್ಟೇ ಕಾಳಜಿ ನಮಗೂ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇವೆ. ಕಾವೇರಿ ನೀರಿಗಾಗಿ ನಮಗೂ ಮತ್ತು ತಮಿಳುನಾಡಿಗೂ ಯಾವ ರೀತಿ ವ್ಯಾಜ್ಯಗಳು ನಡೆಯುತ್ತಿವೆ ಎಂಬುದು ಎಲ್ಲರಿಗೂ ಗೊತ್ತು. ಕುಡಿಯುವ ನೀರಿಗೆ ಎಷ್ಟು ವ್ಯಾಜ್ಯಗಳು ನಡೆಯುತ್ತಿವೆಯೋ ಅದೇ ರೀತಿ ಬಳಕೆ ಮಾಡುವ ನೀರಿಗೂ ಆದ್ಯತೆ ಇದೆ. ನಾವು ಕುಡಿಯುವುದಕ್ಕೆ ಕೇವಲ 20% ನೀರನ್ನು ಬಳಸುತ್ತಿದ್ದು, ಉಳಿದ 80% ನೀರನ್ನು ಬಟ್ಟೆ ತೊಳೆಯುವುದಕ್ಕೆ, ಪಾತ್ರೆ ತೊಳೆಯುವುದಕ್ಕೆ, ಸ್ನಾನ ಮಾಡುವುದೂ ಸೇರಿದಂತೆ ಇತ್ಯಾದಿಗಳಿಗೆ ಉಪಯೋಗಿಸುತ್ತಿದ್ದೇವೆ. ನೀರು ಬಳಸಿದ ನಂತರ waste ಆಗಿ ಹೋಗುವಾಗ ಕಲುಷಿತವೂ ಸೇರಿಕೊಂಡಿದೆ. ಆ waste water ಕೂಡ ನಮ್ಮ ಭಾಗದ ಚಲಘಟ್ಟ, ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಂದ ತಮಿಳುನಾಡಿನ ಹೊಸೂರು ಕೆರೆಯ ಬಾಗಲೂರು ಕಡೆಗೆ ಹರಿದುಕೊಂಡು ಹೋಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ಈ ನೀರನ್ನು ತಡೆಗಟ್ಟಿ, ಚೆಕ್‌ಡ್ಯಾಂ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿ, ಇದನ್ನು ಏತ ನೀರಾವರಿ ಮುಖಾಂತರವಾಗಿ ಅಂತರ್ಜಲ ಕುಸಿದುಹೋಗಿರುವ ಮತ್ತು ಬೇರೆ ನೀರಿನ ಮೂಲ ಇಲ್ಲದಿರುವ ಹೊಸಕೋಟೆ ಮತ್ತು ಕೋಲಾರದ ಕೆರೆಗಳಿಗೆ ತುಂಬಿಸುವ ಕೆಲಸ ಮಾಡಿದರೆ ನಿಜವಾಗಲೂ ಅಂತರ್ಜಲ ಮೇಲೆ ಬರುತ್ತದೆ ಎಂದು ಹೇಳಿದೆವು. ಸುಮಾರು ರೂ.1280 ಕೋಟಿಗಳನ್ನು ಈ ಬಜೆಟ್‌ನಲ್ಲಿಟ್ಟು, ನೀರನ್ನು ಸಂಸ್ಕರಣೆ ಮಾಡಿ ಕೆರೆಗೆ ತುಂಬುವ ಐತಿಹಾಸಿಕ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಜೊತೆಗೆ ಬೆಂಗಳೂರಿನ ಕಾರ್ಪೋರೇಷನ್‌ಗೆ ಮೊದಲು City Municipal Corporation ಇದ್ದ ಪ್ರದೇಶಗಳನ್ನು ಸೇರಿಸಿಕೊಂಡರು. ಸುಮಾರು 110 ಹಳ್ಳಿಗಳನ್ನು ಕಾರ್ಪೋರೇಷನ್‌ಗೆ ಸೇರಿಸಿಕೊಂಡು, ಅವುಗಳಿಗೆ ಸೌಲಭ್ಯ ಕೊಡುವುದಕ್ಕೆ ಆಗಿರಲಿಲ್ಲ. ಆ ಹಳ್ಳಿಗಳಿಗೆ UGD (Underground Drainage) ಮತ್ತು ಕಾವೇರಿ ನೀರನ್ನು ಕೊಡುವುದಕ್ಕೆ ಆಗಿರಲಿಲ್ಲ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾರಿ ನಮ್ಮ ಸರ್ಕಾರ ಸುಮಾರು ರೂ.1886 ಕೋಟಿಗಳನ್ನು 110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು UGD ಗೋಸ್ಕರ ಕೊಡುವುದರ ಮೂಲಕ ಆ ಹಳ್ಳಿಗಳವರು ಸವಲತ್ತುಗಳಿಂದ ವಂಚಿತರಾಗಬಾರದೆಂದು ಮಾಡಿದ್ದಾರೆ. ಈ ರೀತಿ ನಮ್ಮ ಸರ್ಕಾರ ಮತ್ತು ನಮ್ಮ ಮುಖ್ಯಮಂತ್ರಿಗಳು ಚುನಾವಣೆ ಪೂರ್ವದಲ್ಲಿ ನೀಡಿರುವ ಆಶ್ವಾಸನೆಗಳನ್ನು ಈಡೇರಿಸುತ್ತಾ ನುಡಿದಂತೆ ನಡೆದುಕೊಂಡು ಬರುತ್ತಿದ್ದೇವೆ. ಇನ್ನೂ ಒಂದು ವರ್ಷ ಉಳಿದಿದ್ದು, ಮಾನ್ಯ ರಮೇಶ್ ಬಾಬುರವರು manifesto ದಲ್ಲಿ ತಿಳಿಸಿದಂತೆ ಈಡೇರಿಸುವುದಕ್ಕೆ ಆಗಲಿಲ್ಲ ಎಂದು ಹೇಳಿದರು. ನಾವು ಅವರೂ ಸೇರಿದಂತೆ ಇಬ್ಬರು ಕುಳಿತುಕೊಂಡು ನೋಡೋಣ. 160 ಆಶ್ವಾಸನೆಗಳಲ್ಲಿ ಸುಮಾರು 135 ಆಶ್ವಾಸನೆಗಳನ್ನು ಈಗಾಗಲೇ ಈಡೇರಿಸಿದ್ದೇವೆ. ಇನ್ನು ಒಂದು ವರ್ಷ ಕಾಲಾವಕಾಶ ಇದ್ದು, ನಮ್ಮ ಪಕ್ಷದ ಅಧ್ಯಕ್ಷರಾದ ಮಾನ್ಯ ಪರಮೇಶ್ವರ್‌ರವರೂ ಸದನದಲ್ಲಿಯೇ ಕುಳಿತಿದ್ದಾರೆ. ಅವರು ಸಭೆಗಳನ್ನು ಕರೆಯವುದರ ಮೂಲಕ ಉಳಿದಿರುವ ಆಶ್ವಾಸನೆಗಳನ್ನು ಈಡೇರಿಸಲು ಸಂಬಂಧಪಟ್ಟ ಮಂತ್ರಿಗಳಿಗೆ ಚಾಟಿ ಬೀಸುವ ಮೂಲಕ ಒಂದು ವರ್ಷದಲ್ಲಿ ಎಲ್ಲವನ್ನೂ ಈಡೇರಿಸಬೇಕು, ಅದಕ್ಕಾಗಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಎಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೂ ಸಲಹೆ ಕೊಟ್ಟಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಮಂಡಿಸಿರುವ ಬಜೆಟ್ ಒಂದು ವರ್ಷದ ಪೂರ್ತಿ ಬಜೆಟ್ ಆಗಿದೆ. ಮಾನ್ಯ ಸದಸ್ಯರು ಮುಂದಿನ ವರ್ಷದೊಳಗೆ ಮಾಡಿಬಿಡಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಖಂಡಿತವಾಗಿ ಮುಗಿಸುತ್ತೇವೆ. ಅವರಿಗೆ ಅನುಮಾನ ಇರಬೇಕು. ಮುಂದಿನ ಐದು ವರ್ಷಗಳಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ನಮ್ಮ ಮತ್ತು ಬಿಜೆಪಿ ಜಗಳದ ಜೊತೆಯಲ್ಲಿ ಅವರು ಕನಸು ಕಾಣುತ್ತಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಜನರು ಅವರನ್ನು ಮತ್ತು ಬಿಜೆಪಿಯವರನ್ನು ನೋಡಿ ಆಗಿದೆ. ನಮ್ಮನ್ನು ಅಧಿಕಾರಕ್ಕೆ ತರಬೇಕು ಎಂದು ತೀರ್ಮಾನ ಮಾಡಿಯೂ ಆಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಶ್ರೀಕಂಠೇಗೌಡರು ಭ್ರಮೆಯಲ್ಲಿದ್ದಾರೆ, ಕಾಂಗ್ರೆಸ್ ಮತ್ತು ಬಿಜೆಪಿಯವರ ಜಗಳದ ಜೊತೆಯಲ್ಲಿ ಅವರೆಲ್ಲಿ ತೂರಿಕೊಳ್ಳಬೇಕೆಂದು ಕಾಯುತ್ತಿದ್ದಾರೆ. ಆದರೆ ಖಂಡಿತವಾಗಿಯೂ ರಾಜ್ಯದ ಜನತೆ ಪ್ರಭುದ್ಧರಿದ್ದು, ನಾವು ಮಾಡಿರುವ ಕೆಲಸಗಳಿಗೆ ಕೈಹಿಡಿಯುತ್ತಾರೆ. 2018ರ ಚುನಾವಣೆಯಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂಬುದರಲ್ಲಿ ಅನುಮಾನ ಪಡಬೇಕಾಗಿಲ್ಲ. ಇಂತಹ ಉತ್ತಮವಾದ ಬಜೆಟ್ ಕೊಡಲು ಇದುವರೆಗೂ ಯಾರಿಗೂ ಸಾಧ್ಯವಾಗಿರಲಿಲ್ಲ. ಅಂತಹ ಬಜೆಟ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದು, ಅದಕ್ಕಾಗಿ ಇಲ್ಲಿರುವ ಎಲ್ಲರ ಪರವಾಗಿ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಜೆಟ್ ಮೇಲೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈಗ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಸಂಗೀತದ ಕಾರ್ಯಕ್ರಮ ನಡೆಯುತ್ತಿದ್ದು, ಕಾರ್ಯಕ್ರಮ ಪ್ರಾರಂಭವಾದ ಮೇಲೆ ಅನೇಕ ಜನರಿದ್ದು, ಮಧ್ಯೆ ಜನರು ಎದ್ದೆದ್ದು ಹೋಗುತ್ತಿದ್ದರು. ಕೊನೆಗೆ ಒಬ್ಬ ಮಾತ್ರ ಮುಂದೆ ಕುಳಿತಿದ್ದು, ಸಂಗೀತಗಾರನಿಗೆ ಬಹಳ ಖುಷಿಯಾಗಿ ಆತನನ್ನು ಮಾತನಾಡಿಸೋಣ ಎಂದುಕೊಂಡಾಗ ಕುಳಿತಿದ್ದ ವ್ಯಕ್ತಿ ಒಂದು ಕೋಲನ್ನು ಇಟ್ಟುಕೊಂಡಿದ್ದನು. ಆಗ ಸಂಗೀತಗಾರನಿಗೆ ಅವನನ್ನು ಹೇಗೆ ಮಾತನಾಡಿಸಬೇಕೆಂದು ಗೊತ್ತಾಗಲಿಲ್ಲ. ಕೊನೆಗೆ ಆತನ ಬಳಿ ಹೋಗಿ, ' ಬಾಕಿಯವರೆಲ್ಲರೂ ಹೋದರೂ ಪರವಾಗಿಲ್ಲ, ನೀನೊಬ್ಬ ಇದ್ದೀಯಾ!, ನಿನಗಾದರೂ ಸಂಗೀತದಲ್ಲಿ ಆಸಕ್ತಿ ಇದೆ ' ಎಂದು ಖುಷಿ ಪಟ್ಟು ಹೇಳಿದೆ. ಆಗ ಕುಳಿತಿದ್ದ ವ್ಯಕ್ತಿಯು 'ಸ್ವಾಮಿ, ನಿಮ್ಮ ಬಗ್ಗೆ ನನಗೇನೂ ಇಲ್ಲ, ಆದರೆ ನಿಮ್ಮನ್ನು ಕಾರ್ಯಕ್ರಮಕ್ಕೆ ಕರೆದುಕೊಂಡು ಬಂದವರನ್ನು ಹೊಡೆಯಲು ಹುಡುಕುತ್ತಿದ್ದೇನೆ' ಎಂದು ಹೇಳಿದ. ಇವತ್ತು ನನ್ನ ಪರಿಸ್ಥಿತಿಯೂ ಆ ರೀತಿ ಆಗಿದೆ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸದಸ್ಯರು ಹೇಳಿದ್ದನ್ನು ಅರ್ಥಮಾಡಿಕೊಳ್ಳಲಿಲ್ಲ. ಅವರನ್ನು ಈ ಮನೆಗೆ ಯಾರು ತಂದು ಬಿಟ್ಟರೋ ಅವರನ್ನು ಹುಡುಕುತ್ತಿದ್ದಾರೆ.

**ಶ್ರೀ ಭಾನುಪ್ರಕಾಶ್:-** ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿರುವಾಗ ಒಂದು ಮಾತನ್ನು ಹೇಳಿದೆ. ಏಕೆಂದರೆ ಕೊನೆಯಲ್ಲಿ ಮಾತನಾಡುವುದನ್ನು ತಪ್ಪು ಎಂದು ಭಾವಿಸುವುದಿಲ್ಲ. ಏಕೆಂದರೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ಸಿಕ್ಕಾಗ ಮಾತನಾಡಲೇಬೇಕು. ಬಜೆಟ್ ಎನ್ನುವುದು ಮಹತ್ವಪೂರ್ಣವಾದ ಮತ್ತು ಪವಿತ್ರವಾದ ದಾಖಲೆ ಎಂದು ಭಾವಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಜನರಿಂದ ಹೇಗೆ ಕರ ಸಂಗ್ರಹ ಮಾಡುತ್ತೇವೆ ಮತ್ತು ಜನರಿಗೆ ಏನು ಕಾರ್ಯಕ್ರಮ ಮಾಡುತ್ತೇವೆ ಎನ್ನುವುದು ಮುಖ್ಯ.

**ಉಪಸಭಾಪತಿಯವರು:-** ತಮಗೆ ಎಷ್ಟು ಸಮಯ ಬೇಕು?

**ಶ್ರೀ ಭಾನುಪ್ರಕಾಶ್:-** ಈ ಸದನದಲ್ಲಿ ತಾವು ಹೇಳಿದ ತಕ್ಷಣ ಕುಳಿತುಕೊಳ್ಳುವ ವ್ಯಕ್ತಿ ನಾನೊಬ್ಬನೇ ಆಗಿದ್ದೇನೆ. ತಾವು ಗದರಿಸಿದರೆ ಸದನದಲ್ಲಿ ಹೆದರುವವನು ನಾನೊಬ್ಬನೇ!. ಏಕೆಂದರೆ ತಮ್ಮ ಆರೋಗ್ಯದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೃಷ್ಟಿಯಿಂದ ತಕ್ಷಣ ಕುಳಿತುಕೊಂಡು ಬಿಡುತ್ತೇನೆ. ತಾವು ಕುಳಿತುಕೊಳ್ಳಿ ಎಂದು ಹೇಳಿದ ತಕ್ಷಣವೇ ಕುಳಿತುಕೊಳ್ಳುತ್ತೇನೆ. ಸಾರ್ವಜನಿಕರಿಂದ ಕರ ಹೇಗೆ ಸಂಗ್ರಹ ಮತ್ತು ವಿನಿಯೋಗ ಮಾಡುತ್ತಾರೆ ಎಂಬುದನ್ನು ಬಜೆಟ್‌ನಲ್ಲಿ ಹೇಳುತ್ತಾರೆ. ಮುಂದಿನ ವರ್ಷದಲ್ಲಿ ಹಣ ಹೇಗೆ ಸಂಗ್ರಹ ಮತ್ತು ಖರ್ಚು ಮಾಡುತ್ತೇವೆ ಎಂದು ಹೇಳುವುದಕ್ಕೆ ಬಜೆಟ್ ಇದೆ. ಇಪ್ಪತ್ತು-ಮೂವತ್ತು ವರ್ಷಗಳ ಹಿಂದೆ ಬಜೆಟ್ ಎಂದರೆ ಸಾರ್ವಜನಿಕವಾಗಿ ಬಹಳ ಗಾಬರಿ ಇರುತ್ತಿತ್ತು. ಇವತ್ತು ಸಾರ್ವಜನಿಕರು ಒಂದೊಂದು ಹೆಜ್ಜೆಗೂ ಚರ್ಚೆ ಮಾಡುವಂತಹ ಸ್ಥಿತಿಯ awareness ಬಂದಿದೆ. Media ಕ್ಕೆ ತಕ್ಷಣ ಹೋಗಿ, ಬಜೆಟ್ ಕಾಪಿ ತೆಗೆದುಕೊಂಡು ಚರ್ಚೆ ಮಾಡುತ್ತಾರೆ. ವಿಶ್ಲೇಷಣೆಗಳು ನಡೆಯುತ್ತವೆ. ಈ ರೀತಿ ನಡೆಯುವಾಗ ಯಾವುದಕ್ಕೆ ಹಣ ಕೊಟ್ಟಿದ್ದಾರೆ, ಯಾವುದಕ್ಕೆ ಲೇಖಾನುದಾನ ತೆಗೆದುಕೊಂಡಿದ್ದಾರೆ, ಅದರಲ್ಲಿ ಖರ್ಚು ಹೇಗೆ ಆಯಿತು, ಯಾವ ಕಾರ್ಯಕ್ರಮ ಅನುಷ್ಠಾನ ಮಾಡಿದ್ದಾರೆ ಎಂಬುದೆಲ್ಲದ್ದರ ವಿಶ್ಲೇಷಣೆ ನಡೆಯುತ್ತದೆ. 12 ಬಾರಿ ಬಜೆಟ್ ಇಟ್ಟಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಪ್ರಾರಂಭದಲ್ಲಿಯೇ ಅಭಿನಂದನೆ ಸಲ್ಲಿಸಲೇಬೇಕು. ರಾಜಕಾರಣದಲ್ಲಿ ಒಬ್ಬ ವ್ಯಕ್ತಿ 12 ಬಾರಿ ಅವಕಾಶ ಪಡೆದು ಬಜೆಟ್ ಮಂಡಿಸಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು. ರಾಜ್ಯಕ್ಕೆ ಅನೇಕ ಪ್ರಶಸ್ತಿಗಳು ಬಂದಿರುವ ಬಗ್ಗೆ ಉಲ್ಲೇಖವಾಗಿದ್ದು, ಮಹಿಳೆಯರಿಗೆ ಬಹಳ ಅವಕಾಶಗಳನ್ನು ಕೊಟ್ಟಿರುವ ಹಾಗೂ ಸಾರಿಗೆಯಲ್ಲಿ ಒಳ್ಳೆಯದಿದೆ ಮತ್ತು ಅಂತರಾಷ್ಟ್ರೀಯ ದಿನವನ್ನು Investors' Day ಮಾಡಲಾಗಿದೆ. Make in India ಕಾರ್ಯಕ್ರಮ ಮಾಡಲಾಗಿದೆ. ಇದರಿಂದ investors ಗಳನ್ನು ಕರೆದು ವಿಶೇಷ ಪ್ರಯತ್ನಗಳನ್ನು ಈ ಸರ್ಕಾರದಿಂದ ಮಾಡಲಾಗಿದೆ ಎಂಬುದಕ್ಕೆ ಅಭಿನಂದನೆಗಳನ್ನು ತಿಳಿಸಲೇಬೇಕು. ಇದರಲ್ಲಿ ಸಂಕೋಚ ಅಥವಾ ಯಾವ ಕಂಜೂಸ್‌ತನವನ್ನು ನಾನು ಮಾಡುವುದಿಲ್ಲ. ಸರ್ಕಾರದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಿಶೇಷವಾದ ರೀತಿಯಲ್ಲಿ ಕರ್ನಾಟಕವನ್ನು ಭಾರತದಲ್ಲಿ ಗುರುತಿಸುವಂತೆ ಮಾಡಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು. ಬಜೆಟ್‌ನಲ್ಲಿ 'ರಾಮರಾಜ್ಯ ಎನ್ನುವುದು ಹಸಿವು ಮುಕ್ತ, ಶೋಷಣೆ ಮುಕ್ತ, ಗಾಢ-ಸಾಮರಸ್ಯದ ಸರ್ವಾಂಗೀಣ ಪ್ರಗತಿಯನ್ನು ಪ್ರತಿನಿಧಿಸುವ ಒಂದು ಪರಿಕಲ್ಪನೆ' ಎಂದು ಹೇಳಿರುವುದು ಸಂತೋಷ ಕೊಡುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**378) 22-03-2017 SK-VK 6.20**

**( ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಭಾನುಪ್ರಕಾಶ (ಮುಂದು):-**

ಸ್ವಾಮಿ ಈ ದೇಶದಲ್ಲಿರುವ ಎಲ್ಲಾ ಜನ ರಾಮರಾಜ್ಯ ಬರಬೇಕೆಂಬ ಕಲ್ಪನೆಯನ್ನು ಇಟ್ಟುಕೊಂಡಿದ್ದಾರೆ. ಈ ಸರ್ಕಾರ ಕೂಡ ಹೇಳುತ್ತಿದೆ. 'ಶೋಷಿತ, ಪೀಡಿತ, ದಲಿತ ಜನಾಂಗದ ಭಾಗ್ಯೋದಯವನ್ನು ನಿರ್ಮಿಸುತ್ತಾ' ಈ ಒಂದು ಉಕ್ತಿಯನ್ನು ಅನೇಕ ಸಾಹಿತಿಗಳು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರವು ಕೂಡ ರಾಮರಾಜ್ಯ ರೀತಿಯನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೋಸ್ಕರ ಕೂಡ ನನಗೆ ಸಂತೋಷವಿದೆ. ಸಾಮಾಜಿಕ ಪರಿಕಲ್ಪನೆಯಲ್ಲಿ ತಾವು ಏನು ಹೇಳುತ್ತಿದ್ದೀರಿ, ಸಾಮಾಜಿಕ ನ್ಯಾಯ ಎಂದು ಏನು ಹೇಳುತ್ತಿದ್ದೀರಿ ಅದು ಕೂಡ ಖಂಡಿತ ಸತ್ಯ ಇದೆ. ರಾಮರಾಜ್ಯದ ಕಡೆಗೆ ಹೋಗಬೇಕೆಂದು ತಾವು ಏನು ಅಂದುಕೊಂಡಿದ್ದೀರಿ ಅದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ. ಶೋಷಿತರು, ಪೀಡಿತರು ಮತ್ತು ದಲಿತರನ್ನು ಒಂದು ಸಾಮಾಜಿಕ ಪರಿಕಲ್ಪನೆಯಲ್ಲಿ ಮೇಲಕ್ಕೆ ಎತ್ತಿಕೊಂಡು ಬರುವಂತಹದ್ದು ಬಹಳ ವಿಶೇಷವಾದಂತಹದ್ದು. ನಾವು ಅವರಿಗೆ ಉಪಕಾರ ಮಾಡುತ್ತಿದ್ದೇವೆಂದು ನಾನೇನು ಅಹಂಕಾರದಿಂದ ಹೇಳುವುದಕ್ಕೆ ಹೋಗುತ್ತಿಲ್ಲ. ಬದಲಾಗಿ ಅವರು ಏಕೆ ಶೋಷಿತರಾಗಿ ಉಳಿದರು. ಇತಿಹಾಸದ ಕಾರಣಕ್ಕೆ ಶೋಷಿತರಾಗಿ, ದಲಿತರಾಗಿ ಉಳಿದರು. ಆ ತರಹ ಪರಿಕಲ್ಪನೆ ಇಲ್ಲದೇ ಇರುವಂತಹ ಸಮಾಜ ನಮ್ಮದು. ಆದರೆ ಯಾಕೆ ಬಂತು? ಯಾವಾಗ ಬಂತು ಎಂಬುದು ಗೊತ್ತಿಲ್ಲ. ಅದನ್ನು ಚರ್ಚೆ ಮಾಡುತ್ತಾ ಹೋದರೆ, ಅದೇ ಒಂದು ದೊಡ್ಡ debate ಆಗುತ್ತಾ ಹೋಗುತ್ತದೆ. ಅದರ ಬದಲು ಈ ಪರಿಸ್ಥಿತಿಯನ್ನು ಅವಲೋಕನ ಮಾಡಿ, ಈ ರೀತಿ ಶೋಷಿತರು ಯಾರು ಇದ್ದಾರೆ.

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನೀವು ಮುಂದಕ್ಕೆ ಓದಲಿಲ್ಲ. ಸ್ವಲ್ಪ ಮುಂದಕ್ಕೆ ಓದಿ.

**ಶ್ರೀ ಭಾನುಪ್ರಕಾಶ:-** ಸನ್ಮಾನ್ಯ ಸಭಾಪತಿಯವರೇ, ಯಾವಾಗ ಮಾನ್ಯ ಸಭಾಪತಿಯವರು ಕುಳಿತುಕೊಳ್ಳುವುದಕ್ಕೆ ಹೇಳುತ್ತಾರೆ ಎನ್ನುವ ಹೆದರಿಕೆಗೆ ಎಲ್ಲಾ ಹಾರಿ ಹೋಗಿ ಬಿಡುತ್ತದೆ.

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಂದಿಗೆ ಅವರು ರಾಮರಾಜ್ಯ ಎನ್ನುವುದು ಹಸಿವು ಮುಕ್ತ, ಶೋಷಣೆ ಮುಕ್ತ, ಗಾಢ ಸಾಮರಾಸ್ಯ, ಸರ್ವಾಂಗೀಣ ಪ್ರಗತಿಯನ್ನು ಪ್ರತಿನಿಧಿಸುವ ಒಂದು ಪರಿಕಲ್ಪನೆ. ನಂತರ ಅವರು ಮುಂದಕ್ಕೆ ಏನು ಹೇಳಿದ್ದಾರೆ ಎಂಬುದನ್ನು ಗಮನಿಸಿದ್ದೀರಿ ಎಂದು ಅಂದುಕೊಂಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ಕೊಂಡಯ್ಯನವರು, ಮಾನ್ಯ ಪ್ರಸನ್ನಕುಮಾರ್‌ರವರು ...

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಡಾ. ಬಿ.ಆರ್. ಅಂಬೇಡ್ಕರ್‌ರವರು ರಚಿಸಿದ ಸಂವಿಧಾನದ ಹಿಂದಿನ ಪ್ರೇರಣೆಯಾಗಲಿ, ನನ್ನ ಬದುಕೇ ನನ್ನ ಜೀವನದ ಸಂದೇಶವಾಗಲಿ, ಅಣ್ಣ ಬಸವಣ್ಣನವರ ಆದರ್ಶವಾಗಲಿ, ಇವೆಲ್ಲಾ ಧ್ವನಿಸುವುದು ಇದನ್ನೇ. ಹಾಗಾಗಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೋಧಿಸುವವರು ರಾಮರಾಜ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ ಎಂಬುದು ನನ್ನ ಭಾವನೆ. ಏಕೆಂದರೆ ಇದು commitment. ಈ ಭಾವನೆ ಮತ್ತು ಪರಿಕಲ್ಪನೆ ಸಹಕಾರವಾದಾಗ ಮಾತ್ರ ರಾಮರಾಜ್ಯವಾಗುತ್ತದೆ. ಈ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೋಧಿಸುವವರು, ರಾಮರಾಜ್ಯವನ್ನು ನಿರ್ಮಿಸಲು ಹೇಗಾಗುತ್ತದೆಂಬುದನ್ನು ಕೂಡ ವಿಶ್ಲೇಷಣೆ ಮಾಡಿ.

**ಶ್ರೀ ಭಾನುಪ್ರಕಾಶ:–** ಸನ್ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭದಲ್ಲಿ ಹೇಳಿದೆ. ಇತಿಹಾಸ ಇರುವಂತಹ ಕಾಲದಲ್ಲಿ ಈ ದೇಶದಲ್ಲಿ ಈ ರೀತಿಯಾದಂತಹ ಬದುಕು ಇರಲಿಲ್ಲ. ಬಹಳ ಯುಗಗಳ ಕಲ್ಪನೆ ಇರುವಂತಹ ದೇಶ ಇದು. ಆದರೆ ಎಲ್ಲೋ ವಿಕೃತಿಗಳು ನುಸುಳಿವೆ. ಇವತ್ತು ವಿಕೃತಿಗಳೇ ಸಂಸ್ಕೃತಿಗಳಾಗುವಂತಹ ಲಕ್ಷಣಗಳು ಕಾಣುತ್ತಿವೆ. ವಿಕೃತಿ ಸಂಸ್ಕೃತಿಯಾಗಬೇಕೆಂದು ಯಾರೂ ಬಯಸುವುದಿಲ್ಲ. ಹಾಗಾಗಿ ಯಾವ ಪ್ರಕೃತಿ ಸಹಜವಾದಂತಹ ಸ್ವಭಾವವಿದೆ. ಅದಕ್ಕೆ ಸಂಸ್ಕಾರ ಕೊಡುತ್ತಾ, ಅವರನ್ನು ತಿದ್ದುತ್ತಾ, ತೀಡುತ್ತಾ ಮತ್ತು ನಮ್ಮನ್ನು ನಾವು ತಿದ್ದುತ್ತಾ, ತೀಡುತ್ತಾ ನಾವು ಸಂಸ್ಕೃತಿ ಕಡೆಗೆ ಹೋಗುವಂತಹದೇ ಜೀವನದ ಲಕ್ಷಣ. ವಿಕೃತಿಗಳು ಯಾವುದು ಸಮಾಜದೊಳಗೆ ನುಸುಳಿದೆ. ಅದು ಯಾವುದೇ ರೀತಿಯಾದಂತಹ ವಿಕೃತಿ ಇರಬಹುದು. ಅದನ್ನು ತೆಗೆದು ಹಾಕುವುದಕ್ಕೆ ಪರಿಕಲ್ಪನೆ ಏನಿದೆ. ಪೂಜ್ಯ ಅಂಬೇಡ್ಕರ್‌ರವರು, ಅಣ್ಣ ಬಸವಣ್ಣನವರು ಮತ್ತು ಅನೇಕ ಸಾಧು ಸಂತರು ಇರಬಹುದು. ಯಾರ್ಯಾರು ಪರಿಕಲ್ಪನೆ ಮಾಡಿದ್ದಾರೆ ಅವರೆಲ್ಲರ ಆಶಯಗಳಿಗೆ ಒಟ್ಟಾಗಿ ಕೆಲಸ ಮಾಡುವಂತಹದು ಎಲ್ಲಾ ಸರ್ಕಾರದ ಜವಾಬ್ದಾರಿಯಾಗಿದೆ. ಅದರಲ್ಲಿ ಪ್ರಶ್ನೆಯೇ ಇಲ್ಲ. ತಾವು ರಾಮರಾಜ್ಯ ಎಂದು ಉಲ್ಲೇಖ ಮಾಡಿದಾಗ, ನಾನು ಉದ್ದೇಶಪೂರ್ವಕವಾಗಿ ಅಂಬೇಡ್ಕರ್ ಮತ್ತು ಬಸವಣ್ಣನವರ ಹೆಸರು ತೆಗೆದುಕೊಳ್ಳಲಿಲ್ಲವೆಂದು ಅಲ್ಲ. ನಾನು ಅದನ್ನು ಮಾತ್ರ ಉಲ್ಲೇಖ ಮಾಡಿ, ಅದನ್ನು ಹೇಳಿದೆ. ಎರಡನೆಯದು ಸಾಮಾಜಿಕ ನ್ಯಾಯದ ಪರಿಕಲ್ಪನೆ ಏನು ಮಾಡಿದ್ದಾರೆ. ಇದು ಏನಾಗಿದೆ ಎಂದು ಚರ್ಚೆ ಮಾಡುವುದಕ್ಕಿಂತ, ಇದಕ್ಕೆ ಯಾರು ಕಾರಣ ಎಂದು ಹುಡುಕುವುದಕ್ಕಿಂತ, ಈ ಪರಿಸ್ಥಿತಿಯಿಂದ ಮುಂದಕ್ಕೆ ಹೇಗೆ ತೆಗೆದುಕೊಂಡು ಹೋಗುವುದು ಎಂಬುದನ್ನು ನೋಡಬೇಕೆಂಬ ಆಶಯವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಯಾಕೆಂದರೆ ಈ ಸದನದಲ್ಲಿ ಅನೇಕ ಬಾರಿ ಚರ್ಚೆ ಮಾಡುವುದಕ್ಕೆ ನಾನು ಹೇಳಿದ್ದೇನೆ. ಯಾವುದಾದರೊಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ನಿಮ್ಮ ಸರ್ಕಾರದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಲ್ಲವೇನ್ರಿ? ಕಳ್ಳತನವಾಯಿತು, ನಿಮ್ಮ ಸರ್ಕಾರದಲ್ಲಿ ಆಗಿಲ್ಲವೇನ್ರಿ? ಅತ್ಯಾಚಾರವಾಯಿತು, ನೀವು ಮಾಡಿಲ್ಲವೇನ್ರಿ ಎಂದು ಹೇಳುತ್ತಾರೆ. ಸ್ವಾಮಿ ಎಷ್ಟು ವರ್ಷ ಏನು ಎಂಬುದು ನನಗೆ ಗೊತ್ತಿಲ್ಲ. ನಾವು ನಿಮ್ಮ ಮೇಲೆ ಹೇಳುವುದು, ನೀವು ನಮ್ಮ ಮೇಲೆ ಹೇಳುವುದು. ಇದರಿಂದ ಜನರಿಗೆ ಏನು ಲಾಭ ಎಂದು ಹೇಳಿ? ಒಂದೊಂದು ನಿಮಿಷ ಕೂಡ ಇಲ್ಲಿ ಚರ್ಚೆಯಾಗಿ ಜನರಿಗೆ ಅನುಕೂಲವಾಗಬೇಕೆಂಬುದು ನಮ್ಮ ಆಸೆ. ಯಾರನ್ನೂ ನಾನು ಟೀಕೆ ಮಾಡುತ್ತೇನೆಂದು ದಯವಿಟ್ಟು ಅಂದುಕೊಳ್ಳಬೇಡಿ. ಮನಸ್ಸಿನಲ್ಲಿ ಆ ತರಹದು ಅನಿಸುತ್ತದೆ. ಜನ ನಮಗೆಲ್ಲರಿಗೂ ತೀರ್ಮಾನ ಕೊಡೋರು. ಜನ ತೀರ್ಮಾನ ಕೊಟ್ಟಿದ್ದಾರೆ ನಿಮ್ಮದು ಸರಿಯಿಲ್ಲ ನೀವು ಈ ಕಡೆ ಕುಳಿತುಕೊಳ್ಳಿ. ನಿಮ್ಮದು ಸರಿಯಿದೆ ನೀವು ಆ ಕಡೆ ಕುಳಿತುಕೊಳ್ಳಿ. ಆದರೆ ಈ ಬಜೆಟ್ ಇಲ್ಲಿ ಬಹುಮತದ ಮೇಲೆ, ಇಲ್ಲ ಸರ್ವಾನುಮತದ ಮೇಲೆ ತೀರ್ಮಾನವಾಗದೇ ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ? ಬಜೆಟ್ ಇದ್ದ ತಕ್ಷಣ ನಾಳೆಯಿಂದಲೇ ಜಾರಿಗೆ ತರುವುದಕ್ಕೆ ಸಾಧ್ಯವೇ? ನಿಮಗೆ ನಮ್ಮೆಲ್ಲರ ಒಪ್ಪಿಗೆ ಬೇಕು. ನಾವು ಇದನ್ನು ಟೀಕೆ ಮಾಡಿದರೂ ಕೂಡ ನಾವೆಲ್ಲರೂ ಒಪ್ಪಲೇ ಬೇಕು. ಅದಾದ ಮೇಲೆ ಇದೇ ಲೇಖಾನುದಾನ ಸಿಗುವುದು. ಡಾ. ಅಂಬೇಡ್ಕರ್‌ರವರು ತಂದಿರುವಂತಹ ಸಿಸ್ಟಂ ಇದು. ಜನರಿಗೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶ ಇಟ್ಟುಕೊಂಡು ಚರ್ಚೆ ಮಾಡಿದರೆ ಹೆಚ್ಚು ಅರ್ಥಪೂರ್ಣವಾಗುತ್ತದೆಂದು ಅನಿಸುತ್ತದೆ. ನಿನ್ನೆ ಮತ್ತು ಇವತ್ತು ಎರಡು ವಿಷಯಗಳ ಬಗ್ಗೆ ಮಹತ್ವದ ಚರ್ಚೆ ನಡೆದವು. ನಿನ್ನೆ ಸ್ಮಶಾನದ ಬಗ್ಗೆ ಚರ್ಚೆ ನಡೆಯಿತು. ಇವತ್ತು 70 ವರ್ಷವಾದರೂ ಜನರು ಕೂಡ ನಿಶ್ಚಿಂತೆಯಿಂದ ಸಾಯುವುದಕ್ಕೆ ಹೆದರುವಂತಹ ಪರಿಸ್ಥಿತಿಯಿದೆ. ನಾನು ಸತ್ತ ಮೇಲೆ ನನ್ನ ಮಕ್ಕಳು ಎಲ್ಲಿ ಸುಡುತ್ತಾರೋ ಅಥವಾ ಎಲ್ಲಿ ಹೂಳುತ್ತಾರೋ ಎನ್ನುವ ದೊಡ್ಡ ಚಿಂತೆಯಲ್ಲಿ ಸಾಯುವಂತಹ ಪರಿಸ್ಥಿತಿ ಇದೆ ಎಂದರೆ, ಇದು ಸಮಾಜಕ್ಕೆ ಎಷ್ಟರಮಟ್ಟಿಗೆ ಗೌರವ ತರುವಂತಹ ವಿಚಾರ ಎಂಬುದನ್ನು ಯೋಚನೆ ಮಾಡಬೇಕು. ನಿನ್ನೆ ಆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಸ್ವಲ್ಪ ಅಳುಕು ಆಯಿತು, ಯಾಕೆ ಎಂದು ಹೇಳುವುದಾದರೆ ಸಮಾನವಾಗಿ ಸ್ಮಶಾನಗಳಾಗಬೇಕೆಂಬ ಪರಿಕಲ್ಪನೆ ಇದ್ದರೆ ಅದು ಸರಿ. ಒಂದು ಕಡೆ 3-4 ಎಕರೆ ಜಮೀನುಗಳನ್ನು ತೆಗೆದುಕೊಂಡು, ಸತ್ತ ವ್ಯಕ್ತಿಯ ಜಾತಿಯನ್ನು ನೋಡದೇ ಎಲ್ಲರಿಗೂ ಅಲ್ಲಿ ಹೂಳುವುದಕ್ಕೆ ಅವಕಾಶ ಕೊಡಬಹುದಾ? ನಾನು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದೇನೆಂದರೆ, ಕೆಲವು ಜಾತಿಯಲ್ಲಿ ಶವವನ್ನು ಸುಡುವಂತಹ ಸಂಪ್ರದಾಯ ಕೂಡ ಇದೆ. ಇದು ಎಲ್ಲರೂ ಅನುಸರಿಸಿಕೊಂಡು ಬಂದಿರುವಂತಹ ಸಂಪ್ರದಾಯಗಳು. ನಾವು ನಮ್ಮ ಮನೆಗಳಲ್ಲಿ ರೂಢಿ ಮಾಡಿಕೊಂಡಿರುವಂಥದ್ದು. ಇವತ್ತು ಕ್ರಾಂತಿಕಾರಕವಾಗಿ ಆನೇಕ ಯೋಜನೆಗಳನ್ನು ಮತ್ತು ಬದಲಾವಣೆಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಸರ್ಕಾರ ಒಂದೊಂದು ಪಂಚಾಯಿತಿಗೂ 5 ಎಕರೆ ಅಥವಾ 10 ಎಕರೆ ಜಾಗವನ್ನು ಸ್ಮಶಾನಕ್ಕೆ ಇಟ್ಟರೂ ಕೂಡ ಇದೊಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಶ್ವತವಾಗಿರುವಂತಹ ಸಮಸ್ಯೆಯೇ ಅಗಿದೆ. ಅದರ ಬದಲು ಶವವನ್ನು ಸುಡುವಂತಹ ಪರಿಕಲ್ಪನೆಗೆ ಸಮಾಜವನ್ನು ಒಪ್ಪಿಸುವುದಾದರೆ ಅದರಿಂದ ಏನಾದರು ಬದಲಾವಣೆಯನ್ನು ತರುವಂಥದ್ದಾದರೆ ಜಾತ್ಯಾತೀತವಾಗಿ ಮಾಡುವುದಕ್ಕೆ ಸಾಧ್ಯವಿಲ್ಲವೇ? ಇದು ಯಾರದೋ ಒಬ್ಬರ ಹಕ್ಕಲ್ಲ. ಯಾರೋ ಶವವನ್ನು ಸುಡುತ್ತಾರೆ, ಇದು ಯಾವುದೋ ಜಾತಿಯ rituals ಅಲ್ಲ. ಎಲ್ಲಾ ಜಾತಿಯವರು ಶವವನ್ನು ಸುಡಬಹುದು. ಒಟ್ಟು ಪಂಚಭೂತಗಳಿಗೆ ಆ ಶರೀರವನ್ನು ಸೇರಿಸುವಂಥದ್ದು ಎನ್ನುವಂತಹ ಕಲ್ಪನೆಯನ್ನು ಇಟ್ಟುಕೊಂಡು, ಕ್ರಾಂತಿಕಾರಕವಾಗಿ ಸರ್ಕಾರ ಯೋಚನೆ ಮಾಡಬೇಕು. ಒಂದು crematorium, ಮುಂಚೆ ಎಲ್ಲಾ ಶವವನ್ನು ಸುಡಬೇಕಾದರೆ ಸೌಧೆಬೇಕಾಗಿತ್ತು. ಈಗ ಸೌದೆಯಲ್ಲದೇ, ಗ್ಯಾಸ್ ಮತ್ತು ವಿದ್ಯುತ್ ಇದೆ. ಹೊಸದಾದಂತಹ ವ್ಯವಸ್ಥೆಯನ್ನು ಮಾಡಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಶವವನ್ನು ಸುಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಒಂದು ಕ್ರಾಂತಿಕಾರಕವಾದಂತಹ ಬದಲಾವಣೆ ಬಂದ ಹಾಗೇ ಆಗುತ್ತದೆ. ಆ ರೀತಿಯಾದರು ಸಮಾನತೆ ಬರಬಹುದೇ ಎನ್ನುವಂಥದ್ದು ನನ್ನ ವಿನಂತಿ ಮತ್ತು ಸಲಹೆ ಅಷ್ಟೇ. ಎರಡನೆಯದಾಗಿ ಬಹಳ ವಿಶೇಷವಾಗಿ ಮಾಧ್ಯಮದ ಬಗ್ಗೆ ಸದನದಲ್ಲಿ ಚರ್ಚೆಯಾಯಿತು. ಮಾಧ್ಯಮಗಳ ಬಗ್ಗೆ ನಾನು ಹೇಳುವುದೇನೆಂದರೆ, ಪೊಲೀಸ್ ಶೂಟ್ ಮಾಡಬೇಕಾದರೂ ಸೊಂಟದ ಕೆಳಗಡೆ ಶೂಟ್ ಮಾಡಬೇಕೆಂದು ನಿಯಮ ಇದೆ ಎಂದು ನಾನು ಕೇಳಿದ್ದೇನೆ. ಆದರೆ ಕ್ಯಾಮರಾದಿಂದ ಶೂಟ್ ಮಾಡಬೇಕಾದರೆ ಎಲ್ಲಿಗೆ ಬೇಕಾದರೂ ಶೂಟ್ ಮಾಡಿಬಿಡುತ್ತಾರೆ. ನೋಡಿ ಎರಡು ಶೂಟ್‌ನಲ್ಲಿ ಎಷ್ಟು ವ್ಯತ್ಯಾಸ ಇದೆ. ಪೊಲೀಸ್‌ನವರು ಶೂಟ್ ಮಾಡಿದಾಗ ಎಲ್ಲಿಯಾದರೂ ಆಯಕಟ್ಟಿಗೆ ಬಿದ್ದರೆ ತಕ್ಷಣ ಸತ್ತು ಹೋಗುವಂಥದ್ದು ಇದೆ. ಆದರೆ ಕ್ಯಾಮರಾದಲ್ಲಿ ಶೂಟ್ ಮಾಡಿದ್ದನ್ನು ಪ್ರತಿದಿನ ತೋರಿಸುತ್ತಿದ್ದರೆ ದಿನ ಸಾಯಬೇಕು. ಈ ಪರಿಸ್ಥಿತಿ ಇದೆ. ಮಾಧ್ಯಮದ ಬಗ್ಗೆ ಒಂದು ಮೌಲಿಕವಾದಂತಹ ಚರ್ಚೆ ಸದನದಲ್ಲಿ ಆಯಿತು. ಇದಕ್ಕೆ ಒಂದು ಕೊನೆಯನ್ನು ತರಬೇಕು. ಮಾನ್ಯ ವಿ.ಎಸ್.ಉಗ್ರಪ್ಪನವರು ಹಕ್ಕುಚ್ಯುತಿಯನ್ನು ಮಾಡುವವರೆಗೂ ಕೂಡ ಹೋದರು. ಕಾನೂನಿನಲ್ಲಿ ಅವರಷ್ಟು ಮತ್ತು ಮಾನ್ಯ ಶರಣಪ್ಪ ಮಟ್ಟೂರ್‌ರವರಷ್ಟು ನನಗೆ ಗೊತ್ತಿಲ್ಲ. ಇದು ಸಂಘರ್ಷಕ್ಕೆ ಹೋಗಬೇಕಾ? ಏಕೆಂದರೆ ಮಾಧ್ಯಮ ಕೂಡ ಪ್ರಜಾಪ್ರಭುತ್ವದ ಒಂದು ಕಂಬ. ಆ ಕಂಬ ಕುಟ್ಟುತ್ತಿದೆ ಎಂದರೆ ಒಟ್ಟಿಗೆ ಅದನ್ನು ಕತ್ತರಿಸಿ ತೆಗೆಯಬೇಕಾ ಅಥವಾ ಸ್ವಲ್ಪ ರಿಪೇರಿ ಮಾಡಬೇಕಾ ಎನ್ನುವುದು ಯೋಚಿಸಬೇಕಾಗಿದೆ. ಅವರು ನಮ್ಮನ್ನು ರಿಪೇರಿ ಮಾಡುತ್ತಾರೆ. ನಾವು ಕಾರ್ಯಾಂಗವನ್ನು ರಿಪೇರಿ ಮಾಡುತ್ತೇವೆ. ನ್ಯಾಯಾಂಗದವರು ನಮ್ಮೆಲ್ಲರನ್ನೂ ಕೂಡ ರಿಪೇರಿ ಮಾಡುತ್ತಾರೆ. ಆದರೆ ಯಾರಿಗೂ ಸರ್ವಾಧಿಕಾರ ಇಲ್ಲ ಎನ್ನುವಂತಹ ಒಂದು ಪರಿಕಲ್ಪನೆ ಇದೆ. ಇಂತಹ ಒಂದು ಅತ್ಯುತ್ತಮವಾದಂಥದ್ದು, ಒಬ್ಬರಿಗೆ ಒಬ್ಬರು ಪೂರಕ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಬ್ಬರು ಇನ್ನೊಬ್ಬರ ಮೇಲೆ ಸವಾರಿ ಮಾಡುವಂಥದ್ದು ಇಲ್ಲ. ಎಷ್ಟು ಬಿಗಿ ಇದೆ ಎನ್ನುವುದನ್ನು ನೋಡಬೇಕು. ಎಲ್ಲರೂ ಅವರವರ ಕೆಲಸವನ್ನು ಮಾಡಿ ಸ್ಟ್ರಾಂಗ್ ಆದರೆ, ಯಾರು ಹಸ್ತಕ್ಷೇಪ ಮಾಡುವಂತಿಲ್ಲ. ಕಾನೂನು ಮಾಡುವವರು ನಾವೇ, ಆದರೆ ಕಾನೂನನ್ನು ಜಾರಿಗೆ ತರುವವರು ನ್ಯಾಯಾಂಗದವರು. ಪಾಲಿಸಿಯನ್ನು ಮಾಡುವವರು ನಾವೇ. ಪಾಲಿಸಿಯನ್ನು ಜಾರಿಗೆ ತರುವಂಥವರು ಅಧಿಕಾರಿಗಳು. ನಾವು ಜನರಿಗೆ ಬೇಕಾದಂಥದ್ದನ್ನು ಕೊಡುತ್ತೇವೆ. ಅದನ್ನು ವಿಶ್ಲೇಷಣೆ ಮಾಡುವಂಥದ್ದು ಮಾಧ್ಯಮಕ್ಕಿದೆ. ಹೀಗೆ ಒಂದು ಅತ್ಯುತ್ತಮವಾದ ವ್ಯವಸ್ಥೆಯ ಕಡೆಗೆ ಹೋಗುವಂತಹ ಒಂದು ಪರಿಕಲ್ಪನೆಯಿದೆ. ಇದಕ್ಕೆ ಬೇಕಾದಂತಹ ಸಿದ್ಧತೆಯನ್ನು ಜನರು ಮತ್ತು ರಾಜಕಾರಣಿಗಳು ಮಾಡಿಕೊಂಡರೆ ಇದು ಹೆಚ್ಚು ಲಾಭವಾಗಬಹುದು ಅನಿಸುತ್ತದೆ. ಹಾಗಾಗಿ ಮಾಧ್ಯಮದ ಬಗ್ಗೆ ಒಂದು ಸರಿಯಾದಂತಹ ಚರ್ಚೆಯಾಗಬೇಕು ಮತ್ತು ಸರಿಯಾದಂತಹ ಕಾನೂನು ತರಬೇಕು. ಬಜೆಟ್‌ನಲ್ಲಿ ಅದಕ್ಕೆ ವಿಶೇಷವಾದಂತಹ ಆದ್ಯತೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದು ತಾತ್ಕಾಲಿಕವಾಗಿ ಮಧ್ಯದಲ್ಲಿ ಬಂದಿರುವಂತಹದು. ಆದರೆ ಇದು ಜನಜೀವನಕ್ಕೆ ಸಂಬಂಧಪಟ್ಟಿರುವುದರಿಂದ ಈ ಅಧಿವೇಶನದಲ್ಲಿ ಅಥವಾ ಮುಂದಿನ ಅಧಿವೇಶನದಲ್ಲಿ ಇದಕ್ಕೆ ಸರಿಯಾದಂತಹ ಚರ್ಚೆ ಮಾಡಬೇಕು. ಅದನ್ನು ಎಲ್ಲರೂ ಓದಬೇಕು. ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ತೋರಿಸಿಬಿಟ್ಟರೆ ಸಾಕು. ಬಹಳ ಅಪಾಯವಾಗುವಂತಹ ಸನ್ನಿವೇಶಗಳನ್ನು ತೋರಿಸಿದರೆ ಅದು ಜನರ ಮನಸ್ಸಿನಲ್ಲಿ ಉಳಿಯುತ್ತದೆ. ಮತ್ತೆ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ತೋರಿಸಿದರೆ ಹೆಂಗಸರು, ಮಕ್ಕಳು ಎಲ್ಲರೂ ಕೂಡ ನೋಡುತ್ತಾರೆ. ಪ್ರಿಂಟ್ ಮೀಡಿಯಾದಲ್ಲಿ ಬರುವುದನ್ನು ಕೆಲವರು ಮಾತ್ರ ಮನೆಯಲ್ಲಿ ಓದುತ್ತಾರೆ. ಹೆಣ್ಣು ಮಕ್ಕಳು, ಮಕ್ಕಳು ಓದುತ್ತಾರೆ ಎನ್ನುವಂಥದ್ದು ಇಲ್ಲ. ಆದರೆ ಎಲೆಕ್ಟ್ರಾನಿಕ್ ಮೀಡಿಯಾ ಜವಾಬ್ದಾರಿ ಬಹಳ ಇದೆ.

(ಮುಂದು)

(379) 22-03-2017 6-30 HV:AK

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಭಾನುಪ್ರಕಾಶ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಅವರು ಅತ್ಯಂತ ಎಚ್ಚರಿಕೆಯಿಂದ ವ್ಯವಹರಿಸದೇ ಹೋದರೆ, ಸಮಾಜದಲ್ಲಿ ಬಹಳ ದೊಡ್ಡ ಗೊಂದಲವನ್ನುಂಟು ಮಾಡಿದಂತಾಗುತ್ತದೆ. ಅವರು ಸಾಮರಸ್ಯದ ಸಮಾಜವನ್ನು ಕಟ್ಟಬೇಕೆಂದು ಹೇಳುತ್ತಿದ್ದಾರೆ. ಆ ಸಾಮರಸ್ಯಕ್ಕೂ ಕೊರತೆಯುಂಟಾಗುವ ಸಂದರ್ಭಗಳು ಬರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದ ಹಿನ್ನೋಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಮಾತು ಸ್ವಲ್ಪ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ಅವರು ಹಿರಿಯರು, ಅನುಭವಿಗಳು ಮತ್ತು ರಾಜಕಾರಣದಲ್ಲಿ ಅವರಿಗೆ ಬಹಳಷ್ಟು ವರ್ಷಗಳ ಅನುಭವವಿದೆ. ಕೇಂದ್ರ ಸರ್ಕಾರ ತೆಗೆದುಕೊಂಡ ನೋಟುಗಳ ಅಪಮೌಲ್ಯೀಕರಣದ ನಿರ್ಧಾರದಿಂದಾಗಿ ಕರ್ನಾಟಕ ರಾಜ್ಯಕ್ಕೆ ತೊಂದರೆಯುಂಟಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತನ್ನು ಯಾವ ಹಿನ್ನೆಲೆಯಲ್ಲಿ ಹೇಳಿದ್ದಾರೆ ಎನ್ನುವುದನ್ನು ಅವರಿಗೇ ಬಿಡುತ್ತಿದ್ದೇನೆ. ಆದರೆ, ಒಂದು ಮಾತನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರದ ತೆರಿಗೆಯ ಪಾಲಿನಲ್ಲಿ 26978.84 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಲಾಗಿತ್ತು. ಕೇಂದ್ರ ಸರ್ಕಾರ ಇಲ್ಲಿಯವರೆಗೆ 28759.94 ಕೋಟಿ ರೂಪಾಯಿಗಳನ್ನು ನೀಡಿದೆ. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದಿಂದ ಅನುದಾನದ ರೂಪದಲ್ಲಿ 13694.34 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಲಾಗಿತ್ತು. ಆದರೆ, ಕೇಂದ್ರ ಸರ್ಕಾರ 14797.69 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ತೆರಿಗೆಯೇತರ ರಾಜಸ್ವದಲ್ಲಿ 6220.45 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಲಾಗಿತ್ತು. ಅದರಲ್ಲಿ 7098.82 ಕೋಟಿ ರೂಪಾಯಿಗಳು ಬಂದಿದೆ. ಒಟ್ಟಾರೆಯಾಗಿ ಹೇಳಬೇಕಾದರೆ, ಸುಮಾರು 2800 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಂದಿದೆ. ಮುದ್ರಾಂಕ ಶುಲ್ಕದಲ್ಲಿ ಕಡಿಮೆ ಹಣ ಸಂಗ್ರಹವಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಮುದ್ರಾಂಕ ಶುಲ್ಕ ಎಂದರೆ, ನಿವೇಶನಗಳನ್ನು ನೋಂದಣಿ ಮಾಡಿಸುವುದು. ದೊಡ್ಡ ದೊಡ್ಡ ಸೈಟ್‌ಗಳನ್ನು ಅಥವಾ ಬಡಾವಣೆ ನಿರ್ಮಾಣಕ್ಕಾಗಿ ಭೂಮಿಯನ್ನು ಖರೀದಿ ಮಾಡುವವರು ಈ ರೀತಿ ನೋಂದಣಿ ಮಾಡಿಸುತ್ತಾರೆ. ಸಾಮಾನ್ಯ ಜನರಿಗೆ ಇದರಿಂದ ಯಾವುದೇ ತೊಂದರೆಯಾಗಿಲ್ಲ. ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ಸುಮಾರು 1350 ಕೋಟಿ ರೂಪಾಯಿಗಳಷ್ಟು ಕಡಿಮೆ ಆದಾಯ ಬಂದಿದೆ, ಇದಕ್ಕೆ ನೋಟುಗಳ ಅಪಮೌಲ್ಯೀಕರಣವೇ ಕಾರಣ ಎನ್ನುವ ಅಂಶವನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇತ್ತೇ, ಇದರಿಂದ ರಾಜ್ಯದ ಜನತೆಗೆ ಯಾವ ಸಂದೇಶ ಹೋಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಡಾ॥ಜಿ.ಪರಮೇಶ್ವರ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನೋಟುಗಳ ಅಪಮೌಲ್ಯೀಕರಣದ ಪರಿಣಾಮವಾಗಿ ನೋಂದಣಿ ಮತ್ತು ಮುದ್ರಾಂಕದಲ್ಲಿ ಕೇವಲ 1350 ಕೋಟಿ ರೂಪಾಯಿಗಳಷ್ಟು ಆದಾಯದ ಕೊರತೆಯುಂಟಾಗಿದೆಂದು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ರಾಜ್ಯದ ಬೊಕ್ಕಸಕ್ಕೆ ವಾಣಿಜ್ಯ ತೆರಿಗೆ, ಮಾರಾಟ ತೆರಿಗೆ, ಅಬಕಾರಿ ಸುಂಕ ಮತ್ತು ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಲಯಗಳಲ್ಲಿ ನೋಟುಗಳ ಅಪಮೌಲ್ಯೀಕರಣವಾದಾಗಿನಿಂದ ಇಲ್ಲಿಯವರೆಗೆ ಅಂದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯವ್ಯಯ ತಯಾರಾಗುವವರೆಗೆ ಸುಮಾರು 8500 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆಯಾಗಿದೆ ಎನ್ನುವುದು ಮಾನ್ಯ ಮುಖ್ಯಮಂತ್ರಿಗಳ ಉದ್ದೇಶವಾಗಿದೆ. ಅದಕ್ಕಾಗಿಯೇ ಆ ಅಂಶವನ್ನು ಆಯವ್ಯಯದಲ್ಲಿ ಉಲ್ಲೇಖ ಮಾಡಲಾಗಿದೆ. ಮಾನ್ಯ ಸದಸ್ಯರು ಕೇವಲ ನೋಂದಣಿ ಮತ್ತು ಮುದ್ರಾಂಕ ವಲಯದಲ್ಲಿ 1350 ಕೋಟಿ ರೂಪಾಯಿಗಳ ಕೊರತೆಯ ಬಗ್ಗೆ ಹೇಳಿದ್ದಾರೆ. ಈ ರೀತಿ ಕೊರತೆಯುಂಟಾಗುವುದಕ್ಕೆ ಕಾರಣವೇನೆಂದರೆ, ಎಲ್ಲ ಕಡೆಗಳಲ್ಲಿ ವ್ಯಾಪಾರ ವಹಿವಾಟುಗಳು ಕುಂಠಿತಗೊಂಡಿತು. ಎಲ್ಲ ವಲಯಗಳಲ್ಲೂ ಶೇಕಡಾ 40 ರಿಂದ 50ರಷ್ಟು ವ್ಯಾಪಾರ ವ್ಯವಹಾರಗಳು ಕಡಿಮೆಯಾದಾಗ ಸ್ವಾಭಾವಿಕವಾಗಿಯೇ ವಾಣಿಜ್ಯ ತೆರಿಗೆ ಸಂಗ್ರಹವಾಗುವುದಿಲ್ಲ. ಅಬಕಾರಿ ವ್ಯಾಪಾರ ಕಡಿಮೆಯಾದರೆ ಅಬಕಾರಿ ಸುಂಕ ಸಂಗ್ರಹವಾಗುವುದಿಲ್ಲ. ಆ ಕಾರಣಕ್ಕಾಗಿ ನೋಟುಗಳ ಅಪಮೌಲ್ಯೀಕರಣದ ಪರಿಣಾಮ ಕರ್ನಾಟಕ ರಾಜ್ಯದ ಮೇಲಾಗಿದೆ ಎಂದು ಹೇಳಿದ್ದಾರೆಯೇ ವಿನಃ ಬೇರೆ ಯಾವುದೇ ಕಾರಣವೂ ಇಲ್ಲ.

**ಶ್ರೀ ಭಾನುಪ್ರಕಾಶಃ–** ಸನ್ಮಾನ್ಯ ಸಭಾಪತಿಯವರೇ, ಸುಮಾರು 12 ಬಾರಿ ಆಯವ್ಯಯವನ್ನು ಮಂಡನೆ ಮಾಡಿರುವ ಅನುಭವ ಇರುವಂತಹ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ, ಅವರು ಮಂಡನೆ ಮಾಡಿರುವ ಆಯವ್ಯಯವನ್ನು ವಿಶ್ಲೇಷಣೆ ಮಾಡಿ ಅದರ ಬಗ್ಗೆ ಚರ್ಚೆ ಮಾಡುವಂತಹ ಶಕ್ತಿ ನನ್ನಲ್ಲಿಲ್ಲ. ಆದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹೊಂದಾಣಿಕೆಯಿಂದ ಹೋಗಬೇಕಾಗುತ್ತದೆ. ಕೇಂದ್ರ ಸರ್ಕಾರದ ಬಗ್ಗೆ ಹೇಳಬೇಕಾದ ಸಂದರ್ಭ ಬಂದರೆ ರಾಜ್ಯದ 6 ಕೋಟಿ ಜನರ ಭಾವನೆಗಳನ್ನು ಗುರುತಿಸಬೇಕೆನ್ನುವುದು ನನ್ನ ವಿನಂತಿಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಮಾಡಿರುವಂತಹ ಸಾಲಗಳ ಬಗ್ಗೆ ಮಾತನಾಡಬೇಕಾದರೆ, ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದಂತಹ ಸಂದರ್ಭದಲ್ಲಿ ಸುಮಾರು 46119 ಕೋಟಿ ರೂಪಾಯಿಗಳಷ್ಟು ಸಾಲ ಇತ್ತು ಎನ್ನುವ ವಿಚಾರ ಬಹಳ ಟೀಕೆಗೆ ಮತ್ತು ವಿಮರ್ಶೆಗೆ ಒಳಪಟ್ಟಿತ್ತು. ಈ ನಾಲ್ಕು ವರ್ಷಗಳ ಅವಧಿಯಲ್ಲಿ 1,33,407 ಕೋಟಿ ರೂಪಾಯಿಗಳಷ್ಟು ಸಾಲವನ್ನು ಈ ಸರ್ಕಾರ ಮಾಡಿದೆ. ಇನ್ನೂ ಒಂದು ವರ್ಷದ ಕಾಲ ಈ ಸರ್ಕಾರದ ಅಧಿಕಾರಾವಧಿ ಇದೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ಸಾಲಗಳ ಬಗ್ಗೆ ಮಾತನಾಡುವುದಾದರೆ, ಬಡ್ತಿ ಮೀಸಲು ಬಗ್ಗೆ ಸುಪ್ರೀಂ ಕೋರ್ಟ್ ಆದೇಶವನ್ನು ನೀಡಿದರೆ, ಇನ್ನೂ 2300 ಕೋಟಿ ರೂಪಾಯಿಗಳಷ್ಟು ಸಾಲ ಮಾಡಬೇಕಾಗಬಹುದು ಎನ್ನುವ ನಿರೀಕ್ಷೆಯಲ್ಲಿದೆ. ನೌಕರರ ಪಿಂಚಣಿ ಮೊತ್ತವನ್ನು ಹೆಚ್ಚಳ ಮಾಡಿದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಿಂದ ಸುಮಾರು 8300 ಕೋಟಿ ರೂಪಾಯಿಗಳಷ್ಟು ಸಾಲ ಮಾಡಬೇಕಾಗಿ ಬರಬಹುದು. ಇದೆಲ್ಲವನ್ನೂ ಒಟ್ಟಾಗಿ ಸೇರಿಸಿದರೆ ಸಾಲದ ಮೊತ್ತ ಎಲ್ಲಿಗೆ ಹೋಗಬಹುದು ಎನ್ನುವುದನ್ನು ತಾವೇ ಊಹಿಸಿಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸಾಲ ಮಾಡುವುದರಲ್ಲಿ ತಪ್ಪೇನು ಇಲ್ಲ. ಆದರೆ, ಮಾಡಿರುವ ಸಾಲದ ಹಣದಿಂದ ಬಂಡವಾಳ ಹೂಡಲಾಗಿದೆಯೇ, ರಾಜ್ಯಕ್ಕೆ ವಾಪಸ್ಸು ಆದಾಯ ಬರುವಂತಹ ಕಾರ್ಯಕ್ರಮ ಮಾಡಲಾಗಿದೆಯೇ ಎನ್ನುವುದನ್ನು ನೋಡಿದರೆ ಆ ರೀತಿಯ ಯಾವ ಅಂಶಗಳು ಕಂಡು ಬರುತ್ತಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಪ್ರಜೆಯ ತಲೆ ಮೇಲೆ ಸುಮಾರು 40 ಸಾವಿರ ರೂಪಾಯಿಗಳ ಸಾಲ ಇದೆ. ಇದನ್ನು ತೀರಿಸುವ ಮಾರ್ಗವೇನು ಎನ್ನುವುದನ್ನು ಸರ್ಕಾರವೇ ಹೇಳಬೇಕಾಗಿದೆ. ಈ ಸರ್ಕಾರ ಕೈಗೊಂಡಿರುವ ಒಳ್ಳೆಯ ಕಾರ್ಯಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ "Government has its way and Opposition has its say." ನಾವು ನಮ್ಮ ಅಭಿಪ್ರಾಯಗಳನ್ನು ಹೇಳಬಹುದೇ ಹೊರತು ಅವುಗಳನ್ನು ಕಾರ್ಯಗತಗೊಳಿಸುವುದು ಸರ್ಕಾರವೇ ಆಗಿದೆ. ನಮ್ಮ ರಾಜ್ಯದಲ್ಲಿ ಒಬ್ಬ ವ್ಯಕ್ತಿ ತಲೆ ಮೇಲೆ 40 ಸಾವಿರ ರೂಪಾಯಿಗಳ ಸಾಲ ಬರುತ್ತಿದೆ, ಅದನ್ನು ತೀರಿಸುವುದಕ್ಕೆ ಯಾವ ವ್ಯವಸ್ಥೆ ಮಾಡಲಾಗಿದೆ ಎನ್ನುವುದರ ಬಗ್ಗೆ ಅವರು ಯೋಚನೆ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಾರತಮ್ಯ ನೀತಿಯನ್ನು ಅನುಸರಿಸಬಾರದು ಎನ್ನುವುದು ನನ್ನ ಸಲಹೆಯಾಗಿದೆ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಡುವುದಕ್ಕೆ ಬಯಸುತ್ತಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೈತ ಹಸು, ಎಮ್ಮೆ ಮುಂತಾದವುಗಳನ್ನು ಖರೀದಿ ಮಾಡಿದರೆ 15,000 ರೂಪಾಯಿಗಳ ಸಬ್ಸಿಡಿ, ಉಳಿದಿರುವುದನ್ನು ಸಾಲದ ರೂಪದಲ್ಲಿ ತೀರಿಸಬೇಕಾಗುತ್ತದೆ. ಅದೇ ಅಲ್ಪಸಂಖ್ಯಾತ ರೈತ ಬಂಧುವೊಬ್ಬ ಹಸು, ಎಮ್ಮೆ, ಕುರಿ ಮುಂತಾದವುಗಳನ್ನು ಖರೀದಿ ಮಾಡುವುದಕ್ಕೆ 20,000 ರೂಪಾಯಿಗಳ ಸಬ್ಸಿಡಿಯನ್ನು ನೀಡಿ, ಉಳಿದಿರುವುದನ್ನು ಸಾಲದ ರೂಪದಲ್ಲಿ ನೀಡಲಾಗುತ್ತಿದೆ. ಅಲ್ಪ ಸಂಖ್ಯಾತರಿಗೆ ಸಬ್ಸಿಡಿ ನೀಡುತ್ತಿರುವುದರ ಬಗ್ಗೆ ನನ್ನ ವಿರೋಧವೇನು ಇಲ್ಲ. ಆದರೆ, ರಾಜ್ಯದಲ್ಲಿರುವ ಸುಮಾರು 6 ಕೋಟಿ ಜನಸಂಖ್ಯೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಒಂದು ರೀತಿಯ ಸಬ್ಸಿಡಿ ನೀತಿ, ಅಲ್ಪಸಂಖ್ಯಾತರಿಗೆ ಒಂದು ರೀತಿಯ ಸಬ್ಸಿಡಿ ನೀತಿಯನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆ. ಈ ರೀತಿಯ ತಾರತಮ್ಯವೇಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಬ್ಸಿಡಿಯನ್ನು ನೀಡುವುದಾದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲರಿಗೂ 15,000 ರೂಪಾಯಿಗಳ ಸಬ್ಸಿಡಿಯನ್ನು ನೀಡಲಿ, ಇಲ್ಲದಿದ್ದರೆ ಎಲ್ಲರಿಗೂ 20,000 ರೂಪಾಯಿಗಳ ಸಬ್ಸಿಡಿಯನ್ನು ನೀಡಲಿ. ಅದನ್ನು ಬಿಟ್ಟು ಅಲ್ಪ ಸಂಖ್ಯಾತರಿಗೆ ಹೆಚ್ಚಿನ ಸಬ್ಸಿಡಿ, ಬೇರೆಯವರಿಗೆ ಸಬ್ಸಿಡಿಯಲ್ಲಿ ಕಡಿಮೆ ಮಾಡಿರುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಆರೋಗ್ಯ ವಲಯದ ಬಗ್ಗೆ ಹೇಳುವುದಾದರೆ, 2013-14ನೇ ಸಾಲಿನಲ್ಲಿ ಈ ವಲಯಕ್ಕೆ 5421 ಕೋಟಿ ರೂಪಾಯಿಗಳ ಅನುದಾನವನ್ನು ನೀಡಲಾಗಿತ್ತು. ಈ ಆಯವ್ಯಯದಲ್ಲಿ 5118 ಕೋಟಿ ರೂಪಾಯಿಗಳನ್ನು ನೀಡಲಾಗುತ್ತಿದೆ. 2015-16ನೇ ಸಾಲಿನಲ್ಲಿ 5032 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಆರೋಗ್ಯ ವಲಯಕ್ಕೆ ನೀಡಲಾಗಿರುವ ಹಿಂದಿನ ವರ್ಷದ ಅನುದಾನ ಮತ್ತು ಈ ವರ್ಷದ ಅನುದಾನಗಳನ್ನು ಹೋಲಿಕೆ ಮಾಡಿ ನೋಡಿದರೆ, ಈ ವರ್ಷ ಕೇವಲ ಶೇಕಡಾ 2ರಷ್ಟು ಮಾತ್ರ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಅನೇಕ ಇಲಾಖೆಗಳಿಗೆ ಅನುದಾನವನ್ನು ವ್ಯತ್ಯಾಸ ಮಾಡಿ ಹಂಚಿಕೆ ಮಾಡಲಾಗಿದೆ. ಆದರೆ, ಆರೋಗ್ಯ ಇಲಾಖೆಗೆ ಆ ಪ್ರಮಾಣದಲ್ಲಿ ಹೆಚ್ಚಿನ ಅನುದಾನವನ್ನು ನೀಡಿಲ್ಲ. ಈ ವಲಯ ಆದ್ಯತೆಯ ವಲಯ ಅಲ್ಲವೇ? ಆರೋಗ್ಯ ಇಲಾಖೆಗೆ ಹೆಚ್ಚಿನ ಅನುದಾನ ನೀಡುವ ಅವಶ್ಯಕತೆ ಇಲ್ಲವೇ? ಆರೋಗ್ಯ ಸಚಿವರಾದ ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಾ, ವಿಧಾನ ಪರಿಷತ್ತಿನ ಸದಸ್ಯರಿಂದ 15 ಲಕ್ಷ ರೂಪಾಯಿಗಳನ್ನು ಕೇಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ. ಅಷ್ಟೂ ಹಣವನ್ನು ಅವರೇ ತೆಗೆದುಕೊಂಡು, ಸಾರ್ವಜನಿಕರ ಆರೋಗ್ಯವನ್ನು ಉತ್ತಮಪಡಿಸಲಿ, ಅದರ ಬಗ್ಗೆ ನಮ್ಮ ತಕರಾರು ಇಲ್ಲ. ಕೆಲವೊಂದು ವಲಯಗಳಿಗೆ ಶೇಕಡಾ 40-50ರಷ್ಟು ಅನುದಾನಗಳನ್ನು ಹೆಚ್ಚಿಗೆ ಕೊಡಲಾಗಿದೆ. ಆದರೆ, ಆದ್ಯತೆಯ ವಲಯವಾಗಿರುವ ಆರೋಗ್ಯ ಕ್ಷೇತ್ರಕ್ಕೆ ಕೇವಲ ಶೇಕಡಾ 2ರಷ್ಟು ಮಾತ್ರ ಹೆಚ್ಚಿನ ಅನುದಾನ ನೀಡಿರುವುದನ್ನು ನೋಡಿದರೆ ಸರ್ಕಾರಕ್ಕೆ ಆರೋಗ್ಯ ಕ್ಷೇತ್ರ ಆದ್ಯತಾ ವಲಯ ಅಲ್ಲವೇ? ಶೇಕಡಾ 2ರಷ್ಟು ಅನುದಾನವನ್ನು ನೀಡುವುದರ ಬದಲಿಗೆ ಶೇಕಡಾ 10-15ರಷ್ಟು ಹೆಚ್ಚಿನ ಅನುದಾನವನ್ನು ನೀಡುವುದು ಸರ್ಕಾರದ ಧರ್ಮ ಅಲ್ಲವೇ? ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕು, ರೋಗಿಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಬೇಕು ಹೀಗೆ ಕೇವಲ ಮಂತ್ರ ಹೇಳಿದರೆ ಸಾಕಾಗುವುದಿಲ್ಲ. ಇಲ್ಲಿನ ಪರಿಸ್ಥಿತಿ, 'ಹುಚ್ಚು ಬಿಡುವವರೆಗೆ ಮದುವೆ ಆಗುವುದಿಲ್ಲ. ಮದುವೆ ಆಗುವವರೆಗೆ ಹುಚ್ಚು ಬಿಡುವುದಿಲ್ಲ' ಎನ್ನುವ ಗಾದೆ ಮಾತಿನಂತಾಗಿದೆ. ಹುಚ್ಚರಿಗೆ ಯಾರೂ ಹೆಣ್ಣು ಕೊಡುವುದಿಲ್ಲ. ಆದ್ದರಿಂದ ಯಾರು ಸರ್ಕಾರದಲ್ಲಿ ಇದ್ದಾರೆ ಅವರೇ ಹುಚ್ಚು ಬಿಡಿಸಿ ಆಮೇಲೆ ಮದುವೆಗೆ ಬನ್ನಿ ಎಂದು ಕರೆಯಬೇಕು. ಸರ್ಕಾರಿ ಆಸ್ಪತ್ರೆಗಳ ವ್ಯವಸ್ಥೆಗಳನ್ನು ಸರಿಪಡಿಸದೇ, 'ಸರ್ಕಾರಿ ಆಸ್ಪತ್ರೆಗಳಿಗೆ ಬನ್ನಿ ಬನ್ನಿ' ಎಂದು ಕರೆದರೆ ಯಾರೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ. ಯಾರಿಗೆ ಕಾಯಿಲೆ ಇದೆ ಆ ವ್ಯಕ್ತಿ ಒಳ್ಳೆಯ ಆಸ್ಪತ್ರೆಯನ್ನು ಹುಡುಕುತ್ತಾನೆಯೇ ಹೊರತು ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ಎಲ್ಲಿ ಹಣ ಹೆಚ್ಚು ಎಲ್ಲಿ ಹಣ ಕಡಿಮೆ ಎನ್ನುವುದನ್ನು ಯೋಚನೆ ಮಾಡುವುದಿಲ್ಲ. ಮೊದಲು ಗುಣವಾದರೆ ಸಾಕು ಆಮೇಲೆ ಏನಾದರೂ ಮಾಡಿಕೊಳ್ಳೋಣ ಎಂದು ಹೇಳುತ್ತಾನೆ. ಆದ್ದರಿಂದ ಆರೋಗ್ಯ ಕ್ಷೇತ್ರ ಈ ಸರ್ಕಾರದ ಆದ್ಯತಾ ವಲಯವಾಗಿಲ್ಲ, ಅದಕ್ಕೆ ಆದ್ಯತೆ ನೀಡಬೇಕೆನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2012ರಲ್ಲಿ ನಾನು ಈ ಸದನದ ಸದಸ್ಯನಾಗಿ ಆಯ್ಕೆಗೊಂಡು, ಇಲ್ಲಿಗೆ ಸುಮಾರು 4 ವರ್ಷಗಳಾಗಿವೆ. ನಾನು ಈ ಸದನಕ್ಕೆ ಬಂದ ಮೊದಲನೆಯ ದಿನದಿಂದಲೂ ಅನುದಾನಿತ ಶಾಲೆ ಮತ್ತು ಸರ್ಕಾರಿ ಶಾಲೆಗಳ ಬಗ್ಗೆ ಕೇಳುತ್ತಲೇ ಬಂದಿದ್ದೇನೆ. ಅನುದಾನಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ನಿವೃತ್ತರಾದರೆ ಆ ಸ್ಥಾನವನ್ನು ಪುನಃ ತುಂಬುವುದಕ್ಕೆ ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇದೆ. ಏಕೆಂದರೆ, ಆ ಹುದ್ದೆಗಳನ್ನು ತುಂಬುವುದಕ್ಕೆ ಆರ್ಥಿಕ ಇಲಾಖೆಗೆ ತೆಗೆದುಕೊಂಡು ಹೋಗಿ ಅಲ್ಲಿ ಅವರ ಅನುಮೋದನೆಯನ್ನು ಪಡೆದುಕೊಂಡು ತೆರವಾಗಿರುವ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಬೇಕಾದರೆ ಸುಮಾರು ಒಂದು ಒಂದೂವರೆ ವರ್ಷಗಳ ಕಾಲಾವಕಾಶ ಬೇಕಾಗುತ್ತದೆಂದು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಗೊಂಡು ಬಂದಿರುವ ನನ್ನ ಸನ್ಮಿತ್ರರು ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ, ಆರ್ಥಿಕ ಇಲಾಖೆ ಸರ್ಕಾರವನ್ನು ನಡೆಸುತ್ತದೆಯೋ ಅಥವಾ ಸರ್ಕಾರ ಆರ್ಥಿಕ ಇಲಾಖೆಯನ್ನು ನಡೆಸುತ್ತದೆಯೋ ಎನ್ನುವ ಅನುಮಾನ ನನಗೆ ಬಂದಿದೆ. ಏಕೆಂದರೆ ಅನೇಕ ಬಾರಿ ಈ ಸದನದಲ್ಲಿ ಶಿಕ್ಷಣ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ 'ಖಾಲಿ ಇರುವ ಎಲ್ಲ ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಉದ್ದೇಶ ನಮಗಿದೆ. ಈ ಬಗ್ಗೆ ಆರ್ಥಿಕ ಇಲಾಖೆಯ ಅನುಮೋದನೆಯಾಗಿ ಕಳುಹಿಸಿಕೊಟ್ಟಿದ್ದೇವೆ. ಆರ್ಥಿಕ ಇಲಾಖೆಯವರು ಅನುಮೋದನೆಯನ್ನು ಕೊಟ್ಟಿಲ್ಲ' ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ಆರ್ಥಿಕ ಇಲಾಖೆ ಎಲ್ಲೋ ಅಮೇರಿಕಾ ದೇಶದಲ್ಲಿಲ್ಲ. ಆರ್ಥಿಕ ಇಲಾಖೆ ನಮ್ಮ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ನಮ್ಮ ಅಧಿಕಾರಿಗಳೇ ಅಲ್ಲಿ ಕಾರ್ಯನಿರ್ವಹಿಸುತ್ತಿರುವುದು. ಶಿಕ್ಷಕರ ನೇಮಕಾತಿಯ ಬಗ್ಗೆ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿರುತ್ತದೆ. ನಮ್ಮ ಶಾಲೆಗಳಲ್ಲಿ ಶಿಕ್ಷಕರ ಅಗತ್ಯತೆ ಇದೆ. ದೈಹಿಕ ಶಿಕ್ಷಕರು ಮತ್ತು ವಿಷಯ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದರೆ, ಆರ್ಥಿಕ ಇಲಾಖೆಯವರು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಅನುಮೋದನೆಯನ್ನು ನೀಡುವುದಿಲ್ಲ ಎಂದರೆ, ಅನುಮೋದನೆಯನ್ನು ಪಡೆದುಕೊಳ್ಳಬೇಕಾದವರು ಯಾರು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕಳೆದ ನಾಲ್ಕು ವರ್ಷಗಳಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದೇ ಒಂದು ನೇಮಕಾತಿಯಾಗಿಲ್ಲ. ಅನುದಾನಿತ ಶಾಲೆಗಳಲ್ಲಿರುವಂತಹ ಶಿಕ್ಷಕ 58-60 ವರ್ಷಕ್ಕೆ ನಿವೃತ್ತಿ ಹೊಂದುತ್ತಾನೆ ಎನ್ನುವುದು ಎಲ್ಲರಿಗೂ ಗೊತ್ತಿರುತ್ತದೆ. ಆತ ಯಾವ ದಿನಾಂಕದಂದು ನಿವೃತ್ತಿ ಹೊಂದುತ್ತಾನೆ ಎನ್ನುವುದು ಗೊತ್ತಿರುತ್ತದೆ. ಜವಾಬ್ದಾರಿಯುತವಾಗಿರುವ ಸರ್ಕಾರ ಆತ ನಿವೃತ್ತಿ ಹೊಂದುವುದಕ್ಕೂ 2-3 ತಿಂಗಳುಗಳಿಗೆ ಮುಂಚಿತವಾಗಿ ಜಾಹಿರಾತನ್ನು ನೀಡಿ, ಮಕ್ಕಳಿಗೆ ತೊಂದರೆಯಾಗದಂತೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಆರ್ಥಿಕ ಇಲಾಖೆ ಹೆಚ್ಚಿನ ಅನುದಾನ ಕೊಡಬೇಕಾಗಿರುವ ಅವಶ್ಯಕತೆಯಿಲ್ಲ. ಏಕೆಂದರೆ, ನಿವೃತ್ತಿ ಅಂಚಿನಲ್ಲಿರುವ ಶಿಕ್ಷಕನಿಗೆ ಹೆಚ್ಚಿನ ಸಂಬಳ, ಹೊಸದಾಗಿ ನೇಮಕಾತಿ ಹೊಂದಿದ ಶಿಕ್ಷಕನಿಗೆ ಕಡಿಮೆ ಸಂಬಳವನ್ನು ನೀಡುವುದರಿಂದ ಆರ್ಥಿಕವಾಗಿ ಹೊರೆಯಾಗುವುದಿಲ್ಲ. ಆದರೂ ಸಹ ಹೊಸ ನೇಮಕಾತಿಗೆ ಅನುಮೋದನೆಯನ್ನು ನೀಡಲು ಆರ್ಥಿಕ ಇಲಾಖೆ ವಿಳಂಬನೀತಿಯನ್ನು ಅನುಸರಿಸುತ್ತಿದೆ. ನಿವೃತ್ತಿ ಹೊಂದಿದವರು ಎಲ್ಲ ರೆಕಾರ್ಡ್‌ಗಳನ್ನು ಕೊಟ್ಟು ಪಿಂಚಣಿ ಸೆಟಲ್‌ಮೆಂಟ್ ಆದರೂ ಸಹ ಹೊಸ ನೇಮಕಾತಿಗೆ ಆರ್ಥಿಕ ಇಲಾಖೆಯವರು ಅನುಮತಿಯನ್ನು ನೀಡುವುದಿಲ್ಲ. ಆಯವ್ಯಯದಲ್ಲಿ ಈ ರೀತಿಯ ಕಾನೂನುಗಳನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಪೋಸಲ್ ಮಾಡಿದ್ದರೆ, ಅದು ಜನರ ಮುಂದೆ ಬರುವಂತಾಗಿದ್ದರೆ ಇನ್ನೂ ಹೆಚ್ಚು ಸ್ವಾಗತಾರ್ಹವಾಗಿರುತ್ತಿತ್ತು.

ಸನ್ಮಾನ್ಯ ಸಭಾಪತಿಯವರೇ, ಮನೆ ಕಟ್ಟಿಕೊಳ್ಳುವುದಕ್ಕೆ ಸರ್ಕಾರ ಗ್ರಾಮಾಂತರ ಪ್ರದೇಶದವರಿಗೆ 1.5 ಲಕ್ಷ ರೂಪಾಯಿಗಳನ್ನು, ನಗರಪ್ರದೇಶದವರಿಗೆ 1.75 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಮರಳು, ಕಬ್ಬಿಣವನ್ನು ಸಬ್ಸಿಡಿಯಲ್ಲಿ ನೀಡಲಾಗುತ್ತದೆಯೇ? ಗಾರೆ ಕೆಲಸ ಮಾಡುವವರು ಸಬ್ಸಿಡಿ ದರದಲ್ಲಿ ಕೆಲಸ ಮಾಡುತ್ತಾರೆಯೇ? ಈ ರೀತಿಯ ತಾರತಮ್ಯ ಸರ್ಕಾರ ಏತಕ್ಕೋಸ್ಕರ ಮಾಡುತ್ತಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಿವೇಶನದ ದರ ಎಷ್ಟು ಬೇಕಾದರೂ ಇರಬಹುದು ಆದರೆ, ನಗರ ಪ್ರದೇಶದಲ್ಲಿ ಇರುವವರಿಗೆ 1.75 ಲಕ್ಷ ರೂಪಾಯಿಗಳನ್ನು ನೀಡಿದರೆ ಗ್ರಾಮಾಂತರ ಪ್ರದೇಶದವರಿಗೂ ಅದೇ ದರವನ್ನು ನೀಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2012-13ನೇ ಸಾಲಿನಿಂದ ಮನೆಗಳನ್ನು ನಿರ್ಮಾಣ ಮಾಡದೇ ಮುಂದಕ್ಕೆ ಹಾಕುತ್ತಾ ಬರುತ್ತಿದ್ದಾರೆ. ಬಡವರನ್ನು ಗುರುತಿಸಿ ಸರ್ಕಾರ ಮನೆಗಳನ್ನು ನೀಡಿದೆ.

(ಮುಂದುವರಿದದ್ದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(380) 22.03.2017 ಟಿ.ಸಿ.ಹೆಚ್/ಬಿ.ಎನ್.ಎಸ್ 6.40 **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಭಾನುಪ್ರಕಾಶ (ಮುಂದು):-**

ಎಲ್ಲಾ ಮನೆಗಳು 2012-13ನೇ ಸಾಲಿನಿಂದ ಇದುವರೆಗೂ ಅಂದರೆ 2018 ರವರೆಗೆ carry ಮಾಡಿಕೊಂಡು ಬಂದಿರುತ್ತದೆ. ಮತ್ತೆ ಈ ಮಧ್ಯೆ ಕಾನೂನು ವ್ಯತ್ಯಾಸವಾಗಿದೆ. ಎರಡನೆಯದು, ಮುಂಚೆ 2012-13ನೇ ಸಾಲಿನಲ್ಲಿ 50 ಸಾವಿರ ರೂಪಾಯಿ ಇದ್ದರೆ, ಇವತ್ತಿನ ದಿವಸ ಒಂದೂ ಕಾಲು ಲಕ್ಷ ರೂಪಾಯಿ ಇದೆ. 50 ಸಾವಿರ ರೂಪಾಯಿಯವನು ಮನೆಯನ್ನು ಕಟ್ಟಿಕೊಂಡಿಲ್ಲ. ಅದನ್ನು carry ಮಾಡಿಕೊಂಡು ಬಂದಿದ್ದೀರಿ. One time ಈ ಸಾಲ ಮನ್ನಾ ಇತ್ಯಾದಿಗಳನ್ನು ಮಾಡುವ ಹಾಗೆ, ಎಷ್ಟು ಮನೆಗಳು ಬಾಕಿ ಇವೆ. ಎಲ್ಲರೂ ಸಹ ಇವತ್ತಿನ ರೇಟ್‌ನಲ್ಲಿ ಬಡವರೇ ಆಗಿರುತ್ತಾರೆ. ನಾವೇ ಅವರನ್ನು ಗುರುತಿಸಿರುವವರು. ನಮ್ಮ ಎಲ್ಲಾ ಸಿಸ್ಟಮ್ ಅನ್ನು ಉಪಯೋಗಿಸಿ ಒಂದು ಸಲ ಸರ್ವೆ ಮಾಡಿಸಿ. ಎಷ್ಟೋ ಮನೆಯನ್ನು ಕಟ್ಟುವಂತವುಗಳಿವೆ. ಅದಕ್ಕೋಸ್ಕರ ಬೇಕಾದಂತಹ ದುಡ್ಡನ್ನು ತೆಗೆದು, ಒಂದು ಸಲ ಎಲ್ಲಾ ಮನೆಗಳನ್ನು ಕಟ್ಟಿ ಮುಗಿಸಿದೆವೆಂದರೆ, ಆ ಬಡವರಿಗೆ ಅನುಕೂಲ ಆಗುತ್ತದೋ, ಇಲ್ಲವೋ. ದಯವಿಟ್ಟು ಸರ್ಕಾರ ಈ ಬಗ್ಗೆ ಚಿಂತನೆ ಮಾಡಬೇಕು ಎನ್ನುವ ವಿನಂತಿಯನ್ನು ನಾನು ಮಾಡುತ್ತೇನೆ. ಇನ್ನು ಬೆಂಗಳೂರಿನ ಬಗ್ಗೆ ತಾವು ಹೇಳಿದ್ದೀರಿ. ಬಹಳ ಚೆನ್ನಾಗಿ ಬೆಂಗಳೂರಿನ ಬಗ್ಗೆ ಹೇಳಿದ್ದೀರಿ. ನನಗೆ ಬಹಳ ಖುಷಿಯಾಗಿರುವುದು ಏನೆಂದರೆ, ಬಜೆಟ್‌ನಲ್ಲಿ ಎಷ್ಟು ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆಂದರೆ, ಅದಕ್ಕೆ ನಾನು ಅನುಭವವೆಂದು ಹೇಳುವುದು. ಬೆಂಗಳೂರು ನಗರದ ಮೂಲ ಸೌಕರ್ಯದ ಅಭಿವೃದ್ಧಿಗೆ ಹಾಗೂ ಬೆಂಗಳೂರು ನಾಗರೀಕರ ಕಲ್ಯಾಣಕ್ಕಾಗಿ ಕಳೆದ ವರ್ಷ 7300 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ದೂರದೃಷ್ಟಿಯಿಂದ ಈ ಅನುದಾನವನ್ನು 2016-17 ಮತ್ತು 2017-18ನೇ ಸಾಲಿಗೆ ಹಂಚಿಕೆ ಮಾಡಲಾಗಿದ್ದು, ಕಾಮಗಾರಿಗೆ ಕ್ರಿಯಾ ಯೋಜನೆಯನ್ನು ನಮೂದಿಸಿದ್ದು, ಈ ಕಾಮಗಾರಿಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. 7300 ಕೋಟಿ ರೂಪಾಯಿಗಳನ್ನು ಕಳೆದ ವರ್ಷ ಬೆಂಗಳೂರಿಗೆ ಇವರು ಖರ್ಚೇ ಮಾಡಲಿಲ್ಲ. ಅದನ್ನು ಬಹಳ ದೂರದೃಷ್ಟಿಯಿಂದ ಈ ವರ್ಷ ಖರ್ಚು ಮಾಡುತ್ತಿದ್ದೇವೆಂದು ಸೇರಿಸಿಕೊಂಡಿದ್ದಾರೆ. ಖರ್ಚು ಮಾಡಿಬಿಟ್ಟಿದ್ದಾರೆ. ಹಣ ದುರುಪಯೋಗವಾಗಿರುವುದು ಇಲ್ಲ. ಆದರೆ ಆ ವರ್ಷದಲ್ಲೇ ಆ ಹಣವನ್ನು ಖರ್ಚು ಮಾಡಬೇಕು ಎಂದು ಇರುವುದರಿಂದ, ಆ ಹಣವನ್ನು ಆ ವರ್ಷವೇ ಖರ್ಚು ಮಾಡದೇ ಇದ್ದರೆ, ಬಜೆಟ್‌ನ ಪಾವಿತ್ರ್ಯತೆ ಉಳಿಯುತ್ತದೆಯೇ? ಮತ್ತೆ ಏತಕ್ಕೆ ಖರ್ಚು ಮಾಡಲಿಲ್ಲ? ಯಾವ ಅಧಿಕಾರಿ ಮಾಡಲಿಲ್ಲ? ಅವರು ಏತಕ್ಕೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕ್ರಿಯಾ ಯೋಜನೆ ಮಾಡಲಿಲ್ಲ? ಅವರು ಏತಕ್ಕೆ ಅದನ್ನು follow up ಮಾಡಲಿಲ್ಲ? ನೀವೆಲ್ಲಾ ಕೆ.ಡಿ.ಪಿ ಮೀಟಿಂಗ್ ಅನ್ನು ತೆಗೆದುಕೊಂಡಿದ್ದಿರಲ್ಲಾ ಆ ಸಮಯದಲ್ಲಿ ಇದು ತಮ್ಮ ಗಮನಕ್ಕೆ ಏತಕ್ಕೆ ಬರಲಿಲ್ಲ? ಇದೆಲ್ಲಾ ಪ್ರಶ್ನೆಗಳು ನಮ್ಮ ಮುಂದೆ ಬಂದೇ ಬರುತ್ತದೆಯಲ್ಲವೇ? ಕಳೆದ ಬಾರಿ ಮಾಡಿದ್ದನ್ನೇ ಈ ಸಲ ಇಟ್ಟುಕೊಂಡು, ದೂರದೃಷ್ಟಿಯಿಂದ ನಾವು ಖರ್ಚು ಮಾಡುತ್ತಿದ್ದೇವೆಂದು ಹೇಳಿದರೆ ಯಾವ ನ್ಯಾಯ? ನೀವೇ ಯೋಚನೆ ಮಾಡಿ. ಕಟ್ಟಡ ಕಾರ್ಮಿಕರೇ 'Cess' ಎಂದು ಕೊಡುತ್ತಾರೆ. ಸುಮಾರು 3933 ಕೋಟಿಗಿಂತಲೂ ಜಾಸ್ತಿ ಕೊಡುತ್ತಾರೆ. ಇದು ಅವರ ದುಡ್ಡು. ಸುಮಾರು 4000 ಕೋಟಿ ರೂಪಾಯಿಗಳನ್ನು ಯಾರಿಗೆ ಖರ್ಚು ಮಾಡಿದ್ದೀರಿ. ಅದನ್ನು ಕಾರ್ಮಿಕರಿಗೇ ಖರ್ಚು ಮಾಡಬೇಕು. ಎಷ್ಟು ಹಣ ಖರ್ಚು ಮಾಡಿದ್ದೀರೆಂದು ನಿಮ್ಮ ಅಂಕಿ-ಅಂಶಗಳೇ ಹೇಳುತ್ತದೆ, ಸುಮಾರು 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಉಳಿದಿದ್ದನ್ನು ನಾನು ಪ್ರಶ್ನೆ ತೆಗೆದುಕೊಂಡಿದ್ದಕ್ಕೆ ಹೇಳಿದರು. ಇಂಥಿಂಥ ಬ್ಯಾಂಕ್‌ಗಳಲ್ಲಿ ಹಣವನ್ನು ಇಟ್ಟಿದ್ದೇವೆ. ಅದಕ್ಕೆ ಇಷ್ಟಿಷ್ಟು ಬಡ್ಡಿ ಬರುತ್ತದೆಂದು ಹೇಳುತ್ತೀರಿ. ಸ್ವಾಮಿ ತಾವು ಬಡ್ಡಿಯನ್ನು ತೆಗೆದುಕೊಂಡು ಏನು ಮಾಡುತ್ತೀರಿ. ಕಟ್ಟಡ ಕಾರ್ಮಿಕರಿಗೆ ಏನು ಮಾಡುತ್ತಿದ್ದೀರಿ. ಅವನು ಸತ್ತರೆ ಪರಿಹಾರವನ್ನು ಕೊಡುತ್ತೀರಿ. ಆದರೆ ಅವನ ಸರ್ವಾಂಗೀಣ ಉನ್ನತಿಗೆ ಸುಮಾರು 4000 ಕೋಟಿ ರೂಪಾಯಿ ಆ ಕಾರ್ಮಿಕನ ದುಡ್ಡು ಆಗಿರುತ್ತದೆ. ಆ ದುಡ್ಡನ್ನು ಖರ್ಚು ಮಾಡುವುದಕ್ಕೆ ಏತಕ್ಕೆ ಸ್ವಾಮಿ ಜಿಪುಣತನ ಮಾಡುತ್ತೀರಿ? ಅದಕ್ಕೋಸ್ಕರ ಯೋಜನೆಯನ್ನು ಮಾಡಿ. ಕಾರ್ಮಿಕರು ಸತ್ತರೆ ಕೆಲವರಿಗೆ 25,000/- ರೂಪಾಯಿಗಳು ಇನ್ನು ಕೆಲವರಿಗೆ 30,000/- ರೂಪಾಯಿಗಳನ್ನು ಪರಿಹಾರ ಕೊಡುತ್ತಾರೆ. ಅದು ಏನು discretionary power ಇದೆಯೋ ನನಗೆ ಗೊತ್ತಿಲ್ಲ. ಆದರೆ ಆ ಕಾರ್ಮಿಕರು ಸಾಯುವುದು ಒಂದೇ ಅಲ್ಲ. ಸತ್ತವರನ್ನು ತೆಗೆದುಕೊಂಡು ಎಲ್ಲಿಂದಲೋ ಹೋಗಬೇಕಾಗುತ್ತದೆ. ಈ ದುಡ್ಡಿನಲ್ಲಿ ಅವರು ಓಡಾಡುವುಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ? ಈ ದುಡ್ಡಲ್ಲಿ ಅವರಿಗೋಸ್ಕರ ಬೇಕಾದಂತಹ ಒಂದು ವಾಹನದ ವ್ಯವಸ್ಥೆ ಮಾಡುತ್ತೀರಾ? ಇದು ಕಾರ್ಮಿಕರ ದುಡ್ಡು. ನೀವು ಆ ದುಡ್ಡನ್ನು ಇಟ್ಟುಕೊಂಡು, ಬಡ್ಡಿ ಪಡೆದುಕೊಂಡು ಅಕೌಂಟ್‌ಗೆ ಕಟ್ಟಿಕೊಂಡು ಬಂದರೆ ಏನು ಪ್ರಯೋಜನ? ಯಾರಿಗೆ ಬೇಕು ಸ್ವಾಮಿ? ಬಡ್ಡಿ ತೆಗೆದುಕೊಂಡು ಏನು ಮಾಡಬೇಕು? ಕನ್ನಡಿ ಗಂಟನ್ನು ತೆಗೆದುಕೊಂಡು ಕಾರ್ಮಿಕರು ಏನು ಮಾಡಬೇಕು? ಅವರು ದುಡ್ಡು ಕೊಡುವುದನ್ನು ಅವರಿಗೇ ಖರ್ಚು ಮಾಡುವುದಕ್ಕೆ ನೀವು ಒಂದು ಪೈಸೆಯನ್ನೂ ಅವರಿಗೆ ಕೊಡಬೇಕಾಗಿಲ್ಲ. ಏತಕ್ಕೆ ಸ್ವಾಮಿ ಮಾಡುವುದಿಲ್ಲ. ಏತಕ್ಕೆ ಸ್ವಾಮಿ ಈ ಸರ್ಕಾರ ಈ ಬಗ್ಗೆ ಯೋಚನೆ ಮಾಡುವುದಿಲ್ಲ. ಸಿ.ಎ.ಜಿ. ವರದಿಗಳು ಬರುತ್ತವೆ. ನಾನು ಎರಡು ವರ್ಷದ ಸಿ.ಎ.ಜಿ., ವರದಿಗಳನ್ನು ನೋಡಿದ್ದೇನೆ. ಸುಮಾರು 200-250 ಕೋಟಿ ರೂಪಾಯಿಗಳ ಲೆಕ್ಕ ಸಿಗುತ್ತದೆ. ಸಿ.ಎ.ಜಿ. ವರದಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಹೇಳಿದ್ದಾರೆಂದರೆ, ಇಂತಹ ಕಾಮಗಾರಿಯಿಂದ ಇಷ್ಟು ದುಡ್ಡು Waste ಆಯಿತು. ಇಂತಹ ಕಾಮಗಾರಿಯಿಂದ ಇಷ್ಟು ದುಡ್ಡು ವ್ಯರ್ಥವಾಯಿತು. ಹೀಗೆ ಹೆಚ್ಚಿಗೆ ದುಡ್ಡನ್ನು ಕೊಟ್ಟಿದ್ದಕ್ಕೆ ಹೀಗೆ ಆಯಿತು ಎನ್ನುವುದು ಸಿ.ಎ.ಜಿ. ವರದಿ ಇದೆ. ಸ್ವಾಮಿ 200 ಕೋಟಿ ರೂಪಾಯಿಗಳು. ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ತಕ್ಷಣ ಶೀಘ್ರವಾದಂತಹ ಕ್ರಮ ತೆಗೆದುಕೊಂಡು ವಸೂಲಿ ಮಾಡಬೇಕು. ಅಂತಹವರಿಗೆ ಏನಾದರೂ ಶಿಕ್ಷೆ ಆಗಬೇಕು. ಈ ರೀತಿ ಕ್ರಮ ತೆಗೆದುಕೊಂಡರೆ ತಾನೇ ಆಡಳಿತದಲ್ಲಿ ಬಿಗಿ ಬರುವುದು. ಆಡಳಿತದಲ್ಲಿ ಬಿಗಿ ತರದೇ ಇದ್ದರೆ, ನಾವೆಷ್ಟು ಆಸೆ ಇಟ್ಟುಕೊಂಡರೂ, ನಾವಿಲ್ಲಿ ಎಷ್ಟು ಬಜೆಟನ್ನು ಲಕ್ಷಾಂತರ ಅಥವಾ ಕೋಟಿ ರೂಪಾಯಿಗಳಲ್ಲಿ ಮಾಡಿದರೂ ಅದು ಜಾರಿಗೆ ಬರುವುದು ಆಡಳಿತದಲ್ಲಿ ಬಿಗಿ ತಂದಾಗ ಮಾತ್ರ. ಹಾಗಾಗಿ, ಆಡಳಿತದಲ್ಲಿ ಬಿಗಿ ತರುವುದಕ್ಕೆ ಏನು ಕ್ರಮ ಮಾಡುತ್ತೀರಿ ಅನ್ನುವುದಕ್ಕೆ ಒಂದು ಸಲಹೆ, ಸಿ.ಎ.ಜಿ. ವರದಿ ಇಟ್ಟುಕೊಂಡು ಅದರ ಮೇಲೆ act ಮಾಡಿ. ಅದಕ್ಕೋಸ್ಕರ ಸರಿಯಾದಂತಹ ಒಂದು cell ರಚನೆ ಮಾಡಿ. ಎಫ್.ಡಿ.ಯನ್ನು ಚುರುಕುಗೊಳಿಸಲು ಏನು ಮಾಡಬೇಕೆಂದರೆ, ಒಂದು cell ರಚನೆ ಮಾಡಿ ಎಂದು ಈ ರೀತಿ ನಾನು ಹೇಳುತ್ತಿರುವುದು. ಹಿಂದಿನ ಬಜೆಟ್‌ನಲ್ಲಿ ಹೇಳಿದ್ದೀರಿ. "ಹಳೆ ಬೇರು, ಹೊಸ ಚಿಗುರು ಕೂಡಿರಲು ಮರಸೊಬಗು ಮಂಕು ತಿಮ್ಮನ ಕಗ್ಗ " ಚೆನ್ನಾಗಿ ಆಯಿತು. ಕ್ಯಾಬಿನೆಟ್‌ನಲ್ಲಿ ಸ್ವಲ್ಪ ಮಾಡಿದ್ದಿರಿ. ಹೊಸಚಿಗುರನ್ನೆಲ್ಲಾ ತಂದಿದ್ದೀರಿ. ಹಳೆ ಬೇರು ಸ್ವಲ್ಪ ವ್ಯತ್ಯಾಸವಾಯಿತು. ಕ್ಯಾಬಿನೆಟ್‌ನಲ್ಲಿ ಮಾಡಿದ್ದನ್ನು ಅಧಿಕಾರಿಗಳ ಮಟ್ಟದಲ್ಲಿ ಮಾಡಬೇಕಾಗುತ್ತದೆ. ಹೊಸ ಅಧಿಕಾರಿಗಳನ್ನು ಕರೆತಂದು administration tone up ಆಗುವ ರೀತಿಯಲ್ಲಿ ಏನಾದರೂ ಮಾಡಿದ್ದರೆ ಚೆನ್ನಾಗಿತ್ತು ಎಂದೆನಿಸುತ್ತದೆ. ಇವತ್ತಿನ ದಿವಸ ಪರಿಸ್ಥಿತಿ ಹೇಗಿದೆ ಎಂದರೆ, ಒಳ್ಳೆಯ ಅಧಿಕಾರಿಗಳು ಸಹ ಇದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಭ್ರಷ್ಟ ಅಧಿಕಾರಿಗಳೂ ಸಹ ಇದ್ದಾರೆ. ಶ್ರೀ ರಮೇಶ್‌ಕುಮಾರ್ ರವರು cash, caste ಇದನ್ನೆಲ್ಲವನ್ನೂ ಉಪಯೋಗಿಸಿ ಇವತ್ತಿನ ದಿವಸ ಇದೆಲ್ಲವೂ ನಡೆಯುತ್ತದೆ ಎನ್ನುವುದನ್ನು ಹೇಳಿದ್ದಾರೆ. ಪರಿಸ್ಥಿತಿ ಏನಿದೆಯೆಂದರೆ, ಯಾರಾದರೂ ಒಳ್ಳೆಯ ಅಧಿಕಾರಿಗಳು ಇದ್ದರೆ, ಯಾಕಪ್ಪಾ ಒಳ್ಳೆಯವನಾದೆ ಎಂದು ತಿಳಿದುಕೊಳ್ಳುವಷ್ಟರ ಮಟ್ಟಿಗೆ ಅವರಿಗೆ ಈಗ ತೊಂದರೆಯಾಗಿದೆ. A.C.F.ರವರ ಬಗ್ಗೆ ಶ್ರೀ ಶ್ರೀಕಂಠೇಗೌಡ್ರು ಉಲ್ಲೇಖ ಮಾಡಿದರು. ಅವರು ಒಳ್ಳೆಯವರಾಗಿದ್ದಾರೆ. ಅದಕ್ಕೆ ಅವರು ರಾಜೀನಾಮೆ ಕೊಟ್ಟು ಹೋಗುವಂತಹ ಪರಿಸ್ಥಿತಿ ಇದೆ ಎಂದು. ಮತ್ತೆ ಅವರಿಗೆ ಹೇಗೆ ರಕ್ಷಣೆ ಕೊಡುತ್ತೀರಿ? ಅವರಿಗೆ ರಕ್ಷಣೆ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಬೇಕಲ್ಲವೇ? ನಿಮ್ಮಲ್ಲಿ Service Register ವ್ಯವಸ್ಥೆ ಇದೆ. ಮಂತ್ರಿಗಳೇ ಕುಳಿತುಕೊಂಡು ಮತ್ತು Chief Secretary ಕುಳಿತುಕೊಂಡು Service Register ನಲ್ಲಿ ಅವರು ಏನಾದರೂ ಸಲ್ಲಿಸಿದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇವೆಯನ್ನು ಎಂಟ್ರಿ ಮಾಡುತ್ತೇವೆ ಎಂದು ಹೇಳಿದರೆ, ಆ ಅಧಿಕಾರಿಗಳನ್ನು ಸರಿದಾರಿಗೆ ತರಲು ಸಾಧ್ಯವಾಗುತ್ತದೆಯೋ ಇಲ್ಲವೋ? ನಿಮ್ಮ ಹತ್ತಿರ ಅವರನ್ನು ಬಗ್ಗಿಸಲು ಎಲ್ಲಾ ಅಧಿಕಾರವೂ ಇದೆ. ನೀವು ಅಧಿಕಾರವನ್ನು ಚಲಾವಣೆ ಮಾಡುತ್ತಿಲ್ಲವೇನೋ ಅನ್ನಿಸುತ್ತಿದೆ ನನಗೆ. ಜಿಲ್ಲೆಗೊಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಾಡಲು ಹೊರಟಿದ್ದೀರಿ. ಈಗ ಇರುವುದನ್ನು ವಿಜ್ಞಾನ ಮತ್ತು ಗಣಿತ ಇವೆರಡೂ ವಿಷಯಗಳನ್ನು ಸೇರಿಸಿ upgrade ಮಾಡುತ್ತೀರಿ. ಇದು ಯಾರಿಗೆ ಬೇಕಾಗಿದೆ ಸ್ವಾಮಿ? ಸಮಾಜದ ಎಲ್ಲಾ ಮಕ್ಕಳಿಗೆ ಬೇಕಾಗಿರುತ್ತದೆ. ಇದಕ್ಕೆ ಎಷ್ಟು ದುಡ್ಡು ಇಟ್ಟಿದ್ದೀರಿ? ಒಂದು ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳು ಮೀಸಲು ಇಟ್ಟಿದ್ದೀರಿ. ನೀವು ಶಾದಿಮಹಲ್ ಕಟ್ಟಬಾರದು ಅನ್ನುವುದು ಅಲ್ಲ. ನೀವು ಅಲ್ಪಸಂಖ್ಯಾತರಿಗೆ ಬೇಕಾದಂತಹ ಸಮುದಾಯ ಭವನ ಕಟ್ಟಬಾರದು ಎನ್ನುವುದು ಅಲ್ಲ. ಆದರೆ, ಈ ಶಾಲೆಗೆ ಒಂದು ಕೋಟಿ ರೂಪಾಯಿಗಳನ್ನು ಮೀಸಲು ಇಟ್ಟ ಮೇಲೆ, ಶಾದಿಮಹಲ್‌ಗೆ ಪ್ರತಿ ಜಿಲ್ಲೆಗೆ ಎರಡು ಕೋಟಿ ರೂಪಾಯಿಗಳು. ಪ್ರತಿ ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳು. ಹೀಗೆ ಎಷ್ಟು ಹಣವನ್ನು ತಮ್ಮ ಇಲಾಖೆಯಿಂದ ಕೊಡುತ್ತಿದ್ದೀರಿ. ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಶಿಕ್ಷರನ್ನು ನೇಮಿಸುವುದಿಲ್ಲ. ಅರಣ್ಯ ಇಲಾಖೆಗೆ ಅರಣ್ಯ ರಕ್ಷಕರನ್ನು ನೇಮಿಸುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಪೊಲೀಸ್‌ನವರನ್ನು ನಿಯುಕ್ತಿ ಮಾಡುವುದಿಲ್ಲ. ಆಸ್ಪತ್ರೆಗೆ ಡಾಕ್ಟರ್ ಅನ್ನು ನೇಮಿಸುವುದಿಲ್ಲ. Veterinary hospitals ಗೆ ಡಾಕ್ಟರ್ ಕೊಡುವುದಿಲ್ಲ. ಆಸ್ಪತ್ರೆಗೆ ಕಟ್ಟಡ ಇರುವುದಿಲ್ಲ. ಯಾರಿಗೆ ನೀವು ಹಣವನ್ನು ಕೊಡುತ್ತೀರಿ? ಯಾವುದಕ್ಕೆ ಕೊಡುತ್ತೀರಿ? ನಿಮ್ಮ ಆದ್ಯತೆ ಏನು? ನಾವು ಶಾದಿಮಹಲ್ ಬಗ್ಗೆ ಹೇಳಿದರೆ, ನಮ್ಮನ್ನು ಅಲ್ಪ ಸಂಖ್ಯಾತರ ವಿರೋಧಿಗಳು ಎನ್ನುತ್ತಾರೆ. ನಾವು ವಿರೋಧ ಮಾಡಿ ಏನು ಮಾಡಬೇಕಾಗಿರುತ್ತದೆ? ನಮ್ಮ ಜೊತೆ ಅವರು ಬರುವುದಿಲ್ಲ ಅಥವಾ ನಾವು ಅವರ ಜೊತೆ ಹೋಗುವುದಿಲ್ಲ ಅನ್ನುವಂಥದ್ದು ಚುನಾವಣೆ ಬಿಟ್ಟರೆ, ಉಳಿದಂತಹ ಯಾವ ಸಮಯದಲ್ಲೂ ಇದು ಯಾರಿಗೂ ಅನ್ವಯವಾಗುವುದಿಲ್ಲ. ಸಾಮರಸ್ಯದ ಬದುಕೇ ಇರುತ್ತದೆ. ಚುನಾವಣೆ ಸಮಯದಲ್ಲಿ ನೀವು ಅವರಿಗೆ ಓಟು ಕೊಡುವುದಿಲ್ಲ. ಅವರು ನಿಮಗೆ ಓಟು ಕೊಡುವುದಿಲ್ಲ. ನೀವು ಅವರ ವಿರೋಧಿಗಳು ಎನ್ನುವುದನ್ನು ಬಿಡಿ, ರಾಜಕಾರಣವೇ ಬೇರೆ. ಆದರೆ, ಒಂದು ಜಿಲ್ಲೆಗೆ ಎರಡು ಕೋಟಿ ರೂಪಾಯಿಗಳು ಶಾದಿಮಹಲ್‌ಗೆ ಹಾಗೂ ಒಂದು ಕೋಟಿ ರೂಪಾಯಿಗಳು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕೊಡುವುದು ಯಾವ ನ್ಯಾಯ ಸ್ವಾಮಿ? ಆದರೆ, ಯಾವುದಕ್ಕೆ ಮೊದಲ ಆದ್ಯತೆ ಕೊಡಬೇಕು ಎನ್ನುವುದನ್ನು ಯೋಚನೆ ಮಾಡಿ. ಈಗ ನಮ್ಮ ಸ್ನೇಹಿತರು ಹೇಳಿದರು, ಅದಕ್ಕೆ ಬಹಳ ಸಂತೋಷ. ಬೆಂಗಳೂರಿನ 198 ವಾರ್ಡ್‌ಗಳಲ್ಲೂ 'ನಮ್ಮ ಕ್ಯಾಂಟೀನ್' ಮಾಡಿ ಜನರಿಗೆ ಕಡಿಮೆ ದುಡ್ಡಿನಲ್ಲಿ ಊಟ ಕೊಡುತ್ತೇವೆಂದು ಹೇಳಿದ್ದೀರಿ. ನಾನು ಕೇಳುವುದು ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಬರಗಾಲವಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚು ಬರಗಾಲವಿರುವ ಕಡೆ ಈ 'ನಮ್ಮ ಕ್ಯಾಂಟೀನ್' ಅನ್ನು ಮಾಡಲು ಪ್ರಯತ್ನ ಮಾಡಬಹುದಲ್ಲವೇ? ಇದನ್ನು ಮಾಡಿದಿದ್ದರೆ ಸರ್ಕಾರಕ್ಕೆ ಗೌರವ ಬರುತ್ತಿರಲಿಲ್ಲವೇ. ಬೆಂಗಳೂರಿನಲ್ಲಿ 'ನಮ್ಮ ಕ್ಯಾಂಟೀನ್' ಅನ್ನು ಮಾಡುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಬೆಂಗಳೂರಿಗೆ ಲಕ್ಷಾಂತರ ಜನ ಪ್ರತಿದಿವಸ ಬರುತ್ತಾರೆ. ಅವರಿಗೆ 5 ರೂಪಾಯಿ ಹಾಗೂ 10 ರೂಪಾಯಿಯಲ್ಲಿ ಊಟ ಸಿಕ್ಕಿದರೆ ಬಹಳ ಸಂತೋಷ.

**ಶ್ರೀ ಐವನ್ 'ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇದು ಹಸಿದ ಹೊಟ್ಟೆಗೆ ಊಟವನ್ನು ಕೊಡುವಂಥದ್ದೇ ಕರೆಕ್ಟ್. ಹಾಗಾಗಿ ಇದು ಕೊಡಬಾರದು ಎಂದು ಹೇಳಿದರೆ ಹೇಗೆ?

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, ಸರ್ಕಾರ ಯಾವುದನ್ನಾದರೂ ಕೊಟ್ಟರೆ, ಬೇಡವೆಂದು ಹೇಳುವ ಅಧಿಕಾರ ಯಾರಿಗೆ ಇದೆ. ಏಕೆಂದರೆ, ತಾವು ಕೊಡುತ್ತಿರುವುದು ನಮ್ಮ ರಾಜ್ಯದ ಜನಕ್ಕೆ. ನೀವು ನಮಗೆ ಕೊಡುತ್ತಿಲ್ಲ. ಅದನ್ನು ಕೊಡುತ್ತಿರುವುದು ಈ ರಾಜ್ಯದ ಆರು ಕೋಟಿ ಜನಕ್ಕೆ. ಯಾರಿಗೆ ಕೊಡಬೇಕು. ಯಾರಿಗೆ ಕೊಡಬಾರದು ಎನ್ನುವಂತಹ discrimination ನನ್ನ ಭಾವನೆಯಲ್ಲಿ ನಾನು ಹೇಳುತ್ತಿದ್ದೇನೆ. ನಾನು ಮೊದಲು ಶಿಕ್ಷಕರನ್ನು ನೇಮಕ ಮಾಡಿ. ಆಮೇಲೆ ಸಬ್ಸಿಡಿಯನ್ನು ಕೊಡಿ ಎಂದು ಹೇಳುತ್ತೇನೆ. ಸಬ್ಸಿಡಿಯನ್ನು ನಾವು ಕೊಡಲೇಬೇಕು ಎಂದರೆ ಕೊಡಿ. ಆದರೆ ಎಲ್ಲರಿಗೂ ಸಮನಾಗಿ ಸಬ್ಸಿಡಿ ಕೊಡಿ. ಹಳೆಯ ಮನೆಗಳನ್ನು ಕಟ್ಟಿರಿ. ನಂತರ ಹೊಸ ಮನೆ ಕೊಡಿ ಎಂದರೆ, ಅದು ಹಳೆಯದು ಯಾರ್ಯಾರೋ ಆರಿಸಿದ್ದಾರೆ. ಅವರು ಬಡವರು ಅಲ್ಲವೇ? ಅವರು ಮನೆಯನ್ನು ಕಟ್ಟಿಕೊಳ್ಳುವುದು ಬೇಡವೇ. ಜೀವನದಲ್ಲಿ ಅವರು ಮನೆಯನ್ನು ಕಟ್ಟಿಕೊಳ್ಳದೇ ಇಷ್ಟು ಮನೆಗಳು ಬಾಕಿ ಇವೆ ಎಂದು ಪ್ರತಿ ಸಲ ರೆಕಾರ್ಡ್‌ನಲ್ಲಿ ತರುತ್ತೀರೇನು. ಅದಕ್ಕೋಸ್ಕರ ನಾನು ವಿನಂತಿ ಮಾಡುವುದು. ಈಗ ನಾನು ಹೇಳಿದರೆ, ನೀವು ಅಲ್ಪಸಂಖ್ಯಾತರಿಗೆ ವಿರೋಧವೆಂದು ಹೇಳುತ್ತೀರಿ. ಸ್ವಾಮಿ ಮೌಲ್ವಿಗಳಿಗೆ ಸಂಬಳವನ್ನು ಜಾಸ್ತಿ ಮಾಡಿದ್ದೀರಿ ಮಾಡಿ, ಅವರು ಸಹ ಬಡವರು ಇದ್ದಾರೆ, ಅವರಿಗೆ ಕೊಡುವಂತಹ 3000-4000/-ರೂ.ಗಳ ಸಂಬಳ ಸಾಕಾಗುವುದಿಲ್ಲ. ಆದರೆ ಒಂದು ರೂಪಾಯಿಯಾದರೂ 2017-18ನೇ ಸಾಲಿನ ಬಜೆಟ್‌ನಲ್ಲಿ ಅರ್ಚಕರಿಗೆ ಸಂಬಳವನ್ನು ಜಾಸ್ತಿ ಮಾಡಬೇಕಲ್ಲವೇ ಸ್ವಾಮಿ? ಅಲ್ಪಸಂಖ್ಯಾತರ ಬೇರೆ ಬೇರೆ ಇನ್ನಿತರೆ ಯೋಜನೆಗಳಿಗೆ ದುಡ್ಡನ್ನು ಕೊಡುತ್ತೀರಿ. ಆದರೆ ಬಹುಸಂಖ್ಯಾತ ಸಮಾಜ ಇದೆಯಲ್ಲ, ಇದಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹಣವನ್ನು ಕೊಡುತ್ತೀರಿ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಇನ್ನಿತರೆ ಕಡೆಗಳಿಂದ ಕೊಡುತ್ತೀರಿ. ಆದರೆ ಇವೆಲ್ಲವನ್ನೂ ಒಟ್ಟಾಗಿ ಸೇರಿಸಿದಾಗ ಎಲ್ಲೋ ಒಂದು ಕಡೆ, ತಾರತಮ್ಯ ಮಾಡುತ್ತಿದ್ದೀರೆಂದು ಅನಿಸುವುದಿಲ್ಲವೇ? ನಾವು ಯಾವುದೇ ತಾರತಮ್ಯ ಮಾಡುವುದಿಲ್ಲವೆಂದು ಪ್ರತಿಜ್ಞೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡಿದ್ದೇವೆ. ಇಲ್ಲಿ ತಾರತಮ್ಯ ಮಾಡುತ್ತಿದ್ದಾರೆನ್ನುವುದು ಆಗುವುದಿಲ್ಲವೇ ಎನ್ನುವಂಥದ್ದು ನನ್ನ ಪ್ರಶ್ನೆಯಾಗಿದೆ. ಹಾಗಾಗಿ, ಬಹಳಷ್ಟು ವಿಷಯಗಳನ್ನು ತುಂಬಾ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಬಹಳ ವಿಷಯಗಳನ್ನು ಮಾತನಾಡಲು ಹೋಗುವುದಿಲ್ಲ. ನಾನು 2017-18ನೇ ಸಾಲಿನಲ್ಲಿ ಅನೇಕ ಇಲಾಖೆಗಳಿಗೆ propose ಮಾಡಿರುವಂತಹದ್ದನ್ನು ನೋಡಿದ್ದೇನೆ. ವಿಶೇಷವಾಗಿ ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಗೆ 285 ಕೋಟಿ ರೂಪಾಯಿಗಳನ್ನು propose ಮಾಡಿದ್ದೀರಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 424 ಕೋಟಿ ರೂಪಾಯಿಗಳನ್ನು propose ಮಾಡಿದ್ದೀರಿ. ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಗೆ 299 ಕೋಟಿ ರೂಪಾಯಿಗಳನ್ನು propose ಮಾಡಿದ್ದೀರಿ. ಪ್ರವಾಸೋದ್ಯಮ ಇಲಾಖೆಗೆ 512 ಕೋಟಿ ರೂಪಾಯಿಗಳನ್ನು propose ಮಾಡಿದ್ದೀರಿ. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಗೆ 256 ಕೋಟಿ ರೂಪಾಯಿಗಳು ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ ಇದು ಎರಡೂ ಸೇರಿದೆ. ಮೀನುಗಾರಿಕೆ ಇಲಾಖೆಗೆ 337 ಕೋಟಿ ರೂಪಾಯಿಗಳು, ರೇಷ್ಮೆ ಇಲಾಖೆಗೆ 429 ಕೋಟಿ ರೂಪಾಯಿಗಳು ಈ ಇಲಾಖೆಗಳೆಲ್ಲವೂ ಸಮಾಜದ ಎಲ್ಲಾ ಬಂಧುಗಳಿಗೆ ಸೇರುತ್ತದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಎಲ್ಲಾ ಜಾತಿಯವರಿಗೆ ಇದೆಯೊ ಇಲ್ಲವೋ? ಎಲ್ಲಾ ಜಾತಿಯವರಿಗೆ ಇರುವುದಕ್ಕಿಂಥ ಅಲ್ಪಸಂಖ್ಯಾತ ಸಮಾಜಕ್ಕೆ ಶೇ.50 ರಷ್ಟು ಜಾಸ್ತಿ ಮಾಡಿದ್ದೀರಿ ಎಂದರೆ ಏನು ಅರ್ಥ ಬರಬಹುದು.

**(..ಮುಂದು.)**

(381) 22.3.2017 6.50 ಕೆಕೆ:ಬಿಎನ್‌ಎಸ್

**ಶ್ರೀ ಭಾನುಪ್ರಕಾಶ್(ಮುಂದುವರೆದಿದೆ)**

ನೀವು ಅವರ ಬಗ್ಗೆ ಪ್ರೀತಿ ತೋರಿಸಿದರೆ . . .ರಾಜಕಾರಣಕ್ಕೆ ಭಾಷಣ ಮಾಡುವುದು ಬೇರೆ. ಆದರೆ ರಾಜ್ಯದಲ್ಲಿ, ವಿಧಾನಮಂಡಲದಲ್ಲಿ, ಪವಿತ್ರವಾದ ಜಾಗದಲ್ಲಿ ನಿಂತು, ತಾರತಮ್ಯ ಮಾಡಬೇಡಿ ಎಂದು ವಿನಂತಿ ಮಾಡಿಕೊಳ್ಳುವುದನ್ನು ಬಿಟ್ಟು ಬೇರೆ ಏನು ಮಾಡುತ್ತೇವೆ? ಕೆಲವರು ಅವರದೇ ಆದ ಶೈಲಿಯಲ್ಲಿ ಟೀಕೆ ಮಾಡಬಹುದು. ನೀವು ಅಲ್ಪಸಂಖ್ಯಾತರ ಪರ ಎಂದು ಅಥವಾ ಅಲ್ಪಸಂಖ್ಯಾತರ ವಿರೋಧಿ ಎಂದು ಟೀಕೆ ಮಾಡಬಹುದು ಆದರೆ, ಅಂತಹ ಜಗಳದಿಂದ ಅವರಿಗೇನೂ ಪರಿಹಾರ ಸಿಗುವುದಿಲ್ಲ. ದಯವಿಟ್ಟು ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ, ಅದು ಕ್ರೀಡಾ ಇಲಾಖೆ ಇರಬಹುದು, ಕನ್ನಡ ಸಂಸ್ಕೃತಿ ಇಲಾಖೆ ಇರಬಹುದು ಅಥವಾ ಮಾಹಿತಿ ತಂತ್ರಜ್ಞಾನ ಇಲಾಖೆ ಇರಬಹುದು, ಇಂಥದ್ದಕ್ಕೆ ಹೆಚ್ಚು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಜೆಟ್ ಕೊಡಿ. ಒಂದೊಂದೇ ಪ್ರತ್ಯೇಕವಾದ ಜನಾಂಗಕ್ಕೆ ಕೊಡಬೇಕಾದರೆ ಅದನ್ನು ಸ್ವಲ್ಪ ಕಡಿಮೆ ಮಾಡಿ ಇಂಥದ್ದಕ್ಕೆ ಆದ್ಯತೆ ಕೊಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳಷ್ಟು ಹೊತ್ತು ಮಾತನಾಡುವ ಅಗತ್ಯ ನಮಗಿಲ್ಲ. ಏಕೆಂದರೆ ಮಾನ್ಯ ಸಭಾಪತಿಗಳು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಮುಂಚೆಯೇ ನಾನು ಕುಳಿತುಬಿಡುತ್ತೇನೆ. ಬಜೆಟ್‌ನಲ್ಲಿ ಒಳ್ಳೆಯ ಅಂಶಗಳಿಲ್ಲ ಎಂದು ಹೇಳುವುದಿಲ್ಲ, ಒಳ್ಳೆಯ ಅಂಶ ಇದೆ. ಬಜೆಟ್‌ನಲ್ಲಿ ಒಳ್ಳೆಯ ಅಂಶಗಳಿದ್ದ ಮಾತ್ರಕ್ಕೆ ಅದು ಜಾರಿಗೆ ಬರದಿದ್ದರೆ ಉಪಯೋಗವಾಗುವುದಿಲ್ಲ. ಕಳೆದ ವರ್ಷ ನೀವು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳಿಗೆ ಬಜೆಟ್‌ನಲ್ಲಿ ನಿರ್ದಿಷ್ಟ ಹಣವನ್ನು ಇಟ್ಟುಕೊಂಡಿದ್ದಿರಿ. ಅದರಲ್ಲಿ ತಾವು ಲೇಖಾನುದಾನವನ್ನು ಎಷ್ಟಕ್ಕೆ ಪಡೆದುಕೊಂಡಿದ್ದಿರೋ ಅಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಆಗಲಿಲ್ಲ. ಅದನ್ನು ಖರ್ಚು ಮಾಡಲಿಲ್ಲ. ಆ ದುಡ್ಡು ಉಳಿಯಿತು. ನಾನು ನಿನ್ನೆ ಉದಾಹರಣೆ ಕೊಟ್ಟೆ. ಘನತ್ಯಾಜ್ಯ ವಿಲೇವಾರಿಯಲ್ಲಿ ರೂ.219 ಕೋಟಿ ಉಳಿದಿದೆ. ಘನತ್ಯಾಜ್ಯ ಹೋಗಲಿಲ್ಲ, ದುಡ್ಡು ಉಳಿಯಿತು. ಬಜೆಟ್‌ನಲ್ಲಿ ಇಟ್ಟಿರುವ ಹಣವನ್ನು ಉಳಿಸುವುದು ಮುಖ್ಯವಲ್ಲ. ಕೊನೆಯ ಪೈಸೆಯವರೆಗೂ ಖರ್ಚು ಮಾಡಿ. ಸಾಲ ಮಾಡಿದ್ದೀರಿ, ಬಡ್ಡಿ ಕಟ್ಟುತ್ತೀರಿ, ಎಲ್ಲಾ ಆದಮೇಲೆ ಪ್ರತಿ ಪೈಸೆಯನ್ನು ಅಭಿವೃದ್ಧಿಗೆ, ಜನರಿಗೆ ತಲುಪಿಸುವ ವ್ಯವಸ್ಥೆಯಲ್ಲಿ ನಿಮ್ಮ ಆಡಳಿತ ವ್ಯವಸ್ಥೆಯನ್ನು tone up ಮಾಡಬೇಕು. ಕಾನೂನು ಸುವ್ಯವಸ್ಥೆ ಮತ್ತು ಇತರ ಸಮಸ್ಯೆಗಳು ರಾಜ್ಯದಲ್ಲಿದೆ. ಇವೆಲ್ಲವನ್ನೂ ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ನಮ್ಮ ಸಹಕಾರ ಇದೆ. ಆದರೆ, ಬಜೆಟ್‌ನಲ್ಲಿ ಏನು ಹೇಳಿದ್ದೀರೋ, ಆಶ್ವಾಸನೆ ಕೊಟ್ಟಿದ್ದೀರೋ ಅದರಲ್ಲಿ ಆದ್ಯತೆಯಿಲ್ಲ, ಆದ್ಯತೆಯನ್ನು ಬದಲು ಮಾಡಿಬಿಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿ, ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ,** ಹಣಕಾಸಿನ ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳು 12 ಬಾರಿ ಬಜೆಟ್ ಮಂಡನೆ ಮಾಡುವುದರ ಮೂಲಕ ದಾಖಲೆಯನ್ನು ಮಾಡಿದ್ದಾರೆ. ಆದ್ದರಿಂದ ನಾನು ಅವರಿಗೆ ಅಭಿನಂದನೆ ಸಲ್ಲಿಸಬಯಸುತ್ತೇನೆ. ಇವತ್ತು ನಾನು ಬಜೆಟ್‌ನ ಮೇಲೆ ಚರ್ಚೆ ಮಾಡುವಾಗ ಕೇವಲ ಒಬ್ಬ ವಿರೋಧ ಪಕ್ಷದ ಸದಸ್ಯನಾಗಿ ಅಥವಾ ಆಡಳಿತ ಪಕ್ಷದ ಸದಸ್ಯನಾಗಿ ಮಾತನಾಡುವಂಥದ್ದನ್ನು ಮಾಡುವುದಿಲ್ಲ. ಒಳ್ಳೆಯ ಕೆಲಸಗಳನ್ನು ಪ್ರಶಂಸಿಸಬೇಕು. ಒಳ್ಳೆಯ ಕೆಲಸ ಮಾಡಿದಾಗ ಅವರನ್ನು ಹುರಿದುಂಬಿಸಿ ಇನ್ನಷ್ಟು ಸಮಾಜಮುಖಿಯಾಗಿ ಈ ರಾಜ್ಯದ ಜನರ ಭಾವನೆಗಳಿಗೆ ತಕ್ಕಂತೆ ಒಳ್ಳೆಯ ಸರ್ಕಾರ ಕೊಡಲಿಕ್ಕೆ ಬೆಂಬಲ ಕೊಡುವಂಥದ್ದು ನಮ್ಮ ಕರ್ತವ್ಯವಾಗುತ್ತದೆ. ಆ ಮೂಲಕ ನಮ್ಮ ಗೌರವವನ್ನು ಹೆಚ್ಚು ಮಾಡಿಕೊಳ್ಳುವಂಥದ್ದೂ ಬಹಳ ಅವಶ್ಯಕವಾಗಿರುತ್ತದೆ. ಕರ್ನಾಟಕದ ಆರ್ಥಿಕ ಪರಿಸ್ಥಿತಿ ಬಗ್ಗೆ ಅವಲೋಕನ ಮಾಡಿದ್ದನ್ನು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕೆಯಲ್ಲಿ ನೋಡಿದೆ. ಕರ್ನಾಟಕದ ಆರ್ಥಿಕ ಪದ್ಧತಿಯನ್ನು ಬಹಳ ಸರಿಯಾಗಿ ನಡೆಸಿಕೊಂಡು ಹೋಗಿದ್ದಾರೆ. ಈ ವರ್ಷ ಶೇಕಡ 2.12 ವಿತ್ತೀಯ ಕೊರತೆಯನ್ನು ಇಳಿಸುವುದರ ಮೂಲಕ . . .ಕಳೆದ ವರ್ಷ ಏನು 2.79 ಇತ್ತು. ಅದಕ್ಕಿಂತ ಕಡಿಮೆ ಮಾಡಿರುವಂಥದ್ದು ಆರ್ಥಿಕ ಶಿಸ್ತನ್ನು ಕಾಯ್ದುಕೊಂಡು ಬಂದಿದ್ದಾರೆ ಎನ್ನುವ ಪ್ರಶಂಸೆಯ ಮಾತುಗಳನ್ನು ಹೇಳಬೇಕಾಗುತ್ತದೆ. ಸಾಲಕ್ಕೆ ಕಟ್ಟುವ ಬಡ್ಡಿ, ಆದಾಯದ ಶೇಕಡ 10 ರಷ್ಟನ್ನು ಮೀರಿದಲ್ಲಿ G.D.P.ಯ ಶೇಕಡ 25ಕ್ಕಿಂತ ಹೆಚ್ಚು ಸ್ಥಾಲ ಮಾಡುವಂತಿಲ್ಲ. ಇಲ್ಲಿಯೂ ಸಹ ಆರ್ಥಿಕ ಶಿಸ್ತನ್ನು ಪಾಲಿಸಿಕೊಂಡು ಬಂದಿರುವ ಕೆಲಸ ಮಾಡಿದ್ದಾರೆ. ಆದರೆ, ಒಂದು ಕಳವಳಕಾರಿಯಾದ ವಿಚಾರ ಏನೆಂದರೆ, ಜನರಿಗೆ 1 ರೂಪಾಯಿ ಸೌಲಭ್ಯ ತಲುಪಿಸಲು ರೂ. 3.62 ರಷ್ಟು ಖರ್ಚು ಮಾಡುತ್ತಿದ್ದೇವೆ. ಜನರಿಗೆ ಮುಟ್ಟುವುದು 1 ರೂಪಾಯಿ, ಆ ಒಂದು ರೂಪಾಯಿ ಜನರಿಗೆ ಮುಟ್ಟಲು ಒಟ್ಟು ರೂ. 3.62 ಖರ್ಚು ಬರುತ್ತಿದೆ. ಮತ್ತೆ, ಅಗ್ಗದ ದರದ ಆಹಾರ-ಕಾಳುಗಳ ವ್ಯವಸ್ಥೆ ಏನಿದೆ, ಇದರಲ್ಲಿ ಮೂರು ತರಹ ಸೋರಿಕೆ ಆಗುತ್ತಿವೆ. ಅವು, leakage, wastage and coverage. Leakage ಎಂದರೆ ಕಳ್ಳತನ. ಅಂದರೆ ಬಡವರಿಗೆ ಸಿಗುವಂತಹ ಅಕ್ಕಿಯನ್ನು ಕಳ್ಳದಂಧೆಗಳ ಮೂಲಕ ಮಾರಾಟ ಮಾಡುವುದು. Wastage ಎಂದರೆ, ಗೋಡೌನ್‌ನಲ್ಲಿ ಹೆಗ್ಗಣಗಳಿಂದ ನಾಶವಾಗುವ ಆಹಾರ-ಧಾನ್ಯಗಳು. Coverage ಎಂದರೆ, ಬಡವರಿಗೆ ಸಿಗುವ ಸೌಲಭ್ಯಗಳನ್ನು ಶ್ರೀಮಂತರು ಪಡೆಸಿಕೊಳ್ಳುವುದು. ಇಂತಹ ವ್ಯವಸ್ಥೆಯನ್ನು ಸುಧಾರಣೆ ಮಾಡುವ ಸಲುವಾಗಿ ಮುಂದಿನ ಆರ್ಥಿಕ ವರ್ಷದಲ್ಲಿ ಬದಲಾವಣೆ ಮಾಡುವುದು ಅವಶ್ಯಕವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೊಸ ತಾಲ್ಲೂಕು ರಚನೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ಆದರೆ, ತಾಲ್ಲೂಕು ರಚನೆ ಎನ್ನುವುದು ಒಂದು ರಾಜಕೀಯ ನಿರ್ಣಯವಾಗದೇ, ಅದರಿಂದ ಜನರಿಗೆ ಅನುಕೂಲವಾಗಬೇಕು. ನಮ್ಮ ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಿವೆ. ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದೊಂದು ತಾಲ್ಲೂಕು ಎಂದು ಮಾಡಿದರೆ, ಒಬ್ಬ ಶಾಸಕರಿಗೆ ಒಂದು ತಾಲ್ಲೂಕು ಸಿಗುತ್ತದೆ. ಒಂದು ಲೋಕಸಭಾ ಕ್ಷೇತ್ರ ಎಂದರೆ ಒಂದು ಜಿಲ್ಲೆ. ಈ ವ್ಯವಸ್ಥೆ ಬರಬೇಕು. ಒಮ್ಮೊಮ್ಮೆ ಏನಾಗುತ್ತದೆ ಎಂದರೆ ಒಬ್ಬ ಶಾಸಕರಿಗೆ ಮೂರು ತಾಲ್ಲೂಕುಗಳು ಬರುತ್ತವೆ. ಮೂರು ತಹಸೀಲ್ದಾರರು ಇರುತ್ತಾರೆ. ಅಲ್ಲಿಯೂ ಮೀಟಿಂಗ್‌ಗೆ ಕರೆಯುತ್ತಾರೆ, ಇಲ್ಲಿಯೂ ಮೀಟಿಂಗ್ ಕರೆಯುತ್ತಾರೆ. ಹೆಚ್ಚು ತಾಲ್ಲೂಕುಗಳನ್ನು ಮಾಡುವುದರಿಂದ ಏನೋ ಘನಂದಾರಿ ಕೆಲಸ ಮಾಡಿದೆವು ಎಂದುಕೊಳ್ಳಬಾರದು. ಹಿಂದಿನ ಸರ್ಕಾರದಲ್ಲಿ, ಯಾರು ಬಂದು ಕೇಳುತ್ತಾರೋ ಅವರ ಪ್ರದೇಶವನ್ನು ತಾಲ್ಲೂಕು ಎಂದು ಘೋಷಣೆ ಮಾಡಿದರು. ತಿರುಪತಿ ತಿಮ್ಮಪ್ಪನ ಲಾಡು ಹಂಚಿದ ಹಾಗೆ ಹಂಚಿಕೆ ಮಾಡಿದರು. ಒಂದೊಂದು ಕಡೆ, 5 ತಾಲ್ಲೂಕುಗಳಿದ್ದುದು 7 ತಾಲ್ಲೂಕುಗಳಾಯಿತು. ನಾನು ಟೀಕೆಗೋಸ್ಕರ ಇದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿಲ್ಲ. ನಾವು ನಮ್ಮ ರಾಜಕೀಯ ಮತಗಳ ಸಲುವಾಗಿ ಈ ವ್ಯವಸ್ಥೆಯನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಇಲ್ಲಿ ಕೇವಲ ಚುನಾವಣೆಯ ತಂತ್ರ ಇರುತ್ತದೆ. ಸರ್ಕಾರದ 5ನೇ ವರ್ಷ ಅದರ ಬೀಳ್ಕೊಡುಗೆ ಸಮಾರಂಭ ಇದ್ದಹಾಗೆ ಇರುತ್ತದೆ. Send- off party ಇದ್ದಹಾಗೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ, ನಮ್ಮದು ಸರ್ವರನ್ನು ಒಳಗೊಂಡ, ಮಾನವೀಯ ಮುಖವುಳ್ಳ ಸರ್ವೋದಯದ ಅಭಿವೃದ್ಧಿ ಮಾರ್ಗ, ಸಂವಿಧಾನದ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವಿಸ್ತೃತ ಆರ್ಥಿಕ ವಿನ್ಯಾಸವನ್ನು ಕಳೆದ 4 ಆಯವ್ಯಯಗಳನ್ನು ಜನತೆಯ ಮುಂದೆ ಇಟ್ಟಿದ್ದೇನೆ ಎಂದು ಹೇಳಿದ್ದಾರೆ. ನಿಜವಾಗಿಯೂ ನೀವು ಎಲ್ಲಾ ಸಮುದಾಯಗಳಿಗೆ ಸಾಮಾಜಿಕವಾಗಿ, ನ್ಯಾಯಯುತವಾಗಿ ಬಜೆಟ್‌ನಲ್ಲಿ ಮಾನ್ಯತೆ ಕೊಟ್ಟಿದ್ದೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದಿನ ಚರ್ಚೆಯಲ್ಲಿ ಇದರ ಬಗ್ಗೆ ಹೇಳಬೇಕು. ಕೆಲವು ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಕೆಲವು ಸಮುದಾಯಗಳ ಮೇಲೆ ಈ ಸರ್ಕಾರ ಒಂದು ರೀತಿಯ ಕೆಟ್ಟ ದೃಷ್ಟಿ ಹೊಂದಿದೆ ಎನ್ನುವುದನ್ನು ಅಂಕಿ-ಸಂಖ್ಯೆಗಳ ಮೂಲಕ ಹೇಳಬೇಕಾಗುತ್ತದೆ. ಅನೇಕ ಕಡೆ Super Speciality hospitals ಕೊಟ್ಟಿದ್ದಾರೆ, ಅದನ್ನು ಸ್ವಾಗತ ಮಾಡುತ್ತೇನೆ. ನೆಡುತೋಪುಗಳು, ಸಾಲು ಮರದ ತಿಮ್ಮಕ್ಕ ಉದ್ಯಾನವನ ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಗಳೆ, ಬಳ್ಳಾರಿ ಜಾಲಿ ಎಂದು ಏನು ಹೇಳುತ್ತೇವೆಯೋ ಅದು ಉತ್ತರ ಕರ್ನಾಟಕಕ್ಕೆ ಒಂದು ಶಾಪವಾಗಿ ಪರಿಣಮಿಸಿದೆ. ನಿಸರ್ಗದಲ್ಲಿರುವ ಶೇಕಡ 20 ರಷ್ಟು ತೇವಾಂಶವನ್ನು ಇದು ಹೀರಿಕೊಳ್ಳುತ್ತದೆ. ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ಚಿತ್ರದುರ್ಗ, ಬೀದರ್ ಈ ಪ್ರದೇಶಗಳಲ್ಲಿ ಬಂದಿರುವ ಬರಕ್ಕೆ ಇದೂ ಕೂಡ ಒಂದು ಕಾರಣವಾಗಿದೆ. ಬೆಳಿಗ್ಗೆ ಒಬ್ಬ ಸದಸ್ಯರು ಇಂತಹ ಮರಗಳ ಬದಲಿಗೆ ಶ್ರೀಗಂಧದ ಮರಗಳನ್ನು ಬೆಳೆಸುವ ಬಗ್ಗೆ ಪ್ರಸ್ತಾಪ ಮಾಡಿದರು. ಜಾಲಿ ಮರವನ್ನು ಬಡವರು ಉರುವಲಾಗಿ ಉಪಯೋಗ ಮಾಡಿಕೊಳ್ಳುತ್ತಾರೆ. ಇದರಿಂದ ವಿಷಕಾರಿಯಾದ ಒಂದು ಅನಿಲ ಉತ್ಪತ್ತಿಯಾಗಿ ಅದು ಕ್ಯಾನ್ಸರ್‌ಗೂ ಕೂಡ ಕಾರಣವಾಗುತ್ತಿದೆ. ಕರ್ನಾಟಕ ದಿಂದ ಈ ಜಾಲಿಮರವನ್ನು ಸಂಪೂರ್ಣವಾಗಿ ನಾಶ ಮಾಡುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಸತಿ ಶಾಲೆಯ ಬಗ್ಗೆ ಏನು ಯೋಜನೆ ಇದೆಯೋ ಅದನ್ನು ನಾನು ಸ್ವಾಗತ ಮಾಡುತ್ತೇನೆ.

(ಮುಂದು . . .)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(382)22.03.2017 MM-GR-7.00

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್ (ಮುಂದು):-**

ಅದೇ ರೀತಿ ಎಲ್ಲಾ ಕಛೇರಿಗಳನ್ನು ಸೇರಿಸಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಹೆಸರಿನಿಂದ ಭವನವನ್ನು ಮಾಡುವುದು. ಇವತ್ತಿನ ದಿವಸ ಕಾಂಗ್ರೆಸ್‌ನವರು ಬಹುತೇಕ ಎಲ್ಲಾ ನಾಯಕರ ಹೆಸರುಗಳನ್ನು ಹೇಳುತ್ತಾರೆ. ರಾಜೀವ್‌ಗಾಂಧಿ, ಇಂದಿರಾಗಾಂಧಿ, ಜವಾಹರಲಾಲ್ ನೆಹರು ಬಿಟ್ಟರೆ ಅವರಿಗೆ ಬೇರೆ ಯಾವ ರಾಷ್ಟ್ರೀಯ ನಾಯಕರೂ ನೆನಪಿಗೆ ಬರುವುದಿಲ್ಲ. ಸರ್ದಾರ್ ವಲ್ಲಭಬಾಯ್ ಪಟೇಲ್, ಲೋಕಮಾನ್ಯ ತಿಲಕರು, ಮೌಲಾನಾ ಅಬ್ದುಲ್ ಕಲಾಂ ಆಜಾದ್ ರವರು, ನೇತಾಜಿ ಸುಭಾಷ್ ಚಂದ್ರ ಬೋಸ್ ಇವರ ಹೆಸರುಗಳೇ ಅವರಿಗೆ ಗೊತ್ತಿಲ್ಲ. ಈಗಲಾದರೂ ಒಬ್ಬೊಬ್ಬರನ್ನಾದರೂ introduce ಮಾಡುತ್ತಿದ್ದಾರೆ ಎಂದರೆ ಬಹುಶಃ ಶ್ರೀ ನರೇಂದ್ರ ಮೋದಿಯವರ ಪ್ರಭಾವ ಆಗಿದೆ ಎಂದು ನನಗನ್ನಿಸುತ್ತಿದೆ. ಈಗಾಗಲೇ ಶ್ರೀ ಭಾನುಪ್ರಕಾಶ್‌ರವರು ಹೇಳಿದಂತೆ ಅಪಮೌಲ್ಯೀಕರಣದ ಬಗ್ಗೆ ಬಜೆಟ್‌ನಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇರಲಿಲ್ಲ. Demonetisation ಆದಮೇಲೆ ದೇಶದ ಜಿ.ಡಿ.ಪಿ., ಯಲ್ಲಿ ಸಹ ಒಂದು ಪರಿಣಾಮಕಾರಿಯಾದ ಬದಲಾವಣೆಯಾಗಿರುವುದನ್ನು ನೋಡುತ್ತಿದ್ದೇವೆ. ಇವತ್ತಿನ ದಿವಸ ಕರ್ನಾಟಕ ಸರ್ಕಾರವು ಕೃಷಿ ಭಾಗ್ಯ ಯೋಜನೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತಾರ ಮಾಡಿದ್ದು ಒಂದು ಒಳ್ಳೆಯ ನಿರ್ಣಯವಾಗಿದೆ. ಮತ್ತೊಂದು ಒಳ್ಳೆಯ ನಿರ್ಣಯವನ್ನು ಕೃಷಿ ಇಲಾಖೆಗೆ ಮಾಡಿದ್ದಾರೆ. ಆರೋಗ್ಯದ ದೃಷ್ಟಿಯಿಂದ ಸಿರಿಧಾನ್ಯಗಳಾದ ನವಣೆ, ಸಾಮೆ, ಅರ್ಕ, ಬರಗು ಇವುಗಳು ಒಂದು ಕಾಲದಲ್ಲಿ ಸಾಮಾನ್ಯ ಜನರ ಆಹಾರವಾಗಿತ್ತು. ನವಣೆಯನ್ನು ತಿನ್ನುವುದರಿಂದ ಸಕ್ಕರೆ ಖಾಯಿಲೆ ನಿಯಂತ್ರಣವಾಗುತ್ತದೆ. ಅದರಲ್ಲಿ ಅಷ್ಟು ಶಕ್ತಿ ಇದೆ. ಮೈಸೂರಿನಲ್ಲಿ ಒಬ್ಬರು ಅದರ ಮೇಲೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಸರ್ಕಾರ ಅದನ್ನು ಎಲ್ಲಾ ತೆರಿಗೆಗಳಿಂದ ಮುಕ್ತಿ ಮಾಡುವ ಕೆಲಸ ಮಾಡಿದೆ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಇವತ್ತು ನಾನು ಆಗ್ರಹಿಸುವುದೇನೆಂದರೆ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನಿಗದಿಮಾಡುವಂತಹ ಮಂಡಳಿಯೊಂದನ್ನು ರಚನೆ ಮಾಡುವುದು ಬಹಳ ಅವಶ್ಯವಿದೆ. ಸರ್ಕಾರವು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯದಲ್ಲೂ ಸಹ ಪರಿಣಾಮಕಾರಿಯಾಗಿ ಜಾರಿ ಮಾಡುತ್ತಿದೆ. ವಿಶೇಷವಾಗಿ ಕೃಷಿಯಲ್ಲಿ ಯಾಂತ್ರೀಕೃತ ಒಂದು ವ್ಯವಸ್ಥೆಗೆ ಹೆಚ್ಚು ಒತ್ತನ್ನು ಕೊಡುವುದರ ಜೊತೆಗೆ ವಿಶೇಷವಾಗಿ ರೈತರ ಎತ್ತುಗಳ ಉಪಯೋಗಕ್ಕೂ ಸಹ ಪ್ರೋತ್ಸಾಹ ಕೊಡುವುದು ಬಹಳ ಅವಶ್ಯಕವಾಗಿದೆ ಎಂದು ಭಾವಿಸುತ್ತೇನೆ. ತೋಟಗಾರಿಕೆಯಲ್ಲಿ ಆನ್‌ಲೈನ್ ಮಾರುಕಟ್ಟೆ ಬಗ್ಗೆ; ಉದಾಹರಣೆಗೆ ವಿಜಾಪುರದಲ್ಲಿ ಸುಮಾರು ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಒಣ ದ್ರಾಕ್ಷಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆನ್‌ಲೈನ್ ಮಾರುಕಟ್ಟೆಯನ್ನು ವ್ಯವಸ್ಥೆ ಮಾಡಿದ್ದಾರೆ. ಆದರೆ ಯಾವುದೋ ಕಾರಣದಿಂದ ಆನ್‌ಲೈನ್ ಮಾರುಕಟ್ಟೆ ನಡೆಯುತ್ತಿಲ್ಲ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಪಶುಸಂಗೋಪನೆ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಯವರಿಗೆ ರಾಜ್ಯದಲ್ಲಿ ಕುರಿ ಮತ್ತು ಟಗರುಗಳನ್ನು ಬಿಟ್ಟರೆ ಬೇರೆ ಯಾವ ಪ್ರಾಣಿಗಳೂ ಕಾಣಿಸಲಿಲ್ಲ ಎಂದು ಅನಿಸುತ್ತದೆ. ಇದನ್ನು ಮಾನ್ಯ ಈಶ್ವರಪ್ಪರವರು ಒಪ್ಪುತ್ತಾರೆ ಮಾನ್ಯ ಮುಖ್ಯಮಂತ್ರಿಯವರು ಅವರಿಗೆ ಯಾವ ಟಾಂಗ್ ಹೇಳಿದರೋ ಗೊತ್ತಿಲ್ಲ. ಅದರ ಪ್ರಾಧಿಕಾರ, ಅದರ ತಳಿ ಅಭಿವೃದ್ಧಿ ಬಗ್ಗೆ ಗಮನಹರಿಸಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರೆ, ಮಾನ್ಯ ಮುಖ್ಯಮಂತ್ರಿಯವರಿಗೆ ನನಗಿಂತ ಜಾಸ್ತಿ ಕುರಿ ಕೋಳಿಗಳ ಬಗ್ಗೆ ಗೊತ್ತಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ರಾಜ್ಯದಲ್ಲಿರುವ ದೇಸಿ ತಳಿಗಳಾದ ಆಕಳುಗಳ ಮೇಲೆಯು ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ. ದೇಶಿ ತಳಿಗಳ ಬಗ್ಗೆ ಮೊನ್ನೆ ರಾಜ್ಯಸಭೆಯಲ್ಲಿಯು ಕೂಡ ಚರ್ಚೆಯಾಗಿದೆ. ದೇಶಿ ತಳಿಗಳ ಗೋಮೂತ್ರದಿಂದ ಕ್ಯಾನ್ಸರ್ ರೋಗ ನಿವಾರಣೆಯಾಗುತ್ತದೆ ಎಂದು ಮುಂಬೈನಲ್ಲಿರುವ ಟಾಟಾ ಕ್ಯಾನ್ಸರ್ ಆಸ್ಪತ್ರೆಯಲ್ಲಿಯು ಸಹ ದೃಢಪಟ್ಟಿದೆ. ಅದೇ ರೀತಿ ದೇಶಿ ತಳಿಯ ಆಕಳ ತುಪ್ಪದಿಂದಲೂ ಅನೇಕ ರೋಗಗಳಿಗೆ ಪರಿಹಾರ ಇದೆ ಎನ್ನುವುದು ಸಹ ವೈಜ್ಞಾನಿಕವಾಗಿ ದೃಢಪಟ್ಟಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಅಷ್ಟೇ ಅಲ್ಲದೇ ಗುಜರಾತ್‌ನ ಜುನಾಗಢದಲ್ಲಿರುವ ಪಶು ವಿಶ್ವವಿದ್ಯಾನಿಲಯದಲ್ಲಿ ದೇಶಿ ತಳಿಯ ಗೋಮೂತ್ರದಲ್ಲಿ ಬಂಗಾರ ಇದೆ ಎಂದು ಹೇಳಿದೆ. ದುರ್ದೈವವೆಂದರೆ, ಮಾನ್ಯ ಮುಖ್ಯಮಂತ್ರಿಯವರು ದೇಶಿ ತಳಿ ಗೋವಿನ ಬಗ್ಗೆ ಒಂದು ಶಬ್ದವನ್ನೂ ಹೇಳದೇ ಇರುವುದು ಅತ್ಯಂತ ವಿಷಾದನೀಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಜ್ಯದಲ್ಲಿರುವ ಗೋಮಾಳಗಳು ರಿಯಲ್ ಎಸ್ಟೇಟ್‌ರವರ ಕೈಗೆ ಸಿಕ್ಕಿ ಅವರು ಗೋಮಾಳಗಳನ್ನೆಲ್ಲಾ ನಾಶ ಮಾಡಿ ಬಿಟ್ಟಿದ್ದಾರೆ. ಇವತ್ತಿನ ದಿವಸ ಬರಗಾಲಕ್ಕೆ ಪರ್ಯಾಯವಾಗಿ ಗೋಮಾಳಗಳನ್ನು ಅಭಿವೃದ್ಧಿ ಮಾಡಬೇಕು ಅಲ್ಲಿ ಹುಲ್ಲುಗಾವಲುಗಳನ್ನು ನಿರ್ಮಾಣ ಮಾಡಬೇಕೆನ್ನುವ ಬಗ್ಗೆ ದುರ್ದೈವದಿಂದ ಯಾವುದೇ ಪ್ರಸ್ತಾವನೆಯನ್ನು ಸರ್ಕಾರ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಈ ರಾಜ್ಯದ ಗೋ ಸಂಪತ್ತನ್ನು ಉಳಿಸುವ ಸಲುವಾಗಿ ಕುರಿ ಮತ್ತು ಟಗರುಗಳಿಗೆ ಎಷ್ಟು ಆಸಕ್ತಿಯನ್ನು ಕೊಟ್ಟಿದ್ದಾರೆ, ಅವರು ಹಾಗೆ ಮಾಡಿರುವುದರಲ್ಲಿ ತಪ್ಪೇನೂ ಇಲ್ಲ ಅದರ ಜೊತೆಗೆ ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದಲ್ಲಿ ನಾನು ಮಾತನಾಡುವಾಗ **'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ'** ಎಂದು ಒಂದು ಮಾತನ್ನು ಹೇಳಿದ್ದೆ. ಆಗ ಕಾಂಗ್ರೆಸ್ ಪಕ್ಷದವರು ಏನು ಹೇಳಿದ್ದರೆಂದರೆ, ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಕೃಷ್ಣಾ ಯೋಜನೆಗಳಿಗೆ ಪ್ರತಿವರ್ಷವು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದರು. ಆದರೆ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ನಾನು ಮಾತನಾಡುವಾಗ ಮಾನ್ಯ ಸಭಾನಾಯಕರು ತಾವು ಹಾಗೆ ಹೇಳಲಿಲ್ಲ ತಾವು ಪ್ರತಿವರ್ಷ ನೀರಾವರಿ ಯೋಜನೆಗಳಿಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಸ್ಪಷ್ಟೀಕರಿಸಿದರು. ಇವತ್ತು ನಾನು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ದಾಖಲೆ ರೂಪದಲ್ಲಿ ಕೊಡುತ್ತಿದ್ದೇನೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. It reads thus:

> "The Party is committed to fully exploiting the rights of the State that fall in the jurisdiction of the Krishna and Cauvery basins. The Party is committed to completing all ongoing projects on a priority basis. Special emphasis will be given to completion of A and B schemes in Krishna basin and utilizing our full shares of water and making an allocation of Rs.10,000 crores per year."

ಇದು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ.

**ಡಾ||ಜಿ.ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮೊದಲನೇ ವಾಕ್ಯ ಬಹಳ ಸ್ಪಷ್ಟವಾಗಿದೆ. 'Cauvery and Krishna basin' ಎಂದು ಹೇಳಲಾಗಿದೆ. ಎರಡು ಬೇಸಿನ್‌ನಲ್ಲಿ ಇಡೀ ರಾಜ್ಯದ ನೀರಾವರಿ ಯೋಜನೆಗಳು ಬರುತ್ತವೆ ಎಂದು ಆ ಯೋಜನೆಗಳಿಗೆ ಪ್ರತಿವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡುತ್ತೇವೆ ಎಂದು ತೆಂಗಿನಕಾಯಿಯನ್ನು ಹಿಡಿದುಕೊಂಡು ಬಸವಣ್ಣರವರ ಹತ್ತಿರ ಪ್ರಮಾಣ ಮಾಡಿದ್ದೇವೆ. ಅದೇ ರೀತಿ ತಾವು ಬಜೆಟ್ ಅನ್ನು ತೆಗೆದು ನೋಡಿ 2013-14, 2014-15 ಮತ್ತು 2015-16 ಪ್ರತಿ ವರ್ಷ ನಾವು ಹತ್ತು ಸಾವಿರ ಕೋಟಿ ಹನ್ನೊಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ.

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್:-** ಮಾನ್ಯ ಸಭಾನಾಯಕರೆ, ಎರಡನೇ ವಾಕ್ಯವನ್ನು ನೋಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ಜಿ.ಪರಮೇಶ್ವರ್ (ಸಭಾನಾಯಕರು):-** ಇಲ್ಲ, ಮೊದಲನೇ ವಾಕ್ಯವೇ ಸ್ಪಷ್ಟವಾಗಿದೆ. It is very clear in the very first sentence itself. It includes both the Krishna basin and the Cauvery basin.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಯಾವುದೇ ರಾಜಕೀಯ ಪಕ್ಷದ ಪ್ರಣಾಳಿಕೆಯನ್ನು ನೋಡಿದರೆ ಮೊದಲನೇ ಪದ ಪ್ರಾರಂಭವಾಗುವುದೇ ಕೃಷ್ಣಾ ಕಾವೇರಿ ಪದಗಳಿಂದ.

**ಡಾ|| ಜಿ. ಪರಮೇಶ್ವರ್:-** ಮಾನ್ಯ ಯತ್ನಾಳ್‌ರವರೆ, ಹಾಗೇಕೆ ಹೇಳಿದ್ದೇವೆಂದರೆ, ಅವತ್ತಿಗೆ 259 ಟಿ.ಎಂ.ಸಿ ನೀರು ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತಿತ್ತು. ಅದನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ priority will be given to the Krishna basin ಎಂದು ಹೇಳಿದ್ದು ಬಿಟ್ಟರೆ ಎರಡು ಬೇಸಿನ್ ಸೇರಿಸಿ ಹತ್ತು ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದೇವೆ. ಅವತ್ತೇ ಅದರ ಕರೆಕ್ಷನ್ ಮಾಡಿದ್ದೇನೆ. Its very very clear.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ತಾವು ಕೂಡ ಕೃಷ್ಣಾ ನದಿ ಭಾಗದಿಂದ ಬಂದವರಾಗಿದ್ದು, ಅದೇ ನೀರನ್ನು ಕುಡಿಯುತ್ತೀರಿ, ತಾವೇ ಎದ್ದು ವಿರೋಧಿಸಿದರೆ ಹೇಗೆ? ನಾನು ಹೇಳುತ್ತಿರುವುದೇನೆಂದರೆ, ಪ್ರತಿ ವರ್ಷವು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಿರಿ, ಅದನ್ನು ಮಾಡಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹೊಸಪೇಟೆಯಿಂದ ಕೂಡಲ ಸಂಗಮದವರೆಗೆ ಪಾದಯಾತ್ರೆ ಮಾಡುವ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷವು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು.

**ಡಾ||ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಇಷ್ಟು simple statement ಅನ್ನು ತಾವು ಅರ್ಥ ಮಾಡಿಕೊಳ್ಳದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಪತ್ರಿಕೆಗಳಲ್ಲಿ ಬಂದಿರುವ ಸಾಕಷ್ಟು ಉದಾಹರಣೆಗಳಿವೆ. ಪ್ರತಿ ವರ್ಷವು ಕೂಡ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ||ಜಿ. ಪರಮೇಶ್ವರ್:-** ಮಾನ್ಯ ಸದಸ್ಯರೆ, ತಮಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಅರ್ಥವಾಗಿಲ್ಲ ಎಂಬುದು ನನಗೆ ಅರ್ಥವಾಯಿತು.

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವತ್ತಿನ ಪತ್ರಿಕೆಯ ಹೇಳಿಕೆಗಳನ್ನು ಬೇಕಾದರೆ ತಮಗೆ ತಂದು ಕೊಡುತ್ತೇವೆ. ಕ್ಲಿಯರ್ ಆಗಿ ಇಡೀ ರಾಜ್ಯದಲ್ಲಿ ಪೆಂಡಿಂಗ್ ಇರುವ ಯೋಜನೆಗಳನ್ನು ಮುಗಿಸಲು ಪ್ರತಿ ವರ್ಷವು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತೇವೆ ಎಂಬ ಹೇಳಿಕೆಯು ಮರುದಿನವೇ ಪತ್ರಿಕೆಗಳಲ್ಲಿ ಬಂದಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಕೂಡ ಬಾಗಲಕೋಟೆ, ಬಿಜಾಪುರದಲ್ಲಿರುವವನಾಗಿದ್ದು ಆ ಕಾರ್ಯಕ್ರಮಕ್ಕೆ ಕೂಡ ಹೋಗಿದ್ದೆನು.

**ಶ್ರೀ ಎನ್.ಎಸ್. ಬೋಸ್‌ರಾಜು:-** ತಾವು ವಿಷಯದ ದಿಕ್ಕನ್ನು ಬದಲಾಯಿಸುತ್ತಿದ್ದೀರಿ.

(ಮುಂದು)

383/22-3-2017/7.10/ಡಿಎಸ್- ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ಇವತ್ತು ಬಹಳ ಪ್ರಮುಖವಾಗಿ ಕೃಷ್ಣಾ ನದಿಗೆ ಆಲಮಟ್ಟಿ ಜಲಾಶಯವನ್ನು 524.256 ಮೀಟರ್ ಎತ್ತರಿಸಬೇಕಾದರೆ ಸುಮಾರು ಒಂದೂವರೆ ಲಕ್ಷ ಎಕರೆ ಜಮೀನು ಮತ್ತೆ ಮುಳುಗಡೆಯಾಗುತ್ತದೆ. ಸುಮಾರು ಹತ್ತಾರು ಹಳ್ಳಿಗಳಲ್ಲಿ ಮತ್ತೆ ಪುನರ್ವಸತಿ ನಿರ್ಮಾಣ ಆಗಬೇಕಾಗಿದೆ. ಇದೇ ಯೋಜನೆಗೆ ಕನಿಷ್ಠ ಐವತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ಇದುವರೆಗೂ ಭೂಸ್ವಾಧೀನ ಮಾಡಿಕೊಂಡಂತಹ ರೈತರಿಗೆ ಒಂದು ನಯಾ ಪೈಸೆ ಕೊಟ್ಟಿಲ್ಲ. ದರ ನಿಗದಿ ಮಾಡಿಲ್ಲ. ಒಂದು ಎಕರೆಗೆ ಎಷ್ಟೋ ಹಣ ಕೊಡುತ್ತೇವೆಂದು ಸರ್ಕಾರ ಹೇಳಿದೆ. ಏನೋ ದೊಡ್ಡ ಮನಸ್ಸು ಮಾಡಿ ಉದಾರ ಮನಸ್ಸಿನಿಂದ ನಮ್ಮ ಭಾಗದಲ್ಲಿ ನೀರಾವರಿ ಆಗುತ್ತಿದೆ ಎಂದು ರೈತರು ಸ್ವಯಂ ಪ್ರೇರಣೆಯಿಂದ ಜಮೀನು ಬಿಟ್ಟುಕೊಡುತ್ತಿದ್ದಾರೆ. ನೀರಾವರಿ ಯೋಜನೆಗೆ ಭೂಸ್ವಾಧೀನ ಮಾಡಿಕೊಂಡ ಮೇಲೆ ಪುನರ್ವಸತಿ ನಿರ್ಮಾಣ ಮಾಡುವುದರ ಬಗ್ಗೆ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಆದಷ್ಟು ಬೇಗ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಂತ್ರಸ್ತರ ಸಭೆ ಕರೆಯಬೇಕು. ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡರು. ಹಿಂದಿನ ಅವಧಿಯಲ್ಲಿ ಅವರಿಗೆ ಸರಿಯಾದ ಪರಿಹಾರ ಸಿಕ್ಕಿರಲಿಲ್ಲ. ನೀರಾವರಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆ ಮುಗಿಸಬೇಕೆನ್ನುವ ಹಂತದಲ್ಲಿ ಮಾನ್ಯ ದೇವೇಗೌಡರು ಆಗಲಿ, ಮಾನ್ಯ ಜೆ.ಹೆಚ್.ಪಟೇಲ್‌ರವರಾಗಲಿ, ಅವರು ಯಾವ ರೀತಿ ನಿರ್ಣಯ ತೆಗೆದುಕೊಂಡಿದ್ದರು ಆ ರೀತಿ ಮಾನ್ಯ ಮುಖ್ಯಮಂತ್ರಿಗಳು ಕೂಡ ರೈತರಿಗೆ ಕನಿಷ್ಠ ನೀರಾವರಿ ಭೂಮಿಗೆ ಒಂದು ಎಕರೆಗೆ 25 ಲಕ್ಷ, ಖುಷ್ಕಿ ಭೂಮಿಗೆ 15 ಲಕ್ಷ ರೂಪಾಯಿ ಪರಿಹಾರವನ್ನು ನೀಡಬೇಕಾಗುತ್ತದೆ. ಯಾರು ಜಮೀನು ಕಳೆದುಕೊಳ್ಳುತ್ತಾರೆ ಅಂತಹವರಿಗೂ ಸರ್ಕಾರಿ ಹುದ್ದೆಯಲ್ಲಿ ಮೀಸಲಾತಿ ಕೊಡುವುದರ ಮೂಲಕ ಆ ಭಾಗದ ಜನರ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಗ್ರಾಮೀಣಾಭಿವೃದ್ಧಿಯ ಬಗ್ಗೆ ಸರ್ಕಾರ ಹೇಳಿಕೊಂಡಿದೆ. ಇವತ್ತು ನಾವು 9,300 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದ್ದೇವೆಂದು ಮಾನ್ಯ ಎಚ್.ಕೆ.ಪಾಟೀಲ್‌ರವರು ಅಭಿಮಾನದಿಂದ ಅತ್ಯಂತ ಆವೇಶಭರಿತರಾಗಿ ಬಹಳ ದೊಡ್ಡ ಸಾಧನೆ ಮಾಡಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವವಾಗಿ ಕರ್ನಾಟಕದಲ್ಲಿ ವಿಜಾಪುರ ಮತ್ತು ಬಾಗಲಕೋಟೆ ಈ ಎರಡು ಜಿಲ್ಲೆಗಳಲ್ಲಿ ಶೇಕಡ 40 ಕ್ಕಿಂತ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳು ಇವತ್ತು ಬಂದ್ ಆಗಿವೆ. ಅತ್ಯಂತ ಕಳಪೆ ಮಟ್ಟದ ಮೆಷಿನ್‌ಗಳು ಹಾಕಿದ್ದು ಇವತ್ತು ಅವು ಕೆಲಸ ಮಾಡುತ್ತಿಲ್ಲ. ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಮತ್ತೊಮ್ಮೆ ಮಾನ್ಯ ಎಚ್.ಕೆ.ಪಾಟೀಲ್‌ರವರು ಪುನರಾವಲೋಕನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ವೈಯಕ್ತಿಕ ಶೌಚಾಲಯ, ಸಾಮೂಹಿಕ ಶೌಚಾಲಯಗಳ ಬಗ್ಗೆ ಹೇಳುವುದಾದರೆ, ಇವತ್ತು ಶೌಚಾಲಯಗಳನ್ನು ನಿರ್ಮಾಣ ಮಾಡುವುದರಲ್ಲೂ ಜಾತಿಯನ್ನು ತರುತ್ತಿದ್ದಾರೆ. ಸಾಮಾನ್ಯ ವರ್ಗದವರಿಗೆ 10,000 ರೂಪಾಯಿ ಸರ್ಕಾರ ಕೊಡುತ್ತಿದೆ. ಶೌಚಾಲಯ ನಿರ್ಮಾಣದಲ್ಲೂ ಏಕೆ ಜಾತಿಯನ್ನು ತರುತ್ತಿದ್ದಾರೆ? ಸಮಾನತೆ ಎನ್ನುವುದು ಯಾವಾಗ ಬರುತ್ತದೆ? ಬಡವರಿಗೆ ಶೌಚಾಲಯಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಅನುಕೂಲಸ್ಥರು ಯಾರೂ ನಮಗೊಂದು ಶೌಚಾಲಯ ಮಾಡಿಕೊಡಿ ಎಂದು ಸರ್ಕಾರಕ್ಕೆ ಹೋಗಿ ಕೈ ಒಡ್ಡುವುದಿಲ್ಲ. ಕನಿಷ್ಠ ಶೌಚಾಲಯ ನಿರ್ಮಾಣ ಮಾಡುವುದರಲ್ಲಾದರೂ ಸಮಾನತೆ ತರುವುದನ್ನು ಸರ್ಕಾರ ಮಾಡಬೇಕು.

ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳ ಮೊದಲನೆಯ ಉಕ್ತಿಯನ್ನು ನಾನು ಹೇಳಿದ್ದೇನೆ. ನಾವು ಸಮಾನವಾದಂತಹ ಸಂವಿಧಾನದ ಆಶಯಗಳಲ್ಲಿ ಒಂದು ಆಗಿರುವಂತಹ ಸಾಮಾಜಿಕ ನ್ಯಾಯ ಪರಿಕಲ್ಪನೆ ವಿಸ್ತೃತ ಆರ್ಥಿಕ ವಿನ್ಯಾಸದ ಬಗ್ಗೆ ಅವರು ಹೇಳಿಕೊಂಡಿದ್ದಾರೆ. ಇವತ್ತು ನಿಜವಾಗಿಯೂ ಸರ್ಕಾರ ಕಟ್ಟುತ್ತಿರುವಂತಹ ವಿದ್ಯಾರ್ಥಿನಿಲಯಗಳಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾನತೆ ತರುವಂತಹ ಪ್ರಯತ್ನ ಮಾಡುತ್ತಿದ್ದಾರೆಯೇ? ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿ ಸಮಾನತೆ ತರುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಪಸಂಖ್ಯಾತ ಮಕ್ಕಳಿಗೆ ವಸತಿ ಶಾಲೆ ಬೇರೆ, ಪರಿಶಿಷ್ಟ ಜಾತಿಯ ಮಕ್ಕಳಿಗೆ ಬೇರೆ, ಪರಿಶಿಷ್ಟ ಪಂಗಡದ ಮಕ್ಕಳಿಗೆ ಬೇರೆ, ಹಿಂದುಳಿದ ವರ್ಗದ ಮಕ್ಕಳಿಗೆ ಬೇರೆ, ಈ ರೀತಿ ವಸತಿ ನಿಲಯಗಳನ್ನು ನಿರ್ಮಾಣ ಮಾಡುವುದನ್ನು ಬಿಟ್ಟು ಎಲ್ಲಾ ವರ್ಗದ ಜನರು ಇರುವ ಹಾಗೆ ವಿದ್ಯಾರ್ಥಿ ನಿಲಯಗಳನ್ನು ನಿರ್ಮಾಣ ಮಾಡಿ ಕರ್ನಾಟಕ ರಾಜ್ಯ ಇಡೀ ದೇಶದಲ್ಲೇ ಮಾದರಿಯಾಗುವಂತೆ ಮಾಡಬೇಕು.

ಮಾನ್ಯ ಸಭಾಪತಿಯವರೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಶಾದಿ ಮಹಲ್ ನಿರ್ಮಾಣಕ್ಕೆ 2 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದೆ. ಮೊರಾರ್ಜಿ ವಸತಿ ಶಾಲೆಗೆ 1 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ. 2 ಕೋಟಿ ರೂಪಾಯಿಗಳನ್ನು ಕೊಟ್ಟು ಶಾದಿ ಮಹಲ್ ಕಟ್ಟುವುದು ಒಳ್ಳೆಯದೋ? 3 ಕೋಟಿ ರೂಪಾಯಿಗಳ ಅನುದಾನವನ್ನು ವಸತಿ ಶಾಲೆಗಳಿಗೆ ಕೊಟ್ಟು ಎಲ್ಲಾ ಜನಾಂಗದವರು, ಮೇಲ್ವರ್ಗ, ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಒಂದೇ ಕಡೆ ಇದ್ದು, ಒಂದೇ ಕಡೆ ಊಟ ಮಾಡಿ, ಒಂದೇ ಕಡೆ ಆಟ ಆಡಿ, ಅವರಲ್ಲಿ ಜಾತಿ ವ್ಯವಸ್ಥೆ ಗೊತ್ತಾಗದ ರೀತಿಯಲ್ಲಿ ಮಕ್ಕಳು ಬೆಳೆದರೆ ನಿಶ್ಚಿತವಾಗಿಯೂ ಸಮಾಜದಲ್ಲಿ ಸಮಾನತೆ ಬರುವುದಕ್ಕೆ ಸಾಧ್ಯವಿದೆ. ದುರ್ದೈವವೆಂದರೆ, ಹೋದ ಕೂಡಲೇ ಬೋರ್ಡ್ ಕಾಣಿಸುತ್ತದೆ. ಅಂದರೆ, ನಾನು ಪರಿಶಿಷ್ಟ ಜಾತಿಯವನು, ನಾನು ಹಿಂದುಳಿದವನು, ನಾನು ಅಲ್ಪಸಂಖ್ಯಾತ ಎಂದು ಮಕ್ಕಳಿಗೆ ಗೊತ್ತಾಗುವಂತೆ ಮಾಡುತ್ತಿದ್ದಾರೆ. ಇದರಲ್ಲಿ ಸಮಾನತೆಯನ್ನು ತರುವಂತಹ ಯಾವ ಪ್ರಯತ್ನ ಸರ್ಕಾರ ಮಾಡಿದೆ?

ಇವತ್ತು ವಿಶೇಷವಾಗಿ ಬಹಳ ಪ್ರೀತಿಯನ್ನು ಸಹಜವಾಗಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಸುಮಾರು 2,200 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. 200 ಮೌಲಾನ ಆಜಾದ್ ಶಾಲೆಗಳು, ಜಿಲ್ಲಾ ಕೇಂದ್ರದಲ್ಲಿ ಶಾದಿ ಮಹಲ್ ನಿರ್ಮಾಣ ಮಾಡುವುದಕ್ಕಾಗಿ 2 ಕೋಟಿ ರೂಪಾಯಿಗಳು, ತಾಲ್ಲೂಕು ಕೇಂದ್ರಕ್ಕೆ 1 ಕೋಟಿ ರೂಪಾಯಿಗಳು, ಅಲ್ಪಸಂಖ್ಯಾತ ಸಮುದಾಯದ 1000 ಅಭ್ಯರ್ಥಿಗಳಿಗೆ ಸೈನ್ಯ ಸೇರುವುದಕ್ಕೆ ಉಚಿತ ತರಬೇತಿ, ಮೂಲಭೂತ ಸೌಕರ್ಯಗಳಿಗಾಗಿ 800 ಕೋಟಿ ರೂಪಾಯಿಗಳು, ಬೆಂಗಳೂರಿನಲ್ಲಿ ಹಜ್ ಭವನವನ್ನು ಸ್ಥಾಪಿಸಲು 10 ಕೋಟಿ ರೂಪಾಯಿಗಳ ಅನುದಾನ, ಹೊಸದಾಗಿ ಅಲ್ಪಸಂಖ್ಯಾತರ 20 ಮೊರಾರ್ಜಿ ದೇಸಾಯಿ ವಸತಿ ಶಾಲೆ, 5 ಪದವಿ ಪೂರ್ವ ಕಾಲೇಜು, 2 ಮಾದರಿ ವಸತಿ ಶಾಲೆಗಳನ್ನು ತೆರೆಯಲಾಗುವುದು ಹಾಗೂ 25 ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ತೆರೆಯಲಾಗುವುದು. ಮೌಲಾನಾ ಅಬ್ದುಲ್ ಕಲಾಂ ಆಜಾದ್ ಸಂಕೀರ್ಣ, ವಕ್ಫ್ ಸಂಸ್ಥೆಗಳ ನಿರ್ವಹಣೆ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲು ಬೆಂಗಳೂರಿನಲ್ಲಿ ತರಬೇತಿ ಕೇಂದ್ರ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭಿಸಲಾಗುವುದು. Urdu Convention Hall ಮತ್ತು ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಲು 20 ಕೋಟಿ ರೂಪಾಯಿಗಳು. ಮಾಂಸ ಮಾರುವವರಿಗೆ ಅನುದಾನ. ಈ ದೇಶದಲ್ಲಿ ರಾಜ್ಯದಲ್ಲಿ ತರಕಾರಿ ಮಾರುವವರಿಗೆ ಯಾವುದೇ ಸೌಲಭ್ಯ ಇಲ್ಲ. ತರಕಾರಿ ತಿನ್ನುವವರು ಅಪರಾಧಿಗಳು. ಮಾಂಸ ಮಾರುವವರಿಗೆ 1 ಲಕ್ಷ 25 ಸಾವಿರ ರೂಪಾಯಿ ಅನುದಾನ. ಮೌಲ್ವಿಗಳಿಗೆ, ನಮಾಜ್ ಮಾಡಿಸುವವರಿಗೆ 3000 ರೂಪಾಯಿಯಿಂದ 4000 ರೂಪಾಯಿವರೆಗೆ ಏರಿಕೆ. ಹಿಂದೂ ದೇವಸ್ಥಾನಗಳಲ್ಲಿ ಪೂಜೆ ಮಾಡುವ ಸ್ವಾಮಿಗಳು ಇದ್ದಾರೆ. ಅವರ ಬಗ್ಗೆ ಬಜೆಟ್‌ನಲ್ಲಿ ಕಿಂಚಿತ್ತು ಇಲ್ಲ. ಅಂದರೆ, ಸಮಾನತೆ ಹೇಗೆ ಬರುತ್ತದೆ? ಲಿಂಗಾಯಿತರು, ಒಕ್ಕಲಿಗರು, ಬ್ರಾಹ್ಮಣರು, ಇವರ ಬಗ್ಗೆ ಒಂದು ರೀತಿ ಏಕೋ ಕೆಟ್ಟ ದೃಷ್ಟಿ. ಇವತ್ತು ಮರಾಠ ಸಮಾಜದವರು, ಬೆಂಗಳೂರನ್ನು ಒಂದು ಕಾಲಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರು ಆಳಿದಂತಹ ಒಬ್ಬ ಮಹಾನ್ ವ್ಯಕ್ತಿ ಅವರ ಸಲುವಾಗಿ ಸರ್ಕಾರ ಪ್ರಾಧಿಕಾರವನ್ನು ರಚನೆ ಮಾಡಲಿಲ್ಲ. ಈ ರಾಜ್ಯದಲ್ಲಿ ಬಹುತೇಕ ಎಲ್ಲಾ ಸಮುದಾಯಗಳಿಗೆ ಪ್ರಾಧಿಕಾರ ರಚನೆ ಮಾಡಿದ್ದಾರೆ. ಉಪ್ಪಾರ ಸಮಾಜದವರಿಗೆ ಮಾಡಿದ್ದಾರೆ, ಮಾಡಿ ಒಳ್ಳೆಯದು. ಭೋವಿ ಸಮಾಜಕ್ಕೆ ಮಾಡಿದ್ದಾರೆ. ಅದೇ ರೀತಿ ಎಲ್ಲಾ ಸಮುದಾಯಗಳನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿದ್ದಾರೆ. ಈ ರಾಜ್ಯದಲ್ಲಿ ಇವತ್ತು ಮರಾಠ ಸಮಾಜ, ರಜಪೂತ ಸಮಾಜದವರು ಪ್ರಾಧಿಕಾರವನ್ನು ರಚನೆ ಮಾಡುವ ಸಲುವಾಗಿ ಸಾಕಷ್ಟು ಹೋರಾಟ ಮಾಡುತ್ತಿದ್ದಾರೆ. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ. ಬುಡಬುಡಕಿ, ಗೊಂದಳಿ, ಹೆಳವ, ಪಿಚಗುಂಟ, ಜೋಗಿ, ಗೊಲ್ಲ, ಶಿಕ್ಕಲಿಗಾರ, ಹಾವುಗಾರ ಇತ್ಯಾದಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ 100 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ. ಕೊಡುವುದರಲ್ಲಿ ತಪ್ಪಿಲ್ಲ. ಆದರೆ ಯಾರು ಆರ್ಥಿಕವಾಗಿ ಬಡವರಿದ್ದಾರೆ, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರಲ್ಲೂ ಬಡವರು ಇದ್ದಾರೆ. ಇನ್ನೂ ಅನೇಕ ಜನಾಂಗಗಳಿವೆ. ಸಮಾನತೆ ಎಂದರೆ ಏನು? ಕೆಲವು ವರ್ಗಗಳಲ್ಲಿ ಮಾತ್ರ ಸಮಾನತೆ ತರುವುದು, ಹಿಂದೂ ದೇವಸ್ಥಾನಗಳ ಬಗ್ಗೆ ಪೂರ್ತಿ ನಿರ್ಲಕ್ಷ್ಯ ಮಾಡುವುದು? ಹಿಂದೂ ದೇವಸ್ಥಾನಗಳ ಆದಾಯವನ್ನು ತೆಗೆದುಕೊಂಡು ಯಾವ್ಯಾವುದಕ್ಕೋ ಖರ್ಚು ಮಾಡುವುದು ಸರಿಯಲ್ಲ.

**ಶ್ರೀ ರುದ್ರಪ್ಪ ಲಮಾಣಿ(ಜವಳಿ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೆ, ಹಿಂದೂ ದೇವಾಲಯಗಳ ದುಡ್ಡು ಹಿಂದೂ ದೇವಾಲಯಗಳಲ್ಲೇ ಇರುತ್ತದೆ. ನಾವು ಆ ದುಡ್ಡನ್ನು ಯಾವುದೇ ಚರ್ಚ್, ಮಸೀದಿಗಳಿಗೆ, ಮತ್ತೊಂದಕ್ಕೆ ಬಳಕೆ ಮಾಡುವುದಿಲ್ಲ. ನಾವು ಇದರ ಬಗ್ಗೆ ಪದೇಪದೇ ಹೇಳಿಕೆಗಳನ್ನು ಕೂಡ ಕೊಟ್ಟಿದ್ದೇವೆ. ನಾವು 5 ಪರ್ಸೆಂಟ್, 10 ಪರ್ಸೆಂಟ್ ಸಾಮಾನ್ಯ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಧಿಯಿಂದ ಬಂದಿರುವುದನ್ನು ಕಮಿಷನರ್ ಕಡೆಯಿಂದ ರಾಜ್ಯ ಪರಿಷತ್ತಿನಲ್ಲಿಟ್ಟು ಅದನ್ನು ಕೊಡುತ್ತೇವೆಯೇ ವಿನಃ ಈ ಮಾತನ್ನು ಅವರು ಹೇಳಬಾರದು. ಹಿಂದೂ ದೇವಾಲಯಗಳ ದುಡ್ಡನ್ನು ತೆಗೆದುಕೊಂಡು ಹೋಗಿ ಬೇರೆ ಕಡೆಗೆ ಕೊಡುತ್ತಾರೆ ಎಂದು ಹೇಳಿ ಸದನವನ್ನು ಬೇರೆ ಕಡೆಗೆ ಎಳೆಯುತ್ತಿದ್ದಾರೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ಅವರು ಪೂಜಾರಿಗಳಿಗೆ ಏಕೆ ಸಂಬಳ ಜಾಸ್ತಿ ಮಾಡಲಿಲ್ಲ? ಮೌಲ್ವಿಗಳ ಸಂಬಳ ಜಾಸ್ತಿ ಮಾಡುತ್ತಾರೆ. ಹಿಂದೂ ದೇವಸ್ಥಾನಗಳ ಪೂಜಾರಿಗಳು ಏಕೆ ಅವರಿಗೆ ಕಾಣಿಸಲಿಲ್ಲ?

**ಶ್ರೀ ರುದ್ರಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, 1997 ರಿಂದೀಚೆಗೆ ಬಂದಂತಹ ಆಕ್ಟ್ ಪ್ರಕಾರ ನಾನು ಬಂದ ಮೇಲೆ ಸಂಪೂರ್ಣವಾಗಿ 'ಎ' ವರ್ಗ ಮತ್ತು 'ಬಿ' ವರ್ಗ ಎರಡೂ ವರ್ಗಗಳಲ್ಲಿರತಕ್ಕಂಥ ಎಲ್ಲಾ ದೇವಸ್ಥಾನಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಆ ಶ್ರೇಣಿ ಪ್ರಕಾರ ಕೊಡುವುದಕ್ಕೆ ಈಗಾಗಲೇ ಆದೇಶ ಮಾಡಿದ್ದೇವೆ.

(ಮುಂದು)

(384) 22.03.2017/ 7.20/ ಕೆಹೆಚ್/ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ರುದ್ರಪ್ಪ ಲಮಾಣಿ (ಮುಂದು):-** ಅದರಲ್ಲಿ ಅರ್ಚಕರು ಎಲ್ಲರೂ ಕೂಡ ಸೇರಿದ್ದಾರೆ. ಅದು ಕೂಡ ಆದೇಶವಾಗಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇವತ್ತು ಹಿಂದೂ ಸಮಾಜದ ಬಗ್ಗೆ ಮಾತನಾಡಿದ ಮೇಲೆ ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿರುವುದು ಒಳ್ಳೆಯದಾಯಿತು. ಸಾಮಾಜಿಕ ತಾಣದಲ್ಲಿ ನಮಗೆ ಏನು ಒಂದು ಸಂದೇಶವಿದೆಯೆಂದರೆ ಹಿಂದೂ ದೇವಸ್ಥಾನಗಳಿಂದ ಬರುವಂತಹ ಆದಾಯವನ್ನು ಇವತ್ತಿನ ದಿವಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಜ್ ಯಾತ್ರೆಗಳಿಗೆ ಕೊಡುವುದು. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದೀರೆಂಬ ಸಂದೇಶ ಸತತವಾಗಿ ನಮಗೆ ಕೇಳಿಬರುತ್ತಿದೆ.

**ಶ್ರೀ ರಾಮಪ್ಪ ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ನೀವು misguide ಮಾಡುತ್ತಿದ್ದೀರಿ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಯಾರು ಹಿಂದುಳಿದಿದ್ದಾರೆ....

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಆರ್ಥಿಕವಾಗಿ ಯಾರಿಗೆ ಕೊಡುತ್ತೀರಿ?

**ಶ್ರೀ ರಾಮಪ್ಪ ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಅವರನ್ನು ಮೇಲೆತ್ತುವುದಕ್ಕೆ ಶ್ರೀ ಸಿದ್ಧರಾಮಯ್ಯ ಸರ್ಕಾರದವರು ಪ್ರಯತ್ನ ಮಾಡಿದರೆ ಅವರಿಗೆ ಸಮಾನವಾಗಿ ಕೊಡಲೇಬಾರದು ಎನ್ನುವಂತಹ ಭಾವನೆಯನ್ನು ಏಕೆ ವ್ಯಕ್ತಪಡಿಸುತ್ತಿದ್ದೀರಿ. ಎಲ್ಲಾ ಜನಾಂಗದಲ್ಲಿ, ಧರ್ಮಗಳಲ್ಲಿ ಭಿನ್ನ ರೀತಿಗಳಿವೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಕೊಡಲೇಬಾರದು ಎಂದಲ್ಲ. ನೀವು ಉಳಿದ ಜನಾಂಗಗಳನ್ನು ನೋಡಬೇಕಲ್ಲವೇ? ಎಲ್ಲ ಜಾತಿಯವರು ವೋಟ್ ಹಾಕಿದರೆ ನೀವು ಎಂಎಲ್ಎಗಳು ಆಗುತ್ತೀರೋ, ಲಿಂಗಾಯಿತರು, ಬ್ರಾಹ್ಮಣರು, ಒಕ್ಕಲಿಗರು ವೋಟ್ ಹಾಕದೇ ಇದ್ದರೆ ನೀವು . . . .

**ಸಭಾಪತಿಯವರು:-** ಅವರು ಅವರ ಅಭಿಪ್ರಾಯವನ್ನು ಹೇಳಲಿ ಬಿಡಿ. ಆಮೇಲೆ ಬೇಕಾದರೆ debate ಮಾಡಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಸಾಮಾಜಿಕ ಸಮಾನತೆ ಬಂದ ಮೇಲೆ ಎಲ್ಲ ಜನಾಂಗದವರನ್ನು ವಿಶ್ವಾಸದಲ್ಲಿಟ್ಟುಕೊಂಡು ಹೋಗುವಂತಹ ಕೆಲಸ ಮಾಡಬೇಕು. ಆ ಕೆಲಸ ಆಗುತ್ತಿಲ್ಲ. ಎಲ್ಲೋ ಒಂದು ರೀತಿ ಶ್ರೀ ಬಸವರಾಜ ಹೊರಟ್ಟಿಯವರು ಹೇಳಿದರು. ನಮ್ಮ ಕಾಂಗ್ರೆಸಿನ ಸರ್ಕಾರದಲ್ಲಿ 'ಜಿಲೇಬಿ' ಎಂಬ ಒಂದು ಹೆಸರಿದೆ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಅದಕ್ಕೆ ಶುಗರ್ ಬಹಳ ಬರುತ್ತದೆ. ಆ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತೀರಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ನಿಮ್ಮ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಿ. ಮರಾಠರಿಗೆ ಸಂಬಂಧಿಸಿದಂತೆ ನೀವೇ ಶೂನ್ಯವೇಳೆಯಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೀರಿ. ಅದು ನಿಮ್ಮ ಹಣೆಬರಹ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ಇಡೀ ಕರ್ನಾಟಕದ ಇತಿಹಾಸದಲ್ಲಿ ಮರಾಠರ ಬಗ್ಗೆ ಯಾವತ್ತು ಸಹ refer ಆಗಿಲ್ಲ. ಶ್ರೀ ಸಿದ್ದರಾಮಯ್ಯ ನವರು ಮರಾಠರಿಗೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ನೀವು ಅಲ್ಲಿ ಆಡಳಿತ ಪಕ್ಷದಲ್ಲಿ ಕುಳಿತು ರಾಜಿ ಆಗಿದ್ದೀರಿಯೆಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಅವರಿಗೆಲ್ಲಾ ಸಮಾಧಾನವಿದೆ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ಸಮಾಜ ಒಡೆಯುವಂಥ ಕೆಲಸ ಮಾಡಿದ್ದೀರಿ, ಅದನ್ನು ಸಿದ್ದರಾಮಯ್ಯನವರು ಸರಿ ಮಾಡಿದ್ದಾರೆ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಮೊನ್ನೆಯ ದಿವಸ ಹಾವೇರಿ ಜಿಲ್ಲೆಯ ಶಿಗ್ಗಾಂವಿ ನಗರದೊಳಗೆ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಮಾಡುವಾಗ ಸನ್ಮಾನ್ಯ ಮಾನೆ ಶ್ರೀನಿವಾಸ್‌ರವರು ಸಹ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಮುದಾಯದ ಅಧ್ಯಕ್ಷರು ಬಹಳಷ್ಟು ಖಾರವಾಗಿ ಮಾತನಾಡಿದ್ದರು. ಆ ದಿವಸ ಏಕೆ ಅವರ ಧ್ವನಿ ಬರಲೇ ಇಲ್ಲ. ಇವತ್ತು ಈ ಧ್ವನಿ ಬರುತ್ತಿದೆ. ದಯಮಾಡಿ ನಾನು ಹೇಳುವುದನ್ನು ಕೇಳಿ.

**ಸಭಾಪತಿಯವರು:–** ಆರೋಪ ಮತ್ತು ಪ್ರತ್ಯಾರೋಪಗಳು ಬೇಡ. ನೀವು ಮುಂದುವರೆಸಿ. ಸಾಕು ವೈಯಕ್ತಿಕವಾಗಿ ಬೇಡ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಆ ದಿವಸ ಅಷ್ಟು ಉತ್ಸಾಹದಿಂದ ಮಾತನಾಡಿದರು.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ನಾನು ಅಲ್ಲಿ ಮಾತನಾಡಿದ್ದೇನೆ ಮತ್ತು ಅಲ್ಲೇ ಉತ್ತರವನ್ನು ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ನಮ್ಮ ಮೂಕವೇದನೆಯನ್ನು ಇಲ್ಲಿಯವರೆಗೂ ಯಾರು ಕೂಡ ಅರ್ಥಮಾಡಿಕೊಂಡಿಲ್ಲವೆಂದು ತಾವು ಆ ಸಭೆಯಲ್ಲಿ ಮಾತನಾಡಿದ್ದೀರಿ. ಇದು ನಿಮಗೆ ಸಮಾಧಾನ ತಂದಿದ್ದರೆ ನಾನು ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಿಮ್ಮ ಪರವಾಗಿ ಎಲ್ಲ ಕ್ಷೇತ್ರದಲ್ಲೂ ನಿಮಗೆ ಧನ್ಯವಾದವನ್ನು ಹೇಳುತ್ತೇನೆ. ಏಕೆ ಚಿಂತೆ ಮಾಡುತ್ತೀರಿ?

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ನಾನು ಬಹಳ ನೋವಿನಿಂದ ಈ ವಿಷಯವನ್ನು ಹೇಳಬೇಕಾಗುತ್ತದೆ. ಈ ದೇಶದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಹುಟ್ಟದೆ ಇದ್ದಿದ್ದರೆ, ಇವತ್ತು ಹಿಂದುಗಳು ಯಾರು ಇರುತ್ತಿರಲಿಲ್ಲ. ಅಂತಹ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂತಹ ಶಿವಾಜಿ ಮಹಾರಾಜರ ಒಂದು ಜನಾಂಗಕ್ಕೆ ಇವತ್ತಿನ ದಿವಸ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡುವುದಕ್ಕೆ ಸರ್ಕಾರ ತಯಾರಿಲ್ಲ. ಹಿಂದೆ ನಮ್ಮ ಬಿಜೆಪಿ ಸರ್ಕಾರವಿತ್ತು. ಮರಾಠ ಸಮಾಜ ಬಹುತೇಕವಾಗಿ ಮತ್ತು ಸಾಂಪ್ರದಾಯಿಕವಾಗಿ ಭಾರತೀಯ ಜನತಾ ಪಾರ್ಟಿಯ ಮತದಾರರು. ಅವರೂ ಸಹ ಮರಾಠ ಸಮಾಜದ ಒಬ್ಬರನ್ನು ಎಂ.ಎಲ್.ಸಿ.ಯನ್ನಾಗಿ ಮಾಡಲಿಲ್ಲ. ಯಾರು ವೋಟ್ ಹಾಕಲಿಲ್ಲ. ಅಂತಹವರನ್ನು ತಂದು ಮಂತ್ರಿಗಳಾಗಿ ಮಾಡಿದರು. ಮಮತಾಜ್ ಎಂದು ಹೇಳಿ.

**ಸಭಾಪತಿಯವರು:-** ಹೆಸರುಗಳನ್ನು ತೆಗೆದುಕೊಳ್ಳಬೇಡಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮಂತ್ರಿಗಳಾಗಿ ಮಾಡಿದರು ಕೊನೆಗೆ ಲಾಭವಾಯಿತು. ಕೊನೆಗೆ ಅವರು ಏನು ಹೇಳಿ ಹೋದರು ಎಂದರೆ, "ನನ್ನ ಹೃದಯ ಯಾವಾಗಲೂ ಕಾಂಗ್ರೆಸ್‌ನಲ್ಲಿತ್ತು. ಸುಮ್ಮನೆ ಬಿಜೆಪಿಗೆ ಹೋಗಿದ್ದೆ" ಎಂದು ಹೇಳಿದರು. ಅದನ್ನು ಅನುಭವಿಸಿದರು ಮತ್ತು ಹೋದರು. ಶ್ರೀ ಶ್ರೀನಿವಾಸ ಮಾನೆಯವರನ್ನು ಮಂತ್ರಿಗಳಾಗಿ ಮಾಡಬಹುದಾಗಿತ್ತು, ಆದರೆ . . .

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ನಮ್ಮ ಸಮಾಜದವರು ಸಹ ಮಂತ್ರಿಗಳಿದ್ದಾರೆ.

**ಸಭಾಪತಿಯವರು:-** ಶ್ರೀ ಮಾನೆಯವರೆ, ಅವರು ಹೇಳಲಿ ಬಿಡಿ. ನಿಮಗೆ ಅವಕಾಶ ಸಿಕ್ಕಾಗ ಅವರು ತಪ್ಪು ಹೇಳಿದರು ಎಂದು ಹೇಳಿ. ಆದರೆ ಈಗ ಚರ್ಚೆ ಬೇಡ. ಸಮಯವಾಗುತ್ತಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮರಾಠ ಸಮಾಜದಲ್ಲಿ ಕ್ಷತ್ರಿಯ ಸಮಾಜಗಳೇನು ಇವೆ. ಅದಕ್ಕೂ ಸೂಕ್ತವಾದಂತಹ ಪ್ರಾಧಿಕಾರವನ್ನು ರಚನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ. ಆ ಸಮಾಜದವರನ್ನು ಸಹ ಆರ್ಥಿಕವಾಗಿ ಮಾನ್ಯ ಸಿದ್ದರಾಮಯ್ಯನವರು ಬೆಳೆಸಬೇಕೆಂದು ವಿನಂತಿ ಮಾಡಿ ಬಹಳ ದುಃಖದಿಂದ ಮತ್ತು ನೋವಿನಿಂದ ಹೇಳುತ್ತಿದ್ದೇನೆ. ಇಷ್ಟೆಲ್ಲ ಕೋಟಿಗಟ್ಟಲೆ ಹಣವನ್ನು ಕೊಟ್ಟಿದ್ದೀರಿ. ಈ ರಾಜ್ಯದಲ್ಲಿ ಸತತವಾಗಿ ಹತ್ತು ವರ್ಷಗಳಿಂದ ಬರಗಾಲದಿಂದ ತತ್ತರಿಸಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನಾ ಮಾಡುತ್ತಾರೆಂದು ನಾವೆಲ್ಲ ನಿರೀಕ್ಷೆಯನ್ನು ಇಟ್ಟಿದ್ದೇವೆ. ರೈತರ ಬಗ್ಗೆ ಮತ್ತು ರೈತರ ಸಾಲ ಮನ್ನಾ ಬಗ್ಗೆ ಕೇಂದ್ರ ಸರ್ಕಾರದವರು ಶೇಕಡಾ 50 ರಷ್ಟು ಮಾಡಿದರೆ ನಾನು ಮಾಡುತ್ತೇನೆಂಬ ಸುಳ್ಳು ಸಬೂಬನ್ನು ಹೇಳದೆ, ಇವತ್ತು ಎಲ್ಲಾ ಆಯೋಗಗಳನ್ನು ರಚನೆ ಮಾಡುತ್ತಾರೆ. ವೇತನ ಆಯೋಗಗಳು, ಎಲ್ಲಾ ಸಮುದಾಯಗಳಿಗೂ 100 ಕೋಟಿ ರೂಪಾಯಿ, ಸಮುದಾಯ ಭವನಗಳನ್ನೆಲ್ಲವನ್ನು ಕೊಡುತ್ತೀರಿ. ನಮಗೆ ಅನ್ನ ಕೊಡುವಂತಹ ರೈತ ಇವತ್ತು ಆತ್ಮಹತ್ಯೆ ಮೂಲಕ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾನೆ. ಅಂತಹವರುಗಳ ಸಾಲ ಮನ್ನಾ ಮಾಡುವುದರ ಮೂಲಕ ಒಂದು ದೊಡ್ಡ ಉಪಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾಗಿತ್ತು. ಇನ್ನೂ ಕೂಡ ಕಾಲ ಮಿಂಚಿಲ್ಲ. ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ರಾಜ್ಯದ ರೈತರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇವತ್ತು ಅವರ ಜೀವನ ನಿರ್ವಹಣೆಯೂ ಸಹ ಸಾಧ್ಯವಾಗುತ್ತಿಲ್ಲ. ಕುಡಿಯುವುದಕ್ಕೆ ಹಳ್ಳಿಗಳಲ್ಲಿ ನೀರಿಲ್ಲ. ಬರಗಾಲ ಪರಿಸ್ಥಿತಿ ಎದುರಾಗಿದೆ. ದನಕರುಗಳಿಗೆ ಮೇವಿಲ್ಲ. ಇಂತಹ ಸಂದರ್ಭದಲ್ಲೂ ಸಹ ಮಾನವೀಯತೆಯನ್ನು ತೆಗೆದುಕೊಂಡು, ಮಾನ್ಯ ಸಭಾಪತಿಯವರೆ, ಇದರಲ್ಲಿ ರೈತನಿಗೆ ಜಾತಿ ಎಂಬುದಿಲ್ಲ. ಎಲ್ಲ ಜಾತಿಗಳಲ್ಲೂ ಸಹ ರೈತರು ಇದ್ದಾರೆ. ಆದರೆ ಅನ್ನ ಕೊಡುವಂತಹ ರೈತನನ್ನೆ ಈ ಸರ್ಕಾರ ಮರೆತು ಬಿಟ್ಟರೆ 2018ನೇ ಇಸವಿಗೆ ಜನರು ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಸರ್ಕಾರವು ಗಂಭೀರವಾಗಿ ಯೋಚಿಸಬೇಕು. ಬರೀ ನಮ್ಮ ಜಾತಿಗಳಿಗೆ ಮಾತ್ರ ಹಣ ಕೊಡುತ್ತೇವೆ. ಆ ಜಾತಿಗಳಿಂದ ವೋಟ್ ಬರುತ್ತದೆಯೆಂಬುದು ಬಹಳ ಮೂರ್ಖತನ. ಇವತ್ತು ಉತ್ತರ ಪ್ರದೇಶ ನಮ್ಮ ದೇಶಕ್ಕೆ ಒಂದು ಮಾದರಿಯಾಗಿದೆ. ಅಲ್ಲಿರುವಂತಹ ಅಲ್ಪಸಂಖ್ಯಾತ ಜನರು ಶ್ರೀ ಮುಲಾಯಂ ಸಿಂಗ್ ಯಾದವ್‌ರವರನ್ನು ಚುನಾವಣೆಯಲ್ಲಿ ಗೆಲ್ಲಿಸಲಿಲ್ಲ. ಕಾಂಗ್ರೆಸ್‌ರವರನ್ನು ಹಿಡಿಯಲಿಲ್ಲ. ಕುಮಾರಿ ಮಾಯಾವತಿಯವರಂತು ನೂರು ಸೀಟ್‌ಗಳನ್ನು ಕೊಡುತ್ತೇವೆಂದು ಹೇಳಿಕೊಂಡು ಓಡಾಡಿದರು. ಇವತ್ತು 403 ಕ್ಷೇತ್ರಗಳಲ್ಲಿ 324 ಕ್ಷೇತ್ರ . . . .

**ಸಭಾಪತಿಯವರು:-** ಉತ್ತರ ಪ್ರದೇಶದ ಚರ್ಚೆ ಬೇಡ. ಕರ್ನಾಟಕದ ಬಗ್ಗೆ ಮಾತನಾಡಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ನಾವು ದೇಶದ ಬಗ್ಗೆಯೂ ಸಹ ಮಾತನಾಡಬೇಕಾಗುತ್ತದೆ. ಶ್ರೀ ಉಗ್ರಪ್ಪನವರು ರಾಜ್ಯಪಾಲರ ವಂದನಾ ನಿರ್ಣಯದಲ್ಲಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಷ್ಟ್ರಪತಿಯವರ ವಂದನಾ ನಿರ್ಣಯ ಮಾಡಿದರು. ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಮಿತಿಯಿಲ್ಲ. ನಾನು ಹೇಳುತ್ತಿರುವುದೇನೆಂದರೆ, ನೀವು ಓಲೈಕೆ ಮಾಡಿದರೆ ನಿಮಗೆ ವೋಟ್ ಹಾಕಿಬಿಡುತ್ತಾರೆ, ಮುಂದೆ ಅಧಿಕಾರ ಬರಬಹುದು ಎಂಬುವುದು ಸುಳ್ಳು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. .

**ಸಭಾಪತಿಯವರು:-** ಶ್ರೀ ಉಗ್ರಪ್ಪನವರೆ ಅವರು ಮಾತನಾಡುವುದನ್ನು ಮುಗಿಸುತ್ತಿದ್ದಾರೆ. ಕುಳಿತುಕೊಳ್ಳಿ. ಸಮಯವಾಯಿತು. ಶ್ರೀ ಉಗ್ರಪ್ಪನವರೆ ನಿಮಗೆ ಅವಕಾಶ ಕೊಟ್ಟಾಗ ಶ್ರೀ ಯತ್ನಾಳ್ ರವರನ್ನು ಉಲ್ಲೇಖ ಮಾಡಿ ಮಾತನಾಡಿ. ಶ್ರೀ ಯತ್ನಾಳ್‌ರವರೆ, ಮಾತನಾಡುವುದನ್ನು ಮುಂದುವರೆಸಿ. ಶ್ರೀ ಉಗ್ರಪ್ಪನವರ ಬಗ್ಗೆ ಬೇಡ. ನೀವು ನಿಮ್ಮ ವಿಷಯವನ್ನು ಹೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ನಾನು ಮಾತನಾಡಿ ಮುಗಿಸುತ್ತೇನೆ. ಈ ಒಂದು ಬಜೆಟ್ ಏನಿದೆ. ಇದು ಚುನಾವಣೆ ಬಜೆಟ್. ಈ ಚುನಾವಣೆಯ ಉದ್ದೇಶ ತೆಗೆದುಕೊಂಡು ನೀವು ಈ 4 ವರ್ಷ ಸಮಾಜ ಕಲ್ಯಾಣ ಇಲಾಖೆಗೆ ಇಟ್ಟಿರುವಂತಹ ಹಣ ಇನ್ನೂ ಖರ್ಚು ಮಾಡುವುದಕ್ಕೆ ಆಗಿಲ್ಲ. ಇನ್ನು ಒಂದು ವರ್ಷದಲ್ಲಿ ಯಾವುದೇ ರೀತಿಯ ಸಾಧನೆಗಳನ್ನು ಮಾಡುವುದಿಲ್ಲ. ಇದರಿಂದ ನೀವೇನು ಮುಂದಿನ ಚುನಾವಣೆಯ ಗುರಿ ಇಟ್ಟುಕೊಂಡು ಮಾಡಿದ್ದೀರಿ. ಇದು ಕೇವಲ ಜಾತಿ ಜಾತಿಗಳನ್ನು ಒಡೆಯುವುದರ ಮೂಲಕ ಜಾತಿಯ ವೋಟ್‌ಗಳನ್ನು ತೆಗೆದುಕೊಳ್ಳುವ ಸಲುವಾಗಿ ಮಾಡಿರುವ ಆಯವ್ಯಯವಾಗಿದೆ. ಇದು ಯಾವುದೇ ರೀತಿಯ ಸಾಮಾಜಿಕ ನ್ಯಾಯ ಕೊಡುವಂತಹ ಆಯವ್ಯಯವಲ್ಲ. ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಆಯವ್ಯಯವಲ್ಲ. ಇವತ್ತು ನಿಮ್ಮ 'ಜಿಲೇಬಿ' ಎಂದರೆ ಗೌಡ, ಲಿಂಗಾಯಿತ, ಬ್ರಾಹ್ಮಣ ಎಂದು code word ಇದೆ. ಇವರನ್ನು ದೂರವಿಟ್ಟು ರಾಜ್ಯವನ್ನು ಆಳಬೇಕೆಂಬ ಕಲ್ಪನೆ ಇದೆ. ಸಂಪೂರ್ಣವಾಗಿ ಬಹುಸಂಖ್ಯಾತರ ಜೊತೆಗೆ ಅಲ್ಪಸಂಖ್ಯಾತರನ್ನು ತೆಗೆದುಕೊಂಡು ಹೋಗುವಂತಹ ಕೆಲಸ ಮಾಡಬೇಕೇ ಹೊರತು, ಅಲ್ಪಸಂಖ್ಯಾತರ ಜೊತೆ ಬಹುಸಂಖ್ಯಾತರನ್ನು ತೆಗೆದುಕೊಂಡು ಹೋಗುತ್ತೇನೆಂದರೆ ಮುಂದಿನ ಚುನಾವಣೆಯಲ್ಲಿ ಉತ್ತರಪ್ರದೇಶದ ಗತಿ ನಿಮಗೂ ಆಗುತ್ತದೆ ಎಂಬ ಎಚ್ಚರಿಕೆಯ ಮಾತನ್ನು ಕೊಟ್ಟು, ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ಈ ಒಂದು ಅವಕಾಶಕ್ಕಾಗಿ ಧನ್ಯವಾದಗಳು.

**(ಸದನವು ಸಂಜೆ 7 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 23ನೇ ಮಾರ್ಚ್ ಮಾಹೆ 2017ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~